ಪ್ರಬುದ್ಧ ಕರ್ಣಾಟಕ

ಸಂಪುಟ ೪೦—ಸಂಚಿಕೆ ೧

೧೫೫

ವಿಳಂಬಿ ಸಂವತ್ಸರ

ಚೈತ್ರ ಸಂಚಿಕೆ


•

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೫೮

ವಿಷಯ ಸ…



' ಉದಯರವಿ 'ಯಲ್ಲಿ ಸರ್ವೋದಯ ರವಿ !

ಪ್ರಬುದ್ಧ ಕರ್ಣಾಟಕ

ವಿಳಂಬಿ ಸಂವತ್ಸರ | ೧೫೫ | ಚೈತ್ರ ಸಂಚಿಕೆ

ಅಗ್ನಿಶೀತ ಚರಣಕೆ

೧*

ಮನುಜ ರೂಪವ ಧರಿಸಿ ಧರೆಗಿಳಿದು ಬಂದಿರುವ
ದೇವ ಸೂರ‍್ಯಕರುಣ
ಕವಿದಿರುವ ಕತ್ತಲೆಯೊಳೊಂದೆ ಸಂಚರಿಸುತಿದೆ
ಅಮೃತ ಚಂದ್ರ ಕಿರಣ :
ಪಾದಯಾತ್ರೆಯೊಳಿರುವ ಶ್ರೀ ವಿನೋಬನ ಅಮರ
ಅಗ್ನಿ ಶೀತ ಚರಣ !—
ಇಂದು ವಾಮನನಂತೆ ಬಂದೀ ತ್ರಿವಿಕ್ರಮಗೆ
ಕವಿಯ ನಮನ ಅಸ್ತೃಣ !

---

* ತಾ|| ೧೪-೯-೧೯೫೭ ರಲ್ಲಿ ಕೊಡಗು ಜಿಲ್ಲೆಯ ಆನೆಚೌಕೂರಿನ ಫಾರೆಸ್ಟ್ ಲಾಡ್ಜ್‌ನಲ್ಲಿ ಶ್ರೀ ವಿನೋಬಾಜಿಯನ್ನು ಸಂದರ್ಶಿಸುವ ಸುಯೋಗ ಲಭಿಸಿತು. ಆಗ ಅವರಿಗೆ ಕಾಣಿಕೆಯಾಗಿ ಅರ್ಪಿಸಿದ "ಶ್ರೀ ರಾಮಾಯಣ ದರ್ಶನಂ" ಮಹಾಕಾವ್ಯದ ಒಂದು ವಿಶೇಷ ಪ್ರತಿಯಲ್ಲಿ ಬರೆದ ಕವನವಿದು.

೨†

ಹೇ ಜಗದ್‌ದೀನ ಬಂಧು,
ಮನೆಯೆ ಕ್ಷೇತ್ರವಾಯಿತಿಂದು
'ಉದಯರವಿ'ಗೆ ನೀನು ಬಂದು :
ಕೆರೆಯೆ ಆಯ್ತು ಮಹಾ ಸಿಂಧು,
ಪೂಜ್ಯ ಓ ತಪೋಧನ!
ಪಾದಯಾತ್ರೆಯಮೃತ ರೇಖೆ
ಮನೆಯ ಮೇಲೆ ಹಾಯ್ದುದಕ್ಕೆ
ನಿನಗನಂತ ವಂದನ,
ಪುನರನಂತ ವಂದನ!

—ಕುವೆಂಪು

† ತಾ|| ೨೫-೯-೫೭ರಲ್ಲಿ ಮೈಸೂರಿಗೆ ಪಾದಯಾತ್ರಿಯಾಗಿದ್ದ ಶ್ರೀ ವಿನೋಬಾಜಿಯವರನ್ನು ಹೆದ್ದಾರಿಯಲ್ಲಿ ಸಂಧರ್ಶಿಸಿ 'ಉದಯರವಿ'ಗೆ ಕರೆದೊಯ್ದ ಸಂದರ್ಭದಲ್ಲಿ ಮೂಡಿದ ಕವಿತೆ. ತಾ|| ೨೮-೯-೫೭ರಲ್ಲಿ ಶ್ರೀ ವಿನೋಬಾಜಿ ಮೈಸೂರಿನಿಂದ ಪ್ರಯಾಣ ಬೆಳಸಿದಾಗ ಅವರಿಗೆ ಅರ್ಪಿಸಿದ 'ಅಗ್ನಿಹಂಸ' ಕವನ ಸಂಗ್ರಹದ ಪ್ರತಿಯಲ್ಲಿ ಬರೆದದ್ದು.

ಕನ್ನಡ ಕಾವ್ಯಪ್ರಕಾಶ

ಹತ್ತನೆಯ ಉಲ್ಲಾಸ

ಈಗ ಅರ್ಥಾಲಂಕಾರಗಳನ್ನು[1] ಹೇಳಲಾಗುತ್ತದೆ:—

ಉಪಮೆ

ಸಾಧರ್ಮ್ಯಮುಪಮಾ ಭೇದೇ. . . ॥ ೧ ॥

ಭಿನ್ನವಾದ ಎರಡು ವಸ್ತುಗಳಲ್ಲಿರುವ ಸಾಧರ್ಮ್ಯವೇ ಉಪಮೆ.[2] ಸಾಧರ್ಮ್ಯವು ಉಪಮಾನ-ಉಪಮೇಯಗಳಲ್ಲಿ ಗೋಚರಿಸುವುದೇ ಹೊರತು ಕಾರ್ಯ-ಕಾರಣ

---

[1] ಅಲಂಕಾರಗಳ ಇತಿಹಾಸವು ಸಂಸ್ಕೃತ ಲಕ್ಷಣಶಾಸ್ತ್ರದಲ್ಲಿ ಬಹಳ ಮನನೀಯವಾಗಿದೆ. ಮೊದಲು ಭರತನ ನಾಟ್ಯಶಾಸ್ತ್ರದಲ್ಲಿ ನಾವು ಕಾಣುವುದು ನಾಲ್ಕೇ ಸ್ವತಂತ್ರ ಅಲಂಕಾರಗಳನ್ನು; ಮುಂದೆ ಅಗ್ನಿಪುರಾಣದಲ್ಲಿ ಅವುಗಳ ಸಂಖ್ಯೆ ಹದಿನಾರು. ಭಾಮಹ, ಭಟ್ಟಿಗಳ ಕಾಲದಲ್ಲಿ ಅವು ಆಗಲೇ ೩೮. ದಂಡಿ, ಉದ್ಭಟ, ವಾಮನರು ಕ್ರಮವಾಗಿ ೩೭, ೪೧, ೩೧, ಅಲಂಕಾರಗಳನ್ನೊಪ್ಪಿದರೂ ಕೂಡ ಇವರುಒಬ್ಬೊಬ್ಬರೂ ಬೇರೆಯವರು ಹೇಳದ ಕೆಲವನ್ನು ಸ್ವೀಕರಿಸುವುದರಿಂದ, ಎಲ್ಲರ ಅಲಂಕಾರಗಳನ್ನೂ ಎಣಿಸಿದರೆ ಸಂಖ್ಯೆ ಸುಮಾರು ೫೦ ಆಗುವುದು. ಹೀಗೆ ಕ್ರಮ ಕ್ರಮವಾಗಿ ವಿಕಾಸಗೊಳ್ಳುತ್ತಿದ್ದ ಅಲಂಕಾರಗಳ ಸಮಷ್ಟಿಯನ್ನು ಶಾಸ್ತ್ರೀಯವಾಗಿ ಮೊತ್ತಮೊದಲು ವಿವೇಚಿಸಿ ನಿರ್ಣಯಿಸಿದ ಲಾಕ್ಷಣಿಕನೇ ಮಮ್ಮಟ. ಇವನ ನಿರ್ಣಯದ ಪ್ರಕಾರ ಅಲಂಕಾರಗಳ ಸಂಖ್ಯೆ ೬೦ ರ ಹತ್ತಿರಕ್ಕೆ ಬರುತ್ತದೆ. ಇದಕ್ಕೆ ಪೂರ್ವದಲ್ಲಿ ಇದೇ ರೀತಿಯ ಪ್ರಯತ್ನ ಮಾಡಿದ ಯಶಸ್ಸು ರುದ್ರಟನದು. ಅವನೇ ಪ್ರಾಚೀನರಲ್ಲಿ ಅನುಪಲಬ್ಧವಾದ ಸುಮಾರು ೩೦ ಹೊಸ ಅಲಂಕಾರಗಳನ್ನು ಸೇರಿಸಿ ಒಟ್ಟು ಅಲಂಕಾರಗಳ ಸಂಖ್ಯೆಯನ್ನು ೫೫ಕ್ಕೆ ತಂದಿದ್ದನು. ಆದರೆ ಶಾಸ್ತ್ರಬದ್ಧವಾದ ವಿವೇಚನೆ ಅವನಲ್ಲಿಯೂ ಕಾಣುವುದಿಲ್ಲ. ಅಲಂಕಾರಗಳ ಲಕ್ಷಣಗಳನ್ನು ಅವ್ಯಾಪ್ತಿ, ಅತಿವ್ಯಾಪ್ತಿ ದೋಷಗಳು ಮುಟ್ಟದಂತೆ ನಿಷ್ಕೃಷ್ಟವಾಗಿ ರಚಿಸಿ, ಬೇರೆ ಬೇರೆ ಅಲಂಕಾರಗಳಿಗಿರುವ ಭೇದವನ್ನು ಸೂಕ್ಷ್ಮವಾಗಿ ನಿರೂಪಿಸಿ, ಅಲಂಕಾರಗಳನ್ನು ವ್ಯಾಕರಣ ಇಲ್ಲವೆ ತರ್ಕಶಾಸ್ತ್ರಗಳ ನಿಯಮಾನುಸಾರ ಕೂಲಂಕಷವಾಗಿ ವಿಭಾಗಿಸಿ, ಒಂದೊಂದು ಅಲಂಕಾರ ಪ್ರಭೇದಕ್ಕೂ ಸ್ಫುಟವಾದ ಉದಾಹರಣೆಗಳನ್ನು ಖಚಿತವಾಗಿ ನಿರ್ದೇಶಿಸಿರುವ ಮೊದಲ ಶಾಸ್ತ್ರಕಾರನ ಕೀರ್ತಿ ಮಮ್ಮಟನಿಗೇ ಸೇರಬೇಕು. ರುದ್ರಟನ ಸ್ಥೂಲವಿವರಣೆಯ ಕ್ರಮವನ್ನು ಮುಂದೆ ಭೋಜನೊಬ್ಬನು ಮಾತ್ರ ಅನುಸರಿಸುತ್ತಾನೆ. ಉಳಿದೆಲ್ಲ ಮುಂದಿನ ಆಲಂಕಾರಿಕರೂ ಮಮ್ಮಟನ ಶಾಸ್ತ್ರೀಯ ಶೈಲಿಯನ್ನೇ ಪೂರ್ಣವಾಗಿ ಪಾಲಿಸುತ್ತಾರೆ. ಅಲ್ಲಲ್ಲಿ ಅಭಿಪ್ರಾಯ ಭೇದಗಳು ಬಂದರೂ ಮಮ್ಮಟನ ಪ್ರತಿಪಾದನೆಯ ಸರಣಿಯನ್ನು ಮಾತ್ರ ರುಯ್ಯಕ, ವಿಶ್ವನಾಥ, ವಿದ್ಯಾನಾಥ, ಅಪ್ಪಯ್ಯದೀಕ್ಷಿತ, ಜಗನ್ನಾಥ—ಮುಂತಾದ ಮುಂದಿನ ಅಲಂಕಾರಶಾಸ್ತ್ರ ಶಿರೋಮಣಿಗಳೆಲ್ಲರೂ ಅಂಗೀಕರಿಸುತ್ತಾರೆ. ಹೀಗೆ ಸಂಸ್ಕೃತ ಅಲಂಕಾರಶಾಸ್ತ್ರದಲ್ಲಿ ಮಮ್ಮಟನ

ಮುಂತಾದುವಲ್ಲಿ ಸಾಧ್ಯವಿಲ್ಲ. ಆದುದರಿಂದ ಉಪಮಾನೋಪಮೇಯಗಳಲ್ಲಿರುವ ಸಮಾನಧರ್ಮದ ಸಂಬಂಧವೇ ಉಪಮೆ.[3] 'ಭಿನ್ನನಾದ' ಎಂದು ಲಕ್ಷಣದಲ್ಲಿ

ಅಲಂಕಾರನಿರೂಪಣೆಗೆ ಅಗ್ರಸ್ಥಾನ ಸಲ್ಲುವಷ್ಟು ಮಹತ್ತ್ವವಿದೆ. ಈ ಶಾಸ್ತ್ರೀಯ ವಿವೇಚನೆ ಮುಂದೆ ಬೆಳೆದು ಅಪ್ಪಯ್ಯದೀಕ್ಷಿತರ ಕಾಲದಲ್ಲಿ ಅಲಂಕಾರಗಳ ಸಂಖ್ಯೆ ನೂರನ್ನುಮುಟ್ಟಿತು. ನವೀನಾಲಂಕಾರಿಕರೆಲ್ಲರ ಸ್ವತಂತ್ರ ಅಲಂಕಾರಗಳನ್ನು ಲೆಕ್ಕಮಾಡಿದರೆ ಸಂಖ್ಯೆ ಅದಕ್ಕೆ ದ್ವಿಗುಣವೇ ಆದೀತು. ಇಷ್ಟಾದರೂ ಇವು ಸ್ಫುಟಾಲಂಕಾರಗಳ ದಿಕ್ಪ್ರದರ್ಶನವೆಂದು ಮಾತ್ರ ತಿಳಿಯಬೇಕೇ ಹೊರತು, ಕವಿವಾಣಿಗೆ ಇವಲ್ಲದ ಅಸ್ಫುಟಾಲಂಕಾರಗಳೂ ಇರಲಾರವೆಂದು ಭ್ರಮಿಸಬಾರದು. ಮಮ್ಮಟನೇ ಉಪಮಾಲಂಕಾರದ ಕಡೆಗೆ ಸ್ಪಷ್ಟಪಡಿಸುವಂತೆ ಅಸ್ಫುಟಪ್ರಾಯವಾದ ಒಂದೊಂದು ಅರ್ಥವೈಚಿತ್ರ್ಯವನ್ನೂ ಲೆಕ್ಕಮಾಡಿ ಮುಗಿಸುವುದು ಅಸಂಭವ. ಅಂತಹ ಸೂಕ್ಷ್ಮವೈಚಿತ್ರ್ಯಗಳು ಅನಂತವಾಗಿರುತ್ತವೆ. ಸರಸ್ವತಿಯೇ ಎಲ್ಲವನ್ನೂ ವಿವರಿಸುವೆನೆಂದು ಹೊರಟರೂ ಶಕ್ಯವಿಲ್ಲವೆಂಬ ಮಾತನ್ನು ಹಿಂದಿನ ದಂಡಿಯೇ ಹೇಳಿದ್ದಾನೆ. ಆನಂದವರ್ಧನನೂ ಈ ಅಂಶವನ್ನೊಪ್ಪಿದ್ದಾನೆ.

[2] ಅಲಂಕಾರಗಳಲ್ಲೆಲ್ಲ ಉಪಮೆಗೆ ಅಗ್ರಸ್ಥಾನವನ್ನು ಎಲ್ಲ ಆಲಂಕಾರಿಕರೂ ಕೊಡುತ್ತಾರೆ. ಉಳಿದ ಅನೇಕ ಅಲಂಕಾರಗಳಿಗೆಲ್ಲ ಬೀಜರೂಪವಾದ ಸೌಂದರ್ಯತತ್ತ್ವವು ಉಪಮೆಯಲ್ಲಿ ಅಡಗಿರುವುದೆಂದು ರುಯ್ಯಕನ ಮತ (ಉಪಮೈವಾನೇಕ ಪ್ರಕಾರವೈಚಿತ್ರ್ಯೇಣ ಅನೇಕಾಲಂಕಾರ ಬೀಜಭೂತಾ ಇತಿ ಪ್ರಥಮಂ ನಿರ್ದಿಷ್ಟಾ—**ಅಲಂಕಾರಸರ್ವಸ್ವ**, ಪು. 26). ಇದನ್ನು ಅಲಂಕಾರಗಳ ಶಿರೋರತ್ನವೆಂದೂ ಕಾವ್ಯಸಂಪತ್ತಿನ ಸರ್ವಸ್ವವೆಂದೂ ಕವಿವಂಶದ ಮಾತೆಯೆಂದೂ **ಅಲಂಕಾರಶೇಖರ**ದಲ್ಲಿ ಬರುವ ಒಂದು ಪದ್ಯ ಬಣ್ಣಿಸುತ್ತದೆ:—

ಅಲಂಕಾರಶಿರೋರತ್ನಂ ಸರ್ವಸ್ವಂ ಕಾವ್ಯಸಂಪದಾಮ್ |
ಉಪಮಾ ಕವಿವಂಶಸ್ಯ ಮಾತೈವೇತಿ ಮತಿರ್ಮಮ ||

ಅಪ್ಪಯ್ಯದೀಕ್ಷಿತರು ಉಪಮೆಯನ್ನು ನರ್ತಕಿಯೆಂದೂ, ಅನೇಕ ಚಿತ್ರಭೂಮಿಕೆಗಳನ್ನು ತಳೆದು ಕಾವ್ಯರಂಗದಲ್ಲಿ ನರ್ತನಮಾಡುತ್ತಾ ಸಹೃದಯರನ್ನು ಆಕೆ ರಂಜಿಸುವಳೆಂದೂ ಕೊಂಡಾಡಿದ್ದಾರೆ—

ಉಪಮೈಕಾ ಶೈಲೂಷೀ
ಸಂಪ್ರಾಪ್ತಾ ಚಿತ್ರಭೂಮಿಕಾಭೇದಾನ್ |
ರಂಜಯತಿ ಕಾವ್ಯರಂಗೇ
ನೃತ್ಯಂತೀ ತದ್ವಿದಾಂ ಚೇತಃ || (**ಚಿತ್ರಮೀಮಾಂಸಾ**)

ಈ ಅಭಿಪ್ರಾಯವನ್ನೇ ವಾಮನನೂ ಕೂಡ 'ಪ್ರತಿವಸ್ತೂಪಮೆ ಮೊದಲಾದುವೆಲ್ಲ **ಉಪಮಾಪ್ರಪಂಚವೇ**' ಎಂದು ಹೇಳಿ ಸಮರ್ಥಿಸಿದ್ದಾನೆ. ಆದ್ದರಿಂದ ಮಮ್ಮಟನು ಅರ್ಥಾಲಂಕಾರ ನಿರೂಪಣೆಯನ್ನು ಉಪಮೆಯಿಂದ ಪ್ರಾರಂಭಿಸಿರುವುದು ಯೋಗ್ಯವೇ ಆಗಿದೆ.

[3] ಮಮ್ಮಟನ ಶಾಸ್ತ್ರೀಯ ಲಕ್ಷಣದಲ್ಲಿ ಸಾರ್ಥಕ್ಯವಿಲ್ಲದ ಪದವಾಗಲಿ, ಅತಿರಿಕ್ತವಾದ ಪದವಾಗಲಿ ಒಂದೂ ಇರುವುದಿಲ್ಲ. ಉಪಮಾಲಕ್ಷಣದಲ್ಲಿ ಅವನು 'ಸಾಧರ್ಮ್ಯ'ವೆಂದಿರುವನೇ

ಸೇರಿಸಿರುವುದರಿಂದ 'ಅನನ್ವಯ'ವೆಂಬಲಂಕಾರಕ್ಕೆ ಈ ಲಕ್ಷಣ ಅನ್ವಯಿಸುವುದಿಲ್ಲ.[4]

ಹೊರತು 'ಸಾದೃಶ್ಯ'ವೆಂದಿಲ್ಲ. ಇವೆರಡೂ ಪರ್ಯಾಯಗಳೆಂದು ತಿಳಿಯುವವರೂ ಉಂಟು. ವಸ್ತುತಃ ಅವು ಪರ್ಯಾಯಗಳಲ್ಲ. ಎರಡು ವಸ್ತುಗಳಲ್ಲಿರುವ ಹೋಲಿಕೆಯೇ ಸಾದೃಶ್ಯ. ಈ ಸಾದೃಶ್ಯದ ಪ್ರತೀತಿಗೆ ಮೂಲವೇನೆಂದು ವಿಚಾರಮಾಡುತ್ತಾ ಹೊರಟಾಗ ಎರಡು ವಸ್ತುಗಳಲ್ಲೂ ಇರುವ ಧರ್ಮಗಳ, ಅವುಗಳ ಸಂಬಂಧದ ಪರಿಜ್ಞಾನ ಬರುತ್ತದೆ. ಇದೇ ಸಾಧರ್ಮ್ಯ. ಸಾದೃಶ್ಯಕ್ಕೆ ಮೂಲ ಯಾವುದೋ ಅದೇ ಸಾಧರ್ಮ್ಯ. ಸಮಾನವಾದ ಧರ್ಮವಿಲ್ಲದಿದ್ದಾಗ ಸಾದೃಶ್ಯ ಪ್ರತೀತಿ ಬರಲಾರದು. ಈ ವಿಶೇಷ ವಿಮರ್ಶೆಯನ್ನು ಉದ್ದ್ಯೋತಕಾರನು ಮಾಡಿದ್ದಾನೆ. ಭರತ, ದಂಡಿಗಳು 'ಸಾದೃಶ್ಯ'ವೆಂಬ ಪದವನ್ನೂ ಭಾಮಹ, ವಾಮನ, ರುದ್ರಟರು 'ಸಾಮ್ಯ'ವೆಂಬ ಪದವನ್ನೂ ಬಳಸಿದರೆ 'ಸಾಧರ್ಮ್ಯ'ವೆಂಬ ಶಬ್ದವನ್ನು ಮೊದಲು ಉಪಮಾಲಕ್ಷಣದಲ್ಲಿ ಬಳಸಿದವನು ಉದ್ಭಟ. ಮಮ್ಮಟನು ಇಲ್ಲಿ ಉದ್ಭಟನನ್ನೇ ಅನುಸರಿಸಿದ್ದಾನೆ. ಎರಡು ವಸ್ತುಗಳ ತಾತ್ವಿಕ ಸ್ವರೂಪ ಎಷ್ಟೇ ಭಿನ್ನವಾಗಿದ್ದರೂ ಕವಿಪ್ರತಿಭೆಯ ದೃಷ್ಟಿಯಿಂದ ಅವುಗಳ ಪ್ರಾತಿಭಾಸಿಕರೂಪಕ್ಕೆ ಮಾತ್ರ ಬೆಲೆಯೇ ಹೊರತು ಪಾರಮಾರ್ಥಿಕ ಭೇದಕ್ಕಲ್ಲ. ಕವಿಹೃದಯವು ರಸಾವಿಷ್ಟವಾಗಿರುವಾಗ ಆ ರಸಾನುಗುಣವಾಗಿ ಅವನಿಗೆ ಅರ್ಥಪ್ರತೀತಿಯುಂಟಾಗುತ್ತದೆ. ಉಪಮಾಸ್ವರೂಪವೂ ಕೂಡ ಆ ರಸಾನುಗುಣವಾಗಿ ಬೇರೆಬೇರೆಯಾಗುತ್ತದೆ. ಶೃಂಗಾರಿಯಾದ ಕವಿಯೊಬ್ಬನು ಸ್ತ್ರೀ ವರ್ಣನೆಗೆ ಹೊರಟಾಗ:—

ಅಮೃತಸ್ಯೇವ ಕುಂಡಾನಿ ಸುಖಾನಾಮಿವ ರಾಶಯಃ |
ರತೇರಿವ ನಿಧಾನಾನಿ ಯೋಷಿತಃ ಕೇನ ನಿರ್ಮಿತಾಃ ||

ಎಂದು ಉತ್ಪ್ರೇಕ್ಷಿಸಬಹುದು. ವಿರಕ್ತನೊಬ್ಬನು ಅದೇ ಸ್ತ್ರೀಯನ್ನು ಕುರಿತು :—

ಏತಾ ಹಸನ್ತಿ ಚ ರುದನ್ತಿ ಚ ಕಾರ್ಯಹೇತೋ
ರ್ವಿಶ್ವಾಸಯನ್ತಿ ಚ ನರಂ ನ ಚ ವಿಶ್ವಸನ್ತಿ |
ತಸ್ಮಾನ್ನರೇಣ ಕುಲಶೀಲಸಮನ್ವಿತೇನ
ವೇಶ್ಯಾ ಶ್ಮಶಾನಸುಮನಾ ಇವ ವರ್ಜನೀಯಾಃ ||

ಎಂದು ಉದ್ಗರಿಸಬಹುದು. ತಟಸ್ಥನೊಬ್ಬನು—

ದರ್ಶನಾದೇವ ನಟವದ್ ಹರನ್ತಿ ಹೃದಯಂ ಸ್ತ್ರಿಯಃ |
ಸುವಿಶ್ವಸ್ತೇಽಪ್ಯವಿಶ್ವಸ್ತಾಃ ಭವನ್ತಿ ಚ ಚರಾ ಇವ ||

ಎಂಬ ಅಭಿಪ್ರಾಯಕ್ಕೆ ಬರಬಹುದು. ಇಲ್ಲೆಲ್ಲ ಅರ್ಥಪುಷ್ಟಿಗೆ ಅಲಂಕಾರಗಳೇ ಕಾರಣವೆಂದು ಬಗೆಯಬೇಕೇ ಹೊರತು, ಆ ಅಲಂಕಾರಗಳಿಲ್ಲದಿದ್ದರೂ ಕೇವಲ ರಸಸಂಸ್ಪರ್ಶದಿಂದ ಅದೇ ಅರ್ಥಪುಷ್ಟಿ ಸಾಧ್ಯವೆಂದು ಭ್ರಮಿಸಬಾರದು. (ಹೆಚ್ಚಿನ ವಿವರಗಳಿಗೆ ಇದೇ ಲೇಖಕನ ರಸೋಲ್ಲಾಸವನ್ನು ಓದಬಹುದು). ಚರಾಚರ ಜಗತ್ತು ಬಾಹ್ಯನೋಟಕ್ಕೆ ಕೇವಲ ಭೇದಪ್ರಪಂಚವಾಗಿದ್ದರೂ ದರ್ಶನಾನ್ವಿತವಾದ ಕವಿಯ ಸೂಕ್ಷ್ಮದೃಷ್ಟಿಗೆ ಒಳಗೆ ಅಡಗಿರುವ ಸಾಧರ್ಮ್ಯರಹಸ್ಯವನ್ನು ಬಿಟ್ಟುಕೊಡುತ್ತದೆ. ಈ ರಹಸ್ಯದ ಸಿದ್ಧನೇ ಕವಿ. ಈ ರಹಸ್ಯವೇ ಕಾವ್ಯಸೌಂದರ್ಯದ ಜೀವನಾಡಿ.

[4] ಒಂದು ವಸ್ತುವನ್ನು ಅದಕ್ಕೇ ಹೋಲಿಸುವುದು 'ಅನನ್ವಯ'ವೆಂಬ ಅಲಂಕಾರ—'ಗಗನಂ

ಉಪಮೆಯ ಭೇದಪ್ರಭೇದಗಳು[5]

ಪೂರ್ಣಾ ಲುಪ್ತಾ ಚ. . .

ಉಪಮೆಯು 'ಪೂರ್ಣೋಪಮೆ', 'ಲುಪ್ತೋಪಮೆ', ಎಂದು ಎರಡು ವಿಧ.

ಉಪಮಾನ, ಉಪಮೇಯ, ಸಾಧಾರಣಧರ್ಮ, ಉಪಮಾವಾಚಕವಾದ ಶಬ್ದ—ಇಷ್ಟೂ ಕಂಠೋಕ್ತವಾಗಿದ್ದಾಗ 'ಪೂರ್ಣೋಪಮೆ.' ಇವುಗಳಲ್ಲಿ ಒಂದು, ಎರಡು ಇಲ್ಲವೆ ಮೂರು ಲೋಪವಾಗಿದ್ದರೆ 'ಲುಪ್ತೋಪಮೆ'

ಪೂರ್ಣೋಪಮೆ

. . . ಸಾಗ್ರಿಮಾ ॥ ೧*b* ॥

ಶ್ರೌತ್ಯಾರ್ಥೀ ಚ ಭವೇದ್ವಾಕ್ಯೇ ಸಮಾಸೇ ತದ್ಧಿತೇ ತಥಾ ॥ ೧*cd* ॥


ಮೊದಲನೆಯದು 'ಶ್ರೌತೀ' ಮತ್ತು 'ಆರ್ಥೀ' ಎಂದು ಮತ್ತೆ ಎರಡು ವಿಧ. ವಾಕ್ಯ, ಸಮಾಸ, ತದ್ಧಿತಗಳ ಮೂಲಕ ಇದು ಪ್ರಕಾಶಿಸುತ್ತದೆ.

'ಮೊದಲನೆಯದು' ಎಂದರೆ ಪೂರ್ಣೋಪಮೆ.


'ಯಥಾ', 'ಇವ', 'ವಾ' ಇತ್ಯಾದಿ ಶಬ್ದಗಳು ಯಾವ ಪದದ ಪರಭಾಗದಲ್ಲಿ ಬರುವವೋ ಆ ಪದವು ಉಪಮಾನವೆಂಬ ಪ್ರತೀತಿಯುಂಟಾಗುವುದೇನೋ ನಿಜ.

ಗಗನಾಕಾರಂ' ಎಂಬಂತೆ. ಇಲ್ಲಿ ಇರುವ ವಸ್ತು ಒಂದೇ ಆದ್ದರಿಂದ ವಸ್ತುಭೇದವಿಲ್ಲ. ವಸ್ತುಭೇದವಿಲ್ಲದ ಪ್ರಯುಕ್ತ ಉಪಮೆಯ ಪ್ರಸಕ್ತಿ ಬರುವಂತಿಲ್ಲ. ಉಪಮಾಲಕ್ಷಣದಲ್ಲಿ 'ಭೇದ' ಎಂದು ಹೇಳದೆ ಹೋಗಿದ್ದರೆ ಲಕ್ಷಣವು ಇದಕ್ಕೂ ಅನ್ವಯಿಸಿ ಅತಿವ್ಯಾಪ್ತಿಯೊದಗುತ್ತಿದ್ದಿತು.

[5] ಮಮ್ಮಟನ ಸೂಕ್ಷ್ಮವಿಭಾಗ ಬುದ್ಧಿಗೆ ವ್ಯಾಕರಣಾಂಶಗಳು ಪ್ರಯೋಜಕವಾಗುತ್ತವೆ. ಉಪಮೆಯ ಎಲ್ಲ ಭೇದಪ್ರಭೇದಗಳನ್ನೂ ತಿಳಿಯಲು ಕೆಳಗಿನ ನಕ್ಷೆ ಸಹಾಯಕವಾಗಬಹುದು :—




ಆದ್ದರಿಂದ ವಸ್ತುತಃ ಇವನ್ನು ಉಪಮಾನಕ್ಕೆ ವಿಶೇಷಣಗಳೆಂದು ಪರಿಗಣಿಸಬೇಕಾಗುತ್ತದೆ. ಆದರೂ ಷಷ್ಠೀವಿಭಕ್ತಿಪ್ರತ್ಯಯದಂತೆ ಈ ಶಬ್ದಗಳು ಕೂಡ ಕಿವಿಗೆ ಬಿದ್ದೊಡನೆ ತಮ್ಮ ಸ್ವಶಕ್ತಿಯಿಂದಲೇ (ವಿಶೇಷ್ಯವೊಂದನ್ನು ಮಾತ್ರ ಸೂಚಿಸುವ ಬದಲು ವಿಶೇಷ್ಯ ವಿಶೇಷಣಗಳೆರಡರಲ್ಲೂ ಇರುವ) ಸಂಬಂಧವನ್ನು ಪ್ರತಿಪಾದಿಸಿವೆಯೆಂಬುದನ್ನು



ಈ ವಿಭಾಗಕ್ರಮದ ವಿಷಯದಲ್ಲಿ ಮಮ್ಮಟನು ವಿಶೇಷತಃ ಉದ್ಭಟನಿಗೆ ಋಣಿಯಾಗಿದ್ದಾನೆ. ಉದ್ಭಟನ ಪ್ರಕಾರ ಉಪಮೆಯ ಪ್ರಭೇದಗಳು ಕೆಳಗಿನಂತಿವೆ :—

ಗಮನಿಸಬೇಕು.[6] ಆದಕಾರಣ, ಅವು ಉಕ್ತವಾಗಿರುವ ಕಡೆಗಳಲ್ಲಿ ಉಪಮೆ 'ಶ್ರೌತಿ' ಯೆನಿಸುವುದು.



ಉಪಮೆಯ ವಿಭಾಗಕ್ರಮದಲ್ಲಿ ಮಮ್ಮಟನ ವ್ಯಾಕರಣಶಾಸ್ತ್ರ ವ್ಯುತ್ಪತ್ತಿಯನ್ನು ಸ್ಪಷ್ಟವಾಗಿ ನೋಡಬಹುದು. ಮುಂದೆ ಈ ವ್ಯಾಕರಣದೃಷ್ಟಿಯನ್ನೇ ಮತ್ತೂ ವಿಸ್ತರಿಸಿ ಅಪ್ಪಯ್ಯದೀಕ್ಷಿತರು ಚಿತ್ರಮೀಮಾಂಸೆಯಲ್ಲಿ ಲುಪ್ತೋಪಮೆಯ ಭೇದಗಳು ೨೬ ಎಂದು ನಿರ್ಣಯಿಸಿ ಒಟ್ಟು ಉಪಮಾ ಭೇದಗಳ ಸಂಖ್ಯೆಯನ್ನು (೬ + ೨೬ =) ೩೨ಕ್ಕೆ ತರುತ್ತಾರೆ. ಅವರು ಉಲ್ಲೇಖಿಸುವ ಉಪಮಾದ್ಯೋತಕ ಪ್ರತ್ಯಯಗಳೆಂದರೆ— 'ಛ', 'ಣಿನಿ', 'ಕನ್' ಮುಂತಾದುವು.

6 'ರಾಜನ ಸೇವಕ' ಎಂಬಲ್ಲಿ ಷಷ್ಠೀವಿಭಕ್ತಿಪ್ರತ್ಯಯವು ಕೇವಲ ರಾಜನೊಬ್ಬನಿಗೆ ಮಾತ್ರ ಅನ್ವಯಿಸುವುದಿಲ್ಲ; ಅದು ಸೇವಕನಿಗೂ ಅನ್ವಯಿಸುತ್ತದೆ. ಎಂದರೆ ವಿಶೇಷ್ಯದಲ್ಲಿ ಮಾತ್ರ ವಿಶ್ರಾಂತವಾಗುವುದಿಲ್ಲ; ಎರಡಕ್ಕೂ ಇರುವ ಸಂಬಂಧವನ್ನೇ ನಿರ್ದೇಶಿಸುತ್ತದೆ. ರಾಜನು ಸ್ವಾಮಿ, ಸೇವಕನು ಆಳು, ಇವರಿಬ್ಬರ ಸಂಬಂಧವಾದ ಸ್ವ-ಸ್ವಾಮಿಭಾವ ಅಥವಾ ಸಂಬಂಧವೇ ಷಷ್ಠೀ ವಿಭಕ್ತಿಪ್ರತ್ಯಯದ ಅರ್ಥವೆಂಬುದು ವೈಯಾಕರಣರ ಸಿದ್ಧಾಂತ. ಆ ನ್ಯಾಯವನ್ನೇ ಉಪಮಾ ವಾಚಕ ಶಬ್ದಗಳಿಗೂ ಅನ್ವಯಿಸಬೇಕೆಂದು ಮಮ್ಮಟನು ವಾದಿಸುತ್ತಿದ್ದಾನೆ.

ಅದರಂತೆ 'ತತ್ರ ತಸ್ಯೇವ'[7] ಎಂಬ ಸೂತ್ರದ ಪ್ರಕಾರ 'ಇವ' ಎಂಬರ್ಥದಲ್ಲಿ ಉಕ್ತವಾಗಿರುವ 'ವತ್' ಪ್ರತ್ಯಯದ ಪ್ರಯೋಗವಿರುವಾಗಲೂ ಉಪಮೆ 'ಶ್ರೌತಿ'ಯೇ.[8]

'ತೇನ ತುಲ್ಯಂ ಮುಖಂ' (= ಅದರೊಡನೆ ಮುಖವು ಸಮಾನ) ಮುಂತಾದ ಪ್ರಯೋಗಗಳಲ್ಲಿ ಕೇವಲ ಉಪಮೇಯವನ್ನೂ, 'ತತ್ ತುಲ್ಯಮಸ್ಯ' (= ಅದು ಇದರ ಸಮಾನ) ಮುಂತಾದ ಪ್ರಯೋಗಗಳಲ್ಲಿ ಕೇವಲ ಉಪಮಾನವನ್ನೂ, 'ಇದಂ ಚ ತತ್ ಚ ತುಲ್ಯಂ' (= ಇದೂ ಅದೂ ಸಮಾನ) ಮುಂತಾದ ಪ್ರಯೋಗಗಳಲ್ಲಿ ಉಪಮಾನೋಪಮೇಯಗಳೆರಡನ್ನೂ 'ತುಲ್ಯ' ಇತ್ಯಾದಿ ಶಬ್ದಗಳು ನಿರ್ದೇಶಿಸುತ್ತವೆ. ಆದರೆ ಉಭಯಗತವಾದ ಸಾಧರ್ಮ್ಯವನ್ನು ಅವು ಶಬ್ದಶಕ್ತಿಯಿಂದ ಪ್ರತಿಪಾದಿಸಲಾರವು. ಮುಖ್ಯಾರ್ಥ ತಿಳಿದಮೇಲೆ ಮುಂದೆ ಸಾಮ್ಯವನ್ನು ಪರ್ಯಾಲೋಚಿಸುವವರಿಗೆ ಅರ್ಥಶಕ್ತಿಯ ಮೂಲಕ ಆ ಉಭಯಗತ ಸಾಧರ್ಮ್ಯದ ಪ್ರತೀತಿ ಉಂಟಾಗುತ್ತದೆ. ಆದ್ದರಿಂದ ಇಲ್ಲಿ ಸಾಧರ್ಮ್ಯ ಶಾಬ್ದವಲ್ಲ, ಆರ್ಥವೆನ್ನಬೇಕು. ಇಂತಹ ಲಕ್ಷ್ಯಗಳಲ್ಲಿ ಬರುವ ಉಪಮೆ 'ಆರ್ಥಿ'ಯೆನಿಸುತ್ತದೆ.

ಅದರಂತೆ 'ತೇನ ತುಲ್ಯಂ ಕ್ರಿಯಾ ಚೇದ್ ವತಿಃ'[9] ಎಂಬ ಸೂತ್ರದ ಪ್ರಕಾರ ಪ್ರಯುಕ್ತವಾಗುವ 'ವತ್' ಪ್ರತ್ಯಯವಿದ್ದಾಗಲೂ ಉಪಮೆ 'ಆರ್ಥಿ'ಯೇ.

'ಇವೇನ ನಿತ್ಯಸಮಾಸೋ ವಿಭಕ್ತ್ಯಲೋಪಃ ಪೂರ್ವಪದಪ್ರಕೃತಿಸ್ವರತ್ವಂ ಚ'[10] ಎಂಬ ನಿಯಮಾನುಸಾರ 'ಇವ' ಎಂಬ ಶಬ್ದವನ್ನು ನಿತ್ಯಸಮಾಸವೆಂದು ಪರಿಗಣಿಸಿದಾಗ 'ಇವ' ಶಬ್ದ ಬರುವ ಲಕ್ಷ್ಯಗಳು ಉಪಮೆಯನ್ನು ಸಮಾಸಗತವೆಂದರಿಯಬೇಕು.

ಅನುಕ್ರಮವಾಗಿ ಇವು ಉದಾಹರಣೆಗಳು :—[11]

---

[7] ಅಷ್ಟಾಧ್ಯಾಯೀ ಸೂತ್ರ, V. i. ೧೧೬. ಇದರಂತೆ 'ಇವ' ಎಂಬರ್ಥದಲ್ಲಿ 'ವತ್' ಪ್ರತ್ಯಯವು ಬರುತ್ತದೆ.

[8] ಸಾಧರ್ಮ್ಯವು ಶಬ್ದಲಭ್ಯವಾಗಿರುವ ಕಡೆಯೆಲ್ಲವೂ ಶ್ರೌತೀ ಉಪಮೆ. ಸಾಕ್ಷಾತ್ ಶಬ್ದವಿಷಯವಾಗಿರದೆ ಅರ್ಥಾತ್ ಸಿದ್ಧವಾಗುತ್ತಿದ್ದರೆ ಆರ್ಥೀ. ಎಲ್ಲಿ ಔಪಮ್ಯವು ಶಾಬ್ದ, ಎಲ್ಲಿ ಆರ್ಥ ಎಂಬುದನ್ನು ನಿರ್ಣಯಿಸಲು ಪಾಣಿನಿಯ ನಿಯಮಗಳೇ ಆಧಾರ.

[9] ಅಷ್ಟಾಧ್ಯಾಯೀಸೂತ್ರ, V. i. ೧೧೫.

[10] ಇದು ಕಾತ್ಯಾಯನನ ವಾರ್ತಿಕ. ಇದರ ಪ್ರಕಾರ 'ಇವ' ಶಬ್ದ ಬಂದಲ್ಲೆಲ್ಲ ಸಮಾಸವೆಂದೇ ತಿಳಿಯಲವಕಾಶವುಂಟು.

[11] ಸಂಸ್ಕೃತವ್ಯಾಕರಣಕ್ಕೆ ಮಾತ್ರ ಸಂಬಂಧಿಸಿ ಕನ್ನಡವ್ಯಾಕರಣಕ್ಕೆ ಅನ್ವಯಿಸದಂತಿರುವ ಎಷ್ಟೋ ವಿಷಯಗಳು ಲಕ್ಷ್ಯಗಳಲ್ಲಿ ಪ್ರಸಕ್ತವಾಗಿರುವುದರಿಂದ ಲಕ್ಷ್ಯ-ಲಕ್ಷಣ-ಸಮನ್ವಯ

೧. ವಾಕ್ಯಗತ—ಶ್ರೌತೀ—ಪೂರ್ಣೋಪಮೆ

ಸ್ವಪ್ನೇಽಪಿ ಸಮರೇಷು ತ್ವಾಂ ವಿಜಯಶ್ರೀರ್ನ ಮುಂಚತಿ।
ಪ್ರಭಾವಪ್ರಭವಂ ಕಾಂತಂ ಸ್ವಾಧೀನಪತಿಕಾ ಯಥಾ ॥ [12]

ಕನಸಿನೊಳಂ ಬವರಂಗಳೊ-
ಳಿನಿಸುಂ ಜಯಲಕ್ಷ್ಮಿ ನಿನ್ನನಗಲಳ್ ನೃಪನೇ।
ತನಗನುಕೂಲಂ ಪೆರ್ಚಿಂ
ದೆನಿಪಿನಿಯನ ಬಳಿಯ ಬಿಡದ ಮನದನ್ನೆಯವೋಲ್ ॥

೨. ವಾಕ್ಯಗತ—ಆರ್ಥೀ—ಪೂರ್ಣೋಪಮೆ

ಚಕಿತ ಹರಿಣಲೋಲ ಲೋಚನಾಯಾಃ
ಕ್ರುಧಿ ತರುಣಾರುಣತಾರ ಹಾರಿಕಾಂತಿ।
ಸರಸಿಜಮಿದಮಾನನಂ ಚ ತಸ್ಯಾಃ
ಸಮಮಿತಿ ಚೇತಸಿ ಸಮ್ಮದಂ ವಿಧತ್ತೇ ॥ [13]

ಮುನಿಸಿನೊಳಗೆ ಬಾಲರವಿಯ ಕೆಂಪಿನಿಂದೆ ಸೊಗಯಿಪ
ಹರಿಣ ಲೋಲ ನೇತ್ರೆಯ।
ಮೊಗವು ಪದುಮವೊಂದೆ ಸಮವೆನಲ್ಕೆ ನಾಡೆ ಮನದೊಳು
ಮಾಳ್ಪುದಧಿಕ ಮುದವನು ॥

೩. ಸಮಾಸಗತ—ಶ್ರೌತೀ—ಪೂರ್ಣೋಪಮೆ

ಅತ್ಯಾಯತೈರ್ನಿಯಮಕಾರಿಭಿರುದ್ಧತಾನಾಂ
ದಿವ್ಯೈಃ ಪ್ರಭಾಭಿರನಪಾಯಮಯೈರುಪಾಯೈಃ।

ಮಾಡಿಕೊಳ್ಳುವಾಗ ವ್ಯಾಕರಣಾಂಶ ಬಂದಿಲ್ಲ. ಸಂಸ್ಕೃತ ಉದಾಹರಣೆಗಳನ್ನೇ ವಾಚಕರು ಪರಾಮರ್ಶಿಸಬೇಕು. ಕನ್ನಡ ಅನುವಾದದಲ್ಲಿ ಅರ್ಥಮಾತ್ರ ಬಂದಿರುತ್ತದೆ: ನಿರ್ದಿಷ್ಟ ವ್ಯಾಕರಣಾಂಶವನ್ನೂ ಕೂಡ ಶಕ್ಯವಿದ್ದಷ್ಟು ಕೂಡಿಸಲು ಯತ್ನಿಸಿದೆಯಾದರೂ ಅಶಕ್ಯವಾದಾಗ ಕೈಬಿಟ್ಟಿದೆ.

[12] ಇಲ್ಲಿ 'ಜಯಲಕ್ಷ್ಮಿ'ಯೆಂಬ ಉಪಮೇಯ, 'ಸ್ವಾಧೀನಪತಿಕಾ' ಎಂಬ ಉಪಮಾನ, 'ಅಪರಿತ್ಯಾಗ'ವೆಂಬ ಸಾಧಾರಣಧರ್ಮ, 'ಯಥಾ' ಎಂಬ ವಾಚಕಶಬ್ದ, ನಾಲ್ಕೂ ಕಂಠೋಕ್ತವಾಗಿವೆ. ಸಮಾಸವಿಲ್ಲ.

[13] ಇಲ್ಲಿ 'ಆನನ'ವೆಂಬ ಉಪಮೇಯ, 'ಸರಸಿಜ'ವೆಂಬ ಉಪಮಾನ, 'ಅರುಣತ್ವ'ವೆಂಬ ಸಾಧಾರಣಧರ್ಮ, 'ಸಮಂ' ಎಂಬ ವಾಚಕಶಬ್ದ—ನಾಲ್ಕೂ ಉಕ್ತವಾಗಿವೆ. ಆದರೆ 'ಸಮಂ' ಎಂಬ ಶಬ್ದವಿರುವುದರಿಂದ ಆರ್ಥೀ. ಇಲ್ಲಿಯೂ ಸಮಾಸವಿಲ್ಲ.

ಶೌರಿರ್ಭುಜೈರಿವ ಚತುರ್ಭಿರದಃ ಸದಾ ಯೋ
ಲಕ್ಷ್ಮೀವಿಲಾಸಭವನೈರ್ಭುವನಂ ಬಭಾರ ‖ [14]

ನೀಳಂಗಳುದ್ಧತ ವಿನಾಶವಿಧಾಯಕಂಗಳ್
ದಿವ್ಯಪ್ರಭಾನ್ವಿತಗಳಾಗಿರೆ ನೀತಿ ನಾಲ್ಕುಂ |
ನಾಲ್ದೋಳ್ಗಳಂತೆ ಹರಿಯಾ ಸಿರಿಗಿರ್ಕೆ ಮತ್ತಂ
ಪೃಥ್ವೀಶಸಂದವುಗಳಿಂ ನೆಲಸಂ ಗಡಾಳ್ದಂ ‖

೪. ಸಮಾಸಗತ—ಆರ್ಥೀ—ಪೂರ್ಣೋಪಮೆ

ಅವಿತಥ ಮನೋರಥಪಥ
ಪ್ರಥನೇಷು ಪ್ರಗುಣಗರಿಮಗೀತಶ್ರೀಃ |
ಸುರತರುಸದೃಶಸ್ಸ ಭವಾನ್
ಅಭಿಲಷಣೀಯಃ ಕ್ಷಿತೀಶ್ವರ ನ ಕಸ್ಯ ‖

ಸಕಲಮನೋರಥವಿತರಣ
ಸಕಲಂಕಂ ಪ್ರಗುಣಗೀತಲಕ್ಷ್ಮೀಕಂ ನೀಂ |
ಪ್ರಕಟಂ ಸುರತರುಸದೃಶಂ
ಸಕಲರ ಮನದನ್ನನಪ್ಪೆ ಪೃಥಿವೀಪತಿಯೇ ‖

೫. ತದ್ಧಿತಗತ—ಶ್ರೌತೀ ಮತ್ತು ೬. ತದ್ಧಿತಗತ—ಆರ್ಥೀ ಪೂರ್ಣೋಪಮೆ

ಗಾಂಭೀರ್ಯಗರಿಮಾ ತಸ್ಯ ಸತ್ಯಂ ಗಂಗಾಭುಜಂಗವತ್ |
ದುರಾಲೋಕಃ ಸ ಸಮರೇ ನಿದಾಘಾಂಬರರತ್ನವತ್ ‖ [15]

ಅವನಾ ಗಾಂಭೀರ್ಯೋನ್ನತಿ
ಯವಧಾರಿಸು ಗಂಗೆಯಿನಿಯನೊಲ್ ತಾಂ ನಿರುತಂ |

---

[14] ಇಲ್ಲಿ 'ಭುಜದಂಡ'ವೆಂಬ ಉಪಮಾನ, 'ಉಪಾಯಚತುಷ್ಟಯ'ವೆಂಬ ಉಪಮೇಯ, 'ಆಯತತ್ವ' ಇತ್ಯಾದಿ ಸಾಧಾರಣಧರ್ಮಗಳು, 'ಇವ' ಎಂಬ ವಾಚಕಶಬ್ದ—ನಾಲ್ಕೂ ಉಕ್ತವಾಗಿವೆ. ಆದರೆ 'ಭುಜೈರಿವ' ಎಂಬುದನ್ನು ಕಾತ್ಯಾಯನನ ವಾರ್ತಿಕದಂತೆ ಸಮಸ್ತಪದವೆನ್ನಲವಕಾಶವುಂಟು.

[15] 'ಗಂಗಾಭುಜಂಗ' ಎಂದರೆ ಗಂಗೆಯ ಉಪಪತಿ = ಸಮುದ್ರ. ಅಂಬರರತ್ನ = ದ್ಯುಮಣಿ = ಸೂರ್ಯ.

ಬವರದೊಳಾಗದು ನೋಡ
ಲ್ಕವಸಂ ಬಿಸಿಲುರಿಯಲೊಪ್ಪುವಂಬರಮಣಿವೋಲ್ ||

'ಪತಿಯನ್ನು ವಶೀಕರಿಸಿಕೊಂಡ ವನಿತೆ ಕಾಂತನ ಸಮಾಗಮದಲ್ಲಿ ಲೋಕೋತ್ತರವಾದ ಸುಖಕ್ಕೆ ಭಾಜನಳಾಗುವಂತೆಯೇ ಜಯಲಕ್ಷ್ಮಿ ನಿನ್ನನ್ನು ಸೇವಿಸಿ ಲೋಕೋತ್ತರವಾದ ಸುಖವನ್ನು ಭೋಗಿಸುತ್ತಿರುವಳು' ಎಂದು ಮುಂತಾಗಿ ವ್ಯಂಗ್ಯಾರ್ಥವನ್ನು ಕಲ್ಪಿಸಿಕೊಂಡಲ್ಲದೆ ಪೂರ್ವೋಕ್ತ ಉದಾಹರಣೆಯಲ್ಲಿ ಉಕ್ತಿ ವೈಚಿತ್ರ್ಯ ಸ್ಪಷ್ಟವಾಗುವುದಿಲ್ಲವೆಂಬುದು ನಿಜ. 'ಅಲಂಕಾರ'ವೆಂದರೆ ವೈಚಿತ್ರ್ಯವೇ ಹೊರತು ಬೇರೊಂದಲ್ಲ. ಇದನ್ನೊಪ್ಪಿದರೂ ಲಕ್ಷ್ಯವನ್ನು 'ಧ್ವನಿ'ಯೆಂದೋ 'ಗುಣೀಭೂತವ್ಯಂಗ್ಯ'ವೆಂದೋ ಕರೆಯಲು ಸಾಧ್ಯವಿಲ್ಲ. ಏಕೆಂದರೆ, ಖಂಡಿತ ವಾಗಿಯೂ ಇಲ್ಲಿ ವ್ಯಂಗ್ಯಾಂಶದ ಸಂಸ್ಪರ್ಶದ ಪರಿಶೀಲನೆಯಿಂದಲೇ ಸೌಂದರ್ಯದ ಪ್ರತೀತಿಯಾಗುತ್ತಿಲ್ಲ; ಅದಕ್ಕೆ ಬದಲಾಗಿ ವಾಚ್ಯಾಂಶದ ಸೌಂದರ್ಯವೇ ಸ್ಪಷ್ಟವಾಗಿ ಬೆಳಗುತ್ತಿದೆ.[16] ಮಿಕ್ಕ ವ್ಯಂಗ್ಯಾಂಶಗಳಾದ 'ರಸಾದಿ-ಧ್ವನಿ' ಮತ್ತು 'ಅಲಂಕಾರ-ಧ್ವನಿ'ಗಳು ಕಾವ್ಯವೆಂದಲ್ಲೆಲ್ಲ ತಪ್ಪದೆ ಇದ್ದೇ ಇರುವ ಪ್ರಯುಕ್ತ ಅವನ್ನಿಲ್ಲಿ ಗಮನಿಸದೆ

---

[16] ಅಲಂಕಾರದ ಪರಾಮರ್ಶಕ್ಕೂ ವ್ಯಂಗ್ಯಾರ್ಥದ ಅಸ್ತಿತ್ವಕ್ಕೂ ವಿರೋಧ ಬಾರದಂತೆ ಕಾವ್ಯ ವಿಮರ್ಶೆ ಮುಂದುವರಿಯಬೇಕಾಗುತ್ತದೆ. ಎಂತಹವರಿಗೂ ಇದು ಕಠಿಣವಾಗಿ ಪರಿಣಮಿಸುತ್ತದೆ. ಮಮ್ಮಟನು ಇಲ್ಲಿ ಸಮನ್ವಯ ಮಾಡಿಕೊಳ್ಳುವ ವಿವೇಕವನ್ನು ಖಚಿತವಾಗಿ ಮಾಡಿಕೊಡುತ್ತಿದ್ದಾನೆ. ಸೌಂದರ್ಯವೇ ಅಲಂಕಾರದ ತತ್ತ್ವವೆಂದು ಸುಸ್ಪಷ್ಟವಾಗಿ ತಿಳಿಸುತ್ತಿದ್ದಾನೆ. ವ್ಯಂಗ್ಯಾರ್ಥ ಸಂಸ್ಪರ್ಶವು ಒಂದಿಲ್ಲೊಂದು ರೀತಿಯಿಂದ ಕಾವ್ಯವೆಂದಲ್ಲೆಲ್ಲ ಇದ್ದೇ ತೀರುವುದು ಸಹಜ. ಆದರೆ ಅಷ್ಟರಿಂದಲೇ ಅದನ್ನು 'ಧ್ವನಿ' ಅಥವಾ 'ಗುಣೀಭೂತವ್ಯಂಗ್ಯ'ವೆಂದು ನಿರ್ಣಯಿಸುವುದು ತಪ್ಪಾಗುತ್ತದೆ. ಸೌಂದರ್ಯವು ಪ್ರಧಾನವಾಗಿ ಯಾವ ಅಂಶದಲ್ಲಿ ನಿಷ್ಠವಾಗಿದೆ ಎಂಬುದೇ ಕಾವ್ಯ ವಿಮರ್ಶಕನಿಗೆ ಪ್ರಯೋಜಕ; ವ್ಯಂಗ್ಯಾರ್ಥದ ಅಸ್ತಿತ್ವ ಅಥವಾ ಸದ್ಭಾವಸಾಧನೆಯಲ್ಲ. ಆಸ್ವಾದಕಾಲದಲ್ಲಿ ವಾಚ್ಯಾಂಶದ ಸೌಂದರ್ಯ ಸುಸ್ಪಷ್ಟವಾಗಿದ್ದರೆ ಅದನ್ನು ಅಲಂಕಾರವೆಂದೇ ನಿರ್ಣಯಿಸಬೇಕು. ವ್ಯಂಗ್ಯಾಂಶವೂ ಅಲ್ಲಿರಬಹುದು. ವಸ್ತು, ರಸಾದಿ, ಅಲಂಕಾರಾಂತರ ಎಲ್ಲವೂ ವ್ಯಂಗ್ಯವಾಗಿ ಅಲ್ಲಿಯೇ ಇರಬಹುದು. ಆದರೆ ಆ ವ್ಯಂಗ್ಯಾಂಶದ ಸದ್ಭಾವದಿಂದಲೇ ಕಾವ್ಯದ ಸೌಂದರ್ಯ ಬಂದಿದೆಯೆಂದು ಭ್ರಮಿಸಲಾಗದು. ವಾಚ್ಯದ ಸೌಂದರ್ಯಾಂಶಕ್ಕೆ ಮಾತ್ರ ಅಲಂಕಾರವೆಂಬ ಹೆಸರಿರುವುದರಿಂದ, ಮೊದಲು ವಿಮರ್ಶಕನು ಅಲಂಕಾರದ ಸೊಗಸನ್ನು ಬಾಯಿ ಬಿಟ್ಟು ಒಪ್ಪಿಕೊಳ್ಳಬೇಕು. (ಹೆಚ್ಚಿನ ವಿವರಗಳಿಗೆ ಇದೇ ಲೇಖಕನ 'ರಸೋಲ್ಲಾಸ' ವನ್ನು ಓದಿ). ಹಾಗೆ ಪ್ರಯತ್ನಪಟ್ಟು ಪರೀಕ್ಷಿಸಿದರೂ ಅಲಂಕಾರ ಕಾಣದಿದ್ದರೆ, ಆದರೂ ಸೌಂದರ್ಯ ಅತಿಶಯವಾಗಿ ಸ್ಫುರಿಸುತ್ತಿದ್ದರೆ, ಆಗ ವ್ಯಂಗ್ಯಾರ್ಥಪ್ರಾಧಾನ್ಯವೆಂದು ತೀರ್ಮಾನಿಸಿ ಕಾವ್ಯವನ್ನು 'ಧ್ವನಿಕಾವ್ಯ'ವೆನ್ನಬೇಕು.

ವಾಚ್ಯವಾದ ಅಲಂಕಾರಗಳಷ್ಟನ್ನೇ ಲಕ್ಷ್ಯಗಳಲ್ಲಿ ನಿರ್ದೇಶಿಸಲಾಗಿದೆ. ಅವುಗಳಿಲ್ಲದ ಸ್ಥಳಗಳನ್ನು ನಾವು ಉದಾಹರಿಸಿದರೆ ನೀರಸವಾಗುವ ಪರಿಸ್ಥಿತಿ ತಪ್ಪುವುದಿಲ್ಲ.[17] ಆದುದರಿಂದ ಪೂರ್ವಾಪರವಿರೋಧ ಒಂದಿತೆಂದು ಶಂಕಿಸಬೇಕಾದ ಪ್ರಸಕ್ತಿಯಿಲ್ಲ.

ಲುಪ್ತೋಪಮೆ: (*a*) ಧರ್ಮಲುಪ್ತೋಪಮೆ

ತದ್ವದ್ ಧರ್ಮಸ್ಯ ಲೋಪೇ ಸ್ಯಾನ್ನ ಶ್ರೌತೀ ತದ್ಧಿತೇ ಪುನಃ ॥ ೨*ab* ॥

ಅದರಂತೆಯೇ ಧರ್ಮ ಲುಪ್ತವಾದಾಗಲೂ ಉಪಮೆಯ ಉಕ್ತಪ್ರಭೇದಗಳಾಗುತ್ತವೆ. ತದ್ಧಿತದಲ್ಲಿ ಮಾತ್ರ 'ಶ್ರೌತಿ'ಯಿಲ್ಲ.

'ಧರ್ಮ' ಎಂದರೆ ಸಾಧಾರಣಧರ್ಮ. 'ಕಲ್ಪ' ಮುಂತಾದ ತದ್ಧಿತಪ್ರತ್ಯಯಗಳು ಬಂದಾಗ 'ಆರ್ಥಿ' ಮಾತ್ರ ಸಾಧ್ಯ. ಆದುದರಿಂದ ಧರ್ಮಲುಪ್ತೋಪಮೆಯ ಪ್ರಭೇದಗಳು ಐದೆಂದಾಯಿತು.

ಉದಾಹರಣೆ:—

೧. ವಾಕ್ಯಗತ-ಶ್ರೌತೀ-ಧರ್ಮಲುಪ್ತೋಪಮೆ

ಧನ್ಯಸ್ಯಾನನ್ಯಸಾಮಾನ್ಯ ಸೌಜನ್ಯೋತ್ಕರ್ಷಶಾಲಿನಃ।
ಕರಣೀಯಂ ವಚಶ್ಚೇತಃ ಸತ್ಯಂ ತಸ್ಯಾಮೃತಂ ಯಥಾ ॥

ಅಧಿಕಂ ಸೌಜನ್ಯಯುತಂ
ಸದಯಂ ಮೇಣ್ ಧನ್ಯನೆನಿಪ ಸುಜನನ ವಚನಂ।
ಒದಗಿರಲೊಡನೆಯೆ ಗೈವುದು
ಹೃದಯವೆ ಪದೆಪಿಂದೆ ಸುಧೆಯ ತೆರದಿಂದನಿಶಂ ॥

೨. ವಾಕ್ಯಗತ-ಆರ್ಥೀ-ಧರ್ಮಲುಪ್ತೋಪಮೆ

ಆಕೃಷ್ಟಕರವಾಲೋಽಸೌ ಸಂಪರಾಯೇ ಪರಿಭ್ರಮನ್।
ಪ್ರತ್ಯರ್ಥಿಸೇನಯಾ ದೃಷ್ಟಃ ಕೃತಾಂತೇನ ಸಮಃ ಪ್ರಭುಃ ॥

---

[17] 'ನೀರಸ'ವನ್ನು ದೋಷವೆಂದು ಹಿಂದೆಯೇ ಏಳನೆಯ ಉಲ್ಲಾಸದಲ್ಲಿ ನಿರ್ಣಯಿಸಲಾಗಿರುವುದರಿಂದ ಈಗ ಅಲಂಕಾರಕ್ಕೆ ಉದಾಹರಣೆಯೆಂದು ದೋಷಮಯವಾದ ಲಕ್ಷ್ಯಗಳನ್ನು ಹೇಳಲಾಸ್ಪದವಿಲ್ಲ. ಆದ್ದರಿಂದ ಸರಸಕಾವ್ಯದಲ್ಲಿ ಮಾತ್ರ ನಿಜವಾಗಿಯೂ ಅಲಂಕಾರಗಳಿಗೆ ವಿವೇಚನೀಯತ್ವವುಂಟೇ ಹೊರತು ನೀರಸರಚನೆ ಅಥವಾ ಪುರಾಣಶಾಸ್ತ್ರಾದಿಗಳಲ್ಲಲ್ಲ.

ಸೆಳೆದ ಕೃಪಾಣದಿನರಸಂ
ಕೊಳುಗುಳದೊಳ್ ಸಂಚರಿಪ್ಪ ಸಮಯದೊಳರಿಯಾ ।
ಬಲಮವಸಂ ಮಿಗೆ ಕಂಡುದು
ಘಳಿಲನೆ ಯಮುಸಮನೆಯೆಂಬ ಬಗೆಯಿಂದಾಗಳ್ ‖

೩. ಸಮಾಸಗತ-ಶ್ರೌತೀ, ೪. ಸಮಾಸಗತ-ಆರ್ಥೀ ಮತ್ತು
೫. ತದ್ಧಿತಗತ-ಆರ್ಥೀ ಧರ್ಮಲುಪ್ತೋಪಮೆ

ಕರವಾಲ ಇವಾಚಾರಸ್ತಸ್ಯ[18] ವಾಗಮೃತೋಪಮಾ[19] ।
ವಿಷಕಲ್ಪಂ[20] ಮನೋ ವೇತ್ಸಿ ಯದಿ ಜೀವಸಿ ತತ್ ಸಖೇ ‖

ಅವನಾ ವರ್ತಸೆಯಸಿವೋಲ್
ಅವನಾ ಮಾತಮೃತಸದೃಶಮಂತೆಯೆ ನೋಡಲ್ |
ಅವನಾ ಬಗೆ ನಂಜಿಂಗೆಣೆ
ತವೆಯರಿವಯ್ ನೀನೆ ಜೀವದಿಂದಿರೆ ಸಖನೇ ||

(*b*) ಉಪಮಾನಲುಪ್ತೋಪಮೆ:—

ಉಪಮಾನಾನುಪಾದಾನೇ ವಾಕ್ಯಗಾಥ ಸಮಾಸಗಾ ‖ ೭*cd* ‖

ಉಪಮಾನವು ಲೋಪವಾದಾಗ 'ವಾಕ್ಯಗತ,' 'ಸಮಾಸಗತ' ಎಂಬ ಎರಡೇ ಪ್ರಭೇದಗಳು :—

೧. ವಾಕ್ಯಗತ ಉಪಮಾನಲುಪ್ತೋಪಮೆ

ಸಅಲಕರಣಪರವೀಸಾಮಸಿರಿವಿಅರಣಂ
ಣ ಸರಸಕವ್ವಸ್ಸ ।
ದೀಸಇ ಅಹವ ಣಿಸಮ್ಮಇ
ಸರಿಸಂ ಅಂಸಂಸಮೆತ್ತೇಣ ‖

ಸಕಲೇಂದ್ರಿಯಗಣ ವಿಶ್ರಾ
ಮಕ ಮೋದಮನೀಯೆ ಸದೃಶಮಂಶಾಂಶದೊಳಂ |

---

[18] ಇದು ಸಮಾಸಗತ—ಶ್ರೌತೀ—ಧರ್ಮಲುಪ್ತೋಪಮೆ.

[19] ಇದು ,, —ಆರ್ಥೀ— ,,

[20] ಇದು ತದ್ಧಿತಗತ— ,, — ,,

ಸುಕವಿಯ ರಸಮಯಕಾವ್ಯ-
ಕ್ಕಕಟಾ ಬೇರೊಂದು ದೃಷ್ಟಮಲ್ಲಂ ಶ್ರುತಮುಂ ||

೨. ಅದೇ—ಸಮಾಸಗತ

ಹಿಂದಿನ ಲಕ್ಷ್ಯದಲ್ಲಿಯೇ 'ಕವ್ವಸ್ಸ' (=ಕಾವ್ಯಸ್ಯ) ಎಂಬುದಕ್ಕೆ ಪ್ರತಿಯಾಗಿ 'ಕವ್ವಸಮಂ' (=ಕಾವ್ಯಸಮಂ) ಎಂದೂ 'ಸರಿಸಂ' (=ಸದೃಶಂ) ಎಂಬುದರ ಬದಲು 'ಣೂಣಂ' (=ನೂನಂ) ಎಂದೂ ಪಾಠಾಂತರಗಳನ್ನು ಮಾಡಿಕೊಂಡರೆ ಸಮಾಸಗತ ಉಪಮಾನಲುಪ್ತೋಪಮೆಯ ಲಕ್ಷ್ಯವಾಗುವುದು.

(*c*) ವಾಚಕಲುಪ್ತೋಪಮೆ:—

ವಾದೇರ್ಲೋಪೇ ಸಮಾಸೇ ಸಾ ಕರ್ಮಾಧಾರಕ್ಯಚಿ ಕ್ಯಙಿ |
ಕರ್ಮಕರ್ತ್ರೋರ್ಣಮುಲಿ . . . || ೩*abc* ||

'ವಾ,' 'ಇವ' ಮುಂತಾದುವು ಲೋಪವಾದಾಗ—೧. ಸಮಾಸಗತ, ೨. ಕರ್ಮ-ಕ್ಯಚ್-ಪ್ರತ್ಯಯ-ಗತ, ೩. ಆಧಾರ-ಕ್ಯಚ್-ಪ್ರತ್ಯಯ-ಗತ, ೪. ಕ್ಯಚ್-ಪ್ರತ್ಯಯ-ಗತ, ೫. ಕರ್ಮ-ಣಮುಲ್-ಪ್ರತ್ಯಯ-ಗತ, ೬. ಕರ್ತೃ-ಣಮುಲ್-ಪ್ರತ್ಯಯ-ಗತ, ಎಂಬ ಉಪಮಾಪ್ರಕಾರಗಳಾಗುವುವು.[21]

"'ವಾ' ಮುಂತಾದುವು" ಎಂದರೆ ಉಪಮಾವಾಚಕಗಳಾದ ಶಬ್ದಗಳೆಂದು ತಾತ್ಪರ್ಯ. ಇವು ಲೋಪವಾದಾಗ ಮೇಲೆ ಹೇಳಿದಂತೆ ಆರು ಪ್ರಕಾರಗಳಾಗುತ್ತವೆ.

ಉದಾಹರಣೆ:—

೧. (*a*) ಸಮಾಸಗತ—ಆರ್ಥೀ-ವಾಚಕಲುಪ್ತೋಪಮೆ

ತತಃ ಕುಮುದನಾಥೇನ ಕಾಮಿನೀಗಂಡಪಾಂಡುನಾ |
ನೇತ್ರಾನಂದೇನ ಚಂದ್ರೇಣ ಮಾಹೇಂದ್ರೀ ದಿಗಲಂಕೃತಾ ||

ಸುರಪನ ದೆಸೆಯಂ ಗಡಲಂ-
ಕರಿಸಿದನಾ ಚಂದ್ರನಕ್ಷಿಗಾನಂದಕರಂ |
ಸುರುಚಿರ ಕುಮುದಾಧೀಶಂ
ವರನಾರೀಮಣಿಕಪೋಲಪಾಂಡುರವರ್ಣಂ ||

21 'ಕ್ಯಚ್', ಕ್ಯಙ್, ಮುಂತಾದುವು ಸಂಸ್ಕೃತದ ನಾಮಧಾತುಗಳು. ಮುಂದೆ ಬರುವ ಸುತೀಯತಿ, ನಾರೀಯತೇ ಮುಂತಾದುವೇ ಉದಾಹರಣೆಗಳು.

(b) ಬಹುಪದ ಸಮಾಸಗತ-ಆರ್ಥೀ-ವಾಚಕಲುಪ್ತೋಪಮೆ

ಅಸಿತಭುಜಗ ಭೀಷಣಾಸಿಪತ್ರೋ
ರುಹರುಹಿಕಾಹಿತಚಿತ್ತತೂರ್ಣಚಾರಃ ।
ಪುಲಕಿತತನುರುತ್ಕಪೋಲಕಾಂತಿಃ
ಪ್ರತಿಭಟವಿಕ್ರಮದರ್ಶನೇಽಯಮಾಸೀತ್ ॥

ಅಸಿತಭುಜಗಭೀಷಣಾಸಿಯುಕ್ತಂ
ತರಹರಿಸಲ್ ಮನಮಂತೆ ತೂರ್ಣಚಾರಂ ।
ಪುಲಕಿತತನು ಚೆಂಗಪೋಲಮೊಪ್ಪಲ್
ಪ್ರತಿಭಟವಿಕ್ರಮದರ್ಶಿಯೀತನಾದಂ ॥

೨. ಕರ್ಮ-ಕ್ಯಚ್‌ಗತ-, ೩. ಅಧಿಕರಣಕ್ಯಚ್‌ಗತ ಮತ್ತು
೪. ಕ್ಯಙ್-ಗತ-ವಾಚಕಲುಪ್ತೋಪಮೆ

ಪೌರಂ ಸುತೀಯತಿ ಜನಂ[22] ಸಮರಾಂತರೇಽಸಾ
ವಂತಃಪುರೀಯತಿ[23] ವಿಚಿತ್ರ ಚರಿತ್ರ ಚುಂಚುಃ ।
ನಾರೀಯತೇ[24] ಸಮರಸೀಮ್ನಿ ಕೃಪಾಣಪಾಣೇ
ರಾಲೋಕ್ಯ ತಸ್ಯ ಚರಿತಾನಿ ಸಪತ್ನಸೇನಾ ॥

ಪುರಜನರಂ ಸುತರಾಗಿಸೆ
ಧುರಮಂ ಮೇಣ್ ಕನ್ನೆವಾಡಮಾಗಿಸೆ ಧೀರಂ ।
ಅರಿಸೇನೆಯೆ ಪೆಣ್ಣಾದುದು
ಧುರದೆಡೆಯೊಳ್ ಖಡ್ಗಹಸ್ತನಂ ಕಾಣಲೊಡಂ ॥

---

[22] 'ಪೌರಂ' ಎಂಬ ದ್ವಿತೀಯೆಯೊಡನೆ ಕ್ರಿಯೆ ಅನ್ವಯಿಸುವುದರಿಂದ ಇದು ಕರ್ಮ-ಕ್ಯಚ್ ಪ್ರತ್ಯಯಕ್ಕೆ ಉದಾಹರಣೆ.

[23] ಇಲ್ಲಿ ಕ್ರಿಯೆ 'ಸಮರಾಂತರೇ' ಎಂಬ ಸಪ್ತಮಿಯೊಡನೆ ಅನ್ವಯಿಸುವುದರಿಂದ ಆಧಾರ-ಕ್ಯಚ್ ಪ್ರತ್ಯಯಕ್ಕೆ ಉದಾಹರಣೆ.

[24] 'ಸಃ' ಎಂಬ ಕರ್ತೃಪದದೊಡನೆ ಕ್ರಿಯೆ ಅನ್ವಯಿಸುವುದರಿಂದ ಇದು ಕ್ಯಙ್ ಪ್ರತ್ಯಯಕ್ಕೆ ಉದಾಹರಣೆ.

೫. ಕರ್ಮಣಮುಲ್-ಗತ-ಮತ್ತು ೬. ಕರ್ತೃ-ಣಮುಲ್-ಗತ-ವಾಚಕಲುಪ್ತೋಪಮೆ[25]

ಮೃಧೇ ನಿದಾಘಘರ್ಮಾಂಶುದರ್ಶಂ ಪಶ್ಯಂತಿ ತಂ ಪರೇ ।
ಸ ಪುನಃ ಪಾರ್ಥಸಂಚಾರಂ ಸಂಚರತ್ಯವನೀಪತಿಃ ॥

ಉರಿಬಿಸಿಲ ರವಿಯ ತೆರದಿಂ
ದರಸಂ ದುರ್ದರ್ಶನಪ್ಪನರಿಗಳ ಕಣ್ಣಿಂ- ।
ಗುರುಗತಿಯಿಂ ಗಡ ನಡೆವಂ
ದೊರೆಯೆನಲಾ ಪಾರ್ಥಗಮನಕೀ ತಿರೆಯಾಣ್ಮಂ ॥

ಧರ್ಮ+ವಾಚಕ-ಲುಪ್ತೋಪಮೆ

ಏತದ್ದ್ವಿಲೋಪೇ ಕ್ವಿಪ್ ಸಮಾಸಗಾ ॥ ೩d ॥

ಈ ಎರಡೂ ಲೋಪವಾದಾಗ ಇದರಲ್ಲಿ 'ಕ್ವಿಪ್-ಗತ', 'ಸಮಾಸ-ಗತ' ಎಂಬ ಎರಡೇ ಪ್ರಕಾರಗಳು.

"ಈ ಎರಡೂ" ಎಂದರೆ ಸಾಧಾರಣಧರ್ಮ ಮತ್ತು ಉಪಮಾವಾಚಕ ಶಬ್ದಗಳೆಂದರ್ಥ.

ಉದಾಹರಣೆ :—

೧. ಕ್ವಿಪ್-ಗತ ಧರ್ಮವಾಚಕಲುಪ್ತೋಪಮೆ

ಸವಿತಾ ವಿಧವತಿ ವಿಧುರಪಿ
ಸವಿತರತಿ ತಥಾ ದಿನಂತಿ ಯಾಮಿನ್ಯಃ ।
ಯಾಮಿನಯಂತಿ ದಿನಾನಿ ಚ
ಸುಖದುಃಖವಶೀಕೃತೇ ಮನಸಿ ॥

ರವಿ ಶಶಿಯಪ್ಪಂ ಶಶಿಯುಂ
ರವಿಯಪ್ಪಂ ದಿನಗಳಪ್ಪವಾ ನಿಶಿಯೆಲ್ಲಂ ।

---

[25] 'ಣಮುಲ್' ಎಂದರೆ 'ಅಂ' ಪ್ರತ್ಯಯ. ಧಾತುವಿಗೆ ಇದನ್ನು ಕರ್ಮಾರ್ಥ ಇತ್ಯಾದಿಗಳಲ್ಲಿ ಸೇರಿಸುವರು. ಇಂಗ್ಲಿಷಿನಲ್ಲಿ *He fights a fight* ಮುಂತಾದ *Cognate object* ಗಳೊಡನೆ ದರ್ಶಂ ಪಶ್ಯನ್ತಿ ಇತ್ಯಾದಿಗಳನ್ನು ಹೋಲಿಸಬಹುದು. ಕ್ರಿಯೆ ಕರ್ತೃವಿನೊಡನೆ ಅನ್ವಯಿಸುತ್ತಿದ್ದರೆ—ಉದಾ—ಸಃ ಸಂಚಾರಂ ಸಂಚರತಿ—ಕರ್ತೃಣಮುಲ್ ಎನಿಸುತ್ತದೆ.

ದಿವಸಂಗಳ್ ನಿಶಿಯಪ್ಪವು
ಕವಿಯಲ್ ಸುಖದುಃಖಭಾರವೊಡನೆಯೆ ಬಗೆಯಂ ||

೨. ಸಮಾಸಗತ ಧರ್ಮವಾಚಕಲುಪ್ತೋಪಮೆ

ಪರಿಪಂಥಿ ಮನೋರಾಜ್ಯಶತ್ರೈರಪಿ ದುರಾಕ್ರಮಃ ||
ಸಂಪರಾಯಪ್ರವೃತ್ತೋಽಸೌ ರಾಜತೇ ರಾಜಕುಂಜರಃ ||

ಅರಿಮಾನಸರಾಜ್ಯಶತ-
ಕ್ಕರಿದೆನಿಸಲ್ ಪತ್ತೆಸಾರಲೀತಂ ಭರದಿಂ |
ಧುರದೊಳ್ ನಿಜಸಾಹಸಮಂ
ಮೆರೆಯುತ್ತುಂ ರಾಜಕುಂಜರಂ ಕಣ್ಗೆಸೆವಂ ||

ಧರ್ಮ + ಉಪಮಾನ–ಲುಪ್ತೋಪಮೆ

ಧರ್ಮೋಪಮಾನಯೋರ್ಲೋಪೇ ವೃತ್ತೌ ವಾಕ್ಯೇ ಚ ದೃಶ್ಯತೇ || ೪*ab* ||

ಸಾಧಾರಣಧರ್ಮ ಮತ್ತು ಉಪಮಾನಗಳೆರಡೂ ಲೋಪವಾದಾಗ ಉಪಮೆಯಲ್ಲಿ 'ಸಮಾಸಗತ' ಮತ್ತು 'ವಾಕ್ಯಗತ'ಗಳೆಂಬ ಎರಡು ಬಗೆಗಳಾಗುತ್ತವೆ.

ಉದಾಹರಣೆ :—

ಸಮಾಸಗತ—

ಢುಂಢುಣ್ಣಂತೋ ಮರಿಹಸಿ
ಕಂಟಅಕಲಿಆಇಂ ಕೇಅಇವಣಾಇಂ !
ಮಾಲಇಕುಸುಮಸರಿಚ್ಛಂ
ಭಮರ ಭಮಂತೋ ಣ ಪಾವಹಿಸಿ ||

ಕೇದಗೆ ಬನದೊಳಗಳಿಯಲ್
ವೇದನೆಯಿಂ ಸುಳಿವೆಯಳಿಯೆ ಮತ್ತಂ ಮತ್ತಂ |
ಆದೊಡಮೆಂದುಂ ಪಡೆಯ-
ಲ್ಕಾದಪುದೇಂ ನಿನಗೆ ಮಾಲತೀಕುಸುಮಸಮಂ ||

ವಾಕ್ಯಗತ—

ಮೇಲಿನ ಪದ್ಯದಲ್ಲಿಯೇ 'ಕುಸುಮಸರಿಚ್ಛಂ' ಎನ್ನುವ ಬದಲು 'ಕುಸುಮೇಣ ಸಮಂ' (ಭಾಷಾಂತರದಲ್ಲಿ-ಸುಮಕೆ ಸಮಂ) ಎಂದು ಪಾಠಾಂತರ ಮಾಡಿಕೊಂಡರೆ ಅದೇ ವಾಕ್ಯಗತ-ವೆಂಬ ಎರಡನೆಯ ಪ್ರಭೇದಕ್ಕೆ ಲಕ್ಷ್ಯವಾಗುತ್ತದೆ.

ಉಪಮೇಯ + ವಾಚಕ-ಲುಪ್ತೋಪಮೆ

ಕ್ಯಚಿ ವಾದ್ಯುಪಮೇಯಾಸೇ . . . ॥ ೪೮ ॥

ಉಪಮಾವಾಚಕ ಮತ್ತು ಉಪಮೇಯಗಳೆರಡೂ ಲುಪ್ತವಾದಾಗ **ಕ್ಯಚ್-ಪ್ರತ್ಯಯಗತ** ವೆಂಬ ಒಂದೇ ಪ್ರಕಾರ ಸಾಧ್ಯ.

ಕಾರಿಕೆಯಲ್ಲಿ 'ಆಸೇ' ಎಂದರೆ 'ನಿರಾಸೇ' (=ಲೋಪವಾದಾಗ) ಎಂದರ್ಥ.

ಉದಾಹರಣೆ :—

ಅರಾತಿವಿಕ್ರಮಾಲೋಕವಿಕಸ್ವರವಿಲೋಚನಃ ।
ಕೃಪಾಣೋದಗ್ರದೋರ್ದಂಡಃ ಸ ಸಹಸ್ರಾಯುಧೀಯತಿ ॥

ಅರಿಯ ಪರಾಕ್ರಮದರ್ಶನ
ಮರಳಿಸೆ ಕಣ್ಬೆಳಗನಂದು ನೃಪತಿಲಲಾಮಂ ।
ಕರವಿಲಸದುಗ್ರ ಖಡ್ಗಂ
ದೊರೆಕೊಂಡಂ ಕಾರ್ತವೀರ್ಯಭೂಮಿಪನಿರವಂ ॥

'ಸಹಸ್ರಾಯುಧೀಯತಿ' ಎಂಬಲ್ಲಿ ಉಪಮೇಯವಾದ 'ಆತ್ಮಾನಂ' (=ತನ್ನನ್ನು) ಎಂಬುದು ಲೋಪವಾಗಿದೆ.

ಧರ್ಮ + ಉಪಮಾನ + ವಾಚಕ—ಲುಪ್ತೋಪಮೆ

ತ್ರಿಲೋಪೇ ಚ ಸಮಾಸಗಾ ॥ ೪ ॥

ಮೂರೂ ಲೋಪವಾದಾಗ ಉಪಮೆಯಲ್ಲಿ 'ಸಮಾಸಗತ'ವೆಂಬ ಒಂದೇ ಬಗೆ ಶಕ್ಯ.

ಮೂರೂ ಎಂದರೆ—ಉಪಮಾ ವಾಚಕಶಬ್ದ, ಸಾಧಾರಣಧರ್ಮ, ಮತ್ತು ಉಪಮಾನಗಳೆಂದಭಿಪ್ರಾಯ.

ಉದಾಹರಣೆ :—

ತರುಣಿಮನಿ ಕೃತಾವಲೋಕನಾ
ಲಲಿತವಿಲಾಸವಿತೀರ್ಣವಿಗ್ರಹಾ ।

ಸ್ಮರಶರವಿಸರಾಚಿತಾಂತರಾ
ಮೃಗನಯನಾ ಹರತೇ ಮುನೇರ್ಮನಃ ‖

ಯೌವನದೊಳ್ ಕಣ್ಸೆರೆರುವ
ಹಾವದ ಕಡುಚೆಲ್ವಿಗೆಲ್ಲ ತನುವನೆ ತೆತ್ತಾ|
ಕಾವನ ಕಣೆಗಳ್ ಬಗೆಯೊಳ್
ಧಾವಿಪ ಮೃಗನಯನೆ ಮುನಿಯ ಮನಮಂ ಸೆಳೆವಳ್ ‖

ಇಲ್ಲಿ 'ಮೃಗನಯನಾ' ಎನ್ನುವಾಗ 'ಸಪ್ತಮ್ಯುಪಮಾನ . . .' ಇತ್ಯಾದಿ ವ್ಯಾಕರಣನಿಯಮಾನುಸಾರ ಸಮಾಸವೂ ಲೋಪಗಳೂ ಆದುವೆಂದು ತಿಳಿದರೆ ಮಾತ್ರ ಇದು ತ್ರಿಲುಪ್ತೋಪಮೆಗೆ ಲಕ್ಷಣವಾಗುತ್ತದೆ.[26]

'ಆಯಃಶೂಲಿಕ' ಎಂಬಲ್ಲಿ ಕ್ರೂರಾಚಾರವನ್ನೇ ಅಯಃಶೂಲ ಅಥವಾ ಕಬ್ಬಿಣದ ಶೂಲವೆಂದು ಅಧ್ಯಾರೋಪ ಮಾಡಿಕೊಂಡು 'ಅಯಃಶೂಲೇನ ಅನ್ವಿಚ್ಛತಿ' ಎಂದು ವಿಗ್ರಹ ಬಿಡಿಸುವುದು ಯೋಗ್ಯ. ಆಗ ಅದು ಅತಿಶಯೋಕ್ತಿಯೆನಿಸುವುದೇ ಹೊರತು 'ಕ್ರೂರಾಚಾರವೆಂಬ ಉಪಮೇಯ+ತೀಕ್ಷ್ಣತೆಯೆಂಬ ಸಾಧಾರಣಧರ್ಮ+ಉಪಮಾವಾಚಕ ಶಬ್ದ, ಹೀಗೆ ಮೂರೂ ಲೋಪವಾದ ಉಪಮೆ'ಯಾಗಲಾರದು.[27]

---

[26] 'ಸಪ್ತಮ್ಯುಪಮಾನಪೂರ್ವಪದಸ್ಯ (ಬಹುವ್ರೀಹಿಃ) ಉತ್ತರಪದಲೋಪಶ್ಚ' ಎಂದು ಕಾತ್ಯಾಯನನ ವಾರ್ತಿಕ. ಅದರಂತೆ ಒಂದು ಸಮಾಸದ ಪೂರ್ವಪದವು ಉಪಮಾನವಾಚಿಯಾಗಿದ್ದರೆ ಅಥವಾ ಸಪ್ತಮ್ಯಂತವಾಗಿದ್ದರೆ, ಮತ್ತೊಂದು ಪದದೊಡನೆ ಸೇರಿ ಅದು ಬಹುವ್ರೀಹಿ ಸಮಾಸವಾಗುವುದು; ಮತ್ತು ಪೂರ್ವಸಮಾಸದ ಉತ್ತರಪದವು ಲೋಪಹೊಂದುವುದು. ಉದಾಹರಣೆಗೆ— ಕಂಠೇಸ್ಥಃ ಕಾಲಃ ಯಸ್ಯ ಸಃ = ಕಂಠೇ ಕಾಲಃ (ಸಪ್ತಮ್ಯಂತ); ಮೃಗನಯನೇ ಇವ ನಯನೇ ಯಸ್ಯಾಃ ಸಾ = ಮೃಗನಯನಾ (ಉಪಮಾನಪೂರ್ವಪದ). ಇಲ್ಲಿ ಪೂರ್ವಪದವಾದ 'ಮೃಗ' ಎಂಬುದು ಉಪಮಾನವಲ್ಲ. ನಿಜವಾದ ಉಪಮಾನ 'ಮೃಗನಯನೇ' ಎಂಬುದು. ಈ ಉತ್ತರಪದವಾದ 'ನಯನೇ' ಎಂಬುದು ಬಹುವ್ರೀಹಿ ಸಮಾಸದಲ್ಲಿ ಲುಪ್ತವಾಗಿರುವುದರಿಂದ 'ಮೃಗ'ವೇ ಉಪಮಾನವೋ ಎಂಬ ಭ್ರಾಂತಿಯುಂಟಾಗುತ್ತದೆ. 'ಮೃಗನಯನಾ' ಎಂಬಲ್ಲಿ ಕಾಣುವ 'ನಯನ' ಶಬ್ದವು ಸ್ತ್ರೀನಯನ ಬೋಧಕವಾದ ಶಬ್ದಾಂತರವೇ ಹೊರತು ಮೃಗನಯನ ಬೋಧಕವಲ್ಲ. ಮೃಗನಯನವಾಚಿಯಾದ ನಯನ ಶಬ್ದವೇ ವಾರ್ತಿಕದ ಪ್ರಕಾರ ಲುಪ್ತವಾಗಿರುವುದು.

[27] ಉದ್ಭಟನ ವ್ಯಾಖ್ಯಾಕಾರನಾದ ಪ್ರತೀಹಾರೇಂದುರಾಜನು ಹೀಗೆ 'ಆಯಃಶೂಲಿಕ' ಎಂಬುದನ್ನು ತ್ರಿಲುಪ್ತೋಪಮೆಯೆಂದು ವಿವರಿಸಿದ್ದನು. ಅದನ್ನು ಇಲ್ಲಿ ಮಮ್ಮಟನು ಖಂಡಿಸಿದ್ದಾನೆ. ಇಲ್ಲಿ ಕವಿಗೆ ಸಾಧರ್ಮ್ಯದಲ್ಲಿ ವಿವಕ್ಷೆಯಿಲ್ಲ; ತಾದಾತ್ಮ್ಯದ ಅಧ್ಯಾರೋಪದಲ್ಲಿ ಮಾತ್ರ ಎಂಬುದನ್ನು ಮಮ್ಮಟನು ಸ್ಪಷ್ಟಪಡಿಸಿ ಅದು ಅತಿಶಯೋಕ್ತಿಯ ಪ್ರಕಾರವೇ ಹೊರತು ಉಪಮೆಯಲ್ಲವೆಂದು ತಿಳಿಸಿದ್ದಾನೆ.

ಹೀಗೆ ಲುಪ್ತೋಪಮೆಯ ೧೯ ಬಗೆಗಳನ್ನೂ ಪೂರ್ಣೋಪಮೆಯ ೬ ಬಗೆಗಳನ್ನೂ ಒಟ್ಟುಗೂಡಿಸಿದರೆ ಉಪಮೆಯಲ್ಲಿ ೨೫ ಪ್ರಕಾರಗಳಾಗುತ್ತವೆ.

ಅನಯೇನೇವ ರಾಜ್ಯಶ್ರೀರ್ದೈನ್ಯೇನೇವ ಮನಸ್ವಿತಾ |
ಮಮ್ಲೌ ಸಾಥ ವಿಷಾದೇನ ಪದ್ಮಿನೀವ ಹಿಮಾಂಭಸಾ ‖

ಸಿರಿಯಂದದೆ ದುರ್ನಯದಿಂ
ಪಿರಿದಪ್ಪಭಿಮಾನದಂತೆ ದೈನ್ಯಾಶ್ರಯದಿಂ |
ಉರುಶೋಕದಿನವಳಳಿವಳ್
ಗುರುಹಿಮದಾ ವೃಷ್ಟಿಯಿಂದೆ ಪದ್ಮಿನಿಯೆನ್ನಲ್ ‖

ಎಂಬಲ್ಲಿರುವಂತೆ ಸಾಧಾರಣಧರ್ಮವು ಅಭಿನ್ನವಾಗಿರುವ ಮತ್ತು—

ಜ್ಯೋತ್ಸ್ನೇವ ನಯನಾನಂದಃ ಸುರೇವ ಮದಕಾರಣಮ್ |
ಪ್ರಭುತೇವ ಸಮಾಕೃಷ್ಟಸರ್ವಲೋಕಾ ನಿತಂಬಿನೀ ‖

ಸುಠೆಯಂದದೆ ಮದಕಾರಿಣಿ
ಸುರುಚಿರ ಬೆಳ್ದಿಂಗಳಂತೆ ಲೋಚನಕಿನಿಯಳ್ |
ಪರಮಪ್ರಭುತೆಯ ತೆರದಿಂ
ದುರೆ ಜನತೆಯನೆಲ್ಲ ಸುದತಿ ಸೆಳೆಯುತ್ತಿರ್ಪಳ್ ‖

ಎಂಬಲ್ಲಿರುವಂತೆ ಸಾಧಾರಣಧರ್ಮವು ಭಿನ್ನವಾಗಿರುವ ಅನೇಕ ಉಪಮಾನಗಳನ್ನು ಒಂದೇ ಉಪಮೇಯದ ವರ್ಣನೆಗಾಗಿ ಕಲ್ಪಿಸುವುದೇ **ಮಾಲೋಪಮೆ.** ಇದಲ್ಲದೆ ಅನುಕ್ರಮವಾಗಿ ಮುಂದಿನ ವಾಕ್ಯದಲ್ಲಿ ಹಿಂದಿನ ವಾಕ್ಯದ ಉಪಮೇಯವೇ ಉಪಮಾನವಾಗುತ್ತ ಹೋಗುವುದು **ರಶನೋಪಮೆ.** ಇಲ್ಲಿಯೂ ಮಾಲೋಪಮೆಯಲ್ಲಿರುವಂತೆಯೇ ಸಾಧಾರಣಧರ್ಮವು ವಾಕ್ಯಗಳೆಲ್ಲಕ್ಕೂ ಒಂದೇ ಇರಬಹುದು ;

ಉದಾಹರಣೆ :—

ಅನವರತಕನಕ ವಿತರಣ
ಜಲಲವಭೃತಕರತರಂಗಿತಾರ್ಥಿತತೇಃ |
ಭಣಿತಿರಿವ ಮತಿರ್ಮತಿರಿವ
ಚೇಷ್ಟಾ ಚೇಷ್ಟೇವ ಕೀರ್ತಿರತಿವಿಮಲಾ ‖

ಕನಕಮನೀಯುತೆ ಜನಕಾ-
ತನ ಕೈಯೊಳ್ ದಾನವಾರಿ ಪರಿಯಲ್ಕನಿಶಂ |
ಭಣಿತಿವೊಲಮಲಂ ಮತಿಯೆಂ
ದೆನೆ ಮತಿವೊಲ್ ನಡತೆ ನಡತೆವೊಲ್ ಜಸಮೆಸೆಗುಂ ||

ಅಥವಾ ಕೆಳಗಿನ ಉದಾಹರಣೆಯಲ್ಲಿರುವಂತೆ ಸಾಧಾರಣಧರ್ಮವು ಪ್ರತಿ ವಾಕ್ಯಕ್ಕೂ ಬೇರೆ ಬೇರೆಯಾಗಿರಬಹುದು :—

ಮತಿರಿವ ಮೂರ್ತಿರ್ಮಧುರಾ
ಮೂರ್ತಿರಿವ ಸಭಾ ಪ್ರಭಾವಚಿತಾ |
ತಸ್ಯ ಸಭೇವ ಜಯಶ್ರೀಃ
ಶಕ್ಯಾ ಜೇತುಂ ನೃಪಸ್ಯ ನ ಪರೇಷಾಮ್ ||

ಮತಿಯಂತಿನಿದಾಕೃತಿಯಾ
ಕೃತಿವೊಲ್ ಸಭೆ ಸುಪ್ರಭಾವಯುತಮೆನೆ ಸಭೆವೊಲ್ |
ಕ್ಷಿತಿಪತಿಯಾ ಜಯಲಕ್ಷ್ಮಿಯು
ಮತಿದುರ್ಜಯಳಪ್ಪಳವನ ಪಗೆಗಳ್ಗೆಂದುಂ ||

ಆದರೆ ಈ 'ಮಾಲೋಪಮೆ', 'ರಶನೋಪಮೆ' ಮುಂತಾದುವಕ್ಕೆ ವಿಶೇಷ ಲಕ್ಷಣಗಳನ್ನು ಇಲ್ಲಿ ಬೇಕೆಂದೇ ಹೇಳಲಿಲ್ಲ.[28] ಇಂತಹ ವೈಚಿತ್ರ್ಯಗಳು ಸಾವಿರಾರು ಇರುತ್ತವೆ. ಎಲ್ಲವನ್ನೂ ಪಟ್ಟಿಮಾಡಿ ಯಾರೂ ಮುಗಿಸುವುದು ಶಕ್ಯವಿಲ್ಲ. ಅಲ್ಲದೆ ಇವುಗಳೂ ಸಹ ಪೂರ್ವೋಕ್ತ ಭೇದಗಳಲ್ಲಿಯೇ ಅಂತರ್ಗತವಾಗುತ್ತವೆ.

ಡಾ|| ಕೆ. ಕೃಷ್ಣಮೂರ್ತಿ

(ಸಶೇಷ)

[28] ರುದ್ರಟನು ಈ ಭೇದಗಳನ್ನು ಸ್ಪಷ್ಟವಾಗಿ ಹೇಳಿದ್ದನು. ಆದರೆ ಮಮ್ಮಟನು ಇವು ಕೇವಲ ಪಾರಿಭಾಷಿಕವೇ ಹೊರತು ತಾತ್ವಿಕವಲ್ಲವೆಂದು ಅವನ್ನು ಉಪಮೆಯ ಪ್ರತ್ಯೇಕ ಪ್ರಭೇದಗಳೆಂದು ಒಪ್ಪುವುದಿಲ್ಲ. ಪೂರ್ವೋಕ್ತವಾದ ಉಪಮಾಲಕ್ಷಣವೇ ಅವಕ್ಕೂ ಅನ್ವಯಿಸುವುದರಿಂದ ಮಮ್ಮಟನ ಲಕ್ಷಣದಲ್ಲಿ ಅವ್ಯಾಪ್ತಿದೋಷವನ್ನೂ ಹೇಳುವಂತಿಲ್ಲ.

ನಾಗವರ್ಮನು ಮಾಲೋಪಮೆಗೆ ಕೊಟ್ಟಿರುವ ಉದಾಹರಣೆ ಹೀಗಿದೆ :—

ಎಂತು ಬಸಂತಮದರ್ಕೆ ತೆಂಬೆಲರೆಂತದ
ಕ್ಕೆಂತು ತಳಿರ್ ತಳಿರ್ಗೆಂತಲರ್ ಕುಸುಮೋತ್ಕರ |
ಕ್ಕೆಂತಳಿ ಮತ್ತ ಮದಾಳಿಗೆಂತು ನಿನಾದಮಂ
ತಂತೆ ತರಂತರಮೊಪ್ಪಿ ತೋರಿದಳಗ್ಗಳಂ ||

—ಕಾವ್ಯಾವಲೋಕನಂ ೬೭೪

ಸಮುದ್ರ ದರ್ಶನ

ಕಡಲೇ, ಕಡಲೇ, ಏನುನ್ಮಾದವಿದು ?
ಏನಾಗಿದೆ ನಿನಗೆ ? ಯಾವ ಭಾವದಭಾವವಿದು ?
ಅಲೆ ಅಲೆ ಅಲೆ ಗೋರಿಗಳೇಳುತಿವೆ ;
ಸಾವಿರ ಸಾವಿರ ಉರುಳುತಿವೆ ;
ಸುಮ್ಮನೆ ಮರಳೆರೆಯುರಿವೆ ;
ಕಡಲೇ, ಕಡಲೇ, ಏನುನ್ಮಾದವಿದು ?
ಏನಾಗಿದೆ ನಿನಗೆ ? ಯಾವ ಭಾವದಭಾವವಿದು ?

ದಿನದಿನವೂ ರಂಜಿಸಿ, ಸಂಬಿಸಿ, ಬಿಂಬಿಸುವೀ
ಭೂಗೋಲವನಾಲಿಂಗಿಸುವಾಸೆ ?
ಗಗನದ ನಕ್ಷತ್ರಾಗಾರವ ಬಿಂಬಿಸಿ
ರತ್ನಾಕರವಾಗುವ ಆಸೆ ?—
ಯಾವೀ ಬಯಕೆಯನದುಮಲು ಬಯಸೀ
ಯುಗ ಯುಗ ಯುಗ ಶತಮಾನದ ಎದೆಗುದಿತ ?

ಕೋಟಿ ಕೋಟಿ ಮನ್ವಂತರ ಕಳೆದುವು ಸಂಯಮ ಸ್ವಪ್ನದಲಿ ;
ತಿರುಗುತ ತಿರುಗಿವೆ ತಾರೆಗಳೆಂದೊ ಜ್ಯೋತಿರ್ನಿರ್ವಾತಸ್ಥಿತಿಗೆ ;
ಇತ್ತೊ, ಹಾರಿತು ಆಕಾಶಕು ಭೂ ರಂಗದ ಕುದಿವೆದೆ ಬಯಕೆ ;
ನಗೆ ಮೂಡಿದೆ ಶೂನ್ಯ ಸಮಾಧಿಯಲೂ ಕೃತಕ ಬಿದಿಗೆಯ ರೂಪದಲಿ ;
ಕಡಲಿನ ಬಯಕೆಗೆ ಜೀವಿಯೊಳೆಂದೊ
ಮೂಡಿತು ಮಾನವನೆದೆ ತುಡಿತ !

ಭೂಬಯಕೆಗೆ ಲಕ್ಷ ಲಕ್ಷಸಲ ಬಲಿ
ಪ್ರಾಣಿಯ ಪ್ರಾಣದ ಪಣತಿ ;
ಅಮೆಂಡ್ಸನ್, ವಿಲ್ಸನ್, ಕ್ಯೂರಿ, ಹಿರೋಷಿಮಾ, ಲೈಕಾ—
ಓ, ತರಹರಿಸದು ಗಣತಿ !

ಕಡಲಿನ ಕುದಿತದ ನೀಲ ವಿಷಾದದಿ
ಇನ್ನೂ ಮಿನುಗಿದೆ ಏನೊ ವ್ಯರ್ಥ;
ಮರೆ, ನೋಡದೊ, ಕಾಲಾವೃತ ಮೇದಿನಿಯಾಚೆಯ
ಜ್ಯೋತಿರ್ಮೇಘಾಚ್ಛಾದಿತ ನೀಲಸಮೀಕರಣದ ಅರ್ಥ!

ಮುಂದೆ, ಯಾವುದೊ ಅಲೆ ಬಿಚ್ಚು ತಲಿದೆ
ನೀರ್ ಸುರುಳಿಯ ವಿಶಾಲ ವಿಸ್ಮೃತಿಯ;
ಹಿಂದೆ, ಮಗುದೊಂದಲೆ ಸುತ್ತುತ ಬರುತಿದೆ
ಪಳೆಯುಳಿಕೆಯನೊಗ್ಗೂಡಿಸಿ ಮರೆಸುತ ಮತಿಯ!

ಮಧ್ಯೆ, ಕಾಲದ ಮಗು ಮಾನವ ಮತಿ
ಕುಳಿತಿದೆ ತತ್ತರಿಸುತ ತೂರಿ,
ಉಸುರುತ್ತಾಗಾಗ,
"ಕಡಲೇ ಕಡಲೇ ಏನುನ್ಮಾದವಿದು; ಏನಾಗಿದೆ ನಿನಗೆ?"

ಅದೋ, ಅಲ್ಲಿ ಭೋರಿಡುತಿದೆ ಕಡಲು, ದಿಕ್ಕಿನ ಒಡಲು
ಚಿರ ಅಚಿರತೆಯವಿರಳ ಹೋರಾಟದ ಹೊಸಲು!
ಅದೋ, ಮತ್ತೆ ಭೋರಾಡಿದೆ ಕಡಲು,
ಭೂಕನ್ನೆಯ ಮರಳೆದೆಯನು ಹಿಯ್ಯಾಳಿಸಲು!

ಪೂ. ಚಂ. ತೇ.

ಭ್ರಮನಿರಸನ

ಇದು ನನಗೆ ಒಬ್ಬ "ಹುಚ್ಚ" ಹೇಳಿದ ಕಥೆ. ಅವನನ್ನು ನೋಡಿದ ಯಾರಿಗೇ ಆಗಲಿ, ಮನಸ್ಸಿನಲ್ಲಿ ಮೊದಲು ಹುಟ್ಟುತ್ತಿದ್ದ ಭಾವನೆ "ಇವನೊಬ್ಬ ಹುಚ್ಚನಿರಬೇಕು"—ಎಂದು. ಏಕೆಂದರೆ, ಅವನ ಉಡಿಗೆ ತೊಡಿಗೆಗಳಲ್ಲಿ, ಮುಖಭಾವದಲ್ಲಿ, ಮುಖ್ಯವಾಗಿ ನೋಟದಲ್ಲಿ, ನಡವಳಿಕೆಯಲ್ಲಿ, ಹೆಚ್ಚೇನು?—ಅವನ ಇಡೀ ವ್ಯಕ್ತಿತ್ವದಲ್ಲಿ, ಹುಚ್ಚುತನ ತುಂಬಿ ತುಳುಕುತ್ತಿತ್ತು. ಆದ್ದರಿಂದ ನಾನೂ, ಅವನನ್ನು ಹುಚ್ಚ ಎಂದು ಭಾವಿಸಿದ್ದ ಬಹುಸಂಖ್ಯಾತರ ಗುಂಪಿಗೆ ಸೇರಿದ್ದೆ. ಆದರೆ, ಅವನು ಹೇಳಿದ ಕಥೆಯನ್ನು ಕೇಳಿದಮೇಲೆ, "ಹುಚ್ಚ" ಎಂಬ ಪದ ಅವನಿಗೆ ಅನ್ವಯವಾಗಬೇಕೋ, ಅಥವಾ ಅವನನ್ನು ಹುಚ್ಚ ಎಂದು ಭಾವಿಸುತ್ತಿದ್ದ ಮಂದಿಗೆ (ಮಂದಿಯಲ್ಲಿ ನಾನೂ ಸೇರಿದ್ದೇನೆ!) ಅನ್ವಯವಾಗಬೇಕೋ, ಎಂಬ ಬಲವತ್ತರವಾದ ಸಂದೇಹವುಂಟಾಗಿದೆ ನನಗೆ! ಇರಲಿ, ಕೇಳಿ—

ಕೆಲವು ದಿನಗಳ ಹಿಂದೆ ಒಂದು ಸಂಜೆ ಅವನು ನನ್ನನ್ನು ಗಾಂಧೀಚೌಕದಲ್ಲಿ ಅಡ್ಡಗಟ್ಟಿ ನಿಲ್ಲಿಸಿ,

"ಅಯ್ಯಾ, ನಿಮ್ಮ ಕೂಡ ಒಂದು ನಿಮಿಷ ಮಾತಾಡಬಹುದೇ?"

—ಎಂದು ಕೇಳಿದ.

ಅವನು ಕೇಳಿದ ರೀತಿಯಲ್ಲಿ, ಧ್ವನಿಯಲ್ಲಿ—ಹುಚ್ಚತನವೇನೂ ಇರಲಿಲ್ಲ. ಆದರೆ ಅವನ ನೋಟ ಸ್ವಲ್ಪಮಟ್ಟಿಗೆ ಉನ್ಮತ್ತವಾಗಿತ್ತು. ಅಪರಿಚಿತನಾಗಿದ್ದ ನನ್ನ ಕೂಡ ಮಾತನಾಡುವಂಥಾದ್ದು ಇವನಿಗೆ ಏನಿದ್ದೀತು—ಎಂದು ಕ್ಷಣಕಾಲ ಯೋಚಿಸಿ,

"ಏನು ಸಮಾಚಾರ?"

—ಎಂದು ಕೇಳಿದೆ. ಅವನು,

"ಹೀಗೆ ಬನ್ನಿ ಅಯ್ಯಾ"

—ಎಂದು, ನನ್ನನ್ನು ಪಕ್ಕದ ಕಾಲುಹಾದಿಗೆ ಕರೆದು, "ನೋಡಿ, ಈಗ ನನಗೆ ಬಹಳ ಹಸಿವಾಗಿದೆ"

—ಎಂದ. ನಾನು ಕೂಡಲೆ ಜೇಬಿಗೆ ಕೈ ಹಾಕಿದೆ. ಅವನು ಅಷ್ಟರಲ್ಲೇ,

"ಹ್ಹಾ! ನಿಧಾನಿಸಿ, ಅಯ್ಯಾ, ನಾನು ಭಿಕ್ಷೆ ಬೇಡುತ್ತಿಲ್ಲ. ನೀವು ನನಗೆ ಒಂದು ನಯೇ ಪೈಸಾನೋ ಒಂದು ಆಣೇನೋ ಕೊಡುತ್ತೀರಿ; ಅದರಿಂದ ನನ್ನ ಹಸಿವು

ಅಡಗುವುದಿಲ್ಲ. ನನಗೆ ಬೇಕಾಗಿರೋದು ಒಂದು ಪ್ಲೇಟು ಊಟದ ಖರ್ಚು—ಆರಾಣೆ. ನೀವು ಅಷ್ಟು ಹಣವನ್ನು ನನಗೆ ಹಾಗೇ ಕೊಡಬೇಕಾಗಿಲ್ಲ. ನೀವು ಒಬ್ಬ ಕಥೆಗಾರರು ಅಂತ ಯಾರೋ ಮೊನ್ನೆ ತೋರಿಸಿ ಹೇಳಿದರು. ನನ್ನಲ್ಲಿ ಒಂದು ಕಥೆ ಇದೆ. ನಿಮಗೆ ನಾನು ಅದನ್ನು ಕೊಡುತ್ತೇನೆ. ನಿಮಗೆ ಮೆಚ್ಚಿಕೆಯಾದರೆ ಹಣ ಕೊಡಿ"

—ಎಂದ. ನಾನು,

"ಎಲ್ಲಿ ನೋಡೋಣ ?"

—ಎಂದೆ, ಸ್ವಲ್ಪ ಕುತೂಹಲದಿಂದ.

"ಹ ಹ್ಹಾ ! ನನ್ನ ಕಥೆ ಬರೆದದ್ದಲ್ಲ—ಬಾಳಿದ್ದು !—ಅನುಭವಿಸಿದ್ದು !! ಅದು ನನ್ನ ತಲೆಯಲ್ಲಿ—ಹೃದಯದಲ್ಲಿ ನನ್ನ ದೇಹದ ಕಣಕಣದಲ್ಲಿ—ಇರುತ್ತ, ಮೂರು ವರ್ಷಗಳಿಂದ ಇಲ್ವಲಾ-ವಾತಾಪಿಯರಂತೆ ನನ್ನ ದೇಹ-ಆತ್ಮಗಳೆರಡನ್ನೂ ಬಿರಿಯು ತ್ತಿದೆ. ನನ್ನಲ್ಲಿರುವುದು ಇದೊಂದೇ ಕಥೆ. ಇದುವರೆಗೆ ಇದನ್ನು ನಾನು ಯಾರಿಗೂ ಹೇಳಿಲ್ಲ; ನೀವು ಒಬ್ಬ ಕಥೆಗಾರರೆಂದು ತಿಳಿದಿದ್ದರಿಂದ ನಿಮ್ಮ ಮುಂದೆ ಈ ಮಾತು ಎತ್ತಿದೆ, ಅಯ್ಯಾ"

—ಎಂದ. ನನ್ನೊಡನೆ ಅವನು ಆಡಿದ ಈ ಕೆಲವು ಮಾತುಗಳಲ್ಲಿ ಬುದ್ಧಿವಿಕಲತೆ ಯನ್ನು ಸೂಚಿಸುವಂಥಾದ್ದೇನೂ ಇರಲಿಲ್ಲ. ಅವನ ಸಲಹೆಗೆ ಸಮ್ಮತಿ ಸೂಚಿಸಿದೆ. ಇಬ್ಬರೂ ನಡೆದು, ಪುರಭವನದ ಕಾಂಪೌಂಡನ್ನು ಹೊಕ್ಕು, ಅಲ್ಲಿ ಒಂದು ಕಲ್ಲು ಬೆಂಚಿನ ಮೇಲೆ ಕುಳಿತೆವು. ಅವನು ಕಥೆ ಹೇಳತೊಡಗಿದ :

"ನನ್ನ ಕಥೆಯ ವಸ್ತು ಒಲವು. ಎರಡು ಕೈ ಸೇರಿದರೆ ಚಪ್ಪಾಳೆ—ಅಂದ ಹಾಗೆಯೇ, ಒಲವು ರೂಪುಗೊಳ್ಳುವುದು ಸಹ. ಹೌದೋ ಅಲ್ಲವೊ ? . . . . ಹ್ಹಾ ! ಸರಿ; ಒಲುವಿನ ನಾಟಕಕ್ಕೆ ಅವಶ್ಯಕವಾದ ಎರಡು ಪಾತ್ರಗಳಲ್ಲಿ ನಾನೊಬ್ಬ, ಅವಳೊಬ್ಬಳು.

"ನಾನು ಅವಳನ್ನು ಉನ್ಮತ್ತನಾಗಿ ಪ್ರೀತಿಸಿದ್ದೆ !—ಅಯ್ಯಾ

"ಶುಭ್ರವಾದ ಶರತ್ಕಾಲದ ಹುಣ್ಣಿಮೆಯ ನಡುರಾತ್ರಿಯನ್ನು ಕಲ್ಪಿಸಿಕೊಳ್ಳಬಲ್ಲಿ ರೇನು ? ಒಳ್ಳೆಯದು, ನಿಸರ್ಗದಲ್ಲಿ ಶರತ್ಕಾಲ ಬರುತ್ತದೆ—ಹೋಗುತ್ತದೆ ; ಚಂದ್ರ ಕ್ಷಯಿಸುತ್ತಾನೆ—ವೃದ್ಧಿಯಾಗುತ್ತಾನೆ; ಪೂರ್ಣಚಂದ್ರನೂ ಉದಯಿಸುತ್ತಾನೆ— ಅಸ್ತನಾಗುತ್ತಾನೆ. ಆದರೆ, ಅವಳು ನನ್ನ ಜೀವನಕ್ಕೆ ಬಂದಮೇಲೆ, ನನ್ನ ಬಾಳೆಲ್ಲ ಶರದೃತುವಾಯಿತು ; ನನ್ನ ಒಲವು, ಉದಯಾಸ್ತಗಳನ್ನರಿಯದೆ ನಡುನೆತ್ತಿಯಲ್ಲಿ ಸ್ಥಾಯಿಯಾದ ಪೂರ್ಣಚಂದ್ರನಂತಾಯಿತು.

"ಒಬ್ಬರಲ್ಲಿ ಪ್ರೀತಿ ಹುಟ್ಟುತ್ತದೆ, ಏಕೆ ?—ಆಹಾ ! ಒಲವಿನ ಉಸಿರಿಗೆ

ಅದೆಂತಹ ಪವಾಡ ಶಕ್ತಿಯಿದೆ! ಅದನ್ನು ಒಮ್ಮೆ ಎಳೆದರೆ ಸಾಕು, ನಮ್ಮ ಭಾಗಕ್ಕೆ ಮಿಕ್ಕ ಪ್ರಪಂಚವೆಲ್ಲ ಅಳಿಸಿದಂತಾಗಿ, ಒಂದು ವ್ಯಕ್ತಿಮಾತ್ರ ಉಳಿದುಕೊಳ್ಳುತ್ತದೆ. ನಮ್ಮ ಕಣ್ಣುಗಳನ್ನು ತುಂಬುವುದು ಆ ವ್ಯಕ್ತಿಯೊಂದು ಮಾತ್ರ; ನಮ್ಮ ಮನಸ್ಸನ್ನು ಆವರಿಸುವುದು, ಆ ಏಕಮಾತ್ರ ವ್ಯಕ್ತಿಯ ಯೋಚನೆ; ನಮ್ಮ ಹೃದಯದಲ್ಲಿ ಹುಟ್ಟುವುದು, ಆ ಒಂದು ವ್ಯಕ್ತಿಯ ಮೇಲಣ ತೀವ್ರತಮನಾದ ಆಸಕ್ತಿ; ನಮ್ಮ ತುಟಿಗಳ ಮೇಲೆ ಆಡುವುದು, ಆ ಒಂದೇ ವ್ಯಕ್ತಿಯ ಹೆಸರು. ಅಪಾರ ಮಾಧುರ್ಯವನ್ನು ಪಡೆದ ಯಾವ ಹೆಸರು, ಚಿಲುಮೆಯ ತಿಳಿನೀರಿನಂತೆ, ನಿರಂತರವೂ ಆತ್ಮದ ಗಭೀರತೆಯಿಂದ ಮೇಲೆದ್ದು ತುಟಿಗಳಿಗೆ ಬರುವುದೊ, ಯಾವ ಹೆಸರು, ಅದರ ಸವಿಗಾಗಿ, ಪದೇ ಪದೇ ಉಚ್ಚರಿಸಲ್ಪಡುವುದೋ, ಯಾವ ಹೆಸರು, ಅವಿಚ್ಛಿನ್ನವಾದ ಅನಂಗನ ಆರಾಧನೆಯ ಮಧುರಮಂತ್ರ ಶಬ್ದವಾಗಿರುವುದೋ, ಆ ಒಂದೇ ಹೆಸರು ಇರುವುದು, ಎಂತಹ ವಿಲಕ್ಷಣವಾದ—ವಿಚಿತ್ರವಾದ ವಿಷಯ!

"ಜೀವನದಲ್ಲಿ ಒಲವಿನ ಕಥೆಗಳಲ್ಲಿ ಸಾಮಾನ್ಯವಾಗಿ, ಹಾಗೂ ಸ್ಥೂಲವಾಗಿ ಇರುವುದು ಎರಡೇ ಘಟ್ಟ; ಒಂದು ಪೂರ್ವಾರ್ಧ, ಇನ್ನೊಂದು ಉತ್ತರಾರ್ಧ. ಕೆಲವರ ಕಥೆಗಳಲ್ಲಿ ಪೂರ್ವಾರ್ಧ ಮುಖ್ಯವಾಗಿರುತ್ತದೆ, ಇನ್ನು ಕೆಲವರ ಕಥೆಗಳಲ್ಲಿ ಉತ್ತರಾರ್ಧ ಮುಖ್ಯವಾಗಿರುತ್ತದೆ. ನಾನು ನಿಮಗೆ ಹೇಳಲಿರುವ ನಮ್ಮ ಕಥೆಯಲ್ಲಿ, ಉತ್ತರಾರ್ಧದಿಂದಲೇ, ಕಥೆಗೆ ಇರುವ ಬೆಲೆಯೆಲ್ಲ; ಆದ್ದರಿಂದ ಪೂರ್ವಾರ್ಧವನ್ನು ಸಂಕ್ಷೇಪವಾಗಿ ಹೇಳಿ ಮುಂದಕ್ಕೆ ಹೋಗುತ್ತೇನೆ, ಆಗಬಹುದಷ್ಟೆ? . . . . ಸರಿ.

"ಐದು ವರ್ಷಗಳ ಹಿಂದಿನ ಮಾತು. ಆಗ ನನಗೆ ಇಪ್ಪತ್ತೈದುವರ್ಷ ವಯಸ್ಸು. ಒಂಟಿಯಾಗಿದ್ದೆ; ಚಂದ್ರನಗರದ ಫೋಟೋಸ್ಟೂಡಿಯೋ ನಡೆಸುತ್ತಿದ್ದೆ; ಚೆನ್ನಾಗಿ ಸಂಪಾದನೆಯಾಗುತ್ತಿತ್ತು; ಸ್ವತಂತ್ರನಾಗಿದ್ದೆ.

"ಒಬ್ಬ ಸ್ನೇಹಿತನ ಮನೆಯಲ್ಲಿ ಮೊದಲ ಬಾರಿಗೆ ಅವಳನ್ನು ಭೇಟಿಯಾದೆ. ಆಗ ಅವಳಿಗೆ ಹದಿನೆಂಟೋ ಇಪ್ಪತ್ತೊ ವರ್ಷ. ನನ್ನ ಕಣ್ಣಿಗೆ, ಅಂದಿನವರೆಗೆ ನಾನು ನೋಡಿದ್ದ ಹೆಣ್ಣುಗಳಲ್ಲೆಲ್ಲ ಅವಳು ಕಡು ಚಲುವೆಯಾಗಿ ಕಂಡಳು. ಈಗ ಆ ಚೆಲುವನ್ನು, ಆದರ ಸೆಳೆತವನ್ನು, ವರ್ಣಿಸುತ್ತ ಕುಳಿತುಕೊಳ್ಳುವುದು ವ್ಯರ್ಥ ಕಾಲಹರಣ. ಇರಲಿ, ಅನಂತರ ಅವಳನ್ನು ನಾಲ್ಕಾರು ಸಲ, ಬೇರೆ ಬೇರೆ ಸಂದರ್ಭಗಳಲ್ಲಿ, ಬೇರೆ ಬೇರೆ ಕಡೆಗಳಲ್ಲಿ, ಭೇಟಿಯಾದೆ. ಭೇಟಿಯಿಂದ ಪರಿಚಯವಾಯಿತು. ಪ್ರತಿ ಭೇಟಿಯಲ್ಲೂ ಒಬ್ಬರತ್ತ ಒಬ್ಬರು ಪರಸ್ಪರ ಹೆಜ್ಜೆ ಇಟ್ಟೆವು. ಪರಿಚಯದಿಂದ ಸ್ನೇಹ ಅಂಕುರಿಸಿತು—ಬಳ್ಳಿಯಂತೆ ಹಬ್ಬಿತು—ಬಹುಬೇಗ ಪರಸ್ಪರ ಅನುರಾಗ ಅರಳಿತು. ಅನಂತರ ಇಬ್ಬರೂ ಒಂದಾಗಿ ದನಿಗೂಡಿಸಿ, ಅನುರಾಗದ ಆಲಾಪನೆ

ಮಾಡುತ್ತ, ಅನಂಗನ ವೇದಿಕೆಯ ಮೇಲೆ ತನುಮನಗಳನ್ನು ನಿವೇದಿಸಿಕೊಂಡೆವು. ನಾವು ಒಂದಾಗಿ ಏರ್ಪಡಿಸಿಕೊಂಡ ರೀತಿ, ಸಮಾಜ ಸಮ್ಮತವಾಗಿರದಿದ್ದರೂ ಪ್ರಕೃತಿ ಸಮ್ಮತವಾಗಿತ್ತು.

"ಅಂದಿನಿಂದ, ಅವಳ ಕುಸುಮ ಕೋಮಲತೆಯಲ್ಲಿ—ಮುದ್ದು ಮೋಹಕತೆಯಲ್ಲಿ, ಅವಳ ಬಂಧುರ ಬಾಹುಗಳ ಸೆರೆಯಲ್ಲಿ, ಅವಳ ಸುಂದರ ಉಡಿಗೆ ತೊಡಿಗೆಗಳ ಕಮನೀಯತೆಯಲ್ಲಿ, ಅವಳ ಮಧುರ ಕಂಠದ ಸವಿಮಾತುಗಳ ಜೇನಿನಲ್ಲಿ, ಪೂರ್ಣವಾಗಿ ತಲ್ಲೀನನಾದೆ. ಹಗಲು-ರಾತ್ರಿಗಳ ಅರಿವೇ ಇಲ್ಲದೆ, ಈ ನಮ್ಮ ಪುರಾತನ ಭೂಮಿಯ ಸಂಪರ್ಕದ ಅರಿವೂ ಇಲ್ಲದೆ, ಅಮೃತಮಯವಾಗಿದ್ದ ಅವಳ ಪ್ರೇಮ—ಕಾಮ, ಅಂದ-ಚೆಂದ, ನಗೆ-ನೋಟ, ಮಾತುಕತೆಗಳಲ್ಲಿ, ಕಲ್ಲುಸಕ್ಕರೆಯಂತೆ ಕರಗಿ ಐಕ್ಯನಾಗಿದ್ದೆ.

"ಈ ಅತ್ಯುನ್ಮತ್ತವಾದ—ಅತಿ ಮಧುರವಾದ ವಿಸ್ಮೃತಿಯಲ್ಲಿ, ಆರು ತಿಂಗಳುಗಳು, ಆರೇ ಕ್ಷಣಗಳಂತೆ ಕಳೆದುಹೋದವು. ಅಷ್ಟರಲ್ಲೇ ಒಂದು ದಿನ, ಸ್ವರ್ಗೀಯ ಸ್ವಪ್ನದಂತಿದ್ದ ನಮ್ಮ ಮಧುರ ಬಾಂಧವ್ಯ ಕಡಿದುಹೋಯಿತು; ಅನಂತವೆಂದು ತೋರಿದ್ದುದು ಕ್ಷಣಿಕವಾಯಿತು. ವಿಧಿಯ ಅಸೂಯಾದೃಷ್ಟಿ ನನ್ನ ಮೇಲೆ ಬಿತ್ತು; ಅದು, ನನ್ನ ಅಮೃತ ಪುತ್ಥಳಿಗೆ ಮೃತ್ಯು ಚುಂಬನವನ್ನಿತ್ತು ಕೊಂಡೊಯ್ಯಿತು. ಅದು ನಡೆದದ್ದು ಹೀಗೆ—

"ಅವಳಿಗೆ, ಹೆಚ್ಚುಕಡಿಮೆ ಅವಳ ವಯಸ್ಸಿನವರೇ ಆಗಿದ್ದ ನಾಲ್ಕಾರು ಗೆಳತಿಯರಿದ್ದರು. ಆಗಾಗ ಅವರು ನಮ್ಮ ಮನೆಗೆ ಭೇಟಿ ಕೊಡುವುದು, ಅವಳು ಅವರ ಮನೆಗಳಿಗೆ ಹೋಗಿ ಭೇಟಿಯಾಗುವುದು, ವಾಡಿಕೆಯಾಗಿತ್ತು. ಹೀಗಿರುವಲ್ಲಿ ಒಂದು ಸಂಜೆ, ಅವಳು ತನ್ನ ಗೆಳತಿಯರಲ್ಲಿ ಒಬ್ಬಳನ್ನು ನೋಡಿಕೊಂಡು ಬರುವುದಾಗಿ ಹೇಳಿ ಹೊರಟಳು. ಅಂದು, ಅದೇದಿನ ನಾನು ತಂದುಕೊಟ್ಟಿದ್ದ ಸೀರೆ-ರವಿಕೆಗಳನ್ನು ಧರಿಸಿ ಸಿಂಗರಿಸಿಕೊಂಡು, ನನ್ನ ಮುಂದೆ ಒಂದೆರಡುಕ್ಷಣ ಬಳುಕಿ ನಲಿದಾಡಿ, ಆ ಹೊತ್ತಿನಲ್ಲಿ ನಾನು ಕೊಡಬಹುದಾಗಿದ್ದ ಅಲ್ಪಕಾಣಿಕೆಯನ್ನು ಸ್ವೀಕರಿಸಿ ಹೊರಟಳು, ನನ್ನ ದೇವಿ.

"ಅವಳು ಹೊರಟುಹೋದಮೇಲೆ ನಾನು ಮನೆಯಲ್ಲೇ ಕುಳಿತು ಯೋಚಿಸತೊಡಗಿದೆ: ಗೆಳೆತಿಯರ ನಡುವೆ ನಾನು ಅವಳಿಗೆ ತಂದುಕೊಟ್ಟಿದ್ದ ಸೀರೆ-ರವಿಕೆಗಳ ಮಾತು ಬಂದೇ ಬರುತ್ತದೆ—ನನ್ನವಳು, ಅವುಗಳ ಸಂಬಂಧವಾಗಿ, ನನ್ನ ವಿಷಯ ಏನು ಹೇಳುತ್ತಾಳೋ? ಅವುಗಳನ್ನೂ—ನನ್ನನ್ನೂ ಕುರಿತು ಅವಳ ಗೆಳತಿಯ ವ್ಯಾಖ್ಯಾನ ಯಾವ ರೀತಿ ಇರುತ್ತದೋ? ಇಂದು ಇವಳು ಭೇಟಿಯಾಗಲು ಹೋಗಿದ್ದವಳು ಇವಳ ಗೆಳತಿಯರಲ್ಲೆಲ್ಲ ಆಪ್ತಳಾಗಿದ್ದವಳು. ಆಪ್ತರ ನಡುವೆ ರಹಸ್ಯ ಕಡಿದುಬೀಳುತ್ತದೆ; ಆಪ್ತತೆಯ ಬಹು ಮುಖ್ಯಲಕ್ಷಣ ಅದು. ಸಮಾನವಯಸ್ಕರಾದ ಎರಡು

ಹೆಣ್ಣುಗಳು ಒಬ್ಬರಿಗೊಬ್ಬರು ಆಪ್ತರಾದರಂತೂ ಕೇಳಬೇಕಾದ್ದೇ ಇಲ್ಲ! ತಾವು ಪರಸ್ಪರ ಬಯಲಾಗುವುದಲ್ಲದೆ, ತಮತಮಗೆ ನಿಕಟವಾಗಿ ಸೇರಿದವರನ್ನೂ ಬಯಲು ಮಾಡಿಬಿಡುತ್ತಾರೆ! ಅಂದಮೇಲೆ, ನನ್ನವಳು, ತಾನು ಹೊಸ ಸೀರೆ-ರವಿಕೆಗಳನ್ನು ಧರಿಸಿ ನನ್ನ ಮುಂದೆ ಬಂದದ್ದನ್ನೂ, ನಾನು ಅವಳಿಗೆ ಕಾಣಿಕೆ ಕೊಟ್ಟದ್ದನ್ನೂ, ಹೇಳದೆ ಇರುವುದಿಲ್ಲ! ಬಹುಶಃ, ಅವಳ ಗೆಳತಿ ಕೇಳಿ ಅಸೂಯೆ ಪಡಬಹುದು—ಅಸೂಯೆ ಪಟ್ಟರೆ ಆಶ್ಚರ್ಯವೇನಲ್ಲ—ಏಕೆಂದರೆ, ನಮ್ಮ ಪರಸ್ಪರ ಒಲವಿನ ಅಪಾರ ಐಶ್ವರ್ಯವನ್ನು ನೋಡಿ ಯಾರಾದರೂ ಅಸೂಯೆ ಪಡುವಂತಿತ್ತು . . . ಇತ್ಯಾದಿ, ಇತ್ಯಾದಿ.

"ರಾತ್ರಿ ಒಂಬತ್ತು ಗಂಟೆಯಾಯಿತು. ಅವಳಿನ್ನೂ ಮನೆಗೆ ವಾಪಸು ಬಂದಿರಲಿಲ್ಲ, ಅಷ್ಟರಲ್ಲೇ ಮಳೆ ಬೀಳಲಾರಂಭಿಸಿತು. ನಾನಿನ್ನೂ ಕೂತಲ್ಲೆ ಕುಳಿತಿದ್ದೆ. ನನ್ನ ಮನಸ್ಸಿನ ನಾಲಗೆ ಅವಳ ರೂಪದ ಮಿಠಾಯಿಯನ್ನು ಸವರಿ ಸವರಿ ಚಪ್ಪರಿಸುತ್ತಿತ್ತು ; ಹಿಂದಿನ ಅಸಂಖ್ಯಾತ ಮಧುರ ಕ್ಷಣಗಳನ್ನು ನೆನೆಯುತ್ತಿತ್ತು ; ಮುಂದಿನ ಅಸಂಖ್ಯಾತ ಕ್ಷಣಗಳ ಮಾಧುರ್ಯವನ್ನು ಕಲ್ಪಿಸಿಕೊಳ್ಳುತ್ತಿತ್ತು. ಆಗ ಅವಳು ಬಂದಳು ; ಮಳೆ ನಿಲ್ಲುವ ವರೆಗೂ ನಾನವಳನ್ನು ನಿರೀಕ್ಷಿಸಿರಲಿಲ್ಲವಾಗಿ, ನನಗೆ ಆಶ್ಚರ್ಯವಾಯಿತು. ಅವಳು ಮಳೆಯಲ್ಲಿ ಚೆನ್ನಾಗಿ ತೋಯ್ದು ಒದ್ದೆಮುದ್ದೆಯಾಗಿದ್ದಳು. ಅದಕ್ಕೆ ನಾನು ಆಕ್ಷೇಪಿಸಿದೆ. ಗೆಳತಿಯ ಕೂಡ ಮಾತಿನ ಭರದಲ್ಲಿ ಹೊತ್ತಾದದ್ದು ಗೊತ್ತಾಗಲಿಲ್ಲವೆಂದೂ, ಬಹಳ ಹೊತ್ತಿನಿಂದ ನಾನೊಬ್ಬನೇ ಇರುವುದು ನೆನಪಾಗಿ, ತೋಯ್ದರೂ ಪರವಾಗಿಲ್ಲವೆಂದು ಮಳೆಯಲ್ಲೇ ಬಂದುದಾಗಿಯೂ, ಸಮಾಧಾನ ಹೇಳಿದಳು.

"ಆ ರಾತ್ರಿ ಕಳೆಯುವುದರೊಳಗಾಗಿ ಅವಳಿಗೆ ಕೆಮ್ಮು—ನೆಗಡಿ ಪ್ರಾರಂಭವಾಯಿತು. ಮಾರನೇ ದಿನ ಮಧ್ಯಾಹ್ನ, ಜೊತೆಗೆ ಜ್ವರವೂ ಕಾಣಿಸಿಕೊಂಡಿತು. ಹಾಸಿಗೆ ಹಿಡಿದು ಮಲಗಿದಳು. ಏರಿದ ಜ್ವರ ಇಳಿಯಲೇ ಇಲ್ಲ. ದಿನದಿನಕ್ಕೆ ಕೆಮ್ಮೂ ಹೆಚ್ಚಿತು. ಒಬ್ಬ ಡಾಕ್ಟರನ್ನು ಕರೆತಂದೆ. ಅವರು ರೋಗಿಯನ್ನು ಪರೀಕ್ಷಿಸಿ ಚಿಕಿತ್ಸೆಗೆ ಔಷಧಿಗಳನ್ನು ಬರೆದುಕೊಟ್ಟರು. ಅವನ್ನೆಲ್ಲ ತಂದುಕೊಟ್ಟದ್ದಾಯಿತು. ಏನೂ ಪ್ರಯೋಜನವಾಗಲಿಲ್ಲ. ಅವಳ ಅವಸ್ಥೆಯನ್ನು ನೋಡಿ ನಾನು ಹುಚ್ಚನಂತಾದೆ. ಎಂಟು ದಿನಗಳಲ್ಲಿ ನಾಲ್ಕು ಬೇರೆ ಬೇರೆ ಡಾಕ್ಟರುಗಳು, ಬೇರೆ ಬೇರೆ ಔಷಧಿಗಳಾದವು. ಅವಳ ಉಪಚಾರಕ್ಕೆ ಅವಳ ಗೆಳತಿಯರಲ್ಲಿ ಒಬ್ಬಳು ಮನೆಯಲ್ಲೇ ಇರತೊಡಗಿದಳು. ನಮ್ಮ ಅನಿರ್ವಚನೀಯವಾದ ಸೌಖ್ಯದ ಏಕಮಾತ್ರ ಸಾಕ್ಷಿಯಾಗಿದ್ದ ಆ ಹಾಸಿಗೆಯ ಮೇಲೆ, ನನ್ನ ಅಪೂರ್ವ ಸೌಭಾಗ್ಯವು ಜ್ವರದ ತಾಪದಲ್ಲಿ ದಹಿಸುತ್ತಿದ್ದುದನ್ನು, ಅಸಹಾಯಕನಾಗಿ ನೋಡುವ ದೌರ್ಭಾಗ್ಯ ಮಾತ್ರ, ನನಗೆ ಉಳಿದಿತ್ತು.

"ಅವಳ ಕೈಗಳು ಬಿಸಿಯಾಗಿದ್ದವು ; ಅವಳ ಹಣೆ ಸುಡುತ್ತಿತ್ತು. ಜೇನ ಚಿಲುಮೆ

ಯಂತಿದ್ದ ಅವಳ ತುಂಬುತುಟಿಗಳು ಈಗ ಒಣಗಿ, ಬತ್ತಿ, ವಿವರ್ಣವಾಗಿದ್ದವು. ಜ್ವರದ ತಾಪಕ್ಕೆ ಕೆಂಪಾದ ಅವಳ ಬೊಗಸೆಗಣ್ಣುಗಳು ಪ್ರಕಾಶಮಾನವಾಗಿದ್ದವು. ಅವುಗಳಲ್ಲಿ ಏನೋ ಮೂಕ ವ್ಯಸನ ಸೂಚಿತವಾಗುತ್ತಿತ್ತು. ನಾನವಳನ್ನೊಮ್ಮೆ ಮಾತಾಡಿಸಲು ಪ್ರಯತ್ನಪಟ್ಟೆ; ಮೆಲ್ಲಗೆ ಅವಳ ಹೆಸರು ಹಿಡಿದು ಕರೆದೆ. ಆ ಬತ್ತಿದ ತುಟಿಗಳು, ಹೌದೋ ಅಲ್ಲವೋ ಎಂಬಂತೆ ಅಲುಗಿದವು. ಅವು ಯಾವ ಮಾತುಗಳನ್ನು ಉಚ್ಚರಿಸಿದವೋ ದೇವರೇ ಬಲ್ಲ. ಇದ್ದಕ್ಕಿದ್ದ ಹಾಗೆಯೇ ನನ್ನ ಕೈಯನ್ನು ಹಿಡಿದುಕೊಂಡಳು; ಮೇಲುಸಿರು ಎಳೆಯಲಾರಂಭಿಸಿದಳು. ನಂದುವ ಮೊದಲು ಒಂದೆರಡು ಬಾರಿ ದೊಡ್ಡದಾಗುವ ಎಣ್ಣೆ ಮುಗಿದ ಹಣತೆಯ ಜ್ವಾಲೆಯಂತೆ, ಅವಳ ಕಣ್ಣುಗಳು ಅರಳಿ, ನನ್ನನ್ನೇ ದುರುಗುಟ್ಟಿ ನೋಡತೊಡಗಿದವು. ಅನಂತರ ಅವಳ ಕೈಹಿಡಿತ ಸಡಿಲವಾಯಿತು; ಕಣ್ಣುಗಳು ಮುಚ್ಚಿದವು; ಅವಳ ಕೈ ಜಾರಿ ಪಕ್ಕಕ್ಕೆ ಬಿತ್ತು. ಅಲ್ಲೇ ನಿಂತಿದ್ದ ಅವಳ ಗೆಳತಿ "ಹಾ!" ಎಂದಳು. ನನಗೆ ಅರ್ಥವಾಯಿತು.

"ಅವಳ ಶವಸಂಸ್ಕಾರಕ್ಕೆ ಮಡಿವಂತರು ಯಾರೂ ಬರಲಿಲ್ಲ. ನಾನೇ ಅದನ್ನು ಗಾಡಿಯಲ್ಲಿ ತೆಗೆದುಕೊಂಡು ಹೋಗಿ ಸಮಾಧಿ ಮಾಡಿಸಿದೆ, ಹೌದು—ನಿರ್ಜೀವವಾಗಿದ್ದರೂ, ಅವಳ ದೇಹವನ್ನು ಸುಡುವ ಮನಸ್ಸಾಗದೆ, ಸಮಾಧಿ ಮಾಡಿಸಿದೆ. ಮಾರನೇ ದಿನವೇ, ಅವಳ ಸಮಾಧಿಯ ಮೇಲೆ ಕಲ್ಲುಚಪ್ಪಡಿ ಹಾಸಿದ ಜಗುಲಿಯೊಂದನ್ನು ಕಟ್ಟಿಸಿ, ತಲೆಯ ಕಡೆ ಒಂದು ಸ್ಮಾರಕಶಿಲೆಯನ್ನು ನೆಡಿಸಿದೆ.

"ಕೇವಲ ಒಂದು ವಾರಕ್ಕೆ ಮುಂಚೆ ನನ್ನ ಮಟ್ಟಿಗೆ ಭೂಸ್ವರ್ಗವಾಗಿದ್ದ ನನ್ನ ಮನೆ, ಈಗ ನನಗೆ ನರಕವಾಗಿ ಪರಿಣಮಿಸಿತು. ಅಲ್ಲಿದ್ದರೆ ನನಗೆ ಉಸಿರಾಡುವುದೂ ಕಷ್ಟವಾಗಿ ತೋರತೊಡಗಿತು. ಆದ್ದರಿಂದ ಮನೆಗೆ ಬೀಗಹಾಕಿ, ಅದನ್ನು ನೆರೆಮನೆಯವರ ಉಸ್ತುವಾರಿಯಲ್ಲಿ ಬಿಟ್ಟು, ಮರುದಿನವೇ ಪ್ರವಾಸ ಹೊರಟೆ.

* * * * *

"ಒಂದು ತಿಂಗಳು ಊರು ಸುತ್ತುವುದರಲ್ಲಿ ಬೇಸರವಾಯಿತು. ಊರಿಗೆ ಹಿಂತಿರುಗಿದೆ. ಮನೆಯನ್ನು ತಲುಪಿ ನನ್ನ ಅಲ್ಲ-ಅಲ್ಲ, ನಮ್ಮ—ಕೊಠಡಿಯನ್ನು ಪ್ರವೇಶಿಸಿದೆ. ಪ್ರವೇಶಿಸಲು ನನಗೆ ನಾನೇ ಬಲಾತ್ಕಾರ ಮಾಡಬೇಕಾಯಿತು. ಕೊಠಡಿಯಲ್ಲಿ ಕಾಲಿಡುತ್ತಲೇ, ಅಲ್ಲಿದ್ದ ನಮ್ಮ ಮಂಚ—ಹಾಸಿಗೆ, ಗೋಡೆಯ ಮೇಲಿದ್ದ ಚಿತ್ರಗಳು, ಅವಳು ಕಸೂತಿ ಕೆಲಸಮಾಡಿದ್ದ ಚೌಕಗಳು—ಪರದೆಗಳು, ಹೂವಿನ ಕೂಜಗಳು, ಪರಿಮಳ-ತೈಲದ ಸೀಸೆಗಳು, ಭರಣಿಗಳು, ತಟ್ಟೆಗಳು—ಇವೇ ಮೊದಲಾದ, ಅವಳ ನೆನಪನ್ನುಂಟುಮಾಡುವ ಸಾಮಾನುಗಳನ್ನೂ ಪದಾರ್ಥಗಳನ್ನೂ ಕಂಡು, ತಿಂಗಳ ಹಿಂದಿನ ದುಃಖ, ಹೊಸ ವೇಗದಿಂದ ಮರುಕಳಿಸಿತು. ಅವಳಿಲ್ಲದೆ, ನನ್ನ ಮನೆಯೂ, ಅದರಲ್ಲಿದ್ದ

ಸಮಸ್ತ ಪದಾರ್ಥಗಳೂ, ತಮ್ಮ ಅರ್ಥವನ್ನು ಕಳೆದುಕೊಂಡಿದ್ದವು. ಅಷ್ಟೇಕೆ? ಕಳ್ಳ ಚಿನ್ನವನ್ನು ಕದ್ದು ಎಸೆದ ಖಾಲಿ ಚೀಲದಂತೆ, ನನಗೆ ನಾನೇ ಅರ್ಥವಿಲ್ಲದವನಾಗಿದ್ದೆ, ಇನ್ನು ಅವುಗಳ ಮಾತೇನು?

"ಅವಳಿಗೆ ಹೂವುಗಳು, ಪರಿಮಳದ್ರವ್ಯಗಳು ಎಂದರೆ, ಸಾಮಾನ್ಯವಾಗಿ ಹೆಣ್ಣಿಗೆ ಇರುವುದಕ್ಕಿಂತ ಹೆಚ್ಚಾದ ಆಸಕ್ತಿಯಿತ್ತು. ಅವಳ ಈ ಆಸಕ್ತಿಯ ಕುರುಹು, ನಮ್ಮ ಕೊಠಡಿಯ ಸಮಸ್ತ ಪದಾರ್ಥಗಳಿಗೂ, ಕಡೆಗೆ ಗೋಡೆಗಳಿಗೂ ಸಹ, ಅಂಟಿಕೊಂಡಿತ್ತು.

"ಅವಳ ಅನುಪಮ ರೂಪಸಿರಿಯನ್ನೂ ಪ್ರೇಮಭಾಗ್ಯವನ್ನೂ ಕಳೆದುಕೊಂಡ ನನ್ನ ದಾರಿದ್ರ್ಯಕ್ಕಿಂತ ಸಾವೇ ಮೇಲಾಗಿ ಕಂಡಿತು. ನನ್ನ ದುಃಖ ಉತ್ಕಟವಾಯಿತು; ಅದರ ಯಾತನೆ ತೀವ್ರವಾಯಿತು. ಆ ಮಾರಕ ವಾತಾವರಣದಲ್ಲಿ ಇನ್ನು ಹೆಚ್ಚು ಕಾಲ ಇರಲಾರದೆ ಈಚೆಗೆ ಬಂದೆ.

"ಮನೆ ಬಿಟ್ಟು ಹೊರಡಬೇಕಾದರೆ, ಹಜಾರದ ಬಾಗಿಲ ಬಳಿ ಇದ್ದ ದೊಡ್ಡ ನಿಲುವುಗನ್ನಡಿಯನ್ನು ಹಾಯ್ದು ಹೋಗಬೇಕಾಗಿತ್ತು. ಅವಳು, ಸಿಂಗರಿಸಿಕೊಂಡು ಹೊರಗೆ ಹೋಗುವ ಮೊದಲು, ಆಪಾದಮಸ್ತಕ ತನ್ನ ಉಡಿಗೆ-ತೊಡಿಗೆಗಳು ಸಮರ್ಪಕವಾಗಿವೆಯೋ ಇಲ್ಲವೋ ನೋಡಿಕೊಳ್ಳುವುದಕ್ಕೋಸ್ಕರ, ಆ ಕನ್ನಡಿಯನ್ನು ಆ ಸ್ಥಳದಲ್ಲಿರಿಸಿದ್ದಳು.

"ಎಷ್ಟೋಸಲ—ಅದೆಷ್ಟೋಸಲ! ಅವಳ ರೂಪುಲಾವಣ್ಯಗಳನ್ನು ಪ್ರತಿಬಿಂಬಿಸಿದ್ದ ಈ ಕನ್ನಡಿ, ತನ್ನ ಹೃದಯದಲ್ಲಿ ಆ ಸೊಬಗಿಯ ಸವಿನೆನಪನ್ನುಳಿಸಿಕೊಂಡಿದ್ದಿರಬೇಕು—ಎನ್ನಿಸಿ, ನಾನದರ ಮುಂದೆ ನಿಂತೆ. ಅವಳನ್ನು ಪೂರ್ಣವಾಗಿ ಒಳಗೊಂಡು, ನನ್ನಷ್ಟೇ—ರೂಪಕ್ಷುತ್ಪೀಡಿತವಾದ ನನ್ನ ಕಣ್ಣುಗಳಷ್ಟೇ!—ಅವಳನ್ನು ನುಂಗಿದ್ದ ಚಪ್ಪಟೆಯಾದ—ಗಭೀರವಾದ—ಶೂನ್ಯವಾದ ಆ ಕನ್ನಡಿಯ ಮುಂದೆ, ಅದನ್ನು ನಟ್ಟ ನೋಟದಿಂದ ನೋಡುತ್ತ, ನಡುಗುತ್ತ ನಿಂತೆ. ನಿರ್ಜೀವಿಯಾದ, ಮೌನಿಯಾದ ಆ ಕನ್ನಡಿಯ ಮೇಲೂ ನನಗೆ ಪ್ರೇಮವುಂಟಾದಂತೆ ಅನುಭವವಾಯಿತು. ಅದನ್ನು ಮುಟ್ಟಿದೆ; ತಣ್ಣಗಿತ್ತು—ಹೆಣದ ಮೈಯಂತೆ!

"ಆ ಹಾಳು ಕನ್ನಡಿಯನ್ನು ನೋಡಿ, ನನ್ನ ನೆನಪಿನ ಬುಗ್ಗೆ ಮತ್ತೊಮ್ಮೆ ಒಡೆದಂತಾಯಿತು.

"ಅವಳು ಸಿಂಗರಿಸಿಕೊಂಡು ಅದರ ಮುಂದೆ ನಿಂತಾಗ ಅದೆಷ್ಟು ರೀತಿಯಲ್ಲಿ ಬಳುಕುತ್ತಿದ್ದಳು—ಬಾಗುತಿದ್ದಳು! ಅದೆಂಥ ಬಿಂಕ—ಬಿನ್ನಾಣಗಳನ್ನು ಒನಪು—ಒಯ್ಯಾರಗಳನ್ನು ವ್ಯಕ್ತಪಡಿಸುತ್ತಿದ್ದಳು! ಆಹಾ! ಅವಳ ನೋಟದ ಬೆಳಕೇನು!—ನಗೆಯ ಮೋಡಿಯೇನು!

"ಅವಳು ಬದುಕಿದ್ದಾಗ, ಇವುಗಳಲ್ಲಿ ಒಂದೊಂದರ ನೆನಪೂ, ನನ್ನ ಆತ್ಮಕ್ಕೆ ಅಮೃತಧಾರೆಯಂತೆ ಚೇತನಕಾರಿಯಾಗಿದ್ದದ್ದು, ಈಗ—ಅವಳಿಲ್ಲದೆ, ನನ್ನ ಬಾಳು ಬಟ್ಟ ಬಯಲಾಗಿದ್ದ ಈಗ—ಕಾಲಕೂಟವಾಗಿ ಪರಿಣಮಿಸಿತು.

"'ಓ! ಗತಭಾಗ್ಯ ಮನುಷ್ಯನೊಬ್ಬನಿಗೆ ಇಷ್ಟು ಅವರ್ಣನೀಯ ಯಾತನೆಯನ್ನು ಕೊಡುವ ಕಲ್ಲೆದೆಯ ಕನ್ನಡಿಯೇ, ನೀನೆಂಥ ಪಾಷಾಣ ಹೃದಯಿ! ಆಹಾ! ನೀನು ಗ್ರಹಿಸಿರುವುದೆಲ್ಲವನ್ನು, ನಿನ್ನ ಮುಂದೆ ಸುಳಿದುಹೋಗಿರುವುದೆಲ್ಲವನ್ನು, ನಿನ್ನಲ್ಲಿ ಪ್ರತಿಬಿಂಬಿತವಾದುದೆಲ್ಲವನ್ನು, ಅಥವಾ, ಅದರ ಅಪಾರ ಪ್ರೇಮದಲ್ಲಿ ಅಚಲ ವಿಶ್ವಾಸದಲ್ಲಿ ಪ್ರತಿಬಿಂಬಿತವಾದ ಸಮಸ್ತವನ್ನೂ, ನನ್ನ ಈ ದುಃಖಪೀಡಿತ ಹೃದಯವು ಎಂದಾದರೂ ಮರೆಯಬಲ್ಲುದಾದರೆ, ಅಂದು ನಾನು ಪರಮಸುಖಿಯಾದೇನು!—ಧನ್ಯನಾದೇನು!!' ಎಂದು ಉದ್ಗರಿಸಿ, ಇನ್ನು ಹೆಚ್ಚುಕಾಲ ಅಲ್ಲಿ ಇರಲಾರದೆ, ಮನೆಗೆ ಬೀಗಹಾಕಿ ಹೊರಟೆ.

"ಮನೆ ಬಿಟ್ಟು ಹೊರಟವನು, ಯಾವ ನಿರ್ದಿಷ್ಟ ಗುರಿಯೂ ಇಲ್ಲದೆ, ಎಷ್ಟೋ ಹೊತ್ತು ನಡೆದೆ. ಹೀಗೆ ನಡೆದು ನಡೆದು, ನನ್ನ ಅರಿವಿಲ್ಲದೆ,—ಪೂರ್ವೋದ್ದೇಶವಿಲ್ಲದೆ—ಸ್ಮಶಾನವನ್ನು ಸಮೀಪಿಸಿದ್ದೆ. ಅದನ್ನು ಪ್ರವೇಶಿಸಿ, ಅವಳ ನಿರಾಡಾಂಬರವಾದ ಸಮಾಧಿಯ ಬಳಿಗೆ ಹೋದೆ. ಅದರ ಸ್ಮಾರಕಶಿಲೆಯ ಮೇಲೆ ಕೆತ್ತಿಸಿದ್ದ ಮಾತುಗಳನ್ನು ಓದಿದೆ:

"' **ಸತೀರತ್ನ ಸುಶೀಲಾ**
ಅಪಾರವಾಗಿ ಒಲಿದು,
ಅಪಾರವಾಗಿ ಒಲಿಸಿಕೊಂಡು,
ಅಕಾಲದಲಿ ಅನಂತವನು ಸೇರಿದಳು'"

"'ಆಹಾ! ಅಯ್ಯೋ! ಇಲ್ಲಿ—ಭೂಗರ್ಭದಲ್ಲಿ—ಮಣ್ಣಿನೊಡನೆ ಮಣ್ಣಾಗುತ್ತ ಕ್ಷಯಿಸುತ್ತಿದ್ದಾಳೆಯೋ, ಅಕ್ಷಯಪ್ರೇಮದ ನನ್ನ ಸುಶೀಲೆ! ಇದಕ್ಕಿಂತ ದುರಂತ ವ್ಯಾಪಾರ ಬೇರೆ ಇರಲು ಸಾಧ್ಯವೇ!'" ಎಂದು ತೋರಿತು. ಸಮಾಧಿಯ ಬಳಿ ಕುಳಿತು, ನನ್ನ ಹಣೆಯನ್ನು ಅದರ ಹಾಸುಚಪ್ಪಡಿಯ ಮೇಲಿಟ್ಟು, ಬಿಕ್ಕಿಬಿಕ್ಕಿ ಅಳ ತೊಡಗಿದೆ. ನನ್ನವಳ ಸಮಾಧಿಗೆ ದುಃಖದ ಬಿಸಿ ಕಂಬನಿಗಳ ಅಭಿಷೇಕ ಮಾಡುತ್ತ, ಬಹಳಹೊತ್ತು ಕಳೆದೆ. ಎಷ್ಟೋಕಾಲದ ಮೇಲೆ, ಕತ್ತಲು ಕವಿಯುತಿದ್ದುದರ ಅರಿವಾಯಿತು, ನನಗೆ.

"ಆಗ ನಾನೊಂದು ವಿಚಿತ್ರವಾದ—ವಿಲಕ್ಷಣವಾದ—ಹುಚ್ಚು ಆಸೆಗೆ, ಭಗ್ನ ಮನೋರಥನಾದ ಪ್ರಣಯಿಯ ಅಂತಿಮ ಆಸೆಗೆ, ತುತ್ತಾದೆ. ಅದೇ ನನಗೆ

ಕಡೇ ರಾತ್ರಿಯೆಂದು ನನ್ನ ಪರೋಕ್ಷಕ್ಕೆ ತೋರುತ್ತಿತ್ತು. ಆದ್ದರಿಂದ, ನನ್ನ ಬದುಕಿನ ಪೂರ್ಣ ವಿರಾಮದ ಆ ರಾತ್ರಿಯನ್ನು, ಅವಳ ಸಮಾಧಿಯ ಮೇಲೆ ಕಂಬನಿಗರೆಯುತ್ತ ಕಳೆಯಬೇಕೆಂದು ಆಸೆಪಟ್ಟೆ.

"ನನ್ನ ಕಡೇ ಆಸೆಯನ್ನು ಈಡೇರಿಸಿಕೊಳ್ಳುವ ಮೊದಲು, ಆ ಮೃತರ ನಗರಿಯಲ್ಲಿ ಸುತ್ತಾಡತೊಡಗಿದೆ. ನಡೆದೆ—ನಡೆದೆ—ಬೇಕಾದಷ್ಟು ನಡೆದು ಸುತ್ತಾಡಿದೆ. ಜೀವಂತರು ವಾಸಿಸುತ್ತಿದ್ದ ನಗರಿಯೊಡನೆ, ಹೋಲಿಕೆಯಿಂದ, ಈ ನಗರಿ ಎಷ್ಟೋ ಚಿಕ್ಕದಾಗಿ ತೋರಿತು. ಆದರೂ, ಜೀವಂತರಿಗಿಂತ ಸತ್ತವರ ಸಂಖ್ಯೆ ಎಷ್ಟು ಅಸಂಖ್ಯಾತ! ಅಬ್ಬಬ ಅಂದರೆ, ಜೀವಂತರಾದ ನಮ್ಮಲ್ಲಿ ನಾಲ್ಕು ತಲೆಮಾರಿನ ಮಂದಿ ಒಟ್ಟಿಗೆ ಇರುವುದು ಸಾಧ್ಯ. ನಮಗೆ ದೊಡ್ಡ ದೊಡ್ಡ ಘನೆಗಳು—ವಿಶಾಲವಾದ ಬೀದಿಗಳು—ಹೆಚ್ಚಿನ ಸ್ಥಳಾವಕಾಶ ಬೇಕು—ಎನ್ನುತ್ತೇವೆ.

"ಆದರೆ, ಅಳಿದ ಅಸಂಖ್ಯಾತ ತಲೆಮಾರಿನವರಿಗೆಲ್ಲ—ನಮ್ಮ ತನಕ ಇಳಿದು ಬಂದ ಮಾನವಕುಲದ ಆ ಹಂತಗಳಿಗೆಲ್ಲ—ಏನೂ ಇಲ್ಲ, ಏನೇನೂ ಇಲ್ಲ. ಜನ್ಮಕೊಟ್ಟ ಮಣ್ಣು ಅವರನ್ನು ಹಿಂದಕ್ಕೆ ಕರೆದುಕೊಳ್ಳುತ್ತದೆ. ಕಾಲವಾಹಿನಿಯಲ್ಲಿ ಅವರ ನೆನಪು ಕೊಚ್ಚಿಹೋಗುತ್ತದೆ. ಅದೇ ಕಟ್ಟಕಡೆಯ ಬೀಳ್ಕೊಡುಗೆ!

"ಸ್ಮಶಾನದ ಒಂದು ಪಕ್ಕ, ಅದರ ಬಹು ಪುರಾತನವಾದ ಒಂದು ಭಾಗವಾಗಿತ್ತು. ಅಲ್ಲಿ, ಅನೇಕಾನೇಕ ವರ್ಷಗಳ ಹಿಂದೆ ಸತ್ತು ಸಮಾಧಿಯಾದವರ ಕಳೇಬರಗಳು ಮಣ್ಣಿನೊಡನೆ ಐಕ್ಯವಾಗಿಯೇ ಎಷ್ಟೋ ಕಾಲವಾಗಿದ್ದಿರಬೇಕೆನ್ನಿಸಿತು. ಆ ಸಮಾಧಿಗಳಲ್ಲಿ ಬಹುಪಾಲು ಬಿಲವಾಗಿದ್ದವು. ಕೆಲವಂತೂ ಗುರುತೇ ಇಲ್ಲದಂತೆ ನಶಿಸಿ ಹೋಗಿದ್ದವು. ಬಹುಶಃ, ಅವರ ಸ್ಥಳಗಳಲ್ಲಿ, ನಾಳೆ ಹೊಸದಾಗಿ ಸತ್ತವರ ಸಮಾಧಿಗಳು ನಿರ್ಮಿತವಾಗುವುವು.

"ಸ್ಮಶಾನದ ತುಂಬ, ಸಮಾಧಿಯಾದವರ ಬಂಧುಗಳು ನೆಟ್ಟು ಬೆಳೆಸಿದ್ದ ನಾನಾ ಜಾತಿಯ ಗಿಡಮರಗಳು ಹೊರವಾಗಿ ಬೆಳೆದಿದ್ದವು. ಅವಲ್ಲದೆ, ಹಲವು ಜಾತಿಯ ಕಾಡು ಗಿಡ-ಬಳ್ಳಿಗಳೂ ತಾವೇ ತಾವಾಗಿ ಬೆಳೆದಿದ್ದವು. ಅಲ್ಲಿ ಭೂಗತವಾದ ಅಸಂಖ್ಯಾತ ಮಾನವ ದೇಹಗಳ ಮಾಂಸದಿಂದ ಪುಷ್ಟಿ ಪಡೆದು ಬೆಳೆದಿದ್ದ ಈ ವಿಚಿತ್ರ ಉದ್ಯಾನದ ವಾತಾವರಣದಲ್ಲಿ, ಖಿನ್ನ ನೀರವತೆ ನೆಲೆಸಿತ್ತು.

"ಅಂದು, ಅಮಾವಾಸ್ಯೆಗೆ ಒಂದೆರಡು ದಿನ ಹಿಂದಿನ ದಿನವಾಗಿತ್ತು. ಆದ್ದರಿಂದ ರಾತ್ರಿಯ ಕತ್ತಲು ದಟ್ಟವಾಗಿತ್ತು. ಸ್ಮಶಾನದ ಗಿಡಮರಗಳ ಅಡಿಯಲ್ಲಿ ಅದು ಮತ್ತಷ್ಟು ದಟ್ಟವಾಗಿತ್ತು. ಆ ಕತ್ತಲಲ್ಲಿ ನಾನು ಎಷ್ಟು ಸುತ್ತಾಡಿದರೂ, ನನಗೆ ಅವಳ ಸಮಾಧಿ ಪುನಃ ಪತ್ತೆಯಾಗಲಿಲ್ಲ. ತೋಳುಗಳನ್ನು ಮುಂದಕ್ಕೆ ಚಾಚಿ, ನನ್ನ

ಕೈಗಳಿಂದ—ಕಾಲುಗಳಿಂದ—ಮಂಡಿಗಳಿಂದ—ಎದೆಯಿಂದ—ತಲೆಯಿಂದ ಸಹ !—ಸಮಾಧಿಗಳನ್ನು ತಾಗುತ್ತ ನಡೆದೆ. ಕುರುಡನಂತೆ ತಡವರಿಸುತ್ತ—ತಡಕಿ ತಡಕಿ ಸ್ಮಾರಕಶಿಲೆಗಳ ಮೇಲೆ ಕೈಯಾಡಿಸುತ್ತ, ಅವಳ ಹೆಸರನ್ನು ಪತ್ತೆಮಾಡಲು ಅವುಗಳ ಮುಖದಲ್ಲಿ ಕೊರೆದ ಅಕ್ಷರಗಳ ಮೇಲೆ ಬೆರಳಾಡಿಸುತ್ತ ನಡೆದೆ. ಎಷ್ಟು ಪ್ರಯತ್ನ ಪಟ್ಟರೂ ನನಗೆ ಅವಳ ಸಮಾಧಿ ಪತ್ತೆಯಾಗಲೇ ಇಲ್ಲ.

"ನನ್ನ ಕಡೆಯ ಆಸೆಗೆ ಭಂಗ ಬಂತೇ—ಎಂದು ನಿರಾಶನಾಗಿ, ಮುಂದೇನು ಮಾಡಬೇಕೋ ತೋಚದೆ ನಿಂತು ಸುತ್ತ ನೋಡಿದೆ. ಅಬ್ಬಾ! ಎಂತಹ ಘೋರ—ಕರಾಳ—ನೀರವ ರಾತ್ರಿಯಾಗಿತ್ತು, ಅದು! ಅದನ್ನು ನೋಡಿ ನನಗೆ, ಇದ್ದಕ್ಕಿದ್ದ ಹಾಗೆಯೇ, ಅದಕ್ಕಿಂತಲೂ ದುಸ್ಸಹವಾದ ಭಯವುಂಟಾಯಿತು. ನಾನಾಗ ಎರಡು ಸಾಲು ಸಮಾಧಿಗಳ ಮಧ್ಯೆ ತೀರ ಇಕ್ಕಟ್ಟಾದ ಸ್ಥಳದಲ್ಲಿದ್ದೆ. ಎತ್ತತಿರುಗಿದರೂ ಸಮಾಧಿಗಳು!—ಸಮಾಧಿಗಳು—ಇನ್ನಷ್ಟು ಮತ್ತಷ್ಟು ಸಮಾಧಿಗಳು!

"ನಡೆದು ನಡೆದು ನನ್ನ ಮಂಡಿಗಳು ನಿಶ್ಶಕ್ತವಾಗಿದ್ದವು; ಆಯಾಸ ತುಂಬಿ ಬಂದಿತ್ತು. ನಾನು ಇನ್ನು ಒಂದು ಹೆಜ್ಜೆಯನ್ನೂ ಇಡಲಾರದೆ, ಪಕ್ಕದಲ್ಲೇ ಇದ್ದ ಒಂದು ಸಮಾಧಿಯ ಮೇಲೆ ಕುಳಿತುಕೊಂಡೆ. ನನ್ನ ಎದೆ ನನಗೇ ಕೇಳಿಸುವಂತೆ ದುಡಿಯುತ್ತಿತ್ತು. ಅಲ್ಲದೆ, ಜೊತೆಗೆ ಬೇರೆ ಇನ್ನೇನೋ ಕೇಳಿಸಿತು. ಏನು? ಏನೋ, ಗಲಿಬಿಲಿಯಾದ ಹೆಸರಿಡಲಾಗದ ಒಂದು ಶಬ್ದ. ಈ ಶಬ್ದ ನನ್ನ ತಲೆಯಲ್ಲಿತ್ತೋ? ಅಭೇದ್ಯವಾದ ರಾತ್ರಿಯ ಕಪ್ಪಿನಲ್ಲಿತ್ತೋ? ಅಥವಾ, ಅಸಂಖ್ಯಾತ ಮಾನವ ಕಳೇಬರಗಳಿಂದ ಬಿತ್ತನೆಯಾಗಿದ್ದ ಆ ಸ್ಮಶಾನದ ನೆಲದ ರಹಸ್ಯಗರ್ಭದಲ್ಲಿತ್ತೋ?

"ನಾನು ಸುತ್ತ ನೋಡಿದೆ. ಎಷ್ಟು ಹೊತ್ತು ಅಲ್ಲಿ ಕುಳಿತಿದ್ದೆನೋ ಹೇಳಲಾರೆ. ಆದರೆ, ಭಯದ ಒತ್ತಡದಿಂದ ನಿಶ್ಚೇಷ್ಟಿತನಾಗಿದ್ದೆ—ತಣ್ಣಗಾಗಿದ್ದೆ; ಕೂಗಿಕೊಳ್ಳುವುದಕ್ಕೆ ಸಿದ್ಧನಾಗಿದ್ದೆ, ಸಾಯುವುದಕ್ಕೂ ಸಿದ್ಧನಾಗಿದ್ದೆ—

"ಆಗ, ಇದ್ದಕ್ಕಿದ್ದ ಹಾಗೆಯೇ, ನಾನು ಕುಳಿತಿದ್ದ ಸಮಾಧಿಯ ಮೇಲೆ ಹಾಸಿದ್ದ ಕಲ್ಲುಚಪ್ಪಡಿ, ಅಲುಗುತ್ತಿದ್ದಂತೆ ಅನುಭವವಾಯಿತು. ನಿಜವಾಗಿಯೂ ಅದು, ಒಳಗಿನಿಂದ ಯಾರಾದರೂ ತಳ್ಳುತ್ತಿದ್ದರೆ ಹೇಗೋ ಹಾಗೆ, ಅಲುಗಾಡುತ್ತಿತ್ತು. ನಾನು ಚಕಿತನಾಗಿ, ತಟ್ಟನೆ ಎದುರು ಸಮಾಧಿಗೆ ಹಾರಿ, ತಿರುಗಿ ನೋಡಿದೆ. ಕ್ಷಣದ ಹಿಂದೆ ನಾನು ಕುಳಿತಿದ್ದ ಸಮಾಧಿಯ ಕಲ್ಲುಚಪ್ಪಡಿ ಪೆಟ್ಟಿಗೆಯ ಮುಚ್ಚಳದಂತೆ ಮೇಲೇಳುತ್ತಿದ್ದುದನ್ನು ಕಂಡೆ—ಹೌದು, ಸ್ಪಷ್ಟವಾಗಿ ಕಂಡೆ. ಅನಂತರ, ಸಮಾಧಿಯ ಒಳಗಿನಿಂದ, ಸತ್ತು ಅಲ್ಲಿ ಭೂಗತವಾಗಿದ್ದ ವ್ಯಕ್ತಿಯ ಬೆತ್ತಲೆಯಾದ ಅಸ್ಥಿಪಂಜರ ಕಾಣಿಸಿಕೊಂಡು, ತನ್ನ ಬಾಗಿದ ಬೆನ್ನುಮೂಳೆಯಿಂದ

ಕಲ್ಲುಚಪ್ಪಡಿಯನ್ನು ಪೂರ್ತಿ ಹಿಂದಕ್ಕೆ ತಳ್ಳಿ ನಿಲ್ಲಿಸಿತು. ಆಶ್ಚರ್ಯ! ರಾತ್ರಿ ಅಷ್ಟು ಕಪ್ಪಾಗಿದ್ದರೂ, ಕಪ್ಪುಹಲಗೆಯ ಮೇಲಿನ ಬಿಳೀಚಿತ್ರದಂತೆ, ನನಗೆ ಇದು ಸ್ಪಷ್ಟವಾಗಿ ಕಂಡಿತು. ಹಾಗೆಯೇ, ಅದರ ಸ್ಮಾರಕಶಿಲೆಯ ಮೇಲೆ ಕೆತ್ತಿಸಲ್ಪಟ್ಟಿದ್ದ ಬರಹವೂ ಕಾಣಿಸಿತು. ಬರಹ ಈ ರೀತಿಯಾಗಿತ್ತು :

'ಅರುವತ್ತನೇ ವರ್ಷದಲ್ಲಿ
ಜೀವನಯಾತ್ರೆಯನ್ನು ಮುಗಿಸಿದ—
ದಾನಾಗ್ರಣಿ—ಜನೋಪಕಾರಿ—ಕರುಣಾಸಿಂಧು—
ಇತ್ಯಾದಿ ಬಿರುದಾಂಕಿತರಾದ
ಸಾಹುಕಾರ್ ಹೇಮಯ್ಯನವರ
ಜ್ಞಾಪಕಾರ್ಥ'

"ಆ ಸಮಾಧಿಯಿಂದ ಎದ್ದು ಬಂದಿದ್ದ ಅಸ್ಥಿಪಂಜರವೂ ತನ್ನ ಸ್ಮಾರಕಶಿಲೆಯ ಮೇಲೆ ಕೆತ್ತಿದ್ದ ಬರಹವನ್ನು ಓದಿತು. ಅನಂತರ ಅದು, ಅಲ್ಲೇ ಪಕ್ಕದಲ್ಲಿ ಬಿದ್ದಿದ್ದ ಒಂದು ಚಿಕ್ಕ ಮೊನಚಾದ ಕಲ್ಲನ್ನು ಎತ್ತಿಕೊಂಡು, ತಾನು ಓದಿದ ಬರಹವನ್ನು ಬಹು ಎಚ್ಚರಿಕೆಯಿಂದ ಉಜ್ಜಿ ಉಜ್ಜಿ ಕೆರೆದು, ಅಳಿಸಿತು. ಆಮೇಲೆ, ತನ್ನ ಬುರುಡೆಯಲ್ಲಿದ್ದ ಕಣ್ಣುಗಳ ಟೊಳ್ಳಾದ ಕಪ್ಪು ಗುಳಿಗಳಿಂದ ತಾನು ಅಳಿಸಿದ ಸ್ಥಳವನ್ನು ನೋಡಿತು. ಅನಂತರ, ತನ್ನ ಬಲಗೈಯ ತೋರಬೆರಳಾಗಿದ್ದುದರ ಮೂಳೆಯ ತುದಿಯಿಂದ—ಶಾಲೆಯ ಬಾಲಕರು ಕಪ್ಪುಹಲಗೆಯ ಮೇಲೆ ಸುಣ್ಣದ ಚೂರಿನಿಂದ ಅಕ್ಷರಗಳನ್ನು ಬರೆಯುವಂತೆ—ಪ್ರಕಾಶಮಾನವಾದ ಅಕ್ಷರಗಳಲ್ಲಿ ಹೀಗೆ ಬರೆಯಿತು :

'ಅರುವತ್ತು ವರ್ಷಗಳ
ನಿರ್ದಯದ ಮೋಸದ, ಕಳ್ಳತನದ,
ಕ್ರೌರ್ಯದ—ಸ್ವಾರ್ಥದ ಮತ್ತು ಕಾರ್ಪಣ್ಯದ
ಹೊಲಸುಬಾಳನ್ನು ನಡೆಸಿ, ಹೀನವಾಗಿ ಸತ್ತ
ಸಾಹುಕಾರ್ ಹೇಮಯ್ಯ
ಮಣ್ಣಾದ ಸ್ಥಳ'

"ಬರೆದು ಮುಗಿಸಿದ ಮೇಲೆ, ಮೃತನ ಅಸ್ಥಿಪಂಜರವು, ತಾನು ಬರೆದಿದ್ದುದನ್ನು ನೋಡುತ್ತ, ಸಮಾಧಾನವಾದಂತೆ ತಲೆದೂಗಿತು. ನಾನು ಬೆಕ್ಕಸ ಬೆರಗಾಗಿ ಸುತ್ತ ನೋಡಿದೆ. ಎಲ್ಲ ಸಮಾಧಿಗಳೂ ತೆರೆಯಲ್ಪಟ್ಟಿದ್ದವು! ಅವುಗಳಿಂದ ಎಲ್ಲ ಮೃತರ ಅಸ್ಥಿಪಂಜರಗಳೂ ಹೊರಬಂದು, ತಮ್ಮ ತಮ್ಮ ಸಮಾಧಿಯ ಸ್ಮಾರಕಶಿಲೆಗಳ ಮೇಲೆ ತಮ್ಮ ಬಳಗದವರು ಕೆತ್ತಿಸಿದ್ದ ಸುಳ್ಳು ಬರಹಗಳನ್ನೆಲ್ಲ ಅಳಿಸಿ, ಅವುಗಳ ಸ್ಥಳದಲ್ಲಿ ಸತ್ಯ

ವನ್ನು ಬರೆದಿದ್ದವು. ನಾನು ಎಲ್ಲವನ್ನೂ ಓದಿದೆ. ಎಲ್ಲರೂ ತಮ್ಮ ಜೀವಿತಕಾಲದಲ್ಲಿ, ದುರಾತ್ಮರಾಗಿ, ದ್ವೇಷಿಗಳಾಗಿ, ಅಪ್ರಾಮಾಣಿಕರಾಗಿ, ಕಪಟಿಗಳಾಗಿ, ಕಳ್ಳರಾಗಿ, ಸುಳ್ಳರಾಗಿ, ಅಪನಿಂದಕರಾಗಿ, ಅಸೂಯಾಪರರಾಗಿ, ಲೋಕಕಂಟಕರೇ ಆಗಿದ್ದರು. ಸಾತ್ವಿಕರು, ಪತಿವ್ರತೆಯರು, ಭಕ್ತಪುತ್ರರು, ಶೀಲವಂತ ಪುತ್ರಿಯರು, ಪ್ರಾಮಾಣಿಕ ವ್ಯಾಪಾರಿಗಳು, ಅನಿಂದ್ಯರು—ಎನ್ನಿಸಿಕೊಂಡಿದ್ದ ಈ ಎಲ್ಲ ಗಂಡಸರೂ, ಹೆಂಗಸರೂ, ಮಕ್ಕಳೂ, ಕದ್ದಿದ್ದರೆಂದು, ವಂಚಿಸಿದ್ದರೆಂದು—ನಾಚಿಕೆಗೆಟ್ಟ—ಅಸಹ್ಯವಾದ ಎಲ್ಲ ದುಷ್ಕರ್ಮಗಳನ್ನೂ ಮಾಡಿದ್ದರೆಂದು ತಿಳಿಯಿತು. ಅವರೆಲ್ಲ ಈಗ, ತಮ್ಮ ಅನಂತ ನಿವಾಸದ ದ್ವಾರಪ್ರದೇಶದಲ್ಲಿ, ಏಕಕಾಲದಲ್ಲಿ, ಬದುಕಿನ ಸುಳ್ಳನ್ನಳಿಸಿ—ಸತ್ಯವನ್ನು ಬರೆದಿದ್ದರು; ಅವರ ಜೀವಿತಕಾಲದಲ್ಲಿ ಯಾರಿಗೂ ತಿಳಿಯದಿದ್ದ ಅಥವಾ ತಿಳಿಯದೆಂದು ನಟಿಸುತ್ತಿದ್ದ ಭಯಾನಕವಾದ—ಕಹಿಯಾದ, ಆದರೆ ಪವಿತ್ರವಾದ—ಸತ್ಯವನ್ನು ಬರೆದಿದ್ದರು!

"ಈ ವಿಚಿತ್ರ ವ್ಯಾಪಾರವನ್ನು ನೋಡಿದಾಗ, ಅವಳೂ ತನ್ನ ಸಮಾಧಿಯ ಸ್ಮಾರಕಶಿಲೆಯ ಮೇಲೆ ಹೀಗೆಯೇ ಬೇರೆ ಏನನ್ನಾದರೂ ಬರೆದಿರಲೇ ಬೇಕೆಂದೆನಿಸಿತು. ಕೂಡಲೆ ಎದ್ದು, ಆ ತೆರದ ಸಮಾಧಿಗಳ ಮತ್ತು ಅಸ್ಥಿಪಂಜರಗಳ ನಡುವೆ ನಡೆದೆ. ಈ ಬಾರಿ, ಹೆಚ್ಚು ಶ್ರಮವಿಲ್ಲದೆ ನನಗೆ ಅವಳ ಸಮಾಧಿ ಪತ್ತೆಯಾಯಿತು. ಅದರ ಬಳಿಯೂ ಒಂದು ಅಸ್ಥಿಪಂಜರವಿತ್ತು. ಅದು ಸೊಂಟದ ಮೇಲೆ ಕೈಗಳನ್ನಿಟ್ಟುಕೊಂಡು ಸ್ವಲ್ಪ ಬಾಗಿ, ತನ್ನ ಸ್ಮಾರಕಶಿಲೆಯ ಮೇಲೆ ಅದೇತಾನೇ ಹೊಸದಾಗಿ ಬರೆದಿದ್ದ ಮಾತುಗಳನ್ನು ನೋಡುತ್ತಿತ್ತು. ಅದರ ಮೇಲೆ, ನಾನು ಕೊರೆಸಿದ್ದ ಮಾತುಗಳಿಗೆ ಬದಲಾಗಿ ಈಗ:

'ತನಗೆ ಆಶ್ರಯಕೊಟ್ಟ ಪ್ರಿಯನಿಗೆ ದ್ರೋಹಮಾಡಿ ಹಿಂತಿರುಗುತ್ತ ಮಳೆಯಲ್ಲಿ ತೋಯ್ದು ಕಾಯಿಲೆ ಬಂದು ಸತ್ತಳು'

—ಎಂಬ ಮಾತುಗಳಿದ್ದವು.

* * * *

"ನಾನು ಆ ಸಮಾಧಿಯ ಮೇಲೆ ಜ್ಞಾನತಪ್ಪಿ ಬಿದ್ದಿದ್ದುದನ್ನು ಯಾರೋ ಮಾರನೇದಿನ ಮುಂಜಾವಿನಲ್ಲಿ ಕಂಡರಂತೆ—ಮನೆಗೆ ಕರೆತಂದರಂತೆ"

—ಎಂದು ಹೇಳಿ, ದೊಡ್ಡದಾಗಿ ನಿಟ್ಟುಸಿರು ಬಿಟ್ಟ,

ಈ ಹುಚ್ಚನಿಗೆ ಕಥೆ ಹೇಳಿದ ಆ "ಹುಚ್ಚ"!

ಮೂಲಕೃತಿ: ಗೈಡಿ ಮಾಪಸಾಂ (ತ್)

ಕನ್ನಡ ಪ್ರತಿಕೃತಿ: ಆನಂದ.

ಶ್ರೀ ರಾಮಾಶ್ವಮೇಧದ ಕೆಲವು ಪದಗಳು

(ಸೂ : ಈ ಲೇಖದಲ್ಲಿ ಮೈಸೂರಿನ ಕಾವ್ಯಾಲಯವು ಪ್ರಕಟಿಸಿದ ಶ್ರೀ ರಾಮಾಶ್ವಮೇಧದ ಭಾಗಗಳನ್ನು ಉದ್ಧರಿಸಲಾಗಿದೆ. ಲೇ.)

ದಕ್ಷಿಣ ಕನ್ನಡದ ಕವಿ ಮುದ್ದಣನು ತನ್ನ ಶ್ರೀ ರಾಮಾಶ್ವಮೇಧದಲ್ಲಿ ಪ್ರಯೋಗಿಸಿದ ಕೆಲವು ಪದಗಳ ಅರ್ಥವು ಅವುಗಳ ಪ್ರಾದೇಶಿಕತೆಯಿಂದಾಗಿ ಇಡಿಯ ಕನ್ನಡ ನಾಡಿನ ಎಲ್ಲರಿಗೂ ಸರಿಯಾಗಿ ಮಂದಟ್ಟಾಗದಂತಿರುವುದರಲ್ಲಿ ಸಂದೇಹವಿಲ್ಲ. ಅವುಗಳಲ್ಲಿ ಕೆಲವನ್ನಾರಿಸಿ ನಿಷ್ಕೃಷ್ಟಾರ್ಥವನ್ನು ತೋರಿಸುವುದೇ ಈ ಲೇಖದ ಗುರಿ.

೧. ಆೞಾಟ

"ಇದೆ ಗುಡುಗುಡಿಪ ಮೊಬಿಗಂ ಕಡುಕಾಯ್ಪೇೞಿದ ಸಿಂಗದ ದನಿಗೆತ್ತು ಬಿಗುತೋಡಿ ತಡಂಗುಂಡಿಯೊಳಡಂಗುವುವೆಸೆ, **ಆೞಾಟ**ಕೆಂದು ಯೂಥನಾಥಂ ಮುಂದಿರೆ, ಕಳಭಂ ಬೞಿವರೆ, ಪಿಡಿಯೆಡೆಯೊಳಿರೆ ಒಡಗೂಡಿ ನಡೆದು ನೀರ್ದಾಣಮಂ ಪುಗುವಾನೆವಿಂಡಿನಿಂಡೆಯುಂ. . . . ." (ಪು. ೩) ಎಂಬಲ್ಲಿ ಈ ಪದವು ಬರುವುದು. ಇದರ ಅರ್ಥಕೋಶದಲ್ಲಿ ಆೞಾಟ ಎಂಬುದಕ್ಕೆ 'ಚಿಂತೆ' ಎಂಬರ್ಥವನ್ನು ಕೊಡಲಾಗಿದೆ. ಇದಕ್ಕೆ ಕಿಟ್ಟೆಲ್ಲರ ಕೋಶವೇ ಆಧಾರವೆಂದು ತೋರುತ್ತದೆ. ಆದರೆ ಇದಕ್ಕೆ ನೀರಾಟ, ಜಲಕೇಳಿ, ಸ್ನಾನ ಎಂಬುದೇ ನಮ್ಮ ಕಡೆ ರೂಢಾರ್ಥ.

ದೇವಾಲಯಗಳಲ್ಲಿ ಹಲದಿನಗಳ ಉತ್ಸವಗಳು ನೆರವೇರುವಲ್ಲಿ ಕೊನೆಯ ದಿನ ದೇವರ ಉತ್ಸವಮೂರ್ತಿ (ಬಲಿಮೂರ್ತಿ) ಯನ್ನು, ಎಲ್ಲ ಬಿರುದು ಬಾವುಲಿಗಳೊಂದಿಗೆ ವಿಶಿಷ್ಟವಾದ ನದಿಗೋ ಕೆರೆಗೋ ಕೊಂಡುಹೋಗಿ, ಅಲ್ಲಿ ಅವಭೃಥಸ್ನಾನವನ್ನು ಪೂರೈಸಿ ಮರಳುವ ಉತ್ಸವಾಂಗವಿದೆ. ಇದಕ್ಕೆ ಆರಾಟವೆಂದು ಹೆಸರು. ಆದರೆ ಮುದ್ದಣನು ಆೞಾಟವೆಂದು ಪ್ರಯೋಗಿಸಿದ್ದಾನೆ.

ಕನ್ನಡದಲ್ಲಿ ಆೞ್ ಎಂಬುದಕ್ಕೆ ಮುಳುಗು ಎಂಬ ಅರ್ಥವಿದೆ. ಇದೇ ಆರ್ ಎಂಬ ರೂಪಾಂತರವನ್ನು ಪಡೆಯಿತೆನ್ನುವುದು ಯುಕ್ತಿಯುಕ್ತವಾಗಿದೆ. ಏಕೆಂದರೆ ಕನ್ನಡದ ಅನೇಕ ೞಯುಕ್ತಪದಗಳು ಸಾಮಾನ್ಯವಾಗಿ ತುಳುವಿನಲ್ಲಿ ರೇಫಯುಕ್ತಗಳಾಗುತ್ತವೆ. ಉದಾಹರಣೆಗೆ, ಕುೞಿ (ಕನ್ನಡ)=ಗುರಿ (ತುಳು), ಪೞದು (ಕ)= ಪರತ್ತ್ (ತು), ಬಾೞೆ (ಕ)=ಬಾರೆ (ತು), ಪೞ್ತಿ (ಕ)=ಪರ್ತಿ (ತು) ಇತ್ಯಾದಿಗಳನ್ನು ನೋಡಬಹುದು. ಇದರಂತೆ ಕನ್ನಡದ ಆೞ್ ಎಂಬುದು ತುಳುವಿನ ಆರ್ ಎಂದಾಗಿ,

ಇದಕ್ಕೆ ಆಟವೆಂಬುದು ಸೇರಿ ಆರಾಟ ಎಂಬ ತುಳು ಪದವು ನಿಷ್ಪನ್ನವಾಗಿರಬೇಕು. ಮುದ್ದಣನು ಸರೇಫವಾದ ತುಳು ಆರಾಟವನ್ನು ಕನ್ನಡದ ಅಱ (ಶ್ರೀ ಸೇಡಿಯಾಪು ಕೃಷ್ಣಭಟ್ಟರ 'ಕನ್ನಡದ ವರ್ಣಗಳು' ಎಂಬುದರ ಆಧಾರದಿಂದ ಈ ಸಂಜ್ಞೆ) ಯುಕ್ತವಾದುದನ್ನಾಗಿ ಬರೆದಿರಬಹುದು. ಆಱುಾಟವೆಂಬ ಅಱಯುಕ್ತ ಪದಕ್ಕೆ ಚಿಂತೆ ಎಂಬರ್ಥವೇ ಇರಬಹುದಾದರೂ, ಆರಾಟವೆಂಬ ಸರೇಫ ಪದಕ್ಕೆ ಜಲಕೇಳಿ ಎಂಬುದೇ ಅರ್ಥ. ಮೇಲೆ ಉದ್ಧರಿಸಿದ ಭಾಗದಲ್ಲಿ ಈ ಅರ್ಥವೇ ಸಾಧುವಾದುದೆಂದು ಬೇರೆ ಹೇಳಬೇಕಾಗಿಲ್ಲ.

೨. ಕಣ್ಮಲೆ

ತುಳುವಿನಲ್ಲಿ ಬಹು ಸಾಮಾನ್ಯವಾಗಿದ್ದು ಅಲ್ಲಿಂದ ಕನ್ನಡಕ್ಕೆ ತಂದಿರಬಹುದಾದ ಇದಕ್ಕೆ 'ಸೊಕ್ಕಿನಿಂದ ಕಣ್ಣರಳಿಸಿ ಹೆದರಿಸುವಂತೆ ನೋಡು,' ಎಂಬರ್ಥವಿದೆ. ಇದೇ ಯೋಗ್ಯವೆಂದು ಆ ಸಂದರ್ಭವನ್ನು ನೋಡಿದರೆ ಗೊತ್ತಾಗುತ್ತದೆ: "ಪಚ್ಚನೆ ಬೆಳೆದ ಪಸಲೆಯ ಪಸುರ್ವುಲ್ಲಂ ಮೇದು ಕೊರ್ಬಿ ಕೆಲೆದು **ಕಣ್ಮಲೆದು** ಮುಂಗಾಲಿಂ ನೆಲಸಂ ಬೆರಂಟುತುರ್ಚಿ . . . ಜವಹುರದ ಜಕ್ಕಂದೊಬಲಿಯಂ ಗೆಲೆವರ್ಪ ಕಾಪ್ಟೋಣವಳಗದಿಂದೆಯುಂ . . ." (ಪು. ೩).

ದಿವಂಗತ ಎಂ. ಎ. ರಾಮಾನುಜ ಅಯ್ಯಂಗಾರರು ಪ್ರಕಟಿಸಿದ ರಾಮಾಶ್ವಮೇಧದ ಮೂರನೆಯ ಮುದ್ರಣದಲ್ಲಿ ಕಣ್ಮಲೆದು ಎಂಬುದಕ್ಕೆ ಬದಲಾಗಿ ತಣ್ಮಲೆದು ಎಂದಿದೆ. ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ ಪಂಪ ಭಾರತದ ಕ್ಲಿಷ್ಟಪದಗಳ ನಿಘಂಟುವಿನಲ್ಲಿ ತಣ್ಮಲೆ ಎಂಬುದಕ್ಕೆ ವ್ಯಾಪಿಸು ಎಂಬರ್ಥವಿದೆ. ಈ ಪದವಾಗಲಿ ಅರ್ಥವಾಗಲಿ ರಾಮಾಶ್ವಮೇಧದ ಈ ಸಂದರ್ಭದಲ್ಲಿ ಸಾಧುವಾದುದೆಂದಾಗಲಿ ಸ್ವಾರಸ್ಯಯುಕ್ತವಾದುದೆಂದಾಗಲಿ ವಾದಿಸಲಾದೀತೆ?

ತುಳುವಿನಲ್ಲಿ 'ಮಲೆ' ಎಂಬುದಕ್ಕೂ 'ಕಣ್ಮಲೆ' ಎಂಬುದಕ್ಕೂ ಒಂದೇ ಅರ್ಥವಿದೆ. ಕನ್ನಡದಲ್ಲಿ 'ಮಲೆ' ಎಂಬುದಕ್ಕೆ ವಿರೋಧಿಸು ಎಂಬರ್ಥವೂ ಇರುವುದರಿಂದ ಕಣ್ಮಲೆ ಎಂಬುದಕ್ಕೆ ಕಣ್ಣಿನಿಂದ ವಿರೋಧಿಸು, ಎಂದರೆ ದೃಷ್ಟಿಯುದ್ಧವನ್ನು ಮಾಡು ಎಂಬ ತುಳುವಿನಲ್ಲಿ ಬಳಕೆಯಲ್ಲಿರುವ ಅರ್ಥವೇ ಪ್ರಶಸ್ತ.

ಇದೇ ಸಂದರ್ಭದಲ್ಲಿ ಬರುವ '**ಕೆಲೆ**' ಎಂಬುದಕ್ಕೆ ತುಳುವಿನಲ್ಲಿ ಕೋಳಿ ಮುಂತಾದ ಹಕ್ಕಿಗಳ ಕೂಗು ಎಂಬ ಅರ್ಥವು ಸಾಮಾನ್ಯವಾಗಿದ್ದರೂ, ಇದನ್ನು ಎತ್ತು ಕೋಣಗಳ ಸೊಕ್ಕಿನ ಕೂಗಿಗೆ ಬಳಸುತ್ತಾರೆ. ರಾಮಾಶ್ವಮೇಧದ ಹದಿನಾರನೆಯ ಆಶ್ವಾಸದಲ್ಲಿ ಶತ್ರುಘ್ನನು ಲವನೊಡನೆ, "ಮೊಟ್ಟೆಯೊಳೆ **ಕೆಲೆ**ವೊಂದದಟು

ನಿನಗೆತ್ತಣಿನಾಯ್ತು ?" (ಪು. ೧೫೪) ಎಂದು ಪ್ರಶ್ನಿಸುವಲ್ಲಿ ಇದರ ಪ್ರಯೋಗವಿದೆ. ಇಲ್ಲಿಯೂ 'ಸೊಕ್ಕಿನಿಂದ ಕೂಗು' ಎಂಬುದೇ ಅರ್ಥ. ತುಳುವಿನಲ್ಲಿ 'ಕೆತ್ತಿಡ್ ಕೆಲೆಪ್ಪಂಡು' (ಹೊಟ್ಟೆಯೊಳೆ ಕೆಲೆವುದು) ಎಂಬ ನಾಣ್ನುಡಿಯು ಎಳವೆಯಲ್ಲೇ ಸೊಕ್ಕೇರಿದೆ ಎಂಬರ್ಥದಲ್ಲಿ ಬಳಕೆಯಲ್ಲಿದೆ.

೩. ಬಕ್ಕೆವಲಸು

ರಾಮಾಶ್ವಮೇಧದಲ್ಲಿ ಈ ಪದವು ಕೆಲವು ಕಡೆ ಬರುತ್ತದೆ: (ಅ) ಕಿತ್ತೀಳೆ ಪೇರೀಳೆ, ದಾಳಿಂಬಂ, **ಬಕ್ಕೆವಲಸು** ಪನೆಮರಂಗಳ್ ಎಡೆಯೆಡೆಯೊಳ್ ಮನೋಹರ ಮಾಗಿರ್ಕುಂ (ಪು. ೮). (ಆ) .... ಬಸಂತಂ ಪೊಲ್ದು ಸಮಕಟ್ಟಿದ ಮಲಂಗೆಂಬಂ ತಿರಡಿವಿಡಿದು ಮುಡಿವರೆಗಂ ಬಲ್ವಣ್ಗಳಿಂ ತುಱುಗಿ ತೋರ್ಪ **ಬಕ್ಕೆವಲಸಿಂ** .... (ಪು. ೫೩). (ಇ) ಮತ್ತಂ ಗೋಣಿಗೆ ಪಣ್ಣಂ, ಮಾಮರಕ್ಕೆ ಪೂವಂ, **ಬಕ್ಕೆವಲಸಿಂಗೆ** ಕಳಿಕೆಯಂ, ತೆಂಗುಕೌಂಗುಗಳ್ಗೆ ನಿಡುಗೊನೆಯಂ ಪತ್ತಿಸಿ ತೆತ್ತಿಸಿ ಬೀಸುವ ಪಲ ಗಾಳಿ .... (ಪು. ೧೧೪).

ಈ ಪದಕ್ಕೆ ಕಿಟ್ಟೆಲ್ಲರ ಕೋಶದ ಆಧಾರ ಪ್ರಕಾರ 'ಸಿಹಿಯಾದ ಹಲಸು' ಎಂದು ಒಂದು ಕಡೆಯೂ, 'ಉತ್ತಮವಾದ ಹಲಸು' ಎಂದು ಇನ್ನೊಂದು ಕಡೆಯೂ ಕಾವ್ಯಾಲಯ ಪ್ರತಿಯ ಅರ್ಥಕೋಶದಲ್ಲಿ ಅರ್ಥಕೊಡಲಾಗಿದೆ. ನಮ್ಮಿತ್ತಕಡೆ ಇದಕ್ಕೆ 'ಗಟ್ಟಿಯಾದ ಸೊ (ತೊ)ಳೆಗಳುಳ್ಳ ಹಲಸು' ಎಂದೇ ಅರ್ಥ. ಬಲು ಮಿದು ವಾದ ಸೊ (ತೊ)ಳೆಗಳುಳ್ಳ ಇನ್ನೊಂದು ಬಗೆಯ ಹಲಸನ್ನು ದಕ್ಷಿಣ ಕನ್ನಡದ ಕೆಲವು ಭಾಗಗಳಲ್ಲಿ,—ಮುಖ್ಯವಾಗಿ ತುಳು ನಾಡಿನಲ್ಲಿ,—'ತುಳುವ' ಎನ್ನುವರು. ಉಳಿದ ಭಾಗಗಳಲ್ಲಿ 'ಇಂಬ' ಎನ್ನುತ್ತಾರೆ. ತುಳುವರಲ್ಲಿ ಇವೆರಡು ಜಾತಿಯವುಗಳನ್ನು ಅನುಕ್ರಮವಾಗಿ ಬರಿಕ್ಕೆ, ತುಳುವೆ ಎನ್ನುತ್ತಾರೆ. ಉತ್ತರ ಕನ್ನಡದಲ್ಲಿ ಇವುಗಳನ್ನು ಬಕ್ಕೆ (ಉಚ್ಚಾರ ಭೇದದಿಂದ ಬೊಕ್ಕೆ ಎಂದೂ) ಇಂಬ ಎಂದೂ ಹೇಳುವುದಲ್ಲದೆ, ಇಂಬವನ್ನು ಬಕ್ಕೆ (ಬೊಕ್ಕೆ)ಯೊಂದಿಗೆ ಪ್ರಾಸಬದ್ಧವಾಗಿ ಚಕ್ಕೆ (ಚೆಕ್ಕೆ) ಎಂದೂ ಹೇಳುವುದಿದೆ. ಮಲೆಯಾಳದಲ್ಲಿ ಹಲಸಿಗೆ ಚಕ್ಕೆ (ಚೆಕ್ಕೆ) ಎಂದಿರುವುದನ್ನವಲಂಬಿಸಿ ತುಳುನಾಡಿನಲ್ಲಿ ಅನನಾಸನ್ನು 'ಪರಂಗಿ ಚಕ್ಕೆ' ಎನ್ನುವುದೂ ಉಂಟು.

ಮೇಲೆ ಉದ್ಧರಿಸಿದ (ಅ) ಭಾಗದಲ್ಲಿ ಬರುವ '**ಪನೆಮರ**' ಎಂಬುದು ತುಳು ನಾಡಿನಲ್ಲಿ 'ತಾಳಿಮರ'ವಾಗಿದೆ. ತುಳುವಿನಲ್ಲಿ ಇದನ್ನು 'ತಾರದಮರ'ವೆಂದೂ 'ತಾರಿ'ಯೆಂದೂ, ತೆಂಗನ್ನು 'ತಾರೆದ ಮರ' 'ತಾರೆ' ಎಂದೂ ಹೇಳುವರು: ತುಳು ನಾಡಿನಲ್ಲಿ 'ಪನೆಮರ'ವೆಂಬುದು ತಾಳಿಮರದ ಆಕಾರದ ಬಹಳ ವಿಸ್ತಾರವಾದ ಎಲೆ

(ಗರಿ) ಗಳುಳ್ಳ ಇನ್ನೊಂದು ಜಾತಿಯ ಮರ. ಇದರ ಗರಿಯನ್ನು ಕೊಡೆ ಮಾಡುವು ದಕ್ಕೂ, 'ಪನೊಳಿ' (ಇದೊಂದು ತುಳು ಪದ. ಇದನ್ನು ಮರಕ್ಕೂ, 'ಪನೊಳಿದ ಮರ' ಎಂಬಂತೆ ಬಳಸುತ್ತಾರೆ. ಪನೊಳಿಯ ಆಕಾರವು ಕಂಬಳಿಯನ್ನು ಮಡಚಿ, ತಲೆಯಿಂದ ಕಣಕಾಲವರೆಗೆ ಇಳಿಯ ಬಿಟ್ಟು, ಮಳೆಯನ್ನು ನಿವಾರಿಸಲಿಕ್ಕಾಗಿ ಧರಿಸಿಕೊಳ್ಳುವ ರೂಪದಲ್ಲಿರುತ್ತದೆ) ಮಾಡುವುದಕ್ಕೂ ಉಪಯೋಗಿಸುವರು. ಇದೇ ಮರವನ್ನು ಉತ್ತರ ಭಾಗದಲ್ಲಿ ತಾಳಿಮರವೆನ್ನುತ್ತಾರೆ. ಸಂಸ್ಕೃತದ ಕಾಲವೃಕ್ಷ ಮತ್ತು ಕಾಲ ಫಲಗಳನ್ನೆಣಿಸಿಕೊಂಡರೆ ಈ ರೂಢಿ ಸಮಂಜಸವೆನ್ನುವಂತಿಲ್ಲವಾದರೂ ಮುದ್ದಣನು ಪನೆಮರವೆಂದು ಬರೆದುದು ಕುಂದಾಪುರದತ್ತಕಡೆಯ ಬಳಕೆಯ ಹನೆ ಮರವನ್ನೇ ಹೊರತು ತುಳುನಾಡಿನ ಪ (ಹ) ನೆ ಮರವನ್ನಲ್ಲ. ಹನೆಮರವೆಂದು ಕುಂದಾಪುರದ ಕಡೆಯೂ ತಾಳಿಮರವೆಂದು ತುಳುನಾಡಿನಲ್ಲಿಯೂ ಹೇಳುವ ಈ ಮರ ದಲ್ಲಿ ಆಗುವ ಎಳೆಯ ಫಲವನ್ನು ಅನುಕ್ರಮವಾಗಿ ಪ (ಹ) ನೆ ಬೊಂಡವೆಂದೂ ತಾಳಿ ಬೊಂಡವೆಂದೂ ಕರೆಯುವರು. ಅಲ್ಲದೆ ಈ ಫಲವು ಹಣ್ಣಾದಾಗ ಇದನ್ನು ತುಳುನಾಡಿ ನಲ್ಲಿ ತಾಳಿಹಣ್ಣು ಎನ್ನುತ್ತಾರೆ. ಇನ್ನೊಂದು ಜಾತಿಯ ಮರದಲ್ಲಿ ಇಂತಹ ಫಲಗ ಳಿಲ್ಲ. ಈ ಸಂದರ್ಭದಲ್ಲಿ ಸಂಸ್ಕೃತದ 'ಕಾಕ ತಾಲೀಯ ನ್ಯಾಯ' ದ ತಾಲೀಯದ ವಿಷಯ ಗಮನದಲ್ಲಿರಿಸಬೇಕು.

೪. ಕಪ್ಪುರವಾಡೆ

". . . . ನೆಟ್ಟನೆ ಬೀಸುವ ಬಿಱುಗಾಳಿಯ ಪೊಯ್ಲಿ(ಂ) ಗರೆಮುಱಿದು ಬಾಡುವ **ಕಪ್ಪುರವಾಡೆ** ಯಂತೆ . . ." (ಪು. ೩೫) ಎಂಬಲ್ಲಿ ಬರುವ ಕಪ್ಪುರವಾಡೆ ಯೆಂಬುದಕ್ಕೆ ಕಿಟ್ಟೆಲ್ಲರ ಕೋಶದ (ಅದರಲ್ಲಿ ಕರ್ಪೂರ ವಾಡೆ ಎಂದಿದೆ) ಪ್ರಕಾರ 'ಒಂದು ಜಾತಿಯ ಕಾಡುಬಾಳೆ' ಎಂದರ್ಥ. ಕುಂದಾಪುರದತ್ತ ಕಡೆ. 'ಕಪ್ರ (ಕಪ್ಪುರ) ಬಾಳೆ' ಎಂದೂ ಮಂಗಳೂರ ಕಡೆ 'ಗಾಳಿಬಾಳೆ' ಎಂದೂ ಹೆಸರುಳ್ಳ ಒಂದು ಜಾತಿಯ ಬಾಳೆಯಿದೆ. ಈ ಕಪ್ರಬಾಳೆಯನ್ನು ಕರ್ಬಾಳೆಯೆಂದೂ ಅಲ್ಲಿನವರು ಕರೆಯುತ್ತಾರೆ. ಮುದ್ದಣನು ಕುಂದಾಪುರದಲ್ಲಿಯೂ ಅಧ್ಯಾಪಕನಾಗಿದ್ದುದರಿಂದ ಅಲ್ಲಿನ ಭಾಷೆಯನ್ನು ಚೆನ್ನಾಗಿ ತಿಳಿದಿರಬಹುದಾದುದರಿಂದ, ಆ ವಿಶಿಷ್ಟ ಜಾತಿಯ ಬಾಳೆಯನ್ನೇ ಕಪ್ಪುರವಾಡೆಯೆಂದು ಹೇಳಿರಬೇಕು. ಉಳಿದ ಜಾತಿಯ ಬಾಳೆಗಳು ಗಾಳಿಯಿಂದಾಗಿ ಕೆಳಗೆ ಬೀಳುವುದಿದ್ದರೆ, ಬುಡ ಮಗುಚಿ ಬೀಳುತ್ತವೆ. ಈ ಜಾತಿಯವು ಗಳು ಅರೆಮುರಿದು ಬೀಳುವುದೇ ಹೆಚ್ಚು. ಮಾತ್ರವಲ್ಲ, ಇವು ಉದ್ದಕ್ಕೆ ಬೆಳೆದರೂ, ಗಾತ್ರದಲ್ಲಿ ಕೆಲವು ಜಾತಿಯವುಗಳಿಗಿಂತ ಸಪುರವಾಗಿದ್ದು, ಗಾಳಿ ಬೀಸಿದಾಗ ಮುರಿ

ಯುವ ಪ್ರಕೃತಿಯವುಗಳಾದುದರಿಂದ ಇವಕ್ಕೆ, 'ಗಾಳಿಬಾಳೆ'ಯೆಂಬ ಹೆಸರು ರೂಢವಾಗಿರಬೇಕು.

ಇನ್ನೊಂದು ಜಾತಿಯ ಬಾಳೆಗೂ ಕರ್ಪೂರ ಬಾಳೆಯೆಂಬ ಹೆಸರಿದ್ದರೂ, ಇದೂ ಬುಡಸಹಿತ ಕಿತ್ತುಹೋಗುತ್ತದೆ. (ಇದರ ಹಣ್ಣು ವಿಶಿಷ್ಟವಾದ ಪರಿಮಳದಿಂದ ಕೂಡಿರುತ್ತದೆ.) ಈ ಕಾರಣದಿಂದ ಮುದ್ದಣನು ಕಪ್ಪುರವಾಱೆಯೆಂದುದು ನಮ್ಮ ಕಡೆ 'ಗಾಳಿಬಾಳೆ'ಯೆನ್ನುವುದನ್ನೇ ಎಂದು ತೋರುತ್ತದೆ.

೫. ಅಣಿಗಟ್ಟು

ಕಾವ್ಯಾಲಯ ಪ್ರತಿಯ ಅರ್ಥಕೋಶದಲ್ಲಿ ಇದಕ್ಕೆ ಅರ್ಥವನ್ನು ಕೊಟ್ಟಿಲ್ಲ. ಪ್ರಾಯಶಃ 'ಅಣಿ' ಎಂಬುದಕ್ಕೆ ಸಿದ್ಧತೆ, ಸೌಂದರ್ಯ ಮುಂತಾದ ಅರ್ಥಗಳು ಕಿಟ್ಟೆಲ್ಲರ ಕೋಶದಲ್ಲಿರುವುದರಿಂದ ಇದಕ್ಕೆ ಬೇರೆ ಅರ್ಥವನ್ನು ಬರೆಯುವ ಆವಶ್ಯಕತೆ ಕಾಣಲಿಲ್ಲವೆಂದು ತೋರುತ್ತದೆ. ಆದರಲ್ಲಿ ಅಣಿಕಟ್ಟು ಎಂಬುದಕ್ಕೆ ಕಿಟ್ಟೆಲ್ಲರ ಕೋಶದಲ್ಲಿ 'To join a certain number of threads etc.,' ಎಂಬರ್ಥವಿದೆ. ಪ್ರಕೃತ ಸಂದರ್ಭದಲ್ಲಿ ಇದು ಒಪ್ಪುವುದೇ ಎನ್ನುವುದನ್ನು ನೋಡಬೇಕು: "ಒಂದೆಡೆಯೊಳ್ ಬೈಗಿನ ಕಿಱುಮುಗಿಲೊಡ್ಡಂ ಕಂಡುಲ್ಲಸದಿಂ ಪೊಂಗಿ ಇಡಿಕಿಱಿದ ಪೀಲಿಗಳಂ ಬಿದಿರ್ಚಿಯು **ಮಣಿಗಟ್ಟೆ** ಕೇಗಿ ತನ್ನೊಂದಾಡಂಬರದಿಂ ಮಯೂರಂ ತಾಂಡವಕ್ಕಾರಂಭಿಸಲೊಡಂ . . . " (ಪು. ೪೨)

ಇಲ್ಲಿ ಬರುವ ಅಣಿಗಟ್ಟು ಎಂಬುದಕ್ಕೆ ಕಿಟ್ಟೆಲ್ಲರ ಕೋಶದಲ್ಲಿರುವ ಅರ್ಥವು ಸಮಂಜಸವೆನಿಸದು. ತುಳು ನಾಡಿನವರು ಈ ಪದಕ್ಕೆ ಸುಲಭವಾಗಿ ಅರ್ಥ ಗ್ರಹಿಸಬಲ್ಲರು. ಏಕೆಂದರೆ ಇಲ್ಲಿ ಬಳಕೆಯಲ್ಲಿ ಭೂತದ 'ಕೋಲ' ಅಥವಾ 'ನೇಮ'ವೆಂಬುದು ನೆರವೇರುವ ಸಂದರ್ಭದಲ್ಲಿ ಭೂತದ ಪಾತ್ರಿ [ಪೊ (ಪ) ಂಬದ ಅಥವಾ ನಲಿಕೆಯವ] ತನ್ನ ಬೆನ್ನಿಗೆ ಅಣಿಕಟ್ಟುತ್ತಾನೆ. ಈ 'ಅಣಿ'ಯನ್ನು ಅಡಕೆ ಮರದ ಹಾಳೆಗಳನ್ನು ಒಂದಕ್ಕೊಂದು ಹೆಣೆದು ಕಟ್ಟಿ, ವಿಶಿಷ್ಟ ಆಕಾರಕ್ಕೆ (ಪ್ರಭಾವಳಿಯಂತೆ) ತಂದು, ಮೇಲೆ ಬಣ್ಣಬಣ್ಣದ ಚಿತ್ರದ ಕೆಲಸವನ್ನು ಮಾಡಿ ಸೊಗಸುಗೊಳಿಸುತ್ತಾರೆ. ಕೆಲವು ವೇಳೆ ತೆಂಗಿನ ಮರದ ಎಳೆಯ ಗರಿಗಳನ್ನೇ ವಿಶಿಷ್ಟ ಕ್ರಮದಲ್ಲಿ ಸೀಳಿ, ರೂಪುಗೊಳಿಸಿ 'ಅಣಿ'ಯನ್ನು ತಯಾರಿಸುವರು. ಇದನ್ನು ಬೆಂಬದಿಗೆ ಕಟ್ಟಿಕೊಳ್ಳುವುದು ಕ್ರಮ. ಹೀಗೆಯೇ ನವಿಲು ತನ್ನ ಹೀಲಿಗಳನ್ನು ಬಿಚ್ಚಿಕೊಂಡಾಗ ಅಣಿಗಟ್ಟಿದಂತೆ ಕಾಣುವುದರಿಂದ ಅಣಿ ಎಂಬುದಕ್ಕೆ ಸಿದ್ಧತೆ, ಸೌಂದರ್ಯ ಎಂಬರ್ಥಗಳನ್ನಿಟ್ಟುಕೊಂಡು, ಅಣಿಗಟ್ಟು ಎಂಬುದಕ್ಕೆ ಅಲಂಕರಿಸಿಕೊಳ್ಳು ಎಂದು ಮುಂತಾಗಿ ಹೇಳಿದರೆ ಅರ್ಥ ಸ್ವಾರಸ್ಯವು ಕಾಣಲಾರದು.

೬. ಮೈಗಣ್ಣ ಪೆಣ್

ಇದು ಎಂಟನೆಯ ಆಶ್ವಾಸಾರಂಭದಲ್ಲಿ (ಪು. ೫೦೦) ಮುದ್ದಣನು ತನ್ನ ಪತ್ನಿಯನ್ನು ಸಂಬೋಧಿಸುವಲ್ಲಿ ಬರುವುದು:—"... ಓ ಎನ್ನ ಎಚ್ಚ **ಮೈಗಣ್ಣ ಪೆಣ್ಣೆ!** ..." ಮೈಗಣ್ಣ ಎಂಬ ಪದವು ಬೇರೆ ಕೆಲವು ಸಂದರ್ಭಗಳಲ್ಲಿ ಬರುತ್ತದೆ: (ಅ) " **ಮೆಯ್ಗಣ್ಣನ** ಕುದುರೆಯೊಂದಂ ಪೋಲ್ವುದೈಸೆ ... (ಪು. ೧೫) (ಆ). . . ಪುರುಡಿಂ **ಮೆಯ್ಗಣ್ಣಂ** ಕೀಟ್ಬಗೆಯಿಂ ತಪೋವಿಘ್ನಮಂ ನೆಗೞ್ಚಲೆಂದು ತಱಿಸಂದು ... (ಪು. ೫೫) (ಇ) . . . ದೇವೇಂದ್ರಂಗಿದು, ಸುರಪಂಗಿಂತಿದು, **ಮೆಯ್ಗಣ್ಣಂ**ಗಿದು ಎಂದು ಹೋಮಿಸಿದಂ (ಪು. ೭೦)." ಇಲ್ಲೆಲ್ಲ **ಮೆಯ್ಗಣ್ಣ** ಎಂಬ ರೂಪವೇ ಅಚ್ಚಾಗಿದ್ದು ಎಂಟನೆಯ ಆಶ್ವಾಸದ ಆರಂಭ ಭಾಗದ ಉದ್ಧರಣದಲ್ಲಿ **ಮೈಗಣ್ಣ** ಎಂಬ ರೂಪವಿದೆ. ಇದರಿಂದಲೇ ಎರಡು ರೂಪದ ಪದಗಳಿಗೆ ಭಿನ್ನಾರ್ಥಗಳಿವೆ ಎಂದು ಗ್ರಹಿಸಬಹುದು. ರಾಮಾನುಜ ಅಯ್ಯಂಗಾರರ ಮೂರನೆಯ ಮುದ್ರಣದ ಪ್ರತಿಯಲ್ಲಿ ಎಲ್ಲ ಸಂದರ್ಭಗಳಲ್ಲಿಯೂ ಮೆಯ್ಗಣ್ಣ ಎಂಬ ರೂಪವೇ ಇದೆ. ಕಾವ್ಯಾಲಯ ಪ್ರತಿಯ ಅರ್ಥಕೋಶದಲ್ಲಿ ಮೆಯ್ಗಣ್ಣ ಎಂಬುದಕ್ಕೆ ಇಂದ್ರ ಎಂಬರ್ಥವನ್ನು ಕೊಟ್ಟುದು ಯೋಗ್ಯವೇ ಆಗಿದೆಯಾದರೂ ಮೈಗಣ್ಣ ಎಂಬುದಕ್ಕೆ ಅರ್ಥವನ್ನು ಕೊಟ್ಟಿಲ್ಲ. ಇದಕ್ಕೆ ಮೆಯ್ಗಣ್ಣ ಮತ್ತು ಮೈಗಣ್ಣ ಎಂಬೆರಡೂ ಒಂದೇ ಪದವೆಂಬ ಭ್ರಮೆಯೇ ಕಾರಣವಾಗಿರಬೇಕು. ಮುಂದೆ ೧೦೪ ನೆಯ ಪುಟದಲ್ಲಿ "... ಮನುವಿನ ಮಾರ್ಗದೆ ನಡೆಯುತೆ **ಮೈಗಣ್ಣ**ಸೋಲಗದ ಸೊಂಪಿಂಗಿರ್ಮಡಿ ಮಿಱುಿದ ಪೆಂಪಿಂ ಮೆಱೆದಂ" ಎಂಬಲ್ಲಿ ರೂಪ ವ್ಯತ್ಯಾಸವು ತೋರಿಬರುವುದು ಎಂಬುದರಿಂದ ಈ ವಾದಕ್ಕೆ ಪುಷ್ಟಿ ದೊರೆಯುತ್ತದೆ. ಈ ಗ್ರಹಿಕೆಯಲ್ಲೇ ಮುಂಬರಿದರೆ ಎಚ್ಚ ಮೈಗಣ್ಣ ಪೆಣ್ ಎಂಬುದಕ್ಕೆ ಬಾಣವನ್ನೆಸೆದ ದೇವೇಂದ್ರನ ಹೆಣ್ಣು ಎಂದು ಅರ್ಥ ಹೇಳಬೇಕಾಗುತ್ತದೆ. ದೇವೇಂದ್ರನ ಸ್ತ್ರೀಯೆಂದರೆ ಶಚಿಯಾಗಲಿ ಅಪ್ಸರೆಯರಾಗಲಿ ಆಗಬೇಕು. ಆದರೆ ಮುದ್ದಣನು ತನ್ನ ಪತ್ನಿಯನ್ನು ಶಚಿಯೆಂದಿರಬಹುದೆ? ಸಂದೇಹ. ಅಪ್ಸರೆಯೆಂದು ಹೇಳಿರಬಹುದು ಎಂದು ವಾದಿಸಬಹುದಾದರೂ ಯಾವ ಅಪ್ಸರೆಯಾದರೂ ಬಾಣವನ್ನು ಪ್ರಯೋಗಿಸಿದ ಅಥವಾ ಪ್ರಯೋಗಿಸುವ ವಿಷಯ ಎಲ್ಲಿದೆ? ಆಲಂಕಾರಿಕವಾಗಿ ಅಪ್ಸರೆಯ ಸೌಂದರ್ಯವೇ ಬಾಣವಾಗಿ ತನ್ನನ್ನು ಇರಿಯಿತೆಂದು ಹೇಳಿರಲಾರನೇಕೆ? ಎಂಬ ತರ್ಕವನ್ನು ಹೂಡಿದರೆ ಅರ್ಥಸ್ವಾರಸ್ಯವೇನಾದರೂ ಇದೆಯೇ? ಆದುದರಿಂದ ಈ ವಾಕ್ಯಕ್ಕೆ ಬೇರೆ ಅರ್ಥವಿರಬೇಕೆಂದು ಊಹಿಸಬೇಕಾಗುತ್ತದೆ.

ಮೈಗಣ್ಣ ಎಂಬುದು ಮಯ್ಗಣ್ಣ ಎಂಬ ರೂಪದಲ್ಲಿ ಇದ್ದರೆ ತುಳು ನಾಡಿನವರಿಗೆ ಸುಲಭವಾದ ಅರ್ಥ ಹೊಳೆಯುತ್ತದೆ. ಮಯ್ ಮತ್ತು ಮೆಯ್ ಎಂಬ ವಿಭಿನ್ನಪದ

ಗಳಿವೆಯೆಂದೂ, ಆಯಾ ಪದಕ್ಕೆ ಅರ್ಥ ವ್ಯತ್ಯಾಸವಿದೆಯೆಂದೂ ಶ್ರೀ ಸೇಡಿಯಾಪು ಕೃಷ್ಣಭಟ್ಟರ 'ಕನ್ನಡದ ವರ್ಣಗಳು' ಎಂಬುದರಿಂದ ತಿಳಿದುಬರುತ್ತದೆ. ಇದರ ಆಧಾರ ದಿಂದಲೇ ಮುಂಬರಿದರೆ ಮಯ್ಗಣ್ ಎಂದರೆ ಮಸಿ (ಕಾಡಿಗೆ) ಯುಳ್ಳ ಕಣ್ಣು ಎಂಬರ್ಥ ವಾಗುವುದು. ಆಗ 'ಎಚ್ಚಮಯ್ಗಣ್ಣ ಪೆಣ್' ಎಂಬುದಕ್ಕೆ 'ಕಣ್ಣಿಗೆ ಕಾಡಿಗೆ ಯನ್ನು ಹಚ್ಚಿಕೊಂಡ ಸ್ತ್ರೀ' ಎಂಬ ಅರ್ಥವಾಗುತ್ತದೆ.

ಇಲ್ಲಿ ಇನ್ನೊಂದು ಪ್ರಶ್ನೆಯುದ್ಭವಿಸುತ್ತದೆ. ಎಚ್ಚು ಎಂಬ ಧಾತುವಿಗೆ ಅಂಜನ ಕ್ರಿಯೆಯೆಂಬ ಅರ್ಥವಾದರೂ, ಇದರ ಭೂತಕೃದಂತರೂಪವು ಎಚ್ಚಿದ ಎಂದಿರ ಬೇಕಲ್ಲದೆ ಎಚ್ಚ ಎಂದಲ್ಲವಷ್ಟೆ ಎಂಬುದೇ ಆ ಪ್ರಶ್ನೆ. ನಿಜ, ಎಚ್ಚ ಎಂಬುದು ಇಸು ಧಾತುವಿನ ಭೂತಕೃದಂತರೂಪ. ಆದರೆ ಮುದ್ದಣನು ಎಚ್ಚಿದ ಎಂಬುದರ ಬದಲಾಗಿ 'ಎಚ್ಚ' ಎಂಬ ರೂಪವನ್ನು ಪ್ರಮಾದವಶಾತ್ ಪ್ರಯೋಗಿಸಿರಲೂಬಹುದು. ಪ್ರಾಸಪ್ರಿಯನಾದ ಅವನು ಪದಸ್ವರೂಪವನ್ನು ಬದಲಾಯಿಸುವುದು ಅಲ್ಲಲ್ಲಿ ಕಂಡು ಬರುತ್ತದೆ: ". . . ಅಸವೆಯೊಳಸಕಳಿದುಂ, ಸುಯ್ಯೊಳ್ ಸುಗಿದುಂ . . ." ಎಂದು ಎರಡನೆಯ ಪುಟದಲ್ಲಿದ್ದು ಮುಂದೆ ನೂರಮೂರನೆಯ ಪುಟದಲ್ಲಿ ". . . ಅಸುವೆಯೊಳೊತ್ತೊತ್ತಿ ಪನಿನೀರನೆಱೆದೆಱೆದು" ಎಂದೂ ಇದೆ. ಇದೇ ರೀತಿ ತಿಣ್ಪು ಮತ್ತು ತಿಣ್ಣು ಎಂಬ ಎರಡೂ ರೂಪಗಳನ್ನು ಏಕಾರ್ಥದಲ್ಲಿ ಅಲ್ಲಲ್ಲಿ ಬಳಸಿದುದು ಕಾಣುತ್ತದೆ. ಇದರಂತೆ ಪ್ರಾಸಕ್ಕಾಗಿ ಇಲ್ಲಿಯೂ ಮಾಡಿರಬಹುದೆಂದು ಆ ಭಾಗ ವನ್ನು ಪೂರ್ಣವಾಗಿ ಪರಾಂಬರಿಸಿದರೆ ಅವಗತವಾಗಬಹುದು: "ಓ ಎನ್ನ ನಿಚ್ಚ ನಿಡುಗುಂಕುವದ ಬಿಂಕದ ಮೆಚ್ಚುಗಾರ್ತಿ! ಓ ಎನ್ನ ಇಚ್ಚೆಗಾಱನ ಬೆಚ್ಚ ಪಚ್ಚೆಯ ಕಯ್ಗನ್ನಡಿ! ಓ ಎನ್ನ ಎಚ್ಚ ಮಯ್ಗಣ್ಣ ಪೆಣ್ಣೆ! ಓ ಎನ್ನ ಮಿಾಂಮಚ್ಚಲಚ್ಚಣದ ಸಿರಿಗಯ್ಯೆ! . . ."

ಇದೂ ಅಲ್ಲದೆ, "ತಮ್ಮ ಕೆಮ್ಮನಿರ್; ನೀನಱಿಯಯ್" (ಪು. ೨೫) ಎಂಬಲ್ಲಿ ನಿಷೇಧಾರ್ಥದ ಅಯ್ ಪ್ರಯೋಗಿಸಲ್ಪಟ್ಟಿದ್ದರೂ, "ಅಣ್ಣನಾಜ್ಞೆ ಸಂದುದಲಾ! ಪೋಗು ಪೋಗಯ್" (ಪು. ೩೭) ಎಂಬಲ್ಲಿ ಆಜ್ಞಾರ್ಥದ ಅಯ್ ಪ್ರಯೋಗ ವಾಗಿದೆಯೆಂಬುದರಿಂದ ಕ್ರಿಯಾಪದದ ರೂಪವನ್ನು ಮುದ್ದಣನು ಮಾರ್ಪಡಿಸಿ ಬರೆದಿರಬಹುದು ಎಂದು ಊಹಿಸಬೇಕಾಗುತ್ತದೆ.

ಇನ್ನು, ಮುದ್ದಣನು "ಪೊತ್ತ ನಾಲ್ಪೋಳ ಶೋಭೆಯ ಕಂದನೊಂದಿರಂ ಮನಂಬುಗಲೊಡಂ . . ." (ಪು. ೭೭) "ಮತ್ತಮಿಂತಳವನಾಂತ ಕುವರನೊಂದಿರಕ್ಕೆ ಮೆಯ್ವೆರ್ಚೆ ಸುಭುಜಂ . . ." (ಪು. ೯೪) "ನಾಡ ಮಾನಸರ ಪಾಂಗಿನೊಂದು ನಡೆ ವಟಿಯ ರಾಮನಿರವಿಗೇನೆಂಬೆನೋ" (ಪು. ೧೧೯) "ಏಂ? ಎಮ್ಮಂದಿಗರೊಂದಿರ

ವಿಗೆ ನಗುವಾ?" (ಪು. ೧೧೬) ಎಂಬ ಭಾಗಗಳಲ್ಲಿ ಇರ ಮತ್ತು ಇರವು ಎಂಬ ರೂಪಗಳನ್ನು ಪ್ರಯೋಗಿಸಿರುವನೆಂಬುದನ್ನೂ ನೋಡಿಕೊಳ್ಳಬಹುದು.

ಹೀಗೆ "ಎಚ್ಚ ಮಯ್ಗಣ್ಣ ಪೆಣ್" ಎಂಬುದಕ್ಕೆ "ಕಣ್ಣಿಗೆ ಕಾಡಿಗೆಯನ್ನು ಹಚ್ಚಿದ ಸ್ತ್ರೀ" ಎಂಬುದೇ ಮುಖ್ಯಾರ್ಥ. ಆದರೆ "ಕಾಡಿಗೆ ಹಚ್ಚಿದ ಕಣ್ಣಿನಿಂದ ತನ್ನ ಮೇಲೆ ಬಾಣವೆಸೆದ ಸ್ತ್ರೀ" ಎಂಬರ್ಥವನ್ನೂ ಮಾಡಬಹುದೋ ಏನೋ. ಏಕೆಂದರೆ ಕಣ್ಣನ್ನು ತಾವರೆಗೆ ಹೋಲಿಸುವುದರಿಂದ, ಕಾಮನ ಬಾಣಗಳಲ್ಲಿ ಅರವಿಂದವೂ ಒಂದಾದುದರಿಂದ, ಕಾಡಿಗೆ ಹಚ್ಚಿದ ಕಣ್ಣಿನ ಸೌಂದರ್ಯವು ಹೆಚ್ಚಾಗುವುದರಿಂದ, ಎಚ್ಚ ಎಂಬುದು ಇಸು ಧಾತುವಿನ ಭೂತಕೃದಂತರೂಪವೇ ಎಂದು ವಾದಿಸಬಹುದಾದುದರಿಂದ, ಈ ಅರ್ಥವನ್ನೂ ಅಂಗೀಕರಿಸಲೆಡೆ ಕಾಣಬಹುದು. ಆದರೆ ಮೊದಲಿನದರಷ್ಟು ಅರ್ಥಸ್ವಾರಸ್ಯವು ಇದಕ್ಕಿರಲಾರದು.

೭. ಕೊಡನಮುೞಿ

ಕಾವ್ಯಾಲಯ ಪ್ರತಿಯಲ್ಲಿ "ಕೂಟಂ ಪತ್ತೆ ಸಾರ್ದು **ಕೊಡನ ಮುೞಿ**ಯ ಪಡೆಯಂ ತುಡುಕುವೆಗ್ಗನಂತಿರೆ ನರೆಯ ನಿಡುಜಡೆಯಂ ಪಿಡಿದೀಟ್ಟುದ್ಯುತು ಮಿರ್ದಂ" (ಪು. ೬೪) ಎಂದೂ, ರಾಮಾನುಜ ಅಯ್ಯಂಗಾರರ ಮೂರನೆಯ ಮುದ್ರಣದ ಪ್ರತಿಯಲ್ಲಿ "ಕೂಟಂ ಪತ್ತೆ ಸಾರ್ದು ಕೊಡನಮುೞಿಯ ಪಡೆಯಂ ತುಡುಕುವೆಗ್ಗನಂತಿರೆ ಸತಿಯ ನಿಡುಜಡೆಯ ನೀಟ್ಟುದ್ಯುತು ಮಿರ್ದಂ" (ಪು. ೮೫) ಎಂದೂ ಇದೆ. ಮೊದಲಿನದರಲ್ಲಿ ಪಡೆಯಂ, ನರೆಯ ಎಂದಿರುವಲ್ಲಿ, ಎರಡನೆಯದರಲ್ಲಿ ಪಡೆಯಂ ಸತಿಯ, ಎಂದಿದೆ.

ಇಲ್ಲಿ ಬರುವ "ಕೊಡನಮುೞಿ" ಎಂದರೇನು? ಮುದ್ದಣನು ಎಷ್ಟೋ ಸಂಸ್ಕೃತ ಪದಗಳನ್ನು ಕನ್ನಡಕ್ಕೆ ರೂಪಾಂತರಿಸಿದ್ದಾನೆ: ಹಿರಣ್ಯಗರ್ಭ ಎಂಬುದನ್ನು ಪೊಂಬಸಿಱ ಎಂದೂ, ವ್ಯೋಮಕೇಶ ಎಂಬುದನ್ನು ಬಾನ್ನವಿರ, ಬಾಂಗೂದಲ ಎಂದೂ, ಹೀಗೆಯೇ ಇನ್ನೂ ಕೆಲವನ್ನು ಪರಿವರ್ತಿಸಿದ್ದಾನೆ. ಇದರಂತೆ ಅಗಸ್ತ್ಯನನ್ನು ಕೊಡನಕುವರ (ಕುಂಭಸಂಭವದ ಕನ್ನಡರೂಪ) ಎಂದು ಕರೆದಿದ್ದಾನೆ. ಕೊಡನಮುೞಿ ಎಂಬುದೂ ಇಂತಹ ಪದವೆ? ವಿಚಾರಿಸೋಣ.

ಮೊದಲಾಗಿ ಕಾವ್ಯಾಲಯ ಪ್ರತಿಯ ಅರ್ಥಕೋಶದಲ್ಲಿ ಕೊಟ್ಟಿರುವ ಅರ್ಥವನ್ನು ವಿವೇಚಿಸಬೇಕಾಗುತ್ತದೆ. ಅದರಲ್ಲಿ ಇದಕ್ಕೆ 'ಜೇನಿನ ಮರಿ' ಎಂಬರ್ಥವಿದೆ. ಮೇಲಿಂದ ಮೇಲೆ ನೋಡುವಾಗ ಇಲ್ಲಿನ 'ಜೇನು' ಎಂಬುದು ಒಂದು ರಸವಾಗಿರದೆ ಒಂದು ಪ್ರಾಣಿಯೆಂದು ಅರ್ಥವಾಗಬಹುದು. ಆದರೆ ಕೆಲವು ಕಡೆ 'ಜೇನು'

ಎಂಬುದು 'ಜೇನುನೊಣ' ಎಂಬರ್ಥದಲ್ಲಿ ಪ್ರಯೋಗದಲ್ಲಿರುವುದರಿಂದ 'ಜೇನಿನ ಮರಿ' ಎಂದರೆ 'ಜೇನುನೊಣದ ಮರಿ' ಎಂಬ ಅರ್ಥವಾಗಬಹುದು. ಆಗ ಇಡಿಯ ವಾಕ್ಯದ ಅರ್ಥವು 'ಖೂಳ (ಕ್ರೂರ)ನು ಸಮಿಪಕ್ಕೆ ಬಂದು ಜೇನುನೊಣಗಳ ಮರಿಗಳ ಹಿಂಡಿ (ಪಡೆ)ಗೆ ಬಲಾತ್ಕಾರದಿಂದ ಕೈದುಡುಕುವ ಮೂಢನಂತೆ ಸತಿ (ನರೆ)ಯ ನೀಳವಾದ ಜಡೆಯನ್ನು ಹಿಡಿದು ಎಳೆದೊಯ್ಯುತ್ತಿದ್ದನು' ಎಂದಾಗುತ್ತದೆ. ಜೇನು ನೊಣಗಳ ಹಿಂಡಿಗೆ ಕೈದುಡುಕಿದರೆ ಅವು ಕಚ್ಚಿ ಕೊಂಡಿಯೂರಿ ನಮಗೆ ವೇದನೆಯ ನ್ನೊದಗಿಸಬಹುದಾದರೂ ಆ ನೋವು ಮರಣಾಂತಿಕವಾಗುವುದು ಮಾತ್ರ ಅತ್ಯ ಪೂರ್ವ. ಅದರಲ್ಲೂ ಜೇನುನೊಣಗಳೆನ್ನುವ ಬದಲು 'ಜೇನಿನ ಮರಿ'ಯೆಂದರೆ ಮತ್ತೂ ಹೀನತರವಾದೀತು. ಹಾಗಿದ್ದರೆ ಈ ಅರ್ಥವು ಎಲ್ಲಿಂದ ಬಂತು? ಕಿಟ್ಟೆಲ್ಲರ ಕೋಶ ದಲ್ಲಿ ಕೊಡ ಎಂಬುದಕ್ಕೆ ಜೇನು ಎಂಬರ್ಥವೂ ಇದೆ. ಈ ಆಧಾರದಿಂದ ಜೇನುನೊಣ ಮರಿಯೆನ್ನುವುದಕ್ಕೆ ಅವಕಾಶವಿಲ್ಲದೆ ಜೇನಿನ ಮರಿಯೆಂದು ಅರ್ಥ ಬರೆಯಲಾಗಿದೆ!

ಇನ್ನು ಆ ಪದದ ನಿಷ್ಕೃಷ್ಟಾರ್ಥವನ್ನು ಹುಡುಕೋಣ. ಮಱಿ (ಮರಿ) ಎಂಬುದಕ್ಕೆ ತುಳುವಿನಲ್ಲಿ ಸರ್ಪ, ನಾಗರ ಹಾವು ಎಂದು ಪ್ರಸಿದ್ಧಾರ್ಥ (ತುಳುವಿ ನಲ್ಲಿ ಅಱವಿಲ್ಲ.) ವಿರುವುದರಿಂದ ಕೊಡನ ಮಱಿಯೆಂದರೆ ಕೊಡದೊಳಗಿರುವ ಸರ್ಪ ವೆಂಬ ಅರ್ಥವಾಗಲೂ ಬಹುದು. ಇದೇ ಉದ್ದಿಷ್ಟಾರ್ಥವಾಗಿದ್ದರೆ ಮುದ್ದಣನು ಕೊಡದ ಮಱಿ ಎಂದೇ ಪ್ರಯೋಗಿಸುತ್ತಿದ್ದನೋ ಏನೊ! ಆದರೂ ಮೇಲೆ ಹೇಳಿದ ಅರ್ಥವನ್ನು ಸ್ವೀಕರಿಸುವುದಕ್ಕೆ ಇತ್ತಕಡೆಯಿರುವ ಒಂದು ವ್ಯವಹಾರವು ನೆರವಾಗು ತ್ತದೆ. ಯಾವುದಾದರೂ ಪ್ರದೇಶದಲ್ಲಿ ಸರ್ಪವಿದ್ದರೆ, ಅದನ್ನು ಮಂತ್ರ ತಂತ್ರಗಳ ಬಲದಿಂದ ಕೊಡದೊಳಗೆ ಉಪಾಯವಾಗಿ ತುಂಬಿಸಿ ಬಾಯಿಕಟ್ಟಿ, ದೂರಕ್ಕೊಯ್ದು ಆವುದಾದರೂ ಹೊಳೆಯ ಇನ್ನೊಂದು ತೀರದಲ್ಲಿ ಬಿಡುವುದಿದೆ. ಹಾಗೆ ಬಂಧನಗೊಂಡ ಸರ್ಪವು ಸಿಟ್ಟಿನಿಂದಿರುವುದು ಸಹಜ. ಅದಕ್ಕೆ ಕೈ ದುಡುಕಿದರೆ ಅದು ಕಚ್ಚಿ ಕೊಂದೀತೆಂಬುದೂ ಸಹಜವೇ. ಹೀಗಾಗಿ ಕೊಡನ ಮಱಿಯೆಂದರೆ ಕೊಡದೊಳಗಿನ ಸರ್ಪ ಎಂಬರ್ಥವಾಗಬಹುದು. ಇದಕ್ಕೆ ಪೋಷಕವಾಗಿ ರಾಮಾನುಜ ಅಯ್ಯಂಗಾರರ ತೃತೀಯ ಮುದ್ರಣದ ಪ್ರತಿಯಲ್ಲಿ ಪಡೆಯಂ ಎಂಬುದರ ಬದಲು ಪೆಡೆಯಂ ಎಂದಿದೆ. ಕೊಡದೊಳಗಿನ ಹಾವಿನ ಹೆಡೆಗೆ ಕೈಹಾಕಿದ ಹೆಡ್ಡನಂತೆ ಖೂಳನು ಆ ಸತಿಯ ನಿಡು ಜಡೆಯನ್ನು ಹಿಡಿದೆಳೆದನು ಎಂಬರ್ಥವು ಮನೋಹರವಾಗಿ ಕಾಣುತ್ತದೆ. ಮಱಿ ಎಂಬುದಕ್ಕೆ ಸರ್ಪ ಎಂಬ ಅರ್ಥವೇ ಸಾಧುವೆಂಬುದನ್ನು ಉಪಮೇಯವಾದ ನಿಡು ಜಡೆಯೆಂಬ ಪದವು ತೋರಿಸಿಕೊಡುತ್ತದೆ.

ಕಾವ್ಯಾಲಯ ಪ್ರತಿಯಲ್ಲಿ ನರೆಯ ಎಂದೂ ಇನ್ನೊಂದರಲ್ಲಿ ಸತಿಯ ಎಂದೂ

ಇದೆ. ಇವುಗಳಲ್ಲಿ ಸತಿಯ ಎಂಬುದು ಯುಕ್ತವೇ ಹೊರತು ನರೆಯ ಎಂಬುದಲ್ಲ. ಏಕೆಂದರೆ ನರೆಯ ಎಂದಾಗ 'ಹಣ್ಣಾದ ಕೂದಲಿನ' ಎಂದು ಅರ್ಥವಾಗುತ್ತದೆ. ಇದು ಉಚಿತವೆನಿಸದೆಂದೇ ತೋರುತ್ತದೆ.

ಕೊಡನ ಮೞ ಎಂಬುದಕ್ಕೆ ಇನ್ನಷ್ಟು ಉತ್ಕೃಷ್ಟವಾದ ಅರ್ಥವಿದೆ. ಹಿಂದೆ ಹೇಳಿದಂತೆ, ಸಂಸ್ಕೃತದ ಘಟಸರ್ಪದ ಕನ್ನಡ ರೂಪಾಂತರವೇ ಕೊಡನಮೞ ಯೆಂದರೆ ಸೊಗಸಾಗುತ್ತದೆ. ಮುದ್ದಣನು ಕೆಲವು ಸಲ ಸಂಸ್ಕೃತ ಪದಗಳನ್ನು ಕನ್ನಡಕ್ಕೆ ಮಾರ್ಪಡಿಸುವಲ್ಲಿ ಎಂತೆಂತಹ ರೂಪಾಂತರಗಳನ್ನೂ ತಂದುಬಿಡುತ್ತಾನೆ. ಉದಾಹರಣೆಗೆ ಅಗ್ನಿ=ಮರ ಗೂೞ, ಏಕದಂತ=ಒರ್ಪನೆಯ, ಪಂಚಮುಖ= ಐವಾಯ್ಪುಲಿ ಇತ್ಯಾದಿಗಳನ್ನು ನೋಡಬಹುದು. ಆದುದರಿಂದ ಕೊಡನಮೞ ಎಂದರೆ ಘಟಸರ್ಪವೆಂದೂ, ಕೊಡದೊಳಗಿಟ್ಟ ಸರ್ಪವಲ್ಲವೆಂದೂ ಧಾರಾಳವಾಗಿ ಹೇಳಬಹುದು; ಇದರ ಸ್ವಾರಸ್ಯವನ್ನೂ ಗ್ರಹಿಸಬಹುದು.

೮. ಮುಕ್ಕುೞಿಕ್ಕು

(ಅ) "... ಆಗಳಾಗಳೆ ... ಸಂತಸದಿಂ ಬೈಗಿನೊಳ್ ಕೆಲೆದುಂ **ಮುಕ್ಕುೞಿಕ್ಕಿ** ಯುಂ ನೆಗೆದಾಡಿಯುಂ ಚೆದಱ ಪೋಪಾಕಳ ಮಂದೆ ..." (ಪು. ೮೨)
(ಆ) "ಕಣ್ಸೊಳೆಸಿನ ಕರಡಿಯು, **ಮುಕ್ಕುೞಿಕ್ಕುವ** ಕಾಡ್ಕೋಣನ, ಕೋಡಿಡು ವಾನೆಯು ..." (ಪು. ೮೪) ಈಯೆರಡು ಸಂದರ್ಭಗಳಲ್ಲಿ ಬರುವ ಮುಕ್ಕುೞಿಕ್ಕು ಎಂಬುದಕ್ಕೆ ಕಾವ್ಯಾಲಯ ಪ್ರತಿಯ ಅರ್ಥಕೋಶದಲ್ಲಿ "ಮೇಲೆ ಬೀಳು" ಎಂಬರ್ಥ ವನ್ನು ಕಿಟ್ಟೆಲ್ಲರ ಕೋಶದ ಆಧಾರದಿಂದ ಕೊಡಲಾಗಿದೆ. ಈ ಅರ್ಥಕ್ಕಿಂತ ಭಿನ್ನವಾದ ಮತ್ತು ಸ್ವಾರಸ್ಯಯುಕ್ತವಾದ ಅರ್ಥವು ಇದಕ್ಕೆ ನಮ್ಮ ಕಡೆ ರೂಢಿಯಲ್ಲಿದೆ: ಎತ್ತು ಕೋಣಗಳು ಸೊಕ್ಕಿನಿಂದ ಗಂಭೀರವಾಗಿ ಕೆಲೆಯುವುದನ್ನು ತುಳುವಿನಲ್ಲಿ "ಮುಕ್ಕುರಡಕ್ಕ್" ಎಂದೂ ಹವೀಕರ ಮಾತಿನಲ್ಲಿ 'ಮುಕ್ಕುರಿಡುಕ್ಕು' (ತುಳುವಿ ನಿಂದಾಯ್ದುದಿರಬಹುದು) ಎಂದೂ ಹೇಳುತ್ತಾರೆ. ಇಲ್ಲಿಯೂ ಱದ ಬದಲು ರೇಫವೇ ಇದ್ದಿರಬೇಕೆಂದು ಮುಕ್ಕುೞ ಎಂಬುದಕ್ಕಿರುವ ಇನ್ನೊಂದರ್ಥವು ಸೂಚಿಸು ತ್ತದೆ. ಹೀಗೆ ಮುಕ್ಕುರಿಕ್ಕು ಎಂಬುದಕ್ಕೆ ಗುಟರುಹಾಕು, ಸೊಕ್ಕಿನಿಂದ ಕೆಲೆ ಎಂಬರ್ಥವೇ ಯೋಗ್ಯವಾಗಿದೆ.

೯. ಕುಱುಂಬುಲ್

ಇದಕ್ಕೆ ಕಾವ್ಯಾಲಯ ಪ್ರತಿಯ ಅರ್ಥಕೋಶದಲ್ಲಿ 'ಕುರುಚಲು ಹುಲ್ಲು' ಎಂಬ ಅರ್ಥವನ್ನು ಕೊಡಲಾಗಿದೆ. "... ಕೆಯ್ವೊಲನೊಳ್ ಬೆಳೆದ **ಕುಱುಂಬುಲ್ಲಂ** ಕಿೞ್ತು

ಬಿಸುಡುವಂತಿರೆ ಸೀತೆಯಂ ಬಿಡುವೆಂ . . ." (ಪು. ೨೫) ಎಂಬಲ್ಲಿ ಬರುವ ಈ ಪದಕ್ಕೆ ಮೇಲೆ ಕೊಟ್ಟ ಅರ್ಥವು ಒಪ್ಪುವುದೆಂದೇ ತೋರಬಹುದು. ಆದರೆ ಕಳೆಹುಲ್ಲು ಎಂಬ ಅರ್ಥವು ಪ್ರಶಸ್ತ. ಬತ್ತದ ಗದ್ದೆಗಳಲ್ಲಿ ತಾನಾಗಿ ಬೆಳೆಯುವ ಕಳೆಹುಲ್ಲನ್ನು ಈ ಕಡೆ ಕುರುಂಬುಲ್ (ಕುರುಂಬಿಲಿ, ಕುರುಂಬಿಲು ಮುಂತಾಗಿ ಉಚ್ಚಾರ ಭೇದಗಳಿವೆ) ಎಂದು ಕರೆಯುತ್ತಾರೆ. ಕುರುಚಲು ಹುಲ್ಲು ಎಂಬರ್ಥವನ್ನು ಮಾತ್ರ ಕೊಟ್ಟಲ್ಲಿ ಅದು ಕೆಯ್ವೊಲದಲ್ಲಿಯೇ ಬೆಳೆಯಬೇಕೆಂದಿಲ್ಲವೆಂಬ ಗ್ರಹಿಕೆಗೆ ಆಸ್ಪದ ಕೊಡುತ್ತದೆ. ಆದುದರಿಂದ ಕುಱುಂಬುಲ್ ಎಂಬುದಕ್ಕೆ ಗದ್ದೆಗಳಲ್ಲಿ ಬತ್ತದ ಗಿಡಗಳೊಂದಿಗೆ ಬೆಳೆವ ಕಳೆಹುಲ್ಲು ಎಂದೇ ಅರ್ಥ ಹೇಳಬೇಕೆಂದು ಉದ್ಧರಿಸಿದ ಭಾಗದಿಂದಲೂ ವಿದಿತವಾಗುತ್ತದೆ.

ಈ ಪದದ ವ್ಯುತ್ಪತ್ತಿಯ ಕುರಿತು ಒಂದು ಮಾತು: ಇದು ಮೂಲತಃ ಕುರುಚಲು ಹುಲ್ಲು ಎಂಬರ್ಥವನ್ನೇ ಕೊಡುತ್ತಿದ್ದಿರಬೇಕು ಎನ್ನಲು ಅವಕಾಶವಿದೆ. ಹೇಗೆಂದರೆ, ಕಿಱಿದು+ಪುಲ್ ಎಂದು ವಿಗ್ರಹಿಸಿದರೆ, ಕಿಱಿದು ಎಂಬುದಕ್ಕೆ ಕುಱು ಎಂದಾದೇಶವಾಗುವುದು ಎನ್ನುವ ವ್ಯಾಕರಣ ನಿಯಮ ಪ್ರಕಾರ ಕುಱುವುಲ್ ಎಂಬ ರೂಪವು ಸಿದ್ಧಿಸಬಹುದು. ಪೂರ್ವಪದವು ಉಕಾರಾಂತವಾಗಿದ್ದಾಗ ಮಧ್ಯದಲ್ಲಿ ಅನುಸ್ವಾರವು ವಿಕಲ್ಪವಾಗಿ ಬರುವುದೆಂಬ ನಿಯಮದಂತೆ, ಪೂರ್ವಪದವಾದ ಕುಱು ಎಂಬುದಕ್ಕೆ ಅನುಸ್ವಾರವು ಬಂದು ಕುಱುಂ ಎಂದಾಗಬಹುದು. (ಪೂರ್ವಪದದ ಪ್ರಕೃತಿರೂಪದ ಮುಂದೆ ಅನುಸ್ವಾರ ಬರುವುದು ಹೊರತು, ಆದಿಷ್ಟರೂಪದ ಮುಂದೆ ಅಲ್ಲ ಎಂಬ ಸಂದೇಹ ಬರಬಹುದಾದರೂ, ಇದೊಂದು ಅಪವಾದವೆಂದೂ ಅಂಗೀಕರಿಸಬಹುದು) ಮುಂದಣ ಪುಲ್ ಎಂಬುದರ ಪಕಾರಕ್ಕೆ ವಕಾರಾದೇಶವಾಗುವ ಬದಲು ಬಕಾರಾದೇಶವಾಗುವುದೆಂದು ಸ್ವೀಕರಿಸಿಕೊಂಡಲ್ಲಿ ಕುಱುಂಬುಲ್ ಎಂಬ ರೂಪವು ಸಿದ್ಧಿಸುವುದು. ಈ ರೂಪಸಿದ್ಧಿಯು ವ್ಯಾಕರಣ ನಿಯಮವನ್ನು ಸಂಪೂರ್ಣವಾಗಿ ಮೀರುವುದಿಲ್ಲವೆಂದಿದ್ದರೂ, ಹಿಂದಣ ಪ್ರಯೋಗಗಳಲ್ಲಿ ಕುಱುಂ ಎಂಬ ರೂಪವು ತೋರಿಬರುವುದಿಲ್ಲವೆಂದು ವಾದಿಸಬಹುದು. ಆದರೆ ರಾಮಾಶ್ವಮೇಧದಲ್ಲಿ ಒಂದು ಕಡೆ ". . . ಎಂತುಂ ಕುಱು ಪೋದುದೆ ?" (ಪು. ೩೫) ಎಂಬ ರೂಪವನ್ನು ಕಾಣುತ್ತೇವೆ. ಇಲ್ಲಿಯ ಕುಱು ಎಂಬುದಕ್ಕೆ ಕಿಱಿಯತನ, ಹೀನತೆ ಎಂಬರ್ಥವೇ ಹಿತವಾದುದು. ಆದುದರಿಂದ ಕುಱುಂಬುಲ್ ಎಂಬ ರೂಪಸಿದ್ಧಿ ನಿಯಮಾನುಸಾರವಾಗಿದೆಯೆನ್ನಬಹುದು. ಆದರೂ ರೂಢಿಯಲ್ಲಿ (ತುಳುವಿನಲ್ಲಿ) ಕುರುಂಬಿಲ್ ಮುಂತಾದ ರೂಪಗಳಿರುವುದರಿಂದ ಇದು ಕನ್ನಡಕ್ಕೆ ತುಳುವಿನಿಂದ ಬಂದಿರಬಹುದೇ ಎಂಬ ಸಂದೇಹ ತೋರುತ್ತದೆ.

೧೦. ಬಿಂಗಗೆಕ್ಕೆ

ಇದಕ್ಕೆ ಬಿಂಗವನ್ನು ಹಾಕಿಕೊಂಡ ಕೆನ್ನೆಯೆಂದು ಅರ್ಥ ಹೇಳಬೇಕು. ಬಿಂಗವೆನ್ನುವುದು ಅಭ್ರಕವನ್ನು. ಪ್ರಕೃತ ಈ ಪದವು ಬರುವ ಭಾಗಗಳನ್ನು ಉದ್ಧರಿಸೋಣ: "... ಪುಷ್ಕಲಂ ... ಕಿಱಿಯಯ್ಯನ ಬೆಂಬಲಕ್ಕೆಂದು ಪೋಪವಸರದೊಳ್ ಬಿಡುಜಡೆಯ, ಬಿದು ಮೊಗದ, ಬಿರಿದೆಸಳ್ಗಣ್ಣ, ಬಿಲ್ಪುರ್ಬಿನ, **ಬಿಂಗಗೆಕ್ಕೆಯ**, ಬಿಂಬಾಧರದ .... ಬಾಲೆಯೊರ್ವಳ್ ...." (ಪು. ೪೮) (ಆ) ".... ರಂಗುದುಟಿಯ, **ಬಿಂಗಗೆಕ್ಕೆಯ** ಜಾಣೆಯರ್ ...." (ಪು. ೧೨೨). ಕಾವ್ಯಾಲಯ ಪ್ರತಿಯಲ್ಲಿ ಮೊದಲನೆಯ ಉದ್ಧರಣದ ಬಿಂಗ ಎಂಬುದರ ಮುಂದೆ ಆವರಣದೊಳಗೆ ಒಂದು ಪ್ರಶ್ನಾರ್ಥಕ ಚಿಹ್ನೆಯನ್ನು ಹಾಕಿ, ತಮಗೆ ಆ ಪದದ ಅರ್ಥವಾಗಲಿಲ್ಲವೆಂದು ಸೂಚಿಸಿದ್ದಾರೆ; ಮತ್ತಿನದರಲ್ಲಿ ಹಾಗಿಲ್ಲ! ನಮ್ಮ ಕಡೆ ಇದು ಅರ್ಥವಾಗದ ಪದವಾಗಿಲ್ಲ. ಏಕೆಂದರೆ, ಬಯಲಾಟಗಳಲ್ಲಿ ಎಲ್ಲ ವೇಷಗಳೂ—ಮುಖ್ಯವಾಗಿ ಸ್ತ್ರೀವೇಷವು—ಮುಖಕ್ಕೆ ಬಿಂಗದ ಪುಡಿಯನ್ನು ಎರಚಿಕೊಳ್ಳುವ ರೂಢಿಯಿದೆ. ಆದುದರಿಂದ ಬಿಂಗಗೆಕ್ಕೆಯೆನ್ನುವುದಕ್ಕೆ ಬಿಂಗವನ್ನು ಹಾಕಿಕೊಂಡ ಕೆನ್ನೆ ಎಂದೇ ಅರ್ಥ. ಈ ಸಂದರ್ಭದಲ್ಲಿ ಈಗ ಬಳಕೆಯಲ್ಲಿರುವ Talcum powder ಎಂಬುದರಲ್ಲಿ ಬರುವ Talcum ಎಂಬುದು ಅಭ್ರಕದ ಹೆಸರೆಂಬುದನ್ನು ಗಮನಕ್ಕೆ ತಂದುಕೊಳ್ಳಬಹುದು.

೧೧. ಪೊಲಿ

".... ಕರ್ಬಿನ ತೋಂಟದ ಗೊಂಟಿನೊಳ್ ಬಿತ್ತೊಂದರ್ಕೆ ಐವತ್ತಱಿಂ **ಪೊಲಿ** ವರ್ಪ ಕದಿರಬೆಳೆಯ ತಸ್ಕೊಂದು ಪೆರ್ಮೆಯಿಂ ಬಣ್ಣವೆರ್ಚೆ ನಳನಳಿಸಿ ಬೆಳೆದ ಕೆಯ್ವೊಲ ..." (ಪು. ೧೦೧) ಎಂಬಲ್ಲಿ ಈ ಪದವಿದೆ. ಇದಕ್ಕೆ ಕಾವ್ಯಾಲಯ ಪ್ರತಿಯ ಅರ್ಥಕೋಶದಲ್ಲಿ ಅರ್ಥವನ್ನು ಕೊಟ್ಟಿಲ್ಲ. ಕಿಟ್ಟೆಲ್ಲರ ಕೋಶದಲ್ಲಿಯೂ ಇಲ್ಲ. ಇದಕ್ಕೆ ಧಾನ್ಯಸಮೃದ್ಧಿ ಎಂಬರ್ಥವು ಕನ್ನಡ ನಿಘಂಟು [ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ಲಿಮಿಟೆಡ್ (ಶಾರದಾ ಛಾಪಖಾನೆ) ಮಂಗಳೂರು, ಇವರಿಂದ ಪ್ರಕಾಶಿಸಲ್ಪಟ್ಟುದು]ವಿನಲ್ಲಿದೆ. ಇದು ಸರಿಯಾದುದು. ಏಕೆಂದರೆ, ನಮ್ಮಲ್ಲಿ ಮುಖ್ಯವಾಗಿ ತುಳುವರಲ್ಲಿ, 'ಪೊಲಿಕರೆ'ಯುವ, ಮತ್ತು 'ಪೊಲಿಗೆ ಕೊಡು'ವ ಸಂಪ್ರದಾಯುಗಳಿವೆ. ಅವುಗಳ ವಿವರಗಳು ಹೀಗಿವೆ; ಪೈರನ್ನು ಕೊಯ್ದಾದ ಒಂದು ದಿನ, (ಒಂದು ಗದ್ದೆಯನ್ನು ಕೊಯ್ದಾದ ಮೇಲೂ) ಮೊದಲಾಗಿ ನೆಲ್ಲಿನಿಂದ ಬತ್ತವನ್ನು ಪ್ರತ್ಯೇಕಿಸುವ ಮಂಗಲ ಕಾರ್ಯದ ಚಿಹ್ನೆಯಾಗಿ, ಬೆಳಗಾಗುವ ಮೊದಲೇ ಕೆಯ್ಯ

ಸೂಡಿಗಳನ್ನು 'ಪಡಿ'ಗೆ ಬಡಿಯುವಾಗ "ಪೊಲಿ, ಪೊಲಿ, ಎಚ್ಚಾ" ಎಂದು ಉದ್ಘೋಷಿಸುವುದಿದೆ. ಇದನ್ನು 'ಪೊಲಿಕರೆ'ಯವುದೆನ್ನುವರು. ಹಾಗೆಯೇ ಮಳೆಗಾಲದಲ್ಲಿ ರೈತರು ಧಾನ್ಯವನ್ನು, ಅದರ ಧಾನ್ಯರೂಪದ ಬಡ್ಡಿಯನ್ನು ನಿರೀಕ್ಷಿಸಿ, ಸಾಲವಾಗಿ ಕೊಡುತ್ತಾರೆ. ಈ ಬಡ್ಡಿ ಶೇಕಡಾ ಇಪ್ಪತ್ತೈದರಷ್ಟಿರುವುದಿದೆ. ಹೀಗೆ ಸಾಲ ಕೊಡುವುದನ್ನು 'ಪೊಲಿಗೆ ಕೊಡು'ವುದು ಎನ್ನುತ್ತಾರೆ. ಅಲ್ಲದೆ ಬಲಿಪಾಡ್ಯದಂದು (ಇದಕ್ಕೆ ಹಬ್ಬವೆಂದು ಸಾಮಾನ್ಯವಾದ ಹೆಸರು) ಬಲೀಂದ್ರನಿಗೆ ದೀಪ ಹಚ್ಚಿ ಅವಲಕ್ಕಿ, ತೆಂಗಿನಕಾಯಿ, ಹೂ ಬೆರಸಿ ಅರ್ಪಿಸುವಾಗ 'ಈ ರಾಜ್ಯದ ಬಲಿಕೊಂಡು ಹೋಗಿ, ಆ ರಾಜ್ಯದ ಪೊಲಿ ತೆಗೆದುಕೊಂಡು ಬಾ' ಎಂಬರ್ಥದ ಪ್ರಾರ್ಥನೆಯನ್ನು ತುಳುವಿನಲ್ಲಿ ಘೋಷಿಸುವ ಪದ್ಧತಿಯಿದೆ. ಹವೀಕರಲ್ಲಿ, ಮನೆಗೆ ಮೊದಲ ಕದಿರನ್ನು ತಂದು 'ಮನೆ ತುಂಬಿಸು'ವ ಸಂದರ್ಭದಲ್ಲಿ ಹೇಳುವ ಈ ಕೆಳಗಿನ ಹಾಡನ್ನು ಗಮನಕ್ಕೆ ತಂದಲ್ಲಿ ಪೊಲಿ ಎಂಬುದರ ಖಚಿತಾರ್ಥವಾದೀತು.

"ಭಾಗ್ಯಲಕ್ಷ್ಮಿ ಬಪ್ಪಗ, ಬಾಗಿಲಲಿ ಕಾದಿದ್ದೆ |
ಹೂಗು ಅಕ್ಷತೆಯ ಹರಿವಾಣ | ಹಿಡಿದಿದ್ದೆ
ಹೊಲ್ಲಿ ಬಾರೆ ನಮ್ಮ ಮನೆ ತುಂಬಿ || ೧ ||

ಕದಿರಮ್ಮ ಬಪ್ಪಗ | ಎದುರ್ಗೊಂಬಲಾನೆದ್ದೆ |
ಗರತಿಯ ಪುಣ್ಯ ಗಳಿಸಿದ್ದೆ | ಮಾಲಕ್ಷ್ಮಿ
ಹೊಲಿ ಬಾರೆ ನಮ್ಮ ಮನೆ ತುಂಬಿ || ೨ ||

ಹೋಪಾಗ ಹೆಡಗೇಲಿ | ಬಪ್ಪಾಗ ದಂಡಿಗೆಲಿ |
ಮದು ಮಗಳಂತೆ ತಲೆಬಾಗಿ | ಸಿರಿದೇವಿ
ಹೊಲಿ ಬಾರೆ ನಮ್ಮ ಮನೆ ತುಂಬಿ" || ೩ ||

(೧೯೫೭ ನೆಯ ಅಕ್ಟೋಬರ ೬ ರ ಕರ್ಮವೀರ ಪತ್ರಿಕೆಯಲ್ಲಿ ಡಾ|| ಎಂ. ಬಿ. ಮರಕ್ಕಿಣಿಯವರ ಲೇಖನದಲ್ಲಿದ್ದ ಹಾಡು. ಇದರಲ್ಲಿ ಕೆಲವು ಬದಲಾವಣೆಗಳನ್ನು ಸಕಾರಣವಾಗಿ ಮಾಡಲಾಗಿದೆ.)

ಈ ಹಾಡಿನಿಂದ ಪೊಲಿ ಎಂಬುದಕ್ಕೆ ಮೂಲದಲ್ಲಿ ಧಾನ್ಯದ ಗಿಡವೆಂಬ ಅರ್ಥವಿದ್ದು ಮುಂದೆ ಧಾನ್ಯದೇವತೆಯಾಗಿ ಗೌರವ ಪಡೆದು, ಅನಂತರ ಧಾನ್ಯ ಸಮೃದ್ಧಿ ಎಂದು ಮಾರ್ಪಟ್ಟಿರಬಹುದೆಂದು ತೋರುತ್ತದೆ. ಈ ಪೊಲಿ ಶಬ್ದದ ರೂಪಾಂತರಗಳು ಕನ್ನಡದಲ್ಲಿ ಹುಲುಸು ಎಂದೂ, ತುಳುವಿನಲ್ಲಿ ಪೊಲುಸು ಎಂದೂ ತೋರಿಬರುತ್ತವೆ.

೧೨. ಕೊಲೆ

"... ಅಂತುಟೊದವಿದ ದೋಸಕ್ಕೆ ನಿಮ್ಮನೆ ಕೊಂದು **ಕೊಲೆಗೆ** ಕೂಟಿಕ್ಕುವೆಂ ..." (ಪು. ೧೧೩) ಎಂಬಲ್ಲಿ ಬರುವ ಕೊಲೆ ಎಂಬುದು ಕೊಲ್ ಧಾತುವಿನ ಕೃದಂತರೂಪವೆಂಬಂತಿದ್ದರೂ, ಇದಕ್ಕೆ ಈ ಕಡೆ ವಿಶಿಷ್ಟಾರ್ಥವಿದೆ. ಯಾರಾದರೂ ಅಕಾಲಮೃತ್ಯುವಿಗೆ ತುತ್ತಾದರೆ ಇಲ್ಲವೆ ಮರಣೋತ್ತರ ಅಪರಕ್ರಿಯೆಗಳು ವಿಧ್ಯುಕ್ತವಾಗಿ ನೆರವೇರದಿದ್ದರೆ ಅಥವಾ ಈ ಪ್ರಪಂಚದ ಸುಖಾಭಿಲಾಷೆಯು ತೀರುವ ಮೊದಲೇ ಪ್ರಾಣ ಬಿಟ್ಟರೆ ಅವರ ಆತ್ಮವು ಪ್ರಪಂಚದ ಮೇಲೆಯೇ ಸುತ್ತಾಡುವುದಂತೆ. ಇಂತಹ ಪ್ರೇತಕ್ಕೆ 'ಕೊಲೆ' (ತುಳುವಿನಲ್ಲಿ 'ಕುಲೆ') ಎಂದು ನಮ್ಮ ಕಡೆಯ ಹೆಸರು. ಇಂತಹ ಕೊಲೆಗೆ ಪ್ರತಿವರ್ಷವೂ ಆಹಾರ ಪ್ರದಾನಾದಿ ಕಾರ್ಯಗಳನ್ನು ನೆರವೇರಿಸುತ್ತಾರೆ. ಈ ವಿಧಿಗೆ 'ಕೊಲೆಕೂಳು' ಎಂಬ ಹೆಸರಿದೆ.

ಹೀಗೆ ಶ್ರೀರಾಮಶ್ವಮೇಧದಲ್ಲಿ ಎಷ್ಟೋ ಪದಗಳೂ ಪ್ರಯೋಗಗಳೂ ವಿಶಿಷ್ಟತೆಯುಳ್ಳವುಗಳಾಗಿವೆ. ಸಂದರ್ಭವು ದೊರೆತಲ್ಲಿ ಅವುಗಳ ವಿವೇಚನೆಯನ್ನು ಮಾಡುವ ಅಪೇಕ್ಷೆಯಿದೆ. ಅದು ಭೂತವೂ ಅಲ್ಲ; ವರ್ತಮಾನವೂ ಅಲ್ಲ; ಭವಿಷ್ಯತ್ತು.

ತೆಕ್ಕುಂಜಿ ಗೋಪಾಲಕೃಷ್ಣ ಭಟ್ಟ

ನಿರ್ಧಾರ

ಕಂಡಿಲ್ಲವೇ ನೀವು ?
ನಮ್ಮ ಸುತ್ತಲು ಸದಾ ಐದು ಮಂದಿಯ ಪಹರೆ—
ಹೋದಲ್ಲಿ, ಬಂದಲ್ಲಿ, ನಿಂತಲ್ಲಿ, ಕುಳಿತಲ್ಲಿ
ನಮ್ಮ ಮೇಲೇ ಇವರ ಹಸಿದ ಕಣ್ಣು !

ಹುಟ್ಟಿ ಕಣ್‌ಬಿಟ್ಟಂದು ಮೈಗೆ ತೊಟ್ಟಿಲನಿತ್ತು
ತಾಯ ಕೊರಳಲಿ ಕುಳಿತು ಹಾಡಿದವರು.
ನೆಲದ ಹಸುರೊಳು ಮುಗಿಲ ಮಳೆಹನಿಯ ದಾರದಲಿ
ಹೂ ಕಸೂತಿಯ ಹೆಣೆದು ಹಾಸಿದವರು.
ಬೆಳಗಾಗ ಬಾಗಿಲಲಿ ತುಂಬು ಕೆಚ್ಚಲ ಕರೆದು
ತುಟಿಗೆ ಕೊಟ್ಟವರು.
ಹೆಜ್ಜೆಹೆಜ್ಜೆಗು ನಿಂತು ಕೈಹಿಡಿದು ಮೇಲೆತ್ತಿ
ಚಂದುಮಾಮನ ಕನಸ ಬಿತ್ತಿದವರು.

* * * *

ನಾನು ನಂಬಿದೆನಿವರ: ಬಣ್ಣದಲಿ ಬೆರಗಿನಲಿ
ಬೆರೆದರಿವರು.
ಮರ ಮರದ ತುಂಬ ಹಕ್ಕಿಯು ಲಾಲಿ; ತಳಿರಿನ ಜೋಲಿ;
ಹೂವಿನ ಹೋಳಿ—ಬುಗ್ಗೆ ಬುಗ್ಗೆ !
ಕಂಡ ಕಂಡೆಡೆಯಲ್ಲಿ ಕೈಚಾಚಿ ನುಗ್ಗಿದೆನು
ಇವರ ಜೊತೆಗೆ,
ನೂರು ಕೊಂಬೆಗೆ ನೆಗೆದು, ಗುಡ್ಡ ಬೆಟ್ಟವನೇರಿ
ಮೋಡವಾಗಲೆದು,
ದೂರ ಕಡಲಿಗೆ ಬೆದರಿ, ಸುಳಿದು ಸುತ್ತಿ,
ಕಡೆಗೆ ಕಾಮನಬಿಲ್ಲ ಜಾರುಗುಪ್ಪೆಯನಾಡಿ
ಬಂಡೆ ಬಂಡೆಯ ಬುಡಕೆ ಬಂದು ನಿಂತೆ,
ಹೆಗಲ ಮೇಲೇರಿತ್ತು ದೊಡ್ಡ ಕಂತೆ.

* * * *

ನಸುನಕ್ಕರೈದು ಜನ—
ತಂತುಕೃತಿಯಂಥ ನಗು, ನವುರು ನವುರು.
ಗೋಡೆಯ ಮೇಲೆ ಹಲ್ಲಿಯ ನೆರಳು ;
ನೆರಳಲ್ಲ, ಗಡಿಗೆ ಕಣ್ಣಿನ ಸರಳು ಸೆಳೆದಿತ್ತು ದೂರ ಹಾರುವ ನೊಣವ
ಅಂಟು ನಾಲಗೆ ಚಾಚಿ !
ಮನೆಯಂಗಳದಿ ಆಗ ತಾನೇ ಅರಳಿ ಮುದ್ದಾದ ಮಲ್ಲಿಗೆಗೆ
ಬಾಯಿ ಹಾಕಿತ್ತೊಂದು ಕಪ್ಪು ಕೋಣ.
ಮುದಿಯ ಮರ ಲಟಕಟಿಸಿ ಉರುಳಿತ್ತು
ಸೆಳೆದಿತ್ತು ಬಿರುಗಾಳಿಯುರುಳು,
ಅಲ್ಲೆಲ್ಲ ಕಾಣಿಸಿತು ಇವರ ನೆರಳು !

* * * *

'ಬಾಡಿಗೆಯ ಮನೆಯಿಂದ ಬಾಡಿಗೆಯ ಮನೆಗೆ ನಡೆದಿರುವೆ,
ಇರುವ ಮನೆಯನು ಮೊದಲು ಸರಿಮಾಡಿಕೋ.
ಕಸ ಗುಡಿಸು ; ದೀಪವ ಹಚ್ಚು ; ಈ ಐವರನು ನಂಬದಿರು
ಆದಷ್ಟು ದೂರವಿರಿಸು '—

ಬಿಡಲಿಲ್ಲ ಇವರೆನ್ನ,
ಸದಾ ಜೊತೆಗೂಡಿ ನನ್ನೊಡನೆ ಜಗ್ಗುವುದೆ ಕೆಲಸ
ದೂರ ಹಾರುವ ಪಟವ ಮತ್ತೆ ಮತ್ತೆ !

ರೇಗಿತು ನನಗೆ—
ಎಳೆಯಂದು ಸಾಕುತಾಯಾದವರು,
ಹರಯದಲಿ ಜೊತೆಗೂಡಿ ನಿಂದವರು,
ಒಳಮನೆಯ ಆಡಳಿತದಲಿ ಆಪ್ತರಾದವರಿವರು,
ಸರ್ವದಾ ಬೆನ್ನ ಬಿಡದಂತೆ ನೆರಳಾಗಿ ಸುಳಿಯುವರು,
ಇವರ ಮೇಲೇ ನಾನು ಹೂಡಬೇಕೇ ಯುದ್ಧ
ಹಿಡಿಯಬೇಕೆ ಇನ್ನು ಬಿಲ್ಲುಬಾಣ ?
'ಕ್ಷುದ್ರಂ ಹೃದಯ ದೌರ್ಬಲ್ಯಂ
ತ್ಯಕ್ತ್ವೋತ್ತಿಷ್ಠ ಪರಂತಪ'
ನಾನೇನು ಪಾರ್ಥನೆ ? ಆದರೂ ಕಾದಿದೆನು ಹಗಲು ಇರುಳು,
ಚುಚ್ಚಿದವು ಹತ್ತಾರು ಕೆಂಪು ಸರಳು.

ಅಲ್ಲಿಂದೀಚೆ, ನಾನು ನಾನೇ ಆದೆ ; ನಿಂತೆ
ಬೆಳ್ಗೊಳದ ಗೊಮ್ಮಟನ ನಗೆಯ ಬೆಳುದಿಂಗಳಡಿ ಕಣ್ಣತೆರೆದು—
ಇವರೆಲ್ಲ ನಮ್ಮವರೆ, ನಿಜ ; ನಾನೊ ಆಗಂತುಕನು
ತೀರ್ಥಯಾತ್ರಿ.
ಇವರ ಛತ್ರದೊಳಿದ್ದು, ತೆರುವುದನು ತೆತ್ತು ನಡೆಯುವೆನು
ಒಂದು ರಾತ್ರಿ.
ಹಿಡಿಯಲಾರದು ನನ್ನ ಇವರಾವ ಸೂತ್ರವೂ
ನಾನು ನಿರ್ಲಿಪ್ತ—
ಬೆಂಕಿಯು ಸುಡದು ; ನೀರು ನೆನೆಸದು ; ಮಣ್ಣು ಮೆತ್ತದು ;
ಗಾಳಿ ಹಾರಿಸದು, ಪಂಚಭೂತದ ಸಂಚು ತಟ್ಟದು ಇನ್ನು
ನಾ ಸ್ಥಿತಪ್ರಜ್ಞ.

ನಿರ್ಧಾರವನು ಕೇಳಿ ನಸುನಕ್ಕರೈವರೂ—
'ಪಗೆಗೆ ಪಗೆ ಕೆಳೆಗೆ ಕೆಳೆ' ನಾವು.
ಹಾರೈಸುವೆವು ನೀನಾಗು ಬುದ್ಧ
ನಿನ್ನ ಸೇವೆಗೆ ನಾವು ಎಂದಿಗೂ ಸಿದ್ಧ.

ಜಿ. ಎಸ್. ಶಿವರುದ್ರಪ್ಪ

ಪರಮ ಪುರುಷನ ಪುಣ್ಯದರ್ಶನ

ನಿನ್ನ ನೊಸಲಿನ ಚಂದ್ರಕಾಂತಿಗೆ
ನಿನ್ನ ಕಣ್ಣಿನ ಅಮೃತಶಾಂತಿಗೆ
ನಿನ್ನ ಕೈಕಾಲುಗಳ ಕ್ರಾಂತಿಗೆ
ಸಲಿವುದಾತ್ಮದ ಹಂಸವು!

ನಿನ್ನ ಕುರುಳಿನ ಕೋಮಲತೆಗೆ
ನಿನ್ನ ಕೆನ್ನೆಯ ದೈವಿಕತೆಗೆ
ನಿನ್ನ ತೋಳ್ಗಳ ತುಂಬುಬಳ್ಳಿಗೆ
ಪುಳಕವೇಳ್ವುದು ಜೀವವು!

ನೀನು ನನ್ನಯ ಕಂದನೆಂಬ
ಹೆಮ್ಮೆಗೆನ್ನಯ ಕಣ್ಣತುಂಬ
ಗಂಗೆಯಿಳಿದೀ ಪ್ರಾಣಕುಂಭ
ಅಮೃತಸಾಗರವಾಯಿತು!

ನಿನ್ನ ತುಟಿಯೆಳನಗೆಯ ಕೆಂಪಿಗೆ
ನಿನ್ನ ಶಿಶುತನು ಶಶಿಯ ಬಿಂಬಕೆ
ನಿನ್ನಡಿಯ ಕೆಂದಳಿರಿನಂದಕೆ
ಮನವು ಮೋಹದಿ ಮುಳುಗಿತು!

ಕವಿಯ ಕಂದನೆ, ಭಕ್ತನಂದನೆ,
ಅಮರ ಪ್ರೇಮಿಯ ಆತ್ಮಚಂದ್ರನೆ,
ಪರಮ ಸಾಧ್ವೀಮಣಿಯ ತಾಯಿಯ
ಪರಮ ಪ್ರೇಮಾನಂದನೆ!

ಕವಿಯ ದರ್ಶನವಾಯ್ತು ಕಂದನೆ
ಋಷಿಯ ದರ್ಶನವಾಯ್ತು ಚಂದ್ರನೆ
ಪರಮ ಪುರುಷನ ಪುಣ್ಯದರ್ಶನ-
ವಾಯ್ತು ಶ್ರೀ ಅರವಿಂದನೆ!

ಕುಮುದ

ಆರ್ಥಿಕ ಅಂತರರಾಷ್ಟ್ರೀಯತೆ : ಚಾರಿತ್ರಿಕ ಹಿನ್ನೆಲೆ

(Economic Internationalism : Historical Background)

ಸರಕು, ಸೇವೆ, ಬಂಡವಾಳಹಣ ಇವುಗಳ ವಿನಿಮಯದ ಮೂಲಕ ಪ್ರಪಂಚದ ಎಲ್ಲಾ ಜನಾಂಗಗಳ ಕ್ಷೇಮಾಭ್ಯುದಯ ಸಾಧಿಸುವುದು ಮುಖ್ಯವಾದ ಆರ್ಥಿಕ ಸಮಸ್ಯೆ. ಪ್ರತಿಯೊಂದು ದೇಶವೂ ಅದರ ಅವಶ್ಯಕತೆಗಳಿಗನುಗುಣವಾಗಿ ಪ್ರಕೃತಿ ದತ್ತ ಸಂಪತ್ತು ಮತ್ತು ಇತರ ಉತ್ಪನ್ನ ಸಾಧನಗಳನ್ನು ಹೊಂದಿರುವುದಿಲ್ಲ. ಆಹಾರ, ಬಟ್ಟೆ, ವಸತಿ, ಭೋಗ ಇವುಗಳಿಗೆ ಬೇಕಾಗುವ ಅನೇಕ ವಸ್ತುಗಳು ಸಾಮಾನ್ಯವಾಗಿ ಪ್ರಪಂಚದ ಎಲ್ಲಾ ಜನರಿಗೂ ಬೇಕು. ಆದರೆ ಒಂದೊಂದು ದೇಶಕ್ಕೆ ಒಂದೊಂದು ರೀತಿಯ ನೈಸರ್ಗಿಕ ಉತ್ಪನ್ನ ಸೌಲಭ್ಯ ದೊರಕಿವೆ. ಈ ಉತ್ಪನ್ನ ಸೌಕರ್ಯವನ್ನು ವಿಸ್ತಾರವಾಗಿ ಹರಡಿರುವ ಜನರ ಬೇಡಿಕೆ (Demand) ಗಳ ಪೂರೈಕೆಯ ಸಲುವಾಗಿ ರೂಢಿಸುವುದು ಆರ್ಥಿಕಾಭ್ಯುದಯದ ಸುಮಾರ್ಗ. ಇದರಲ್ಲಿ ಒಳಗೊಂಡಿರುವ ಅಂತರ ರಾಷ್ಟ್ರೀಯ ಶ್ರಮವಿಭಜನೆ ಮತ್ತು ಪರಸ್ಪರ ಅವಲಂಬನೆಗಳು (International division of labour and mutual interdependence) ಆಧುನಿಕ ಯುಗದ ಮುಖ್ಯ ಲಕ್ಷಣಗಳಲ್ಲಿ ಒಂದಾಗಿದೆ. ನಾವು ದಿನಚರಿಯಲ್ಲಿ ಉಪಯೋಗಿಸುವ ಅನೇಕ ವಿದೇಶೀ ವಸ್ತುಗಳನ್ನೂ ಮತ್ತು ಪರದೇಶೀಯರಿಗಾಗಿ ತಯಾರಿಸುವ ವಸ್ತುಗಳನ್ನೂ ಎಣಿಸಿದರೆ ಈ ಅಂಶವು ಸ್ಫುಟವಾಗುವುದು. ಪ್ರಪಂಚವೆಲ್ಲವೂ ಏಕೈಕ ಆರ್ಥಿಕ ಕ್ಷೇತ್ರವೆಂದು ಭಾವಿಸಿ ಜನಾಂಗಗಳ ಅನ್ಯೋನ್ಯ ಹಿತ ದೃಷ್ಟಿಯಿಂದ ಆರ್ಥಿಕ ಚಟು ವಟಿಕೆಗಳನ್ನು ನಡೆಯಿಸುವುದೇ ಸಂಪೂರ್ಣ ಆರ್ಥಿಕ ಅಂತರ ರಾಷ್ಟ್ರೀಯತೆ ಎನ್ನ ಬಹುದು. ವಸ್ತುತಃ ಇಷ್ಟು ವಿಶಾಲ ಭಾವನೆ ಇರುವುದು ಸಾಧ್ಯವಿಲ್ಲ. ಪ್ರಪಂಚವು ರಾಜಕೀಯವಾಗಿ ಅನೇಕ ರಾಷ್ಟ್ರಗಳಾಗಿ ಪ್ರತ್ಯೇಕಿಸಲ್ಪಟ್ಟಿದೆ. ಇದರಿಂದಾಗಿ ಕೆಲವು ಆರ್ಥಿಕ ಕಟ್ಟುನಿಟ್ಟುಗಳು ಉದ್ಭವಿಸಿವೆ. ಆಯಾ ದೇಶದ ಪ್ರಜೆಗಳಿಗೆ ತಂತಮ್ಮ ದೇಶದಲ್ಲಿರುವ ಆರ್ಥಿಕ ಹಕ್ಕುಗಳು ವಿದೇಶೀಯರಿಗಿರುವುದಿಲ್ಲ. ಜನರು ದೇಶದೊಳಗೆ ಓಡಾಡಲು, ಉದ್ಯಮ ಕೈಕೊಳ್ಳಲು ಇರುವಷ್ಟು ಸಲೀಸು ಅವಕಾಶ ವಿದೇಶಗಳಲ್ಲಿ ಇರುವುದಿಲ್ಲ. ಮತ, ಭಾಷೆ, ಸಮಾಜ ಪದ್ಧತಿ, ರಾಜಕೀಯ ಅಭಿ ಪ್ರಾಯ, ಇತ್ಯಾದಿ ಅಂಶಗಳಲ್ಲಿ ಇರುವ ವ್ಯತ್ಯಾಸಗಳು ಸ್ವಲ್ಪಮಟ್ಟಿಗೆ ಆರ್ಥಿಕ ಸಂಬಂಧಗಳಿಗೆ ಅಡಚಣೆಯಾಗಬಹುದು. ಹೀಗೆ ಇರತಕ್ಕ ರಾಜಕೀಯ ಸಾಮಾಜಿಕ

ಮತ್ತು ಭೌಗೋಳಿಕ ಆಯಕಟ್ಟಿನೊಳಗೆ ಪ್ರತಿಯೊಂದು ರಾಷ್ಟ್ರವೂ ಇತರ ರಾಷ್ಟ್ರಗಳೊಡನೆ ಪರಸ್ಪರ ಕ್ಷೇಮಾಭ್ಯುದಯ ಹೆಚ್ಚಿಸುವ ರೀತಿಯಲ್ಲಿ ಆರ್ಥಿಕ ಸಂಬಂಧಗಳನ್ನು ಪೋಷಿಸಿಕೊಳ್ಳುತ್ತಾ ಬರುವುದೇ ಉದಾತ್ತ ಆರ್ಥಿಕ ಅಂತರ ರಾಷ್ಟ್ರೀಯತೆ ಎನ್ನಿಸುವುದು.

ಆರ್ಥಿಕ ಅಂತರರಾಷ್ಟ್ರೀಯತೆಗೆ ಪ್ರತಿಯಾದುದು ಆರ್ಥಿಕ ರಾಷ್ಟ್ರೀಯತೆ. ಸಾಮಾನ್ಯವಾಗಿ ಪ್ರಜೆಗಳು ತಂತಮ್ಮ ದೇಶದ ಲಾಭದೃಷ್ಟಿಯನ್ನೇ ಪ್ರಧಾನವಾಗಿರಿಸಿಕೊಂಡು ಆರ್ಥಿಕ ಕಾರ್ಯಕ್ರಮಗಳನ್ನು ರೂಪಿಸಲು ಹವಣಿಸುತ್ತಾರೆ. ಸ್ವದೇಶ ಪ್ರೇಮ-ಅಭಿಮಾನ ಮತ್ತು ಸ್ವಜನಬಾಂಧವ್ಯ ಇವುಗಳೇ ಈ ಭಾವನೆಗೆ ತಳಹದಿ. ಈ ದೃಷ್ಟಿಯ ಜೊತೆಗೆ ಒಂದು ವಿಶ್ವದೃಷ್ಟಿಯೂ ಇದ್ದು ಸ್ವದೇಶ ಹಿತವನ್ನು ವಿದೇಶಗಳ ಹಿತಚಿಂತನೆಯೊಡನೆ ಬೆರಸಿದರೆ ಅಂತರರಾಷ್ಟ್ರೀಯ ಆರ್ಥಿಕ ದೃಷ್ಟಿಗೆ ಒಳ್ಳೆಯ ಸೋಪಾನವಾಗುವುದು. ಹಾಗಿಲ್ಲದೆ, ಯಾವ ವಿಧದಲ್ಲಿಯಾದರೂ ಸರಿ ತಮ್ಮ ದೇಶಕ್ಕೆ ಹೆಚ್ಚು ಆರ್ಥಿಕ ಲಾಭ ಲಭಿಸಿದರೆ ಸಾಕೆಂಬ ಮನೋಭಾವದಿಂದ ನಡೆಸುವ ಕಾರ್ಯಕ್ರಮಗಳು ಉಜ್ವಲ ಆರ್ಥಿಕ ರಾಷ್ಟ್ರೀಯತೆಯೆನ್ನಿಸುವುದು. ಇಂತಹ ಮನೋಭಾವವು 'ಮುಯ್ಯಿಗೆ ಮುಯ್ಯಿ' ನ್ಯಾಯಕ್ಕೆ ಎಡೆಕೊಟ್ಟು ಕಾಲಾಂತರದಲ್ಲಿ ಎಲ್ಲ ದೇಶಗಳ ಕ್ಷೇಮಾಭ್ಯುದಯಕ್ಕೂ ಧಕ್ಕೆ ತರುವುದು. ಅಥವಾ, ಆರ್ಥಿಕ ರಾಷ್ಟ್ರೀಯತೆಯ ಉದ್ದೇಶ ಅದಷ್ಟು ಇತರ ದೇಶಗಳ ಸಂಪರ್ಕವಿಲ್ಲದೆ ಪ್ರತ್ಯೇಕವಾಗಿರುವುದಾಗಿರಬಹುದು. ಈ ಧೋರಣೆಯನ್ನು ಕೆಲವು ದೊಡ್ಡ ರಾಷ್ಟ್ರಗಳು ಸ್ವಲ್ಪ ಮಟ್ಟಿಗೆ ಅನುಸರಿಸಬಹುದಾದರೂ ಇದರಿಂದ ಅತ್ಯುನ್ನತ ಆರ್ಥಿಕ ಪ್ರಯೋಜನಕ್ಕೆ ದಾರಿಯಿರುವುದಿಲ್ಲ. ಆಧುನಿಕ ಯುಗದ ಚರಿತ್ರೆಯಲ್ಲಿ ಆರ್ಥಿಕ ರಾಷ್ಟ್ರೀಯತೆ ಮತ್ತು ಅಂತರರಾಷ್ಟ್ರೀಯತೆಯ ಶಕ್ತಿಗಳ ಸೆಳೆತ ಹೇಗೆ ಅತ್ತ ಇತ್ತ ಹೊಯ್ದಾಡಿದೆ ಎಂಬುದನ್ನು ಸ್ಥೂಲವಾಗಿ ಈ ಕೆಳಗೆ ಕಾಣಬಹುದು.

ಹದಿನೆಂಟನೆಯ ಶತಮಾನದಲ್ಲಿ ಸಂಭವಿಸಿದ ಇಂಗ್ಲೆಂಡಿನ ಕೈಗಾರಿಕಾ ಕ್ರಾಂತಿಗೆ ಹಿಂದೆ ಸುಮಾರು ಮೂರು ಶತಮಾನಗಳಲ್ಲಿ ಎರಡು ವ್ಯತಿರಿಕ್ತ ಶಕ್ತಿಗಳನ್ನು ಕಾಣಬಹುದು. ಒಂದು ಕಡೆ, ಭೌಗೋಳಿಕ ಪ್ರಗತಿಯಿಂದಾದ ಅಂತರರಾಷ್ಟ್ರ ಸಂಪರ್ಕಗಳ ಬೆಳವಣಿಗೆ; ಇನ್ನೊಂದು ಕಡೆ, ಅಂತರರಾಷ್ಟ್ರ ಆರ್ಥಿಕ ಪ್ರಗತಿಗೆ ಪ್ರತಿಕೂಲವಾದ ಆರ್ಥಿಕ ನೀತಿ.

ಕೊಲಂಬಸ್, ವಾಸ್ಕೊಡಗಾಮ, ಮೆಗೆಲಾನ್ ಇತ್ಯಾದಿ ಅಸಾಧಾರಣ ವ್ಯಕ್ತಿಗಳು ಆಗಿನ ಯುಗವನ್ನು ಒಂದು ಸಾಹಸಸ್ಫೂರ್ತಿಯುಗವನ್ನಾಗಿ ಮಾಡಿದರು. ಅವರ ಶ್ರಮದಿಂದ ಅಮೆರಿಕ ಖಂಡ ವಾಸಕ್ಕೆ ಪತ್ತೆ ಆದುದು, ಪೂರ್ವ-ಪಶ್ಚಿಮ

ರಾಷ್ಟ್ರಗಳಿಗೆ ಕೇಪ್ ಆಫ್ ಗುಡ್‌ಹೋಪ್ ಮುಖಾಂತರ ಸಂಚಾರಮಾರ್ಗ ಲಭಿಸಿದುದು—ಇತ್ಯಾದಿ ಅದ್ಭುತ ಘಟನೆಗಳಿಂದ ಪ್ರಪಂಚದ ಐಕ್ಯತೆಯ ಅರಿವು ಪ್ರಚುರವಾಯಿತು. ಗಮನಾರ್ಹವಾದಷ್ಟು ರೀತಿಯಲ್ಲಿ ಅಂತರರಾಷ್ಟ್ರೀಯ ಸಂಪರ್ಕ ಹೆಚ್ಚಾಯಿತು. ಆದರೆ ಆ ಕಾಲದಲ್ಲಿ ಯೂರೋಪ್ ರಾಷ್ಟ್ರಗಳು ಅನುಸರಿಸುತ್ತಿದ್ದ ಆರ್ಥಿಕ ನೀತಿಯು ಆರ್ಥಿಕ ವಿಸ್ತಾರಕ್ಕೆ ಅಡ್ಡಿಯಾಯಿತು.

'ಮರ್ಕೆಂಟಿಲಿಸಮ್' (Mercantilism) ಎಂಬ ಆರ್ಥಿಕ ನೀತಿಯು ಇಂಗ್ಲೆಂಡ್, ಫ್ರಾನ್ಸ್, ಸ್ಪೆಯಿನ್, ಹಾಲೆಂಡ್ ಇತ್ಯಾದಿ ಪ್ರಮುಖ ದೇಶಗಳಲ್ಲಿ ವಿಶೇಷ ಮನ್ನಣೆ ಪಡೆದಿದ್ದಿತು. ತಮ್ಮ ರಾಷ್ಟ್ರ ಇತರ ರಾಷ್ಟ್ರಗಳಿಗಿಂತ ಪ್ರಭಾವಶಾಲಿ ರಾಜ್ಯವಾಗ ಬೇಕು. ಈ ರಾಜಕೀಯ ಶಕ್ತಿಗೆ ಅಮೌಲ್ಯವಸ್ತುಗಳೇ ತಳಹದಿ. ಆದುದರಿಂದ, ಆದಷ್ಟು ಚಿನ್ನ ಬೆಳ್ಳಿ ಇತ್ಯಾದಿ ವಸ್ತುಗಳನ್ನು ಶೇಖರಿಸುವಂತೆ ದೇಶದ ಆರ್ಥಿಕ ಚಟುವಟಿಕೆಗಳನ್ನು ರೂಪಿಸಬೇಕು. ಇದು ಸರ್ಕಾರವು ಆರ್ಥಿಕಕ್ಷೇತ್ರದಲ್ಲಿ ಪ್ರವೇ ಶಿಸಿ ಸಾಧಿಸಬೇಕಾದ ಹಿರಿಯ ಕರ್ತವ್ಯ—ಇದು 'ಮರ್ಕೆಂಟಿಲಿಸ್ಟ'ರ ವಾದ ವಾಗಿತ್ತು. ಇದರ ಪ್ರಕಾರ, ದೇಶದ ರಫ್ತನ್ನು ಆದಷ್ಟು ಹೆಚ್ಚಿಸಿ, ಆಮದನ್ನು ಕಡಮೆ ಮಾಡಬೇಕು. ಆಗ ಲೆಕ್ಕ ಸರಿತೂಗಿಸುವುದಕ್ಕೋಸ್ಕರ ಇತರ ದೇಶಗಳು ಚಿನ್ನ ಬೆಳ್ಳಿಯನ್ನು • ಕೊಡುವುದರಿಂದ ಅಮೌಲ್ಯವಸ್ತುಗಳ ದಾಸ್ತಾನು ಹೆಚ್ಚಾಗು ವುದು. ಆಮದಿಗಿಂತ ರಫ್ತು ಹೆಚ್ಚಬೇಕಾದರೆ ಉತ್ಪನ್ನ ಹೆಚ್ಚಿಸಬೇಕು, ಅಲ್ಲದೆ, ಅನುಭೋಗ (Consumption) ಮಿತಗೊಳಿಸಬೇಕು. ಈ ದೃಷ್ಟಿಯಿಂದ ಅನುಸರಿಸ ಬೇಕಾದ ಎಲ್ಲಾ ಕ್ರಮಗಳನ್ನೂ ಸರ್ಕಾರವು ವಿಧಿಸುವುದು. ಹೀಗೆ 'ಮರ್ಕೆಂಟಿಲಿ ಸಮ್' ನೀತಿಯು ಆರ್ಥಿಕ ರಾಷ್ಟ್ರೀಯತೆಯ ಒಂದು ರೂಪ ; ಇದರಿಂದ ಅಂತರ ರಾಷ್ಟ್ರ ಆರ್ಥಿಕಸಂಬಂಧ ಬೆಳೆಯಲಾಗಲಿಲ್ಲ. ಎಲ್ಲ ರಾಷ್ಟ್ರಗಳೂ ಇತರ ರಾಷ್ಟ್ರ ಗಳಿಂದ ಹೆಚ್ಚು ಲಾಭ ಪಡೆಯುವ ಪೈಪೋಟಿ ನೀತಿಯನ್ನು ಅನುಸರಿಸಿದುದರಿಂದ, ವೈಮನಸ್ಸು ಹಾಗು ಕಲಹಮನೋಭಾವ ಅಂಕುರಿಸಿತು. ಈ ವಾತಾವರಣದಲ್ಲಿ ಆರ್ಥಿಕ ಅಂತರರಾಷ್ಟ್ರೀಯತೆ ಅರಳಲಿಲ್ಲ.

ಹದಿನೆಂಟನೆ ಶತಮಾನದ ಇಂಗ್ಲೆಂಡಿನ ಕೈಗಾರಿಕಾಕ್ರಾಂತಿಯು ಹೊಸ ಆರ್ಥಿಕ ಯುಗದ ಆರಂಭ. ಆಡಮ್‌ಸ್ಮಿತ್ (Adam Smith) ಎಂಬ ಪ್ರಖ್ಯಾತ ಅರ್ಥ ವಿಜ್ಞಾನಿಯು ಉಪದೇಶಿಸಿದ ಹೊಸ ತತ್ವಗಳು ಹತ್ತೊಂಬತ್ತನೆಯ ಶತಮಾನದ ಆರ್ಥಿಕ ಅಂತರರಾಷ್ಟ್ರೀಯತೆಯ ವಿಕಾಸಕ್ಕೆ ತಳಹದಿಯಾದವು. ಹೊಸ ತತ್ವಗಳ ಮೂಲಮಂತ್ರ 'ವೈಯಕ್ತಿಕ ಸ್ವಾತಂತ್ರ್ಯ' (Laissez Faire). ಜನರ ಆರ್ಥಿಕ ಜೀವನದಲ್ಲಿ ಸರ್ಕಾರವು ಆದಷ್ಟು ಕಡಮೆ ಪ್ರವೇಶಿಸಬೇಕು ; ಆಗ ಉದ್ಯಮಿಗಳು

ಲಾಭದೃಷ್ಟಿಯಿಂದ ಪೈಪೋಟಿ ನಡೆಸುವರು. ಪೈಪೋಟಿಯಲ್ಲಿ ದಕ್ಷರಾದವರ ಕೈಗೆ ಆರ್ಥಿಕೋದ್ಯಮಗಳು ಸೇರುವುದರಿಂದ ಒಟ್ಟಿನಲ್ಲಿ ಆರ್ಥಿಕ ದಕ್ಷತೆಯು ಉನ್ನತ ಮಟ್ಟದಲ್ಲಿರುವುದು; ಸಂಪದಭಿವೃದ್ಧಿಯಾಗುವುದು. ಹೀಗೆ ರಾಷ್ಟ್ರಗಳ ಆರ್ಥಿಕ ಅಭ್ಯುದಯಕ್ಕೆ ವ್ಯಕ್ತಿ ಸ್ವಾತಂತ್ರ್ಯ, ನಿರಾತಂಕ ಪೈಪೋಟಿ, ಆಸ್ತಿ ಹೆಚ್ಚಿಸಿಕೊಳ್ಳುವ ಹಕ್ಕು, ಲಾಭದೃಷ್ಟಿ ಇವೇ ಮುಖ್ಯ ಮಾರ್ಗಗಳು ಎಂದು ಅನೇಕ ಅರ್ಥಶಾಸ್ತ್ರ ವಿಶಾರದರು ಸಾರಿ ಹೇಳಿದರು. ಇವು ಪಾಶ್ಚಾತ್ಯ ರಾಷ್ಟ್ರಗಳಿಗೆಲ್ಲ ಸರ್ವಸಮ್ಮತವಾಯಿತು.

ಈ ತರಹದ ಹೊಸ ಭಾವನೆಯ ಆಧಾರದಮೇಲೆ ೧೯ ನೇ ಶತಮಾನದಲ್ಲಿ ಪ್ರಪಂಚದ ಆರ್ಥಿಕತೆಯು ರೂಪುಗೊಂಡಿತು. 'ಮರ್ಕೆಂಟಿಲಿಸಮ್' ಕಾಲದಲ್ಲಿ ಸರ್ಕಾರವು ವಿಧಿಸಿದ್ದ ಅನೇಕ ಆರ್ಥಿಕ ನಿಬಂಧನೆಗಳು ಸಡಿಲವಾದುದರಿಂದ ಆರ್ಥಿಕ ಶಕ್ತಿಗಳು ಸ್ವಂತಸ್ಥಾಯಿಯನ್ನು ಪಡೆದವು. ಪ್ರಪಂಚದ ವಿವಿಧ ಭಾಗಗಳೂ ಸಹ 'ಬೇಡಿಕೆ—ನೀಡಿಕೆ' (Demand—Supply) ಗಳ ತಾಕಲಾಟದಿಂದ ಹೊಂದಿಕೆಗೊಂಡು ಒಂದೇ ಆರ್ಥಿಕ ಕ್ಷೇತ್ರವಾಯಿತು. ಹೆಚ್ಚು ಪ್ರತಿಬಂಧಕಗಳಿಲ್ಲದೆ ಅಂತರರಾಷ್ಟ್ರೀಯ ವ್ಯಾಪಾರವು ಆರ್ಥಿಕ ಶಕ್ತಿಗಳಿಗನುಸಾರವಾಗಿ ವೃದ್ಧಿಗೊಂಡಿತು. ಅಂತರರಾಷ್ಟ್ರೀಯ ಬಂಡವಾಳ ಮೊತ್ತವೂ, ಅದರ ಚಲನವಲನಗಳೂ ಹೆಚ್ಚಿದವು. ಜನರು ವಲಸೆಹೋಗಿ ಬೇರೆ ದೇಶಗಳಲ್ಲಿ ನೆಲಸುವುದೂ, ದೇಶದೇಶದಿಂದ ಓಡಾಡುವುದೂ ಹಿಂದೆ ಎಂದೂ ಇಲ್ಲದಷ್ಟು ಪ್ರಮಾಣದಲ್ಲಿ ನಡೆಯಿತು. ಇದಕ್ಕೆ ಮುಖ್ಯ ಅವಕಾಶ ದೊರೆತದ್ದು ಹೊಸದಾಗಿ ಅಭಿವೃದ್ಧಿಗೊಳ್ಳತೊಡಗಿದ್ದ ಅಮೆರಿಕ ಮತ್ತು ಆಸ್ಟ್ರೇಲಿಯಗಳಿಂದ, ಮತ್ತು ಕಾಲೊನಿಗಳು ಹೆಚ್ಚತೊಡಗಿದುದರಿಂದ.

ಇಂಗ್ಲೆಂಡಿನಲ್ಲಿ ಆರಂಭವಾದ ಕೈಗಾರಿಕಾ ಕ್ರಾಂತಿಯು ೧೯ ನೇ ಶತಮಾನದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳು, ಫ್ರಾನ್ಸ್, ಜರ್ಮನಿ, ಜಪಾನ್ ಇತ್ಯಾದಿ ರಾಷ್ಟ್ರಗಳಿಗೆ ಹರಡಿತು. ಈ ಎಲ್ಲ ದೇಶಗಳಲ್ಲಿಯೂ ಆಧುನಿಕ ಆರ್ಥಿಕ ಪದ್ಧತಿಯು ರೂಪುಗೊಂಡಿತು. ಈ ವಿವಿಧ ರಾಷ್ಟ್ರಗಳ ಆರ್ಥಿಕ ಪದ್ಧತಿಗಳು ಸ್ವರ್ಣಮಾನದ ಮುಖಾಂತರ ಚನ್ನಾಗಿ ಹೆಣೆದುಕೊಂಡವು.

ಸ್ವರ್ಣಮಾನ (Gold standard) ಪದ್ಧತಿಯಲ್ಲಿ ಪ್ರತಿ ರಾಷ್ಟ್ರವೂ ಅದರ ಮುಖ್ಯ ನಾಣ್ಯಕ್ಕೆ ಭಂಗಾರದಲ್ಲಿ ಇಷ್ಟು ಬೆಲೆಯೆಂದು ನಿಗದಿಮಾಡಿತು. ಭಂಗಾರವನ್ನು ದೇಶ-ವಿದೇಶಗಳಲ್ಲಿ ಪ್ರತಿಬಂಧಕಗಳಿಲ್ಲದೆ ಸಾಗಣೆ ಮಾಡಬಹುದಾಗಿತ್ತು. ಒಂದು ದೇಶದಲ್ಲಿ ಬೆಲೆಗಳು ಏರಿದಾಗ ಆ ದೇಶದ ರಫ್ತು ಕಡಿಮೆಯಾಗಿ ಆಮದು ಹೆಚ್ಚುತ್ತಿತ್ತು. ಭಂಗಾರವನ್ನು ದೇಶದಿಂದ ಹೊರಗೆ ಕಳಿಸಬೇಕಾಗುತ್ತಿತ್ತು. ಭಂಗಾರದ ಸ್ಟಾಕು ಕಡಮೆಯಾದಂತೆ ಹಣದ ಮೊತ್ತ ಕಡಮೆಯಾಗುತ್ತಿತ್ತು. ಹಣದ ಮೊತ್ತ

ಕಡಮೆಯಾದಂತೆ ಬೆಲೆಗಳು ಇಳಿವರಿಯಾಗುತ್ತಿದ್ದವು. ಈ ಸರಣಿಗೆ ಪ್ರತಿಯಾದ ಪರಿಣಾಮಗಳು ಬೆಲೆಗಳು ಕಡಮೆ ಇದ್ದ ದೇಶಗಳಲ್ಲಿ ಸಂಭವಿಸುತ್ತಿದ್ದವು. ಹೀಗೆ ಭಂಗಾರದ ಸಂಬಂಧದಿಂದ ವಿವಿಧ ರಾಷ್ಟ್ರಗಳ ಬೆಲೆಮಟ್ಟಗಳು ನಿಕಟವಾಗಿ ಹೊಂದಿಕೊಂಡಿದ್ದವು. ಇದರಿಂದ ಪ್ರಪಂಚ ಆರ್ಥಿಕತೆಯು ಬಿಗಿಯಾದ ಒಂದೇ ಆರ್ಥಿಕ ಕ್ಷೇತ್ರದಂತಿದ್ದು ಅಂತರರಾಷ್ಟ್ರೀಯ ಸಂಬಂಧಗಳು ಸಹಜವಾದ ಆರ್ಥಿಕ ತಳಹದಿಯ ಮೇಲೆ ನೆಲೆಸಿದ್ದವು. ಆದ್ದರಿಂದಲೇ, ೧೯೧೪ ಕ್ಕೆ ಹಿಂದಿನ ಶತಮಾನವನ್ನು 'ಆರ್ಥಿಕ ಅಂತರರಾಷ್ಟ್ರೀಯತೆಯ ಸ್ವರ್ಣಯುಗ'ವೆನ್ನಬಹುದು.

ಹತ್ತೊಂಬತ್ತನೆ ಶತಮಾನದ ಉದಾತ್ತ ಆರ್ಥಿಕ ಅಂತರರಾಷ್ಟ್ರೀಯತೆಯ ರಾಜಕೀಯ ಹಿನ್ನೆಲೆ ಎಂತಹುದಾಗಿತ್ತೆಂಬುದು ಗಮನಿಸಬೇಕಾದ ವಿಷಯ. ಅದು ಸಾಮ್ರಾಜ್ಯಶಾಹಿ ಯುಗ. ಆಗ ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ಪೋರ್ಚುಗಲ್, ಇಟಲಿ ಇಂತಹ ಕೆಲವು ಆಳುವ ರಾಷ್ಟ್ರಗಳಾಗಿದ್ದವು. ಇವು ಅಧೀನ ರಾಷ್ಟ್ರಗಳನ್ನೂ, ಕಾಲೊನಿಗಳನ್ನೂ ಹೆಚ್ಚಿಸಿಕೊಳ್ಳಲು ಹವಣಿಸುತ್ತಲೇ ಇದ್ದವು. ಆಯಾ ಸಾಮ್ರಾಜ್ಯ ರಾಷ್ಟ್ರಗಳೊಳಗೆ ಹೆಚ್ಚು ನಿಕಟ ಆರ್ಥಿಕ ಸಂಬಂಧಗಳು ಬೆಳೆದುದು ಸ್ವಾಭಾವಿಕ. ಆದರೆ ಇದು ಒಟ್ಟಿನಲ್ಲಿ 'ಶ್ರಮ ವಿಭಜನೆ' (Division of labour) ತತ್ವಕ್ಕೆ ಹೆಚ್ಚು ಧಕ್ಕೆ ತರಲಿಲ್ಲ. ಸಾಮ್ರಾಜ್ಯಶಾಹಿಯ ಸೆರಗಿನಲ್ಲಿ ಬೆಳೆದುಬಂದುದಾದರೂ ಪ್ರಪಂಚದ ಆರ್ಥಿಕತೆಯು ಚೆನ್ನಾಗಿ ಕಾಣುವಂತೆ ಸಮನ್ವಯಗೊಂಡಿದ್ದಿತು. ಒಂದು ಬಗೆಯ ಸ್ಥಿಮಿತ ಇದ್ದಿತು. ಅಂದರೆ ಆಳಲ್ಪಡುತ್ತಿದ್ದ ಜನಾಂಗದವರ ಏಳಿಗೆ ದೃಷ್ಟಿಯಿಂದ ಈ ಸ್ಥಿಮಿತವು ಎಷ್ಟರಮಟ್ಟಿಗೆ ಅಪೇಕ್ಷಣೀಯ ಎಂಬುದು ಬೇರೆ ಪ್ರಶ್ನೆ. ಇದರ ಚರ್ಚೆ ಇಲ್ಲಿ ಅಪ್ರಕೃತ. ಮುಖ್ಯ ಆರ್ಥಿಕ ಶಕ್ತಿಗಳಾದ 'ಬೇಡಿಕೆ—ನೀಡಿಕೆ'ಗಳಿಗೆ ಅಂತರರಾಷ್ಟ್ರೀಯ ರಂಗದಲ್ಲಿ ಸ್ವಚ್ಛಂದವಾಗಿ ಆಡುವ ಅವಕಾಶವಿದ್ದುದರಿಂದ ಆರ್ಥಿಕ ಅಂತರರಾಷ್ಟ್ರೀಯತೆಯು ಅರಳಿದ ಕಾಲ—೧೯ ನೇ ಶತಮಾನ ಎನ್ನಬಹುದು. ಆದರೆ ಈ ಆರ್ಥಿಕ ಅಂತರರಾಷ್ಟ್ರೀಯತೆಯನ್ನು ಪೋಷಿಸಿದ ರಾಜಕೀಯ ಸಂಬಂಧಗಳು ಹಾಗು ವಿವಿಧ ದೇಶಗಳ ಆರ್ಥಿಕ ರಚನೆಗಳು ಮಾರ್ಪಾಡಾಗುತ್ತಾ ಬಂದಂತೆ ರಾಷ್ಟ್ರೀಯತೆ ತಲೆದೋರಿತು.

೧೯೧೪-೧೮ ರ ಮಹಾಯುದ್ಧ ಕಾಲದಲ್ಲಿ ಮತ್ತು ತರುವಾಯ ಸಂಭವಿಸಿದ ಘಟನೆಗಳಿಂದ ಮತ್ತು ೧೯೨೯-೩೨ ರಲ್ಲಿ ಪ್ರಾಪ್ತವಾದ ಘೋರ ಆರ್ಥಿಕ ಮುಗ್ಗಟ್ಟಿನ ಪರಿಣಾಮವಾಗಿ ಅಂತರರಾಷ್ಟ್ರೀಯ ಆರ್ಥಿಕ ಐಕ್ಯತೆಗೆ ಭಂಗವುಂಟಾಯಿತು. ಕೈಗಾರಿಕಾ ಸ್ವಾಮ್ಯ, ಕಾರ್ಮಿಕ ಸಂಘಗಳ ಚಟುವಟಿಕೆಗಳು—ಇವುಗಳ (Growth of monopoly, Trade union activity) ಬೆಳವಣಿಗೆಗಳಿಂದ ಆಧುನಿಕ ಆರ್ಥಿಕ

ಪದ್ಧತಿಯ ಸ್ವರೂಪ ಬದಲಾವಣೆಯಾಯಿತು. ಹಣದ ಮೊತ್ತ, ಬೆಲೆ, ಕೂಲಿ ದರ, ಉತ್ಪನ್ನ ಖರ್ಚು, ಆಮದು-ರಫ್ತು, ವಿದೇಶೀ ಹಣ ವಿನಿಮಯ ಇಂತಹ ಅಂಶಗಳಲ್ಲಿದ್ದ ಪರಸ್ಪರ ಸಂಬಂಧಗಳು ಸಡಿಲವಾದವು. ಇದು ಆರ್ಥಿಕ ರಚನೆಗೆ ಸಂಬಂಧಿಸಿದ ವಿಷಯ. ಅಂತೆಯೇ ಸರ್ಕಾರವು ಹೆಚ್ಚು ಹೆಚ್ಚಾಗಿ ಆರ್ಥಿಕ ಕ್ಷೇತ್ರದಲ್ಲಿ ಪ್ರವೇಶಿಸಿ ಅಲ್ಲಿ ಇಲ್ಲಿ ಬೇಕಾದ ಮಸೂದೆಗಳನ್ನು ಅಂಗೀಕರಿಸಬೇಕಾಯಿತು. ಈ ಶತಮಾನದ ಇಂತಹ ಹೊಸ ವಾತಾವರಣದಲ್ಲಿ ಸ್ವರ್ಣಪ್ರಮಿತಿಯು ಹಿಂದಿನಂತೆ ನಡೆಯಲಾಗಲಿಲ್ಲ. ಕಾಲಾನುಗತವಾಗಿ ಆರ್ಥಿಕರಚನೆಯಲ್ಲಿ ಉಂಟಾದ ಬದಲಾವಣೆಗಳ ಜೊತೆಗೆ ಮೊದಲನೆ ಮಹಾಯುದ್ಧ ಮತ್ತು ಆರ್ಥಿಕ ಮುಗ್ಗಟ್ಟು ಇವುಗಳಿಂದ ಉದ್ಭವಿಸಿದ ಆರ್ಥಿಕ ಸಮಸ್ಯೆಗಳೂ ಸೇರಿ ಅಂತರರಾಷ್ಟ್ರೀಯ ಆರ್ಥಿಕ ಸಂಬಂಧಗಳು ಸುಗಮವಾಗಿ ಬೆಳೆಯಲಿಲ್ಲ.

ಎರಡು ಯುದ್ಧಗಳ ಅಂತರದಲ್ಲಿ ನಾವು ಕಾಣುವುದು ಹೆಚ್ಚಾಗಿ ಆರ್ಥಿಕ ರಾಷ್ಟ್ರೀಯತೆ. ೧೯೧೪ರ ಹಿಂದಿನ ವರ್ಷಗಳಲ್ಲಿದ್ದಷ್ಟು ಸುಗಮವಾಗಿ ಅಂತರರಾಷ್ಟ್ರೀಯ ವ್ಯಾಪಾರವಾಗಲಿ ಅಂತರರಾಷ್ಟ್ರ ಬಂಡವಾಳದ ಹೂಡುವಿಕೆಯಾಗಲಿ ನಡೆಯಲಿಲ್ಲ. ರಕ್ಷಣಾ ಸುಂಕ (Protective tariff) ವಿನಿಮಯ ಹತೋಟಿ (Exchange control) ದ್ವಿರಾಷ್ಟ್ರ ವ್ಯಾಪಾರ (Bilateral trade) ಹಾಗು ವಿನಿಮಯ ಒಪ್ಪಂದಗಳು, ಸರ್ಕಾರದ ಕೈಗಾರಿಕಾ ಸ್ವಾಮ್ಯ—ಇವೆಲ್ಲವೂ ಅನೇಕ ದೇಶಗಳು ಅನುಸರಿಸಿದ ಸಂಕುಚಿತ ಆರ್ಥಿಕ ನೀತಿಯ ಅನುಸಾರವಾದ ಕ್ರಮಗಳು. ಇವುಗಳ ಪರಿಣಾಮವಾಗಿ ಒಂದು ಸುಸಂಘಟಿತವಾಗಿದ್ದ ಪ್ರಪಂಚ ಆರ್ಥಿಕತೆಯು ಒಡೆದು ಅನೇಕ ಭಿನ್ನಸ್ವರೂಪಗಳನ್ನು ಪಡೆಯಿತು. ಜರ್ಮನಿ, ಇಟಲಿ ಇತ್ಯಾದಿ ರಾಷ್ಟ್ರಗಳು ಉಜ್ವಲ ರಾಷ್ಟ್ರೀಯತೆಯನ್ನು ಸಾಧಿಸತೊಡಗಿದವು.

ಎರಡನೆ ಮಹಾಯುದ್ಧದ ಕಾಲದಿಂದ ಆರ್ಥಿಕ ಅಂತರರಾಷ್ಟ್ರೀಯತೆಯು ಹೊಸ ಘಟ್ಟವೊಂದನ್ನು ಮುಟ್ಟಿದೆ. ಆಧುನಿಕ ಯುದ್ಧ ಸರ್ವ ವಿನಾಶಕಾರಿ; ಇನ್ನೊಂದು ಯುದ್ಧ ಸಂಭವಿಸದಂತೆ ನೋಡಿಕೊಳ್ಳಬೇಕೆಂಬ ಭಾವನೆ ಎಲ್ಲ ಜನಾಂಗದಲ್ಲೂ ಮೂಡಿದೆ. ಅಲ್ಲದೆ ಆರ್ಥಿಕ ವಿಷಯಗಳಲ್ಲಿ ಎರಡು ಯುದ್ಧಗಳ ನಡುವಣ ಕಾಲದ ಅನುಭವಗಳು ಮುಖ್ಯವಾದ ಪಾಠಗಳನ್ನು ಎಲ್ಲ ರಾಷ್ಟ್ರಗಳಿಗೂ ಮನಗಾಣಿಸಿವೆ. ಈ ಎರಡು ಬಗೆಯ ಅರಿವಿನ ಆಧಾರದ ಮೇಲೆ ಯುದ್ಧೋತ್ತರ ಪ್ರಪಂಚ ರೂಪುಗೊಳ್ಳುತ್ತಿದೆ. ಈ ಹೊಸ ಪ್ರಪಂಚದ ಆರ್ಥಿಕ ಅಂತರರಾಷ್ಟ್ರೀಯತೆಯ ಸ್ವರೂಪದ ರೂಪುರೇಖೆಗಳನ್ನು ತಿಳಿಯೋಣ.

ಮೊದಲನೆಯದಾಗಿ ಗಮನಿಸಬೇಕಾದ ವಿಷಯ ಎಲ್ಲೆಲ್ಲೂ ರಾಜಕೀಯ ಸ್ವಾತಂತ್ರ್ಯ ನೆಲೆಸಿರುವುದು. ಅಧೀನ ರಾಷ್ಟ್ರಗಳಾಗಿದ್ದ ಅನೇಕ ರಾಷ್ಟ್ರಗಳು

ಸ್ವಾತಂತ್ರ್ಯಹೊಂದಿವೆ. ಸಾರ್ವಭೌಮತ್ವವು ತೀವ್ರವಾಗಿ ಕ್ಷೀಣಿಸಿದೆ. ಪ್ರಜಾ ಪ್ರಭುತ್ವಕ್ಕೆ ಉನ್ನತ ಮನ್ನಣೆಯುಂಟಾಗಿದೆ.

ಎರಡನೆಯದಾಗಿ, ಒಂದು ಹೊಸ ಸೌಹಾರ್ದ ರಾಷ್ಟ್ರಗಳಲ್ಲಿ ತಲೆದೋರಿದೆ. ಪ್ರಪಂಚದಲ್ಲಿ ಹೆಚ್ಚು ಆರ್ಥಿಕ ಪ್ರಗತಿ ಸಾಧಿಸಿರುವ ಕೆಲವು ಅದೃಷ್ಟಶಾಲಿ ರಾಷ್ಟ್ರಗಳಿವೆ; ಉಳಿದ ಅನೇಕ ರಾಷ್ಟ್ರಗಳು ಆರ್ಥಿಕ ದೃಷ್ಟಿಯಿಂದ ಹಿಂದುಳಿದಿವೆ. ಈ ಎರಡು ಗುಂಪಿನ ರಾಷ್ಟ್ರಗಳಲ್ಲಿಯೂ ಹೊಸ ಸದ್ಭಾವನೆ ಅಂಕುರಿಸಿದೆ. ಹಿಂದುಳಿದಿರುವ ರಾಷ್ಟ್ರಗಳಲ್ಲಿ ತೀವ್ರವಾಗಿ ಆರ್ಥಿಕೋನ್ನತಿ ಸಾಧಿಸಬೇಕೆಂಬ ಹಂಬಲ, ನಿಶ್ಚಯ, ಅದಕ್ಕೆ ಬೇಕಾದ ಕಾರ್ಯತತ್ಪರತೆ ಇವು ಕಾಣುತ್ತವೆ. ಈ ಹೆದ್ದಾರಿಯಲ್ಲಿ ಹೆಜ್ಜೆ ಇಡುತ್ತಿರುವ ರಾಷ್ಟ್ರಗಳಿಗೆ ಬೆಂಬಲ ಕೊಟ್ಟು ಎಲ್ಲಾ ಸಹಾಯ ಮಾಡಬೇಕಾದದ್ದು ತಮ್ಮ ಮುಖ್ಯ ಹೊಣೆ ಎಂದು ಮುಂದುವರಿದಿರುವ ರಾಷ್ಟ್ರಗಳು ಅರಿತು ಘೋಷಿಸಿರುವುದನ್ನೂ ಕಾಣುತ್ತೇವೆ. ಹೀಗೆ ಅಂಕುರಿಸಿರುವ ಸೌಹಾರ್ದ ಪ್ರಪಂಚ ಕಲ್ಯಾಣಕ್ಕಾಗಿ ಸಂಭವಿಸುವ ಒಳ್ಳೆಯ ಶಕ್ತಿಗಳಲ್ಲೊಂದಾಗಿದೆ.

ಮೂರನೆಯದಾಗಿ, ಇಂದಿನ ಅಂತರರಾಷ್ಟ್ರಸಹಕಾರವು ಯೋಚಿಸಿ, ಯೋಜಿಸಿ, ಸೃಜಿಸಿರುವ ಪರಿಸ್ಥಿತಿ. ಹಿಂದೆ—೧೯ ನೇ ಶತಮಾನದಲ್ಲಿ—ರಾಷ್ಟ್ರರಾಷ್ಟ್ರಗಳ ಆರ್ಥಿಕ ಪದ್ಧತಿಗಳು ನಿರಾತಂಕವಾಗಿ ಚಲಿಸುತ್ತಿದ್ದ ಆರ್ಥಿಕ ಶಕ್ತಿಗಳ ಮೂಲಕ ಒಂದುಗೂಡಿಸಲ್ಪಟ್ಟಿದ್ದವು. ಆ ಪರಿಸ್ಥಿತಿಯಲ್ಲಿ ಸ್ವರ್ಣಮಾನವು ಮುಖ್ಯ ಪಾತ್ರ ವಹಿಸಿದ್ದಿತು. ಇಂದಿನ ಪ್ರಪಂಚದಲ್ಲಿ ಸರ್ಕಾರದ ಕೈವಾಡ ಆರ್ಥಿಕ ಕ್ಷೇತ್ರದ ವಿವಿಧ ಭಾಗಗಳಲ್ಲಿಯೂ ಹೆಚ್ಚಾಗಿದೆ. ದೇಶ-ವಿದೇಶಗಳ ವ್ಯಾಪಾರ, ವಿನಿಮಯ, ಬಂಡವಾಳ, ಸಂಚಾರ ಇತ್ಯಾದಿ ವಿಷಯಗಳಲ್ಲಿ ಸರ್ಕಾರಗಳ ಪ್ರಭಾವ ಹೆಚ್ಚು. ಇದರಿಂದ ವಿವಿಧ ಸರ್ಕಾರಗಳು ಸೇರಿ ಒಮ್ಮತದಿಂದ ಆರ್ಥಿಕ ಚಟುವಟಿಕೆಗಳನ್ನು ಗೊತ್ತಾದ ಮಾರ್ಗದಲ್ಲಿ ನಡೆಯಿಸಬೇಕಾಗಿದೆ. ರಾಷ್ಟ್ರಸರ್ಕಾರಗಳು ಕಲೆತು ಅನೇಕ ಅಂತರರಾಷ್ಟ್ರೀಯ ಆರ್ಥಿಕ ಸಂಸ್ಥೆಗಳನ್ನು ಸ್ಥಾಪಿಸಿವೆ.

ಯುದ್ಧಾನಂತರ ಸ್ಥಾಪನೆಯಾಗಿರುವ ಯುನೈಟೆಡ್ ನೇಷನ್ಸ್ ಸಂಸ್ಥೆಯು ಅತ್ಯಂತ ಮುಖ್ಯವಾದ ಸಂಸ್ಥೆ. ಇದರ ಆರ್ಥಿಕ ಧ್ಯೇಯಗಳು ಇಂದಿನ ಅಂತರರಾಷ್ಟ್ರ ಆರ್ಥಿಕತೆಯ ವಿಶೇಷ ಲಕ್ಷಣವನ್ನು ಸೂಚಿಸುತ್ತವೆ. (i) ಉನ್ನತ ಜೀವನ ಮಟ್ಟವನ್ನು ಹೊಂದುವಂತೆ ಪ್ರಪಂಚದ ಸಾಧನಗಳನ್ನೂ, ಜ್ಞಾನವನ್ನೂ ಅತ್ಯುತ್ತಮ ರೀತಿಯಲ್ಲಿ ಉಪಯೋಗಿಸುವುದು; (ii) ಕೆಲಸಮಾಡಬಲ್ಲ ಹಾಗು ಮಾಡಬಯಸುವ ಪ್ರತಿಯೊಬ್ಬ ವ್ಯಕ್ತಿಗೂ ಉದ್ಯೋಗ ದೊರಕಿಸುವುದು; (iii) ಎಲ್ಲಾ ವರ್ಗದ ಜನತೆಗೂ ಒಂದು ಕನಿಷ್ಟ 'ಸಮಾಜರಕ್ಷಣೆ' ಅನುಕೂಲಗಳನ್ನು ಕಲ್ಪಿಸುವುದು; (iv) ಅಂತರ

ರಾಷ್ಟ್ರೀಯ ಅಭಿವೃದ್ಧಿಗಾಗಿ—ಮುಖ್ಯವಾಗಿ ಹಿಂದುಳಿದಿರುವ ರಾಷ್ಟ್ರಗಳಲ್ಲಿ—ದೊಡ್ಡ ಯೋಜನೆಗಳನ್ನು ಹಾಕಿಕೊಡುವುದು. ಇವಲ್ಲದೆ ಇತರ ಕ್ಷೇತ್ರಗಳಲ್ಲಿಯೂ ಯು. ಎನ್. ಸಂಸ್ಥೆಯು ಮುಖ್ಯಪಾತ್ರ ವಹಿಸಿದೆ. ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ವಿದ್ಯಾಭ್ಯಾಸ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ಅಂತರರಾಷ್ಟ್ರೀಯ ಸಮಸ್ಯೆಗಳನ್ನು ವ್ಯವಸ್ಥಿತ ರೀತಿಯಲ್ಲಿ ಬಗೆಹರಿಸಲು ಈ ಸಂಸ್ಥೆಯು ಹವಣಿಸುತ್ತಿದೆ.

ಈ ಸಂಸ್ಥೆಯ ಅಂಗವಾಗಿಯೂ, ಆಶ್ರಯದಲ್ಲಿಯೂ ಅನೇಕ ಉಪಸಂಸ್ಥೆಗಳು ಏರ್ಪಟ್ಟಿವೆ. ಹೀಗೆ ರಚಿತವಾಗಿರುವ ಸಂಸ್ಥೆಗಳನ್ನು ವಿಹಂಗಮ ದೃಷ್ಟಿಯಿಂದ ನೋಡಿದರೆ ಇಂದಿನ ಅಂತರರಾಷ್ಟ್ರ ಆರ್ಥಿಕ ರಚನೆಯ ಪರಿಪೂರ್ಣತೆ ಕಾಣುವುದು.

ಕೊನೆಯದಾಗಿ ಗಮನಿಸಬೇಕಾದ ಒಂದು ಮುಖ್ಯ ಅಂಶ ಆರ್ಥಿಕ ಯೋಜನೆ—ಅಂತರರಾಷ್ಟ್ರೀಯತೆ ಇವುಗಳ ಸಂಬಂಧ. ಈ ಶತಮಾನದಲ್ಲಿ ಆರ್ಥಿಕ ಯೋಜನೆಯ ಅನುಸರಣೆಯು ಅನೇಕ ದೇಶಗಳಲ್ಲಿ ಹಬ್ಬಿದೆ. ರಷ್ಯ, ಬಲ್ಗೇರಿಯ, ಯುಗೊಸ್ಲೇವಿಯ, ಪೋಲೆಂಡ್, ರುಮೇನಿಯ, ಜೆಕೋಸ್ಲವೇಕಿಯ, ಪೂರ್ವ ಜರ್ಮನಿ, ಹಂಗೆರಿ, ಚೈನ—ಈ ರಾಷ್ಟ್ರಗಳು ಕೇಂದ್ರಾಡಳಿತ ಯೋಜನೆಯ ಆರ್ಥಿಕ ವ್ಯವಸ್ಥೆಯುಳ್ಳ ರಾಷ್ಟ್ರಗಳಾಗಿವೆ. ಖಾಸಗಿ ಉದ್ಯಮಕ್ಕೆ ಹೆಚ್ಚು ಸ್ವಾತಂತ್ರ್ಯವಿರುವ ಇತರ ರಾಷ್ಟ್ರಗಳಲ್ಲಿಯೂ ಸಹ ಆರ್ಥಿಕ ಯೋಜನೆ ಪ್ರವೇಶಿಸಿದೆ. ಹಿಂದುಳಿದಿರುವ ರಾಷ್ಟ್ರಗಳು ಆರ್ಥಿಕ ಮುನ್ನಡೆಗೆ ಶೀಘ್ರಮಾರ್ಗ ಆರ್ಥಿಕ ಯೋಜನೆ ಎಂದು ಒಪ್ಪಿ ಯೋಜನೆಗಳನ್ನು ರೂಪಿಸಿ ಕಾರ್ಯಾಚರಣೆ ನಡೆಸುತ್ತಿವೆ. ಮುಂದುವರಿದಿರುವ ರಾಷ್ಟ್ರಗಳಲ್ಲಿ ಸರ್ಕಾರದ ಆರ್ಥಿಕ ಕ್ಷೇತ್ರ ವಿಸ್ತಾರವಾಗಿರುವುದರಿಂದಲೂ, ಆರ್ಥಿಕ ಸ್ಥಿಮಿತಕ್ಕೆ ಯೋಜನೆ ಸಹಕಾರಿಯಾಗಿರುವುದರಿಂದಲೂ ಆರ್ಥಿಕ ಯೋಜನೆಯ ಪ್ರಭಾವ ಹೆಚ್ಚಿದೆ. ಹೀಗೆ ಸಮಾಜವಾದಿ ರಾಜ್ಯಗಳಲ್ಲಿಯೂ, ಇತರ ರಾಜ್ಯಗಳಲ್ಲಿಯೂ ರಾಷ್ಟ್ರೀಯ ಆರ್ಥಿಕ ಯೋಜನೆ ಹಬ್ಬಿದೆ. ಈ ರಾಷ್ಟ್ರೀಯ ಯೋಜನೆಗಳನ್ನು ರಚಿಸುವಾಗ ಅಂತರರಾಷ್ಟ್ರೀಯ ಸಂಬಂಧಗಳನ್ನು ಸೂಕ್ಷ್ಮವಾಗಿ ಗಮನಿಸಬೇಕಾಗುವುದು; ವಿವಿಧ ರಾಷ್ಟ್ರೀಯ ಯೋಜನೆಗಳೂ ಪರಸ್ಪರವಾಗಿ ಹೊಂದಿಕೊಂಡಿರಬೇಕು. ಅಂದರೆ ರಾಷ್ಟ್ರೀಯ ಯೋಜನೆಗಳು ಅಂತರರಾಷ್ಟ್ರ ಬೃಹತ್ ಯೋಜನೆಯ ಅಂಗವಾಗಿರಬೇಕು. ಇಲ್ಲವೆ, ರಾಷ್ಟ್ರೀಯ ಯೋಜನೆಗಳನ್ನು ಸಮನ್ವಯಗೊಳಿಸುವ ಅಂತರರಾಷ್ಟ್ರೀಯ ವ್ಯವಸ್ಥೆ ಇರಬೇಕು. ಹೀಗೆ ಆರ್ಥಿಕ ಅಂತರರಾಷ್ಟ್ರೀಯತೆಗೆ ಕುಂದುಬಾರದಂತೆ ವಿವಿಧ ರಾಷ್ಟ್ರಗಳ ಆರ್ಥಿಕ ಯೋಜನೆಗಳನ್ನು ರೂಪಿಸುವುದು ಮುಂಬರುವ ತಲೆಮಾರಿನ ಹಿರಿಯ ಅಂತರರಾಷ್ಟ್ರ ಸಮಸ್ಯೆಯಾಗಿದೆ.

ಅ. ಪು. ಶ್ರೀನಿವಾಸಮೂರ್ತಿ

ಪ್ರಸಾದಿ ಸೋಮನಾಥವಿರಚಿತ ಅಕ್ಷರ ಮಾಲಿಕಾಗದ್ಯ

|| ಮಾಲಿನೀ ವೃತ್ತ ||

ಓಂ ಜಯಜಯ ಬಸವಾ[1]ಖ್ಯ[1] ಸ್ವಾನುಭೂತ್ಯೈಕಸೌಖ್ಯ
ಪ್ರಮಥಗಣಪವಿ[2]ತ್ರ[2] ಪ್ರಸ್ಫುರದ್ಭಕ್ತಿಗೋ[3]ತ್ರ[3]
ಪ್ರಣಮಿತಬುಧ[4]ವಾರ್ಯ[4] [5]ಸ್ಫಾರ[5]ದೈಶ್ವರ್ಯ[6]ಧೂರ್ಯ[6]
ಪ್ರಥಿತವೃಷಭ[7]ರೂಪ[7] ಭ್ರಾಜಮಾನ[8]ಪ್ರತಾಪ[8] ||

† ಅಪಿಚ ಶಿವಶೃಂಗಾರ ಆದಿಪಥವಿಸ್ತಾರ
ಇಹಪರ ಸುಖಾಧಾರ ಈಷಣತ್ರಯದೂರ
ಉದ್ಧತಗುಣೋಪೇತ [9]ಊರ್ಧ್ವ[9]ರೇತೋಜಾತ
ಋಷಭೆನಾಮಖ್ಯಾತ ೠಜಮಾಯಾತೀತ
ಌಶ್ಲಾಘ್ಯಸಂದೇಶ ೡಜನಕಸಂಕಾಶ
ಏಕಾಂಗವೀರೇಶ ಐಕ್ಯಸೌಖ್ಯಾವೇಶ
ಓಮಿತಿಪದೋನದ್ಧ ಔಷಧೇತರಸಿದ್ಧ
ಅಂಧ್ಯಾನಸುಸಮೃದ್ಧ [10]ಅಃ[10]ಕಲಿತಗುಣಬದ್ಧ
ಕಲಿಮಲಾಪಹಶೌರ್ಯ ಖಲ[11]ನಿರಾಸಕಚರ್ಯ[11]
ಗಣಲಾಲಿತಸ್ಥೈರ್ಯ ಘನಸತ್ವಥಾಚಾರ್ಯ
ಙಸ್ಫುರಣಧಿಕ್ಕಾರ ಚತುರಕವಿತಾಪೂರ
ಛದ್ಮೇತರಾಚಾರ ಜಗದತಿಶಯೋ[12]ದಾರ[12]
ಝುಗುಣನಿರಸನನಿಪುಣ ಞವಿದೂರಮತಿವರಣ
ಟಕ್ಕಾದಿರಾಗಚಣ ಠವಣವಿಹಿತಾವರಣ

---

[1] ಖ್ಯಃ (ಕ) [2] ತ್ರಃ (ಕ) [3] ತ್ರಾಃ (ಕ) [4] ವರ್ಯ (ಘ) [5] ಸ್ಫಾರ್ಯ (ಘ) [6] ಧುರ್ಯ (ಘ) [7] ರೂಪಃ (ಗ) [8] ಪ್ರತಾಪಃ (ಕ, ಖ, ಗ) † 'ಕ' ಪ್ರತಿಯಲ್ಲಿ "ವಾಚ್ಯ" ಎಂಬುದಾಗಿ ಸೂಚಿಸಿದ ಅನಂತರ ಈ ಪಾದ ಪ್ರಾರಂಭವಾಗಿದೆ. [9] ಊರ್ಧ್ವ (ಖ, ಗ, ಘ) [10] ಅಃ (ಖ) [11] ನಿರಕಾಚಾರ್ಯ (ಕ), ನಿರಸಕಾಚಾರ್ಯ (ಗ) [12] ದ್ಧಾರ (ಕ)

ಡಮರು[13]ಡಾಂಕೃತಿ[13]ವೇತ್ತ ಢಾಳಾನುಗತಿಚಿತ್ತ
[14]ಣ[14]ಪ್ರತಾಪೋದ್ಯುಕ್ತ ತತ್ತ್ವಸೌಖ್ಯಾವೇತ್ತ
[15]ಥವಿರಹಿತ[15]ಗುಣ[16]ಲೇಖ್ಯ[16] ದಮಿತತನುಗುಣಸೌಖ್ಯ
ಧರ್ಮಪಾಲನಮುಖ್ಯ ನವನಂದಿನಾಥಾಖ್ಯ
ಪರಮಪರಸುಖಸಾರ ಫಲಿತಜಗದುಪಕಾರ
ಬಸವಲಿಂಗಕುಮಾರ ಭಕ್ತಿಭಾಂಡಾಗಾರ
[17]ಮಚ್ಛಿ[17]ದಂತಃಕರಣ ಯಮಿಜನಾರ್ಚಿತಚರಣ
ರತಿಪಮದನಿರ್ಹರಣ ಲಸಿತಭಸಿತಾವರಣ
ವರದಲೀಲಾಶಕ್ತ ಶಮಿತವಿಷಯೋ[18]ದ್ರಿಕ್ತ[18]
ಷಡ್ವರ್ಗನಿರ್ಮುಕ್ತ ಸಹಜಜಂಗಮಭಕ್ತ
ಹರಗಣಸಿತಚ್ಛತ್ರ [19]ಳಯುತ[19]ಕೀರ್ತಿಕಳತ್ರ
ಕ್ಷರವಿಮುಖನಿಜಗಾತ್ರ ಅಕ್ಷರಸ್ತುತಿಪಾತ್ರ
ಇತಿ ಶಿವಕರ ಶ್ರೀ ಬಸವದಂಡನಾಥ
ನಮಸ್ತೇ ನಮಸ್ತೇ ನಮಃ

ಗ್ರಂಥ ||

ಅಕಾರಾದಿ ಕ್ಷಕಾರಾಂತಮಕರೋದಕ್ಷಮಾಲಿಕಾಂ
ಪ್ರಸಾದಿ ಸೋಮನಾಥಾಖ್ಯಃ ಬಸವಸ್ಯ ಕೃಪಾನಿಧೇಃ ||

ಅಕ್ಷರಮಾಲಿಕಾಗದ್ಯ ಸಂಪೂರ್ಣ
ಮಂಗಳಮಹಾಶ್ರೀ *

ಸಂ: ಸಿ. ಮಹಾದೇವಪ್ಪ

---

13 ಡಾಕೃತಿ (ಘ) 14 ಣಃ (ಕ) 15 ಥಮರಹಿತ (ಕ, ಖ.) 16 ಲೈಕ್ಯ (ಕ, ಖ.), ಲೇಕ್ಯ (ಘ) 17 ಮತ್ಸ್ಯ (ಖ, ಘ) 18 ದ್ಯುಕ್ತ (ಕ) 19 ಳಳಿತ (ಕ, ಖ.)

* ಈ ಅಕ್ಷರಮಾಲಿಕಾಗದ್ಯವನ್ನು ನಾಲ್ಕು ತಾಳೆಯೋಲೆ ಪ್ರತಿಗಳ ಆಧಾರದಿಂದ ಸಂಪಾದಿಸಲಾಗಿದೆ. ಈ ಗದ್ಯದಲ್ಲಿ ಅಕಾರಾದಿಕ್ಷಕಾರಾಂತವಾದ ಅಕ್ಷರಗಳಿಂದ ಬಸವದಂಡನಾಥನನ್ನು ಸ್ತುತಿಸಲಾಗಿದೆ. ಬಸವೇಶ್ವರನ ಮಾತೃಕಾರೂಪವಾದ ಈ ಮಣಿಮಾಲೆಯನ್ನು **ಪ್ರಸಾದಿ ಸೋಮನಾಥನು** ರಚಿಸಿರುವನೆಂದು ಈ ಗದ್ಯಾಂತದ ಶ್ಲೋಕದಿಂದ ತಿಳಿದುಬರುತ್ತದೆ. ಕರ್ಣಾಟಕ ಕವಿಚರಿತ್ರೆಯಲ್ಲಿ ಈ ಅಕ್ಷರ ಮಾಲಿಕೆಯ ವಿಚಾರ ಏನೂ ತಿಳಿದುಬರುವುದಿಲ್ಲ. ಕನ್ನಡದಲ್ಲಿ ಈ ಅಕ್ಷರಮಾಲಿಕಾಗದ್ಯಕ್ಕೆ ಒಂದು ಟೀಕೆಯಿದೆ.

‘ಸೆರಗಿನ ಕೆಂಡ’

(ರೇಡಿಯೋ ನಾಟಕ)

ಸಿ. ರಾಮಚಂದ್ರಶರ್ಮ

‘ಸೆರಗಿನ ಕೆಂಡ’

Sound—ಒಂದೇ ಸಮನೆ ಬೀಳುತ್ತಿರುವ ಮಳೆ; ಗಾಳಿಯ ನರಳಾಟ; ನಡುವಿಗೆ- ಆಗೊಮ್ಮೆ, ಈಗೊಮ್ಮೆ—ಗುಡುಗಿನ ಅಬ್ಬರ.

ಹೆಂಗಸು—ಹೇಳು ಮತ್ತೆ! ಸುಮ್ಮನೆ ಕೂತುಕೊಂಡುಬಿಟ್ಟೆಯಲ್ಲ!

ಮಗು—ಮೂರೊಂದಲ ಮೂರು; ಮೂರೆರಡಲಾರು; ಮೂರ ಮೂರ ಲೊಂಬತ್ತು; ಮೂರೈದಲು ಹದಿನೈದು. . .

ಹೆಂಗಸು—ಮೂರು ನಾಲ್ಕಲು ಎಷ್ಟು, ಸರೋಜ? ಹೇಳೋದೇ ಮರೆತೆ.

ಸರೋಜ—ಮೂರು ನಾಲ್ಕಲು. . .

ಗಂಡಸು— ಅವಳಿನ್ನೂ ಬರಲೇ ಇಲ್ಲವಲ್ಲಮ್ಮ, ಸೀತ?

ಸೀತ—ಗಂಟೆ ಎಷ್ಟಾಯ್ತು, ಅಣ್ಣ?

ಗಂಡಸು—ಎಂಟು ಗಂಟೆ ಸಮಯ.

ಸೀತ—ಇನ್ನೇನು ಬರಬಹುದು ಹಾಗಾದರೆ. ಹರಿಕಥೆ ಮುಗಿದಿದ್ದರೂ ಹಾಳು ಮಳೆ ಗೊಳೋ ಅಂತ ಸುರೀತಿದೆ. ಹೇಗೆ ಬರುಕ್ಕಾಗುತ್ತೆ, ಅಣ್ಣ?

ಗಂಡಸು—ಇಷ್ಟು ಮಳೆ ಸುರೀತಾ ಇದೆ. ಇವತ್ತೊಂದು ದಿವಸ ಹೋಗದೆ ಇದ್ದರೂ ಚೆನ್ನಾಗಿತ್ತು.

ಸೀತ—ನಾನೂ ಹೇಳಿದೆ: ಬೇಡಕಣಮ್ಮ ಅಂತ. ಅಮ್ಮ ಕೇಳಬೇಕಲ್ಲ!

ಗಂಡಸು—ಸೀತ, ನನಗೆ ಯಾಕೋ ಹೆದರಿಕೆ ಆಗ್ತಾ ಇದೆ ಈಚೆಗೆ ನಿಮ್ಮಮ್ಮನ ತರಹ ಕಂಡು. ಈ ಪೂಜೆ, ಪುನಸ್ಕಾರ, ಉಪವಾಸ!

Sound—ಎಳೆಗೂಸಿನ ಅಳು.

ಸೀತ—ಹೋಗಮ್ಮ, ಸರೋಜ. ತೂಗಮ್ಮ ಸ್ವಲ್ಪ.

Sound—ಸ್ಲೇಟು ನೆಲಕ್ಕೆ ಬಿದ್ದ ಸದ್ದು.

ಗಂಡಸು—ದಿನವಹಿ ಒಪ್ಪತ್ತು ಮಾತ್ರ ಊಟ ಅಂದರೆ ಮೈಗಾಗಬೇಡವೇ ಅಮ್ಮ? ಫಲಹಾರಕ್ಕಾದರೂ ಏನಾದರೂ ಮಾಡಿಕೋತಾಳೋ, ಇಲ್ಲ, ಅದೂ ಇಲ್ಲವೊ?

ಸೀತ—ಏನೂ ಇಲ್ಲ . . . (ತಡೆದು) ಅಣ್ಣ, ನಾನು ಹೋದ ಗೌರೀ ಹಬ್ಬಕ್ಕೆ ಬಂದು ಹೋದಾಗ ಅಮ್ಮ ಹೀಗಿರಲಿಲ್ಲವಲ್ಲ, ಅಲ್ಲವೆ? ಯಾವಾಗಿನಿಂದ ಹೀಗೆ, ಅಣ್ಣ?

ಗಂಡಸು—ವರ್ಷವಾಗ್ತಾ ಬಂತಮ್ಮ. ಇದ್ದಕ್ಕಿದ್ದ ಹಾಗೇ ಗೋಕರ್ಣಕ್ಕೆ ಹೋಗಿ ಬರೋಣವೇ ಅಂದಳು. ಯಾಕೆ ಹೀಗೆ ಕೇಳ್ತಾಳೆ ಅಂತನ್ನೂದು ಅರ್ಥ ವಾಗದೆ ನಾನೂ ಹೂಂ ಅಂದೆ. ಬಂದೋಳೇ ಶುರು ಮಾಡಿದಳಮ್ಮ ಪೂಜೆ, ಪುನ ಸ್ಕಾರಕ್ಕೆ. ನಾನೂ ಹಾಸ್ಯ ಮಾಡಿ ನೋಡಿದೆ. ಬೈದು ನೋಡಿದೆ. ಏನೂ ಪ್ರಯೋಜನವಾಗಲಿಲ್ಲ.

ಸೀತ—ಈಚೆಗೆ ಅಮ್ಮನ ಮುಖ ನೋಡಿದೀಯ, ಅಣ್ಣ? ಏನೋ ಹೆದರಿಕೆ. ಏನೋ ಆತಂಕ.

ಗಂಡಸು—ಹೌದಮ್ಮ, ತಾಯಿ, ಹೌದು.

ಸೀತ—ಒಬ್ಬಳೇ ಕೂತಿದ್ದಾಗ ತನಗೆ ತಾನೇ ಮಾತನಾಡಿಕೋತಾ ಇರ್ತಾಳೆ.

ಗಂಡಸು—ಅಷ್ಟೇ ಆದರೆ ಏನೂ ಗಾಬರಿ ಇಲ್ಲ ಅನ್ನು. ಹತ್ತರಲ್ಲಿ ಒಂಬತ್ತು ಜನಕ್ಕೆ ಆ ಅಭ್ಯಾಸವಿರುತ್ತೆ. ಅಷ್ಟೇಕೆ? ನನಗೂ ಇದೆ . . .

ಸೀತ—ಅಷ್ಟೇ ಆಗಿದ್ದರೆ ನಾನು ತಾನೇ ಯಾಕೆ ಯೋಚನೆ ಮಾಡ್ತಾ ಇದ್ದೆ, ಹೇಳು. ಯಾರ ಕೈಲೋ ಮಾತನಾಡ್ತಾ ಇರ್ತಾಳೆ ಅಮ್ಮ. ಪ್ರಶ್ನೆ ಕೇಳೂದು, ಉತ್ತರ ಹೇಳೂದು. ಮೊನ್ನೆ, ಕೇಳೇ ಬಿಟ್ಟೆ: ಯಾರಮ್ಮ ನಿನ್ನ ಜೊತೆಗೆ ಅಂತ.

ಗಂಡಸು—ಏನಂದಳು ಅದಕ್ಕೆ?

ಸೀತ—ಮೀನಾಕ್ಷಿ, ಕಣೆ, ಅಂದಳು.

Sound—ಗುಡುಗು ಅಪ್ಪಳಿಸಿದ ಸದ್ದು.

ಗಂಡಸು (ಗಾಬರಿಯಾಗಿ)—ಯಾರು? ಯಾರು ಅಂದಳು?

ಸೀತ—ಮೀನಾಕ್ಷಿ ಅಂತೆ. ಏನೋ, ಯಾರಾದರೂ ಬಂದಿರಬಹುದೇನೋ ಅಂದುಕೊಂಡು ಅಡಿಗೇ ಮನೆಗೆ ಹೋಗಿ ನೋಡಿದೆ. ಯಾರೂ ಇರಲಿಲ್ಲ ಅಲ್ಲಿ.

ಗಂಡಸು—(ಏನೋ ನೆನಪು ಮಾಡಿಕೊಂಡವನಂತೆ) ಕಾಗದ ಬರೆದೆಯ ನಿನ್ನ ಗಂಡನಿಗೆ?

ಸೀತ—ಅವತ್ತೇ ಬರೆದೆ, ಅಣ್ಣ.

ಗಂಡಸು—ಅವನಿಂದ ಕಾಗದ ಬಂದಿಲ್ಲ ಅನ್ನೂದು ಒಂದು ದೊಡ್ಡ ಯೋಚನೆ ಆಗಿಹೋಗಿದೆ ನಿಮ್ಮಮ್ಮನಿಗೆ. ಅವನು ತಾನೇ ಯಾಕೆ ಹೀಗೆ ಮಾಡಿದನೋ . . . ನಾನೂ ಬರೆದೆ ಸೋಮವಾರ: ಸಾಧ್ಯವಾದರೆ ಒಂದು ದಿನದ ಮಟ್ಟಿಗೆ ಬಂದು ಹೋಗು ಅಂತ.

ಸೀತ—ಅಣ್ಣ. . . ?

ಗಂಡಸು—ಏನಮ್ಮ?

ಸೀತ—ನೆನ್ನೆ ಅಮ್ಮ ಹರಿಕಥೆಯಿಂದ ಬಂದೋಳೇ ಏನು ಕೇಳಿದಳು ಗೊತ್ತೆ:

ಬಂತೇ ಕಾಗದ ? ಅಂದಳು. ಇಲ್ಲ ಅಂದೆ. ' ಹಾಗಾದರೆ ನಿಮ್ಮ ಮಾವನ ಮನೆಯವರು ನಿನ್ನ ಇನ್ನು ಕರೆಸಿಕೊಳ್ಳೋದಿಲ್ಲ ಅನ್ನು ' ಅಂದಳು. ಯಾಕಣ್ಣ, ನಮ್ಮ ಮಾವನವರು ನಿನಗೇನಾದರೂ. . . .

ಗಂಡಸು—ಛೆ, ಛೆ, ಉಂಟೆ ? . . . (ತಡೆದು) ಒಂದೊಂದು ಸರ್ತಿ ಡಾಕ್ಟರ ನ್ನಾದರೂ ಕರೆದುಕೊಂಡು ಬಂದು ತೋರಿಸೋಣವೇ ಅಂತನ್ನಿಸುತ್ತೆ.

ಸೀತ—ಬೇಡ, ಅಣ್ಣ, ಬೇಡ. ತನಗೆ ಬುದ್ಧಿ ಸರಿ ಇಲ್ಲ ಅಂತಂದುಕೊಂಡು ಬಿಡ್ತಾಳೆ ಅಮ್ಮ.

ಗಂಡಸು—ನಾನೂ ಹಾಗಂದುಕೊಂಡೇ ಸುಮ್ಮನಿದೇನಮ್ಮ. . . .

ಸರೋಜ—(Fading in) ಅಮ್ಮ, ಮಗು ಮಲಗಿಕೊಂಡಿತಮ್ಮ !

ಸೀತ—ಜಾಣೆ !

ಗಂಡಸು—ನಾಕು ಹಗ್ಗ ಹಿಡಿದುಕೊಂಡು ತೊಟ್ಟಿಲು ತೂಗುಕ್ಕೆ ಬರುತ್ತೇನೇ ನಿನಗೆ, ಪುಟ್ಟಿ ?

ಸರೋಜ—ಬರದೇ ಏನೊ ! ನಾನು ದೊಡ್ಡೋಳು, ತಾತ.

ಗಂಡಸು—ನಿನಗೆಷ್ಟು ವಯಸ್ಸು ? ಹೇಳು.

ಸರೋಜ—ಐದು ತುಂಬಿ ಆರು ಅಲ್ಲವೇನೇ, ಅಮ್ಮ ?

ಸೀತ—ಅವಳಿಗೇನು ಬರದೇಹೋದರೂ ಹರಟೆ ಹೊಡೆಯುಕ್ಕೆ ಬರುತ್ತೆ. ಅಮ್ಮಂಗೂ ಇವಳಿಗೂ ಅದೆಷ್ಟು ಕೇವಲ ಅಂತಿ, ಅಣ್ಣ !

ಗಂಡಸು—ಹೌದೇನೇ, ಪುಟ್ಟಿ ?

ಸರೋಜ—ಏನಿಲ್ಲ. ನಾನು ಅಜ್ಜೀ ಕೈಲಿ ಮಾತು ಬಿಟ್ಬಿಟ್ಟಿ ಇವತ್ತು.

ಗಂಡಸು (ನಗುತ್ತ)—ಯಾಕೆ ? ದ್ರಾಕ್ಷಿ ಕೊಡುಲ್ಲ ಅಂದಳೇನೆ ?

ಸರೋಜ—ಅದಕ್ಕಲ್ಲ, ತಾತ. ನೋಡು, ತಾತ, ಇವತ್ತು ಬೆಳಿಗ್ಗೆ ಕತೆ ಹೇಳ್ತಾ ಇದ್ದಳು. ನೀನು ಮಗೂಗೆ ಹಾಲು ಕುಡಿಸ್ತಿದ್ದೆಯಲ್ಲ, ಅಮ್ಮ, ಆಗ . . .

ಸೀತ—ನೋಡಿದೆಯಾ, ಅಣ್ಣ, ಇವಳ ಮಾತಿನ ತರಹಾನ ?

ಗಂಡಸು—ಚೆನ್ನಾಗೇ ಆಡುತ್ತಲ್ಲೇ ! . . . ಆಮೇಲೆ ?

ಸರೋಜ—ಆಮೇಲೆ . . . ಹುಂ . . . ಹುಂ . . . ಅವರಿಬ್ಬರಿಗೂ ಮದುವೆ ಆಯ್ತು ಅಂತಂದಳು.

ಸೀತ—ಯಾರಿಗೆ ?

ಸರೋಜ—ಅದೇ, ಅಮ್ಮ : ರಾಮಂಗೂ ಸೀತೇಗೂ . . . ನಾನಿದ್ದೋಳು . . .

ಗಂಡಸು— ಏನು ಮಾಡಿದೆ ?

ಸರೋಜ—ನಿನಗೂ ತಾತನಿಗೂ ಮದುವೆ ಯಾವಾಗ ಆಯ್ತು ಅಂತ ಕೇಳಿದೆ.

Sound—ಗುಡುಗಿನ ಅಬ್ಬರ ; ಸೀತೆಯ ನಗು.

ಗಂಡಸು—ಅದಕ್ಕೆ ಅಜ್ಜಿ ಏನು ಹೇಳಿದಳು, ಪುಟ್ಟಿ ?

ಸರೋಜ—(ಅಳುವ ಧ್ವನಿಯಲ್ಲಿ) ಜೋರಾಗಿ ಹೊಡೆದುಬಿಟ್ಟಳು, ತಾತ . . .

ಸೀತ—ಹೋಗೆ, ಸುಳ್ಳು ಹೇಳಬೇಡ. ಅಷ್ಟಕ್ಕೆ ಯಾರಾದರೂ ಹೊಡೀತಾರೇನೇ ?

ಸರೋಜ—ನಿಜವಾಗಲೂ, ಅಮ್ಮ . . .

ಗಂಡಸು—ಹೊಡೆದಿದ್ದರೂ ಹೊಡೆದಿರಬಹುದು, ಸೀತ. ಹೊಡೆದಿರಬಹುದು. . .

(Fade out)

Sound—ಮಳೆ ಸುರಿವ ಸದ್ದು ; ಬೀದಿಯ ಜನ, ವಾಹನಗಳು ಓಡುತ್ತಿರುವ ಸದ್ದಿನ ಜೊತೆ ಜೊತೆಗೆ ಗಂಟೆಯ ಗಣಗಣ ನಾದ.

ಧ್ವನಿ ೧—ಇನ್ನೆಷ್ಟು ಹೊತ್ತು ಅಂತ ಕಾಯೂದು, ಸಾವಿತ್ರಮ್ಮ ? ಸಂಜೆಗೆ ಶುರುವಾದ ಮಳೆ: ನಿಲ್ಲುತ್ತೋ ಇಲ್ಲವೊ.

ಸಾವಿತ್ರಮ್ಮ—ಇನ್ನಷ್ಟು ಹೊತ್ತು ಹರಿಕಥೆಯಾದರೂ ನಡೆದಿದ್ದರೆ ಹಾಯಾಗಿ ಕೂತು ಕೇಳ್ತಾ ಇರಬಹುದಾಗಿತ್ತು.

ಧ್ವನಿ ೧—ನಾನೂ ಎಷ್ಟೋ ಕಡೆ ಹರಿಕಥೆ ಕೇಳಿದೀನಮ್ಮ. ಈ ಭಾಗವತರ ಹಾಗೆ ಹೇಳೋರನ್ನ ಕಾಣೆ.

ಧ್ವನಿ ೨—ನನಗಂತೂ ಇವತ್ತು ಕಣ್ಣಲ್ಲಿ ನೀರು ಬಂತು ಅಂತೀನಲ್ಲ ?

ಸಾವಿತ್ರಮ್ಮ—ಯಾವಾಗ ಅಂತೀರಿ ?

ಧ್ವನಿ ೨—ಅದೇ ಕಣ್ರೀ : ಅಹಲ್ಯೇಗೆ ಶಾಪ ಕೊಟ್ಟಾಗ . . . !

ಧ್ವನಿ ೧—ನಿಜ ಕಣ್ರಿ ನೀವು ಹೇಳಿದ್ದು. ನನಗೂ ನೋಡಿ ಹಾಗೇ ಅನ್ನಿಸಿತ್ತು.

ಸಾವಿತ್ರಮ್ಮ—ಮಾಡಿದ ತಪ್ಪಿಗೆ ಶಿಕ್ಷೆ ಅನುಭವಿಸಲೇ ಬೇಕು, ನೋಡಿ. ಅಂಥಾ ದೇವ ದೇವತೆಗಳಿಗೂ ತಪ್ಪಿದ್ದಲ್ಲ ಶಿಕ್ಷೆ ಅನ್ನೂದು !

ಧ್ವನಿ ೧—ನಮ್ಮಂತಹ ಮನುಷ್ಯರ ಪಾಡು ಹೇಳಲೇ ಬೇಡಿ, ಬಿಡಿ.

ಧ್ವನಿ (Filter)—ಮಾಡಿದ ತಪ್ಪಿಗೆ ಶಿಕ್ಷೆ ಅನುಭವಿಸಲೇ ಬೇಕು ; ಕೇಳಿಸಿತೆ ?

ಧ್ವನಿ ೧—ಅದಕ್ಕೇ ನೋಡಿ, ದೊಡ್ಡೋರು ಒದ್ದುಕೊಳ್ಳೋದು, ತಪ್ಪೇ ಮಾಡ ಬಾರದು ಅಂತ . . . ನೀವೇನಂತೀರಿ, ಲಲಿತಮ್ಮ ?

ಧ್ವನಿ (Filter ನಗುತ್ತ)—ಒಳ್ಳೇ ಪ್ರಶ್ನೆ ನಿನಗೆ! ತಪ್ಪೇ ಮಾಡಬಾರದು. ನೀನೇನಂತಿ ?

ಲಲಿತಮ್ಮ—ಹೌದಮ್ಮ ಹೌದು. ತಪ್ಪು ಮಾಡಬಾರದು, ತಾಯಿ, ಮಾಡಬಾರದು.

ಸಾವಿತ್ರಮ್ಮ—ಅಂದಹಾಗೇ ಮಗು ಬಾಣಂತಿ ಹೇಗಿದಾರೆ, ಲಲಿತಮ್ಮ ?

ಲಲಿತಮ್ಮ—ಚೆನ್ನಾಗಿದಾರಮ್ಮ—ದೇವರ ದಯದಿಂದ.

ಧ್ವನಿ ೧—ಸೀತಮ್ಮಂಗಾಗಲೇ ಐದು ತಿಂಗಳು ತುಂಬಿತಲ್ಲವೇನರಿ? ಇನ್ನೂ ಇಲ್ಲೇ ಇದಾಳೆಯೆ?

ಲಲಿತಮ್ಮ—ಇಲ್ಲೇ ಇದಾಳೆ. ನಾವಿನ್ನೂ ಕಳಿಸಿಲ್ಲ, ಶಂಕ್ರಾಂತಿ ಮುಗಿಸಿಕೊಂಡು ಹೋಗಲಿ ಅಂತ.

ಧ್ವನಿ (Filter)—ಇಲ್ಲೇ ಇರ್ತಾಳೆ—ಎಂದೆಂದಿಗೂ; ಅವಳ ಮಾವ ಮನೆಯವರು ಇನ್ನವಳನ್ನ ಕರೆಸಿಕೊಳ್ಳುಲ್ಲ ಅಂತ ಹೇಳು, ಪರವಾಗಿಲ್ಲ!

ಲಲಿತಮ್ಮ—ಯಾಕೆ ಹೇಳಲಿ ಹಾಗೆ? ಕರೆಸಿಕೊಂಡೇ ಕರೆಸಿಕೋತಾರೆ!

ಸಾವಿತ್ರಮ್ಮ—ಏನಂದಿರಿ, ಲಲಿತಮ್ಮ ?

ಲಲಿತಮ್ಮ—ಏನಿಲ್ಲ . . . ಹೊರಟುಬಿಡೋಣವೇ ಅಂದುಕೊಂಡೆ . . .

ಧ್ವನಿ ೧—ಹೇಗಃ ಹೋಗ್ತೀರಿ? ಮಳೆಯಲ್ಲರಿ?

ಲಲಿತಮ್ಮ—ಬಾಣಂತೀಗೆ ಒಂದಿಷ್ಟು ಬಿಸಿ ಅನ್ನ ಮಾಡಬೇಡವೆ, ಅಮ್ಮ, ನಾನಿಲ್ಲಿ ನಿಂತುಕೊಂಡ್ರೆ? (Fade out)

Sound—ಮಳೆ; ಬೀದಿಯ ಸದ್ದು; ನಿಂತ ನೀರಿನಲ್ಲಿ ಹೆಜ್ಜೆ ಇಟ್ಟಾಗಿನ ಸದ್ದು.

ಧ್ವನಿ ೩—ಏನೇ ಮೀನ? ಗುರುತು ಗೊತ್ತಾಗಲಿಲ್ಲವೇನೆ? ನಾನು ಕಣೆ, ಸರಸ್ವತಿ!

Sound—ಗುಡುಗು.

ಧ್ವನಿ (Filter)—ನೋಡಿದೆಯ? ನಿನ್ನ ಗುರುತು ಯಾರಿಗೂ ಸಿಗೋದೇ ಇಲ್ಲ ಅಂತಿದ್ದೆಯಲ್ಲ! ಹೋಗಲಿ, ಸುಮ್ಮನಿರಬೇಡ. ಏನಾದರೂ ಒಂದು ಉತ್ತರ ಕೊಡು.

ಲಲಿತಮ್ಮ—ನೀವು ಯಾರೋ ಗೊತ್ತೇ ಇಲ್ಲವಲ್ಲಮ್ಮ? ನನ್ನ ಹೆಸರು ಲಲಿತಮ್ಮ.

ಸರಸ್ವತಿ—ಕ್ಷಮಿಸಿ, ಲಲಿತಮ್ಮ. ಇದೇನಮ್ಮ ವಿಚಿತ್ರ! ಐವತ್ತಕ್ಕೇ ನನಗೆ ಅರುಳು ಮರುಳು ಬಂತೋ ಏನೊ! ಹರಿಕಥೆ ನಡೀತಿದ್ದಾಗಲೇ ನಿಮ್ಮನ್ನ ನೋಡಿದೆ. ನಮ್ಮೂರ ಮೀನಾಕ್ಷಿಯೇ ಅಂತನ್ನಿಸಿತು. ಈಗ ಕೇಳೇಬಿಟ್ಟೆ. ಏನೂ ತಿಳಿದುಕೊಳ್ಳಬೇಡಿ, ಲಲಿತಮ್ಮ.

ಲಲಿತಮ್ಮ—ಅದಕ್ಕೇನಮ್ಮ? ಏನೂ ಪರವಾಗಿಲ್ಲ!

ಧ್ವನಿ (Filter)—ನೋಡೋಣ ಕೇಳು: ಮೀನ ಅಂದರೆ ಯಾರು ಅಂತ. ಇನ್ನು ಯಾವ ಮೀನಾಕ್ಷೀನೋ ನೀನು ಅಂದುಕೊಂಡು ಮಾತನಾಡಿಸಿರಬಹುದು. ಕೇಳು.

ಲಲಿತಮ್ಮ—ಅದು ಯಾರು, ಸರಸ್ವತಮ್ಮ, ನೀವು ಮಿಾನ ಅಂದರಲ್ಲ?

ಸರಸ್ವತಿ—ಬಿಡಿ, ಲಲಿತಮ್ಮ, ಆ ಹಾಳು ಮೂಳಿ ಮಾತು ಯಾಕೆ? . . . . ನನ್ನ ಓರಗೆಯವಳೇ ಕಣಮ್ಮ. ನಮ್ಮೂರ ಅಮಲ್ದಾರರ ಮಗನಿಗೇ ಕೊಟ್ಟು ಮದುವೆಯೂ ಆಗಿತ್ತು. ಏನು ಬಂತೋ ಏನು ಕೇಡೋ, ಇದ್ದಕ್ಕಿದ್ದ ಹಾಗೇ ಗಂಡನ್ನ ಬಿಟ್ಟು ಇನ್ನು ಯಾವನ ಜತೆಗೋ ಓಡಿಹೋಗಿಬಿಡೊದೇ, ಲಲಿತಮ್ಮ? ಬೆಂಗಳೂರಿನಲ್ಲಿದಾಳೆ ಅವನ ಜತೆಗೆ ಸಂಸಾರಮಾಡಿಕೊಂಡು ಅಂತ ಯಾರೋ ಅಂದರು. ಹದಿನೈದು ವರ್ಷದ ಹಿಂದಿನ ಮಾತು ಅನ್ನಿ. ಎಷ್ಟು ನಿಜವೋ ಎಷ್ಟು ಸುಳ್ಳೋ ಕಂಡೋರು ಯಾರು, ಹೇಳಿ. ಬದುಕಿದಾಳೋ, ಇಲ್ಲ, ಇನ್ನು ಯಾವನ ಜತೆಗಾದರೂ ಓಡಿಹೋದಳೋ . . . ಪರಮಾತ್ಮನೇ ಬಲ್ಲ. ಋಷಿಪತ್ನಿ ಕಳೆ ಇರುವ ನಿಮ್ಮನ್ನ ಆ ಹಾಳು ರಂಡೆ ಅಂತಂದುಕೊಂಡು ಮಾತನಾಡಿಸಿದೆನಲ್ಲಮ್ಮ ನಾನು? ಏನೂ ಅಂದುಕೋಬೇಡಿ, ತಾಯಿ!

Sound—ಸಿಡಿಲು.

ಸರಸ್ವತಿ—ನಾನು ಹೀಗೇ ಬರಲೇ, ಲಲಿತಮ್ಮ?

ಲಲಿತಮ್ಮ—ಹೋಗಿ ಬಿಟ್ಟು ಬನ್ನಿ, ಸರಸ್ವತಮ್ಮ.

ಸರಸ್ವತಿ—ನಾಳೆ ಬನ್ನಿ, ಮರೀಬೇಡಿ. ಕಥೆ ಚೆನ್ನಾಗಿರುತ್ತೆ. **(Fade out)**

ಧ್ವನಿ **(Filter)**—ನಿಮ್ಮೂರಿನ ಸರಸ್ವತಿ ನಿನಗಿಲ್ಲಿ, ಇಷ್ಟು ವರ್ಷವಾದ ಮೇಲೆ, ಸಿಗಬಹುದು ಅಂತ ನೀನು ಕನಸುಮನಸಿನಲ್ಲೂ ಕಂಡಿರಲಿಲ್ಲ, ಅಲ್ಲವೆ?

ಲಲಿತಮ್ಮ—ಅವಳಿರೂದೇ ಮರೆತು ಹೋಗಿತ್ತು ನನಗೆ. ಅವಳು ಸಿಗಬಹುದು—ಅದೂ ಇಲ್ಲಿ—ಅಂತ ನನಗೆ ತಾನೇ ಹೇಗೆ ಹೊಳೀಬೇಕು?

ಧ್ವನಿ **(Filter)**—ಅರ್ಥವಾಯಿತೆ ಈಗಲಾದರೂ: ಆದದ್ದನ್ನೆಲ್ಲ ಮರೆತು ಇರಬೇಕು ಅಂತ ನೀನಂದುಕೊಂಡರೂ ಜನಕ್ಕೆ ಅದು ಮರೆಯುಲ್ಲ ಅಂತ?

ಲಲಿತಮ್ಮ—ಈಗತಾನೇ ಏನು ಆಗಿದ್ದು ಮಹ? ಅವಳಿಗೆ ಬಂದ ಅನುಮಾನ ಹೋಗುವ ಹಾಗೇ ಉತ್ತರ ಹೇಳಿದೆನಲ್ಲ!

ಧ್ವನಿ **(Filter)**—(ನಗುತ್ತ) ಏನಂದೆ? ಅಷ್ಟಕ್ಕೇ ಸರಸ್ವತೀಗೆ ಬಂದ ಅನುಮಾನ ಹೊರಟೇಹೋಯಿತು ಅಂದುಕೊಂಡೆಯಾ? ಪೆದ್ದಿ!

ಲಲಿತಮ್ಮ—ಹೋಗಿಲ್ಲವೆ ಹಾಗಾದರೆ?

ಧ್ವನಿ **(Filter)**—ನನ್ನ ಕೇಳಬೇಡ ಸದ್ಯ!

ಲಲಿತಮ್ಮ—ನಾಳೇ ಇಂದ ನಾನು ಹರಿಕಥೆಗೆ ಹೋಗೋದೇ ಇಲ್ಲ. ಮತ್ತೆ ಅವಳಿಗೆ ಮುಖವೇ ತೋರಿಸೂದಿಲ್ಲ . . .

ಧ್ವನಿ (Filter)—ಏನು, ಅದರಿಂದ ವಿಷಯ ಸರಿಯಾಗಿ ಹೋಗಿಬಿಡುತ್ತೆ ಅಂತಲೋ ನಿನ್ನ ಲೆಕ್ಕಾಚಾರ? ಏನಾಗುತ್ತೆ ಗೊತ್ತೆ? ಅವಳ ಅನುಮಾನ ಜಾಸ್ತಿಯಾಗಿ ಹತ್ತು ಜನಕ್ಕೆ ವಿಷಯ ಹೇಳ್ತಾಳೆ. . . . (ತಡೆದು) ಇಷ್ಟಕ್ಕೂ ನಿನ್ನ ವಿಷಯ ಅವಳೊಬ್ಬಳಿಗೇ ಆದರೆ ಗೊತ್ತಿರೋದು . . .!

ಲಲಿತಮ್ಮ—(ಗಾಬರಿಯಿಂದ) ಏನು? ಬೇರೆ ಯಾರಿಗಾದರೂ ಗೊತ್ತೆ?

ಧ್ವನಿ (Filter)—ಮಾತಿಗಂದೆ, ಬಿಡು, ಹೋಗಲಿ . . . (ತಡೆದು) ಸೀತಾ ಗಂಡ ಕಾಗದ ಬರೆದು ಮೂರು ತಿಂಗಳ ಮೇಲಾಯ್ತಲ್ಲವೆ?

ಲಲಿತಮ್ಮ—ಏನು? ಅವಳ ಮಾವನ ಮನೆಯವರಿಗೂ ಗೊತ್ತೇ ವಿಷಯ?

ಧ್ವನಿ (Filter)—ಸರೋಜ ಇವತ್ತು ಬೆಳಿಗ್ಗೆ ನಿನ್ನ ಏನು ಕೇಳಿದ್ದು: ನಿನಗೂ ತಾತನಿಗೂ ಯಾವಾಗ ಮದುವೆ ಆದದ್ದು ಅಂತಲ್ಲವೆ?

ಲಲಿತಮ್ಮ—ಅಯ್ಯೋ, ಅಯ್ಯೋ! ಆ ಮಗುಗೂ. . . .

ಧ್ವನಿ (Filter)—ಯಾಕೆ ಗೊತ್ತಾಗಿರಬಾರದು ಅಂತೀನಿ? ಸರಸ್ವತೀ ಹಾಗೆ ಇನ್ನೂ ಯಾರಿಗಾದರೂ ನಿನ್ನ ಗುರುತು ಗೊತ್ತಾಗಿರಬಹುದು. ಮನೇಲಿ ದೊಡ್ಡ ದೊಡ್ಡೋರು ಆಡಿಕೊಂಡಿದ್ದನ್ನ ಕೇಳಿಸಿಕೊಂಡ ಅವರ ಮನೇ ಮಗು ಸ್ಕೂಲಲ್ಲಿ ನಿಮ್ಮ ಸರೋಜನ್ನ ಕೇಳಿರಬಹುದು.

Sound—ಕಾರ ಹಾರನ್ನು—ಒಂದು ಬಾರಿ, ಎರಡು ಬಾರಿ . . .

ಧ್ವನಿ (Filter)—ಯಾಕೆ ಹಾಗಾಗಿರಬಾರದು . . .? (More Volume) ಯಾಕೆ ಹಾಗಾಗಿರಬಾರದು . . .? ಯಾಕೆ ಹಾಗಾಗಿರಬಾರದು!

Sound—ಕಾರಿನ ಹಾರನ್ನು. ಬ್ರೇಕು ಹಾಕಿ ಕಾರನ್ನು ನಿಲ್ಲಿಸಿದ ಸದ್ದು.

ಡ್ರೈವರ್—ಏನಮ್ಮ? ಹಾರನ್ನು ಮಾಡ್ತಾ ಇದ್ದರೂ ಹಾಗೇ ಹೋಗ್ತಾ ಇದ್ದೀರಲ್ಲ? ಏನಾದರೂ ಆದಗೀದ್ರೆ?

Sound—ಕಾರು ಹೊರಟ ಸದ್ದು.

ಧ್ವನಿ (Filter)—(ನಗುತ್ತ—ವಿಕಾರವಾಗಿ) ಆಗೂದು ತಾನೇ ಏನಿದೆ ಬಾಕಿ? ಆಗೂದೆಲ್ಲ ಆಗೇ ಹೋಗಿದೆ.

ಲಲಿತಮ್ಮ—ಅಯ್ಯೋ . . . ಅಯ್ಯೋ . . . ದೇವರೆ!

Sound—ಸಿಡಿಲು: ಧ್ವನಿಯ ನಗು ಒಂದೆರಡು ಸೆಕೆಂಡುಗಳ ತನಕ ಕೇಳಿಬರುತ್ತಿದ್ದು ಕ್ರಮಶಃ ಕಡಮೆಯಾಗುತ್ತದೆ.

Sound—ಹಿನ್ನೆಲೆಗೆ ಮಳೆ ಸುರಿಯುತ್ತಿರುವ ಏಕನಾದ.

ಗಂಡಸು—ಮಳೇ ನಿಂತಮೇಲೇ ಬರಬಾರದಾಗಿತ್ತೇ? ಏನು ಅಂತಹ ಅವಸರ?

Sound—ಅರೆಗಳಿಗೆಯ ಮೌನದಲ್ಲಿ ಕೇಳಿಬರುವ ಗಡಿಯಾರದ ಟಿಕ್, ಟಿಕ್.

ಸೀತ—ಯಾಕಮ್ಮ, ಹುಷಾರಾಗಿಲ್ಲವೇನಮ್ಮ ? ಮಲಕ್ಕೊಳ್ತೀಯಾ ?

ಗಂಡಸು—ಯಾಕೆ, ಏನಾಗುತ್ತೈಯೆ ? . . . (ತುಸು ಅಸಮಾಧಾನದಲ್ಲಿ) ನೀನು ಸುಮ್ಮನೆ ಹೀಗೆ ಕೂತುಬಿಟ್ಟರೆ ನಮಗೆ ಹೇಗೆ ಗೊತ್ತಾಗಬೇಕು ?

ಧ್ವನಿ (Filter)—ನಿಜ. ನೀನು ಸುಮ್ಮನೆ ಇದ್ದುಬಿಟ್ಟರೆ ಅವರಿಗೆ ಹೇಗೆ ತಾನೇ ಗೊತ್ತಾಗಬೇಕು ? ಹೇಳು.

ಲಲಿತಮ್ಮ—ಹೇಳಲೆ ?

ಸೀತ—ಹೇಳಮ್ಮ . . .

Sound—ಗಡಿಯಾರದ ಟಿಕ್, ಟಿಕ್ ಸದ್ದಿನ ಜತೆಗೆ, ಕಾಲ ಜಾರುತ್ತಿರುವದರ ಸಂಕೇತವಾಗಿ, ನೀರು ದಡಕ್ಕಪ್ಪಳಿಸುತ್ತಿರುವ ಸದ್ದು.

ಲಲಿತಮ್ಮ—ನೀನೇ ನೋಡು, ಸೀತ, ಸಮುದ್ರದ ನೀರು ಹೇಗೆ ಬತ್ತುತಾ ಇದೆ—ಯಾವ ಅಗಸ್ತ್ಯ ಋಷಿ ಬಂದು ಕುಡೀದೇ ಹೋದರೂ.

ಸೀತ—ಮಾತಾಡಬೇಡ, ಮಲಕ್ಕೊ ಅಮ್ಮ !

ಲಲಿತಮ್ಮ—(ಸಿಟ್ಟಿನಿಂದ) ಹೇಳು ಅಂದುಬಿಟ್ಟು ಮಾತಾಡಬೇಡ ಅಂತೀಯಲ್ಲೆ ?

ಗಂಡಸು—ಹೋಗಲಿ, ಸೀತ. ನೀನು ಸುಮ್ಮನಿದ್ದುಬಿಡು, ತಾಯಿ.

Sound—ಸೀತಳ ಮೆಲುದನಿಯ ಅಳು.

ಧ್ವನಿ (Filter)—ಬಿಡಿಸಿ, ಸರಿಯಾಗಿ ಹೇಳದೆ, ಅನ್ಯಾಯವಾಗಿ ಅವಳನ್ನ ಅಟ್ಟಿಕೊಳ್ಳೋದೇ ? ಚೆನ್ನಾಯ್ತು !

ಲಲಿತಮ್ಮ—ನೀನೇ ನೋಡು, ಸೀತ, ಸಮುದ್ರದ ಕಡೆ ಹರೀತಿದ್ದ ನದೀ ನೀರು ಹೇಗೆ ಈಗ ಹಿಂದಕ್ಕೆ ಹರೀತಿದೆ.

ಸರೋಜ—ಅಜ್ಜಿ, ಅಜ್ಜಿ, ನಿನ್ನ ಕೈಲಿ ಇನ್ನಮೇಲೆ ಮಾತನಾಡತೀನಿ, ಅಜ್ಜಿ.

ಧ್ವನಿ (Filter)—ಆದರೂ ಅವರಿಗರ್ಥವಾದ್ಹಾಗಿಲ್ಲ.

ಲಲಿತಮ್ಮ—ಇನ್ನು ಹೇಗೆ ತಾನೇ ಹೇಳಲಿ ನಾನು ?

ಗಂಡಸು—ಸೀತ, ಮನೇಲಿ ನಿಂಬೆಹಣ್ಣಿದ್ದರೆ ಒಂದು ಲೋಟ ಪಾನಕ ಮಾಡಿ ಕೊಡಮ್ಮ. ಸರಿಯಾಗುತ್ತೆ.

ಧ್ವನಿ (Filter)—ಹ, ಹ, ಹ, . . . ಸರಿಯಾಗುತ್ತಂತೆ, ಸರಿ !

ಲಲಿತಮ್ಮ—ಇದೇನು ಅಂದ್ರೆ ನೀವು ಹೇಳೋದು ? ಒಂದು ಲೋಟ ಪಾನಕ ಸಾಕೆ ?

ಗಂಡಸು—ನೀನು ಹೋಗು ತಾಯಿ.

ಸೀತ—ಆಗಲಣ್ಣ (Fade out) .

ಲಲಿತಮ್ಮ—ನಿಮಗೆಲ್ಲೋ ಹುಚ್ಚು. ಅಲ್ಲ, ಅಂದ್ರೆ, ಒಂದು ಲೋಟ ಪಾನಕ ಬಿದ್ದರೆ ಸರಿಹೋಗುತ್ತೆ ಅಂತೀರಲ್ಲ!

ಗಂಡಸು—ಮಾತಾಡದೆ ಸ್ವಲ್ಪ ಹೊತ್ತು ಮಲಕ್ಕೋಬಾರದೆ, ನೀನು?

ಧ್ವನಿ (Filter)—ಸಂಜೆ ಸರಸ್ವತೀ ಸಿಕ್ಕಿದ್ದನ್ನ ಹೇಳೂದೇ ಇಲ್ಲವೆ?

ಲಲಿತಮ್ಮ—ಸರಸ್ವತಿ ಸಿಕ್ಕಿದ್ದಳು. ನೋಡಿ ಆಗ ಶುರುವಾಯ್ತು ಸಮುದ್ರದ ನೀರು ಬತ್ತುಕ್ಕೆ.

ಗಂಡಸು—ಯಾವ ಸರಸ್ವತಿ? ಏನು ಕಥೆ? ನಿನ್ನ ಮಾತೇ ಅರ್ಥವಾಗುಲ್ಲ!

ಲಲಿತಮ್ಮ—ಇದೇನು ಅಂದ್ರೆ, ನಿಮಗಾಗಲೇ ಮರೆತುಹೋಯಿತೆ? . . .

ಸೀತ (Fading in)—ತೊಗೊಳ್ಳಮ್ಮ, ಪಾನಕ.

ಲಲಿತಮ್ಮ—ನಿಮಗೆಲ್ಲೋ ಭ್ರಾಂತು . . .

ಧ್ವನಿ (Filter)—ತೊಗೋ. ನೀನಷ್ಟು ಮಾಡೂದರಿಂದ ಅವರಿಗೆ ಸಮಾಧಾನ ಆಗುವದಾದರೆ ಆಗಲಿ.

Sound—ಪಾನಕ ನೆಲಕ್ಕೆ ಸುರಿದ ಸದ್ದು.

ಸೀತ—ಅಮ್ಮ, ಅಮ್ಮ! ಇದೇನಮ್ಮ ಮಾಡಿಬಿಟ್ಟೆ!

ಸರೋಜ—ಅಜ್ಜಿ, ಅಜ್ಜಿ!

ಲಲಿತಮ್ಮ—ನಾನು ಆಗಲೇ ಹೇಳಲಿಲ್ಲವೆ ಅಂದ್ರೆ? ನೀವು ಸುಮ್ಮನೆ ಬಲವಂತ ಮಾಡಿದಿರಿ.

ಸೀತ—ಇದು ಯಾಕಮ್ಮ, ಇವತ್ತು ಹೀಗ್ಮಾತಾಡ್ತೀ?

Sound—ಸೀತಳ ಅಳು : ಸರೋಜಳ ಬಿಕ್ಕು.

ಲಲಿತಮ್ಮ—ಯಾಕಮ್ಮ, ಸೀತ, ಅಳ್ತೀ? ನೋಡು ನೀನು ಮಾಡಿದ್ದು: ಮಗೂನೂ ಅಳ್ತಿದೆ. ನಾನು ಹೇಳಲಿಲ್ಲವೆ ತಾಯಿ: ಒಂದು ಲೋಟ ಪಾನಕ, ಹತ್ತು ತೊಟ್ಟು ಕಣ್ಣೀರು ಸಾಕೇನಮ್ಮ ಈ ರಾಕ್ಷಸ ಸಮುದ್ರವನ್ನು ತುಂಬುಕ್ಕೆ?

ಗಂಡಸು—ಮಲಕ್ಕೋ, ಮಾತಾಡಬೇಡ.

ಸೀತ—ಮಲಕ್ಕೋಮ್ಮ, ಮಾತಾಡಬೇಡ.

(ಸೂಚನೆ—'ಮಲಕ್ಕೋ ಮಾತಾಡಬೇಡ' ಎನ್ನುವ ಒಂದು ಮಾತನ್ನೇ ಹತ್ತು ಧ್ವನಿಗಳು ಮತ್ತೆ ಮತ್ತೆ, ಹೇಳುತ್ತಿರಬೇಕು.)

Sound—ನೀರು ದಡಕ್ಕೆ ಅಪ್ಪಳಿಸುವ ಸದ್ದು, ಮೊದಲಿಗೆ ಹೆಚ್ಚಾಗಿದ್ದು ಕ್ರಮಕ್ರಮವಾಗಿ ಕಡಮೆಯಾಗುತ್ತದೆ.

ಧ್ವನಿ (Filter—ನಿಧಾನವಾಗಿ)—ಮರೆತೆಯಾ . . .? ಮೂವತ್ತು ವರುಷಗಳ ಹಿಂದೆ . . . ಆ ಸಂಜೆ . . . ನೀನು ಅಕ್ಕಿ ಕೇರುತ್ತ ಕುಳಿತಿದ್ದಾಗ . . . ನೆನಪು ಬಂತೆ? . . . ಬಂತೆ . . .? (Fade out)

Sound—ದೂರದಲ್ಲಿ ಹಸುವಿನ ಕರುವೊಂದು 'ಅಮ್ಮ' ಎಂದು ಕೂಗುತ್ತದೆ. ಅಕ್ಕಿ ಕೇರುವ ಸದ್ದು. ಹೆಂಗಸೊಬ್ಬಳು ತನ್ನೊಳಗೆ ತಾನೇ ಹಾಡಿಕೊಳ್ಳುತ್ತಿರುವಾಗ ಬಾಗಿಲು ತಟ್ಟಿದ ಸದ್ದು.

ಹೆಂಗಸು—ಯಾರು? ಬನ್ನಿ ಬಾಗಿಲು ತೆಗೆದೇ ಇದೆ.

Sound—ಭಾರವಾದ ಬಾಗಿಲು ತೆಗೆದಾಗ ಹೊರಟ ನರಳು.

ಗಂಡಸು (Fading in)—ಮಿಾನ . . . ಮಿಾನ . . .!

ಮಿಾನ—ಚಂದ್ರು . . . ಚಂದ್ರು! ನೀನೇಯೇ ಚಂದ್ರು?

ಚಂದ್ರು—ಹೌದು, ಮಿಾನ, ನಾನೇ!

ಮಿಾನ—ಯಾಕೆ ಬಂದೆ, ಚಂದ್ರು? ಯಾರಾದರೂ ಕಂಡುಗಿಂಡ್ರೆ?

ಚಂದ್ರು—ಕಂಡರೆ ಕಂಡರು. ನನ್ನ ಕಾಗದ ಬಂತು ತಾನೆ?

ಮಿಾನ—ಬಂತು. ಬಂದರೂ . . . ನೀನು ಬರ್‍ತೀ ಅಂದುಕೊಂಡಿರಲಿಲ್ಲ.

ಚಂದ್ರು—ಯಾಕೆ? ನಾನು ಬರೋದು ನಿನಗಿಷ್ಟವಿರಲಿಲ್ಲವೇನೊ?

ಮಿಾನ—ಏನು ಮಾತು ಅಂತಾಡ್ತೀ, ಚಂದ್ರು!

ಚಂದ್ರು—ಮತ್ತೆ . . . ?

ಮಿಾನ—ನೀನು ಆ ಕಾಗದ ಬರೀಬಾರದಾಗಿತ್ತು, ಚಂದ್ರು. ಈಗ ಬರಲೂ ಬಾರದಾಗಿತ್ತು.

ಚಂದ್ರು—ನೀನೂ ಅಷ್ಟೆ. ಮದುವೆ ಮಾಡಿಕೋಬಾರದಾಗಿತ್ತು.

ಮಿಾನ—ನಿಜ, ಚಂದ್ರು, ಮಾಡಿಕೋಬಾರದಾಗಿತ್ತು . . . ಆದರೆ ಈಗ ಆಗಿ ಹೋಗಿದೆಯಲ್ಲ?

ಚಂದ್ರು—ನೋಡು, ಮಿಾನ, ಕಾಗದದಲ್ಲೂ ಬರೆದೆ. ಈಗಲೂ ಹೇಳ್ತೀನೆ ಕೇಳು: ನಾನು ನಿನ್ನ ಬಿಟ್ಟು ಇರಲಾರೆ. ನಿನಗೆ ಗೊತ್ತಿಲ್ಲವೆ ಅದು? ನೀನೂ ಅಷ್ಟೆ, ನನ್ನ ಬಿಟ್ಟಿರಲಾರೆ. ನನಗೆ ಗೊತ್ತು ಅದು. ಎಷ್ಟು ದಿವಸದ ತನಕ ಅಂತ, ಮಿಾನ, ಈ ಆತ್ಮವಂಚನೆ? ಬೇಡ, ಚಿನ್ನ, ಬಂದುಬಿಡು ನನ್ನ ಜತೆಗೆ. . . .

ಮಿಾನ—ಚಂದ್ರು . . . ಚಂದ್ರು . . . ನಿನ್ನ ದಮ್ಮಯ್ಯ. . . .

ಚಂದ್ರು—ನನ್ನ ಮಾತು ಅರ್ಥಮಾಡಿಕೋ, ಮಿಾನ. ನಿನಗಿಲ್ಲಿ ಸುಖವಿಲ್ಲ. ನನಗಲ್ಲಿ ಸುಖವಿಲ್ಲ. ನಾನೂ ಈ ಎರಡು ವರುಷದಲ್ಲಿ ಬೇಕಾದಹಾಗೆ ಸಂಪಾದಿಸಿ ಮನುಷ್ಯ ಅಂತನ್ನಿಸಿಕೊಂಡಿದೇನೆ. ವ್ಯಾಪಾರ ನನಗೆ ಹೇಳಿ ಮಾಡಿಸಿದ ಹಾಗೆ

ನಡೀತು. ಬಾ—ದೂರ ಎಲ್ಲಾದರೂ, ಗುರುತು ಕಂಡವರು ಇರದೆ ಇರುವ ಜಾಗದಲ್ಲಿ ಎಲ್ಲಾಧರೂ ಸಂಸಾರ ಮಾಡಿಕೊಂಡಿರೋಣ.

ಮಿಾನ—ಸಾಕು, ಚಂದ್ರು, ಸಾಕು! ಆಸೆ ತೋರಿಸಬೇಡ. ಮರುಳು ಮಾಡ ಬೇಡ.

ಚಂದ್ರು—ಮರೆತುಹೋಯಿತೆ, ಮಿಾನ: ಹೋದ ವರ್ಷ ನಾನು ಬಂದಾಗ ನೀನೇ ಅಲ್ಲವೆ ಹೀಗೆ ಮಾಡೋಣ ಅಂತ ಹೇಳಿದ್ದು?

ಮಿಾನ—ನನಗೆ ಹೆದರಿಕೆ, ಚಂದ್ರು.

ಚಂದ್ರು—ಯಾರ ಹೆದರಿಕೆ, ಮಿಾನ, ನಿನಗೆ ನಾನು, ನನಗೆ ನೀನೂ ಇರೋವಾಗ?

ಮಿಾನ—ನನಗೆ ಏನೋ ಹೆದರಿಕೆ . . . .

ಚಂದ್ರು—ತಿರುಗ ಅದೇ ಹೇಳ್ತೀಯಲ್ಲ! ಯಾರ ಹೆದರಿಕೆ, ಚಿನ್ನ? ಜನದ್ದೆ? ಅದಕ್ಕೆ ನಾನು ಹೇಳಿದ್ದು: ಗುರುತು ಪರಿಚಿತಿ ಇಲ್ಲದ ಕಡೆ—ಬೊಂಬಾಯಲ್ಲೋ, ಕಲಕತ್ತೆದಲ್ಲೋ ಸಂಸಾರ ಮಾಡಿಕೊಂಡಿರೋಣ ಅಂತ. ಅದೂ ಅಲ್ಲದೆ ನಾವು ಗಂಡ, ಹೆಂಡತಿ ಅನ್ನುವ ಹಾಗೇ ಇರುವಾಗ ಜನಕ್ಕೆ ತಾನೇ ಅನುಮಾನ ಹೇಗೆ ಬರಬೇಕು, ಮಿಾನ? . . . . ಅಥವಾ ದೇವರ ಹೆದರಿಕೆಯೆ . . . .? ಅವನು ನಮಗೆ ಇದುವರೆಗೆ ಮಾಡಿದ್ದೇ ಸಾಲದೆ, ಇನ್ನು ಮುಂದೂ ಹೆದರಿಕೊಂಡಿರುಕ್ಕೆ?

ಮಿಾನ—ದೇವರಲ್ಲಿ ನನಗಿರೂ ನಂಬಿಕೆ ಅಷ್ಟರಲ್ಲೇ ಇದೆ, ಚಂದ್ರು. ಅದಲ್ಲ . . .

ಚಂದ್ರು—ಮತ್ತೆ?

ಮಿಾನ—ಇವೆಲ್ಲ—ಇದುವರೆಗೆ ಆಗಿರೋದೆಲ್ಲ—ಮರೆಯುಕ್ಕಾಗುಲ್ಲ ಅನ್ನುವ ಹೆದರಿಕೆ ನನಗೆ.

ಚಂದ್ರು—ಅಷ್ಟೇ ತಾನೆ! ನಾನು ಏನೋ ಅಂತಿದ್ದೆ. ನೋಡು, ಮಿಾನ, ಕನಸು, ಒಂದು ಗಳಿಗೆ ಕಣ್ಣಿಗೆ ಕಟ್ಟಿದ ಹಾಗೇ ಇದ್ದು ನಿಜ ಅಂತಲೇ ಅನ್ನಿಸುತ್ತೆ. ಎದ್ದ ಕೂಡಲೇ ನಾವದನ್ನ ಮರೆಯುಲ್ಲವೆ? ಹಾಗೇ ಇದೂವೆ. ಅದೂ ಅಲ್ಲದೆ, ಇದೆಲ್ಲ ಒಂದು ಕೆಟ್ಟ ಕನಸು, ಚಿನ್ನ. ಆದಷ್ಟು ಬೇಗ ಮರೆತರೇ ಕ್ಷೇಮ.

ಮಿಾನ—ಬಂದುಬಿಡಲೆ, ಚಂದ್ರು?

ಚಂದ್ರು—ಬಂದುಬಿಡು, ಬಂದುಬಿಡು . . . . (ತಡೆದು) ಇದೇನಿದು, ಮಿಾನ, ಮನೇಲಿ ಯಾರೂ ಇರೋಹಾಗಿಲ್ಲ?

ಮಿಾನ—ಯಾರೂ ಇಲ್ಲ. ನಾಳೆ ನಮ್ಮ ಚಿಕ್ಕಮಾವನ ಮಗನ ಮದುವೆ. ಎಲ್ಲ ತುಮಕೂರಿಗೆ ಹೋಗಿದಾರೆ.

ಚಂದ್ರು—ಮತ್ತೆ ನೀನು?

ಮೀನ—ನಿನ್ನ ಕಾಗದ ಬಂತು. ಏನೋ ಕಾರಣ ಹೇಳಿ ತಪ್ಪಿಸಿಕೊಂಡೆ.

ಚಂದ್ರು—ಏನು ಕಾರಣ ಹೇಳಿದೆ, ಮೀನ ?

ಮೀನ—ನಿನಗೆ ಯಾಕೆ ಅದು ? ಏನೋ ಒಂದು. ಮನಸ್ಸೊಂದಿದ್ದರೆ, ಹೆಂಗಸರಿಗೇನು ಸಾವಿರ ಕಾರಣ ಸಿಗುತ್ತೆ.

ಚಂದ್ರು—(ನಗುತ್ತ) ಬಿಡು, ಬಿಡು. ಗೊತ್ತಾಯ್ತು. ಹಾಗಾದರೆ ಮನೇಗೆಲ್ಲ ನೀನೊಬ್ಬಳೇ ಅನ್ನು.

ಮೀನ—ಇಲ್ಲ, ಅಡಿಗೆಯವರಿದಾರೆ ಜತೆಗೆ.

ಚಂದ್ರು—ಕಾಣಲ್ಲ ?

ಮೀನ—ಕೆಲಸವೇನೂ ಇಲ್ಲ. ಪುರಾಣಕ್ಕೆ ಹೋಗಲೇ ಅಂದರು. ನಾನು ಬೇಡ ಅನ್ನಲಿಲ್ಲ.

ಚಂದ್ರು—ನೋಡು, ಮೀನ. ಬೆಂಗಳೂರಿನ ಕಡೆ ರೈಲು ಎರಡು ಗಂಟೆಗೆ ಹೊರಡುತ್ತೆ. ನಾನು ಒಂದು ಗಂಟೆ ಹೊತ್ತಿಗೇ ಬರ್ತೇನೆ. ಸಿದ್ಧವಾಗಿರು.

Sound—ಬಾಗಿಲು ತಟ್ಟಿದ ಸದ್ದು.

ಬಾಗಿಲಲ್ಲಿ ಹೆಣ್ಣು ಧ್ವನಿ—ಮೀನ . . . ಮೀನ . . . !

ಚಂದ್ರು—(ಗಾಬರಿಯಲ್ಲಿ) ಯಾರೆ ?

ಮೀನ—ಷೂ . . . (ಗಟ್ಟಿಯಾಗಿ) ಬಾರೆ, ಸರಸ್ವತಿ !

ಸರಸ್ವತಿ—(Fading in and Fading out) ಪರವಾಗಿಲ್ಲವೆ, ನಾನಾ ಮೇಲೆ ಬರ್ತೇನೆಯೆ . . .

ಮೀನ—ಬಾರೆ ಅಂದ್ರೆ . . . ! ನಮ್ಮ ಚಿಕ್ಕ ಮಾವನವರ ಎರಡನೇ ಮಗ ಕಣೆ. ನಾಳೆಯಾದರೂ ಬರಲಿ ಅಂತ ಕರಕೊಂಡು ಬರುಕ್ಕೆ ಕಳಿಸಿದಾರೆ ಇವರನ್ನ.

ಚಂದ್ರು—ನಾನು ಬರಲೆ ಹಾಗಾದರೆ ? ಎರಡು ಗಂಟೇಗೆ ರೈಲು.

ಮೀನ—ಒಂದು ಗಂಟೆ ಹೊತ್ತಿಗೆ ಸಿದ್ಧವಾಗಿದ್ದರೆ ಸಾಕಲ್ಲ ?

ಚಂದ್ರು—ಸರಿ. ಬರ್ತಾ ಗಾಡಿ ತಂದೇ ಬಿಡ್ತೇನೆ. (Fade out).

Sound—ನೀರು ದಡಕ್ಕೆ ಅಪ್ಪಳಿಸುವ ಸದ್ದು ಆರಂಭವಾಗಿ ಗಳಿಗೆಯಲ್ಲಿ ಕಡಮೆಯಾಗುತ್ತದೆ. ಗಡಿಯಾರದ ಟಿಕ್ ಟಿಕ್, ಸದ್ದು.

ಸೀತ—ಯಾಕಮ್ಮ ಎದ್ದೆ ? ಮಲಕ್ಕೋ ಅಮ್ಮ.

ಚಂದ್ರಶೇಖರಯ್ಯ—(ಗಂಡಸು) ಮಲಕ್ಕೋಳೇ ಇನ್ನು ಸ್ವಲ್ಪ ಹೊತ್ತು.

ಲಲಿತಮ್ಮ—ಚಂದ್ರು, ಏನೂ ಹೆದರಿಕೆ ಇಲ್ಲ ಅಲ್ಲವೆ ನಿನಗೆ ನಾನು, ನನಗೆ ನೀನೂ ಇರೋತನಕ ?

ಚಂದ್ರು—ಮಲಕ್ಕೋ ಲಲಿತ, ಮಲಕ್ಕೊ.

ಧ್ವನಿ (Filter)—ನೋಡಿದೆಯಾ, ಲಲಿತ ಅಂತಾನಲ್ಲ ನಿನ್ನ ! ನಿನ್ನ ಹೆಸರೂ ಮರೆತುಹೋಗಿದೆ ಇವನಿಗೆ !

ಲಲಿತಮ್ಮ—ಇದೆಂತಹ ಅನ್ಯಾಯ, ಚಂದ್ರು ? ನನ್ನ ಹೆಸರೂ ಮರೆತು ಹೋಯಿತೆ ನಿನಗೆ ? ನನ್ನ ಹೆಸರು ಮಿಾನ, ಚಂದ್ರು . . . !

ಸೀತ—ಇದೇನಣ್ಣಾ ಅಮ್ಮನ ಮಾತು ? ಮಿಾನ ಯಾರು ?

ಚಂದ್ರು—ನಾನು ಏನು ತಾನೇ ಹೇಳಲಿ, ತಾಯಿ ? ಸೀತ, ನೀನಿಲ್ಲೇ ಇರಮ್ಮ. ನಾನು ಹೋಗಿ ಡಾಕ್ಟರನ್ನಾದರೂ ಕರಕೊಂಡು ಬರ್‍ತೇನೆ. (Fade out)

ಧ್ವನಿ (Filter)—ಹ, ಹ, ಹ! ಮಿಾನಾ ಯಾರಂತೆ! ಹ ಹ ಹ! ಮಿಾನಾ ಯಾರಂತೆ!

ಲಲಿತಮ್ಮ—ನೀನು ಯಾರೆ, ಮಿಾನ ಯಾರು ಅಂತ ಕೇಳೋಳು ?

ಸೀತ— (ಅಳುತ್ತ) ಅಮ್ಮಾ, ಅಮ್ಮಾ ! ನಾನು ಕಣಮ್ಮ . . . ಸೀತ !

ಸರೋಜ—(ಅಳುತ್ತ) ಅಜ್ಜಿ, ಅಜ್ಜಿ ! ನಾನು ಇನ್ಮೇಲೆ ನಿನ್ನ ಕೈಲಿ ಮಾತ ನಾಡ್ತೀನಿ.

ಲಲಿತಮ್ಮ—ಹಾಂ . . . ಹೂಂ . . . (ನಿದ್ದೆಯಿಂದ ಎದ್ದವಳಂತೆ) . . . ಅಮ್ಮ, ಸೀತ, ಮನೇಲಿ ನಿಂಬೆಹಣ್ಣಿದ್ದರೆ ಒಂದು ತೋಟ ಪಾನಕ ಮಾಡಿಕೊಡು, ತಾಯಿ. ಏಕೋ ತಲೆ ತಿರುಗಿದ ಹಾಗಾಗ್ತಾ ಇದೆ.

ಸರೋಜ—ಮತ್ತೆ . . . ಕೊಟ್ಟಿದ್ದನ್ನ ಸುರಿದುಬಿಟ್ಟೆ ?

ಸೀತ (Fading out)—ಬಾರೇ ಒಳಗೆ. ತಲೆಯೆಲ್ಲ ಹರಟಬೇಡ.

ಧ್ವನಿ (Filter)—ಸದ್ಯ ! ಈಗ ಯಾರೂ ಇಲ್ಲ. ನಾನೂ ನೀನೂ ಧೈರ್ಯವಾಗಿ ಬೇಕಾದ್ದನ್ನೆಲ್ಲ ಮಾತಾಡಬಹುದು.

ಲಲಿತಮ್ಮ—ನನ್ನ ಯಾಕೆ ನೀನು ಸುಮ್ಮನೆ ಹೀಗೆ ಗೋಳುಹುಯ್ದುಕೊಳ್ತೀ, ಒಂದು ಗಳಿಗೆಯೂ ಬಿಡದೆ ? ಇಷ್ಟಕ್ಕೂ ನೀನು ಯಾರು ? ನಿನಗೂ ನನಗೂ ಏನು ಸಂಬಂಧ ?

ಧ್ವನಿ (Filter)—(ನಗುತ್ತ) ಒಳ್ಳೇ ಪ್ರಶ್ನೇನೇ ಕೇಳಿದೆಯಲ್ಲ ! ನಾನು ಯಾರೇ ? ನಾನು ಮಿಾನ—ಅದೇ . . . ನೀನು ! ನನ್ನ, ನಿನ್ನ ಸಂಬಂಧವೆ ? ಮನುಷ್ಯನಿಗೂ ಅವನ ನೆರಳಿಗೂ ಇರುತ್ತಲ್ಲ—ಆ ಸಂಬಂಧವೇ ನಮ್ಮದೂವೆ !

ಲಲಿತಮ್ಮ—ಮಿಾನ ಸತ್ತು ಮೂವತ್ತು ವರುಷವಾಯ್ತು. ಈಗ ಇರೋದು ಲಲಿತ.

ಧ್ವನಿ (Filter)—ಮಿಾನ ಸತ್ತಳು ಅಂತ ನೀನು ಅಂದುಕೊಂಡಿರಬಹುದು, ಅಷ್ಟೆ !

ನೀನೇ ನೋಡಿದೆಯಲ್ಲ ಇವತ್ತು ಸಂಜೆ ಅವಳು ಇದ್ದಕ್ಕಿದ್ದಹಾಗೇ ಕಾಣಿಸಿ ಕೊಂಡಿದ್ದನ್ನ . . . . ಹೋಗಲಿ, ಅದಲ್ಲ ನಾನು ಕೇಳಬೇಕು ಅಂತಿದ್ದಿದ್ದು . . . .

ಲಲಿತಮ್ಮ—ನನಗೆ ಗೊತ್ತು ನೀನು ಕೇಳೂ ಪ್ರಶ್ನೆ: ನೀನು ಮಾಡಿದ್ದು ಸರಿಯೋ ತಪ್ಪೋ ಅಂತ ತಾನೆ? ನೂರು ಸಾರಿ ಹೇಳಿದ್ದನ್ನೇ ಈಗಲೂ ಹೇಳ್ತೀನೆ ಕೇಳು: ತಪ್ಪಲ್ಲ, ತಪ್ಪಲ್ಲ, ತಪ್ಪಲ್ಲ!

ಧ್ವನಿ (Filter)—ಅಲ್ಲವೆ?

ಲಲಿತಮ್ಮ (ಖಂಡಿತವಾಗಿ)—ಅಲ್ಲ!

ಧ್ವನಿ (Filter)—ಸೀತೇನ ಧಾರೆ ಎರದು ಕೊಟ್ಟಾಗ ನಿನ್ನೆದೆ ಥರಥರ ಅಂತ ನಡುಗುತ್ತಿತ್ತು ಅಲ್ಲವೆ?

ಲಲಿತಮ್ಮ—ಇರಬಹುದು. ಅದಕ್ಕೆ . . . ?

ಧ್ವನಿ (Filter)—ತಪ್ಪಲ್ಲ ಅಂದುಕೊಂಡೋಳಿಗೆ ಯಾಕೆ ಅಷ್ಟು ಹೆದರಿಕೆ ಆಗ್ತಾ ಇತ್ತು ಅಂತ? ಅದೂ ಹೋಗಲಿ. ಅವಳ ಗಂಡ ಕಾಗದ ಬರೀದಿದ್ದನ್ನ ನೆನಸಿ ಕೊಂಡಾಗೆಲ್ಲ ನಿನ್ನ ಮೈ ಜುಂ ಅನ್ನುತ್ತಲ್ಲವೆ? ಬಾಣಂತನವಾದಮೇಲೆ ಇನ್ನೆಲ್ಲಿ ಅವಳ ಮಾವನ ಮನೆಯವರು ಕರೆಸಿಕೊಳ್ಳೋದಿಲ್ಲವೋ ಅಂತಲ್ಲವೆ ನಿನ್ನ ಯೋಚನೆ? . . . ಮಾಡಿದ್ದು ತಪ್ಪಲ್ಲ! ಆದರೂ ಇಷ್ಟು ಹೆದರಿಕೆ!

ಲಲಿತಮ್ಮ—ಹೆದರಿಕೆ ನನಗೋಸ್ಕರ ಅಲ್ಲ. ಅವಳಿಗೋಸ್ಕರ. ಅವಳ ಮಕ್ಕಳಿಗೋಸ್ಕರ!

ಧ್ವನಿ (Filter)—ಯಾಕೆ ನಿನ್ನ ನೀನೇ ಹೀಗೆ ಮೋಸ ಮಾಡಿಕೋತಿ?

ಲಲಿತಮ್ಮ—ಮೋಸವೇನು ಬಂತು ಇದರಲ್ಲಿ?

ಧ್ವನಿ (Filter)—ಹಾಗಾದರೆ ನಿನಗೆ ನಿನ್ನ ವಿಷಯಕ್ಕೇ ಹೆದರಿಕೆ ಇಲ್ಲ ಅನ್ನು.

ಲಲಿತಮ್ಮ—ಇಲ್ಲ!

ಧ್ವನಿ (Filter—ಅಣಕುದನಿಯಲ್ಲಿ)—ಓ . . . ! ಮನೇಲಿ ಪೂಜೆ, ಪುನಸ್ಕಾರ ಎಲ್ಲ ಈಗ ಜಾಸ್ತಿಯಲ್ಲವೆ? ದಿನಾ ಒಪ್ಪತ್ತು ಮಾತ್ರ ಊಟ ತಾನೆ? ಸಂಜೆ ಹರಿಕಥೆಗೆ ಬೇರೆ ಹೋಗ್ತೀ! ಇದೂ ಅವಳಿಗೋಸ್ಕರವೇ ಏನೊ!

ಲಲಿತಮ್ಮ—ನನ್ನ ವಿಷಯ ನನಗಿಂತ ನಿನಗೇ ಚೆನ್ನಾಗಿ ಗೊತ್ತು. ಈಗ ನೀನೇ ಹೇಳು: ನಾನೇನುಮಾಡಲಿ?

ಧ್ವನಿ (Filter—ನಗುತ್ತ)—ಮದುವೆ ಮಾಡಿಕೋ ಬ್ರಾಹ್ಮಣ ಅಂದರೆ ನೀನೇ ನನ್ನ ಹೆಂಡತಿಯಾಗು ಅಂದಹಾಗೆ ಚೆನ್ನಾಯ್ತು ನಿನ್ನ ಪ್ರಶ್ನೆ. . . .

ಸೀತ (Fading in)—ತೊಗೊಳ್ಳಮ್ಮ ಪಾನಕ.

ಲಲಿತಮ್ಮ—ಅವರೆಲ್ಲಿ ಹೋದರೆ, ಸೀತ?

ಸೀತ—ಕುಡಿಯಮ್ಮ ಪಾನಕ.

Sound—ಪಾನಕವನ್ನು ಕುಡಿದು ಬಟ್ಟಲನ್ನು ಇಟ್ಟ ಸದ್ದು.

ಲಲಿತಮ್ಮ— ಸೀತ, ನಿನ್ನ ಗಂಡ ಕಾಗದ ಬರೀಲಿಲ್ಲ ಅಲ್ಲವೆ?

ಸೀತ—ಇಲ್ಲಮ್ಮ . . . ಇವತ್ತು ನಾಳೀಲಿ ಅವರೇ . . . .

ಲಲಿತಮ್ಮ—ಹಾಗಾದರೆ ನಿನ್ನ ಇನ್ನವರು ಕರೆಸಿಕೊಳ್ಳೋದಿಲ್ಲ ಅನ್ನು.

ಸೀತ—ಇದೇನಮ್ಮ ಮಾತು! ಯಾರಮ್ಮ ಹಾಗಂದೋರು?

ಲಲಿತಮ್ಮ—ಹೋಗಲಿ ಬಿಡು ತಾಯಿ. ಏನು ಮಾಡುಕ್ಕಾಗುತ್ತಮ್ಮ. ಹಣೇಲಿ ಬರೆದಿದ್ದನ್ನ ಅನುಭವಿಸಲೇ ಬೇಕು ಕಣಮ್ಮ . . . ಮಗು ಎಲ್ಲೆ? ಅನ್ನ ಹಾಕಿದೆಯ?

ಸೀತ—ತಟ್ಟಿ ಹಾಕಿ ನಿನಗೆ ಪಾನಕ ಕೊಡೋಣ ಅಂತ ಬಂದೆ.

ಲಲಿತಮ್ಮ—ಹೋಗಮ್ಮ, ಬಡಿಸು ಹೋಗು. ನಾನೂ ಹಾಗೇ ಮಲಕ್ಕೊಳ್ತೀನಿ.

ಸೀತ—ಹಾಸಿಗೆ ಕೊಡವಿ ಹಾಸಿಕೊಡಲೆ?

Sound—ಒಳಗಿನಿಂದ ಮಗುವಿನ ಕೂಗು: 'ಅಮ್ಮ!'

ಲಲಿತಮ್ಮ—ಏನೂ ಬೇಡ. ನೀನು ಹೋಗಮ್ಮ.

(ಅರೆಗಳಿಗೆಯ ಮೌನ . . .)

Sound—ನೀರು ದಡಕ್ಕೆ ಅಪ್ಪಳಿಸುವ ಸದ್ದು ಆರಂಭವಾಗಿ ಹೆಚ್ಚು ಹೆಚ್ಚಾಗುತ್ತಿರುವದರಲ್ಲಿ ಬಾಗಿಲು ತಟ್ಟಿದ ಸದ್ದು.

ಲಲಿತಮ್ಮ—ಯಾರು?

ಹೆಣ್ಣು ಧ್ವನಿ—(ಬಾಗಿಲಿನಿಂದ) ಒಬ್ಬರೇ ಇದೀರ, ಲಲಿತಮ್ಮ?

ಲಲಿತಮ್ಮ—ಯಾರು, ಸಾವಿತ್ರಮ್ಮನೆ? ಬನ್ನಿ, ಸಾವಿತ್ರಮ್ಮ . . . ಇನ್ನೂ ಯಾರೋ ಇರೂಹಾಗಿದೆ!

ಸಾವಿತ್ರಮ್ಮ (Fading in)—ಲಕ್ಷ್ಮಿ ದೇವಮ್ಮ, ನಾಗಮ್ಮ, ಶಾರದಮ್ಮ—ಎಲ್ಲ ಹೀಗೇ ಬಂದೆವು.

ಲಲಿತಮ್ಮ—ಸಂತೋಷ, ಅಮ್ಮ, ಸಂತೋಷ. ಕೂತುಕೋಬಾರದೆ? ಏನು ಬಂದಿದ್ದು? ಹರಿಕಥೆ ಮುಗಿಸಿಕೊಂಡು ಮನೇಗೇ ಹೋದ್ಹಾಗಿಲ್ಲ!

ನಾಗಮ್ಮ—ಇಲ್ಲ. ಸರಸ್ವತಮ್ಮ ಸಿಕ್ಕಿದ್ರು. ಅತ್ಲಾಗೆ ಹರಿಕಥೇ ಜತೆಗೆ ನಿಮ್ಮ ಕಥೆಯೂ ಕೇಳಿಕೊಂಡೇ ಹೋಗಿಬಿಡೋಣ ಅಂತಂದುಕೊಂಡು ಬಂದೆವು.

Sound—ಹೆಂಗಸರು ಕಿಲಕಿಲ ನಕ್ಕ ಸದ್ದು.

ಲಲಿತಮ್ಮ—ಬಾಗಿಲಲ್ಲೇ ನಿಂತರಲ್ಲ ಶಾರದಮ್ಮ? ಒಳಗೆ ಬನ್ನಿ.

ಶಾರದಮ್ಮ—(ಬಾಗಿಲಿನಿಂದಲೇ) ಕ್ಷಮಿಸಿ, ಲಲಿತಮ್ಮ. ನಾವು ಮರ್ಯಾದಸ್ಥರ ಮನೆಗಳಿಗೆ ಮಾತ್ರ ಹೋಗೀ ಬಂದೂ ಮಾಡೋದು.

ನಾಗಮ್ಮ—ಇದೇನಿದು ನಾಗಮ್ಮ, ಅವರನ್ನ ಲಲಿತಮ್ಮ ಅಂತ ಕರೀತೀರಿ? ಮೀನಾಕ್ಷಿ ಅಂತಲ್ಲವೆ ಅವರ ಹೆಸರು.

Sound—ಅಲೆ ಅಲೆಯಾಗಿ ಹರಡಿದ ಅವರ ನಗು ಕಡೆಯಾಗುವಲ್ಲಿ.

ಗಂಡು ಧ್ವನಿ (ಬಾಗಿಲಿನಿಂದ)—ರಾಯರಿದಾರೇನಮ್ಮ ?

ಲಲಿತಮ್ಮ—ಬನ್ನಿ ಒಳಗೆ. ಕೂತುಕೊಳ್ಳಿ. ಬಂದುಬಿಡ್ತಾರೆ ಈವಾಗ.

ಗಂಡಸು (Fading in)—ಹೇಳಿಬಿಡಮ್ಮ ಅವರಿಗೆ—ನಿನ್ನ ಗಂಡ ಅಂತನ್ನಿಸಿ ಕೊಂಡೋರಿಗೆ—ನಾಳೇನೇ ಮನೇ ಖಾಲಿ ಮಾಡಿಬಿಡಬೇಕಂತೆ ಅಂತ. ನಿಮ್ಮಂತಹ ವರಿಗೆ ಮನೇನ ಬಾಡಿಗೆಗೆ ಕೊಟ್ಟರೆ ನಾನು ನಾಲ್ಕು ಜನದ ಮಧ್ಯೆ ತಲೆ ಎತ್ತಿ ಕೊಂಡಿರುಕ್ಕಾಗುಲ್ಲ. (Fade out)

ಗಂಡು ಧ್ವನಿ (ಬಾಗಿಲಿನಿಂದ)—ಚಂದ್ರಶೇಖರಯ್ಯನವರೆ!

ಲಲಿತಮ್ಮ—ಯಾರು? ಬನ್ನಿ!

ಗಂಡಸು (Fading in)—ಇಲ್ಲವೇನಮ್ಮ ಮನೇಲಿ?

ಲಲಿತಮ್ಮ—ಕೂತುಕೊಳ್ಳಿ . . . (ಗಟ್ಟಿಯಾಗಿ) ಸೀತ, ಸೀತ, ನೋಡೇ ನಿಮ್ಮ ಮಾವನವರು ಬಂದಿದಾರೆ—ನಿನ್ನ ಕರೆದುಕೊಂಡು ಹೋಗುಕ್ಕೆ!

ಗಂಡಸು—ಕ್ಷಮಿಸಿ. ನಾನು ಬಂದದ್ದು ಅದಕ್ಕಲ್ಲ. ಇನ್ನು ಮೇಲೆ ಅವಳಿಗೂ ನಮಗೂ ಯಾವ ಸಂಬಂಧವೂ ಇಲ್ಲ ಅಂತನ್ನೋದನ್ನ ತಿಳಿಸುಕ್ಕೆ. ಅದೂ ಅಲ್ಲದೆ ನಮ್ಮ ಕೃಷ್ಣಮೂರ್ತಿಗೆ ಬೇರೆ ಕಡೆ ಹೆಣ್ಣೂ ಗೊತ್ತಾಗಿದೆ ಆಗಲೆ.

ಲಲಿತಮ್ಮ—ಅಯ್ಯೋ, ಅಯ್ಯೋ! ನಿಮ್ಮ ದಮ್ಮಯ್ಯ, ಹಾಗೆ ಮಾತ್ರ ಮಾಡಬೇಡಿ.

ಗಂಡಸು—ಹಾದರಕ್ಕೆ ಹುಟ್ಟಿದ ಹುಡುಗೀನ ಮನೇ ಸೊಸೆ ಅಂತ ಮುದ್ದಿಸೋ ಕಾಗುತ್ತೆಯೆ? ಚೆನ್ನಾಯ್ತು! . . . ಬನ್ನಿ ಮದುವೇಗೆ ಮರೀಬೇಡಿ! (Fade out)

ಲಲಿತಮ್ಮ (ಅಳುತ್ತ)—ಇದು ಯಾವ ನ್ಯಾಯ, ಅಪ್ಪ? ನನ್ನ ತಪ್ಪಿಗೆ ನನ್ನ ಶಿಕ್ಷೆ ಮಾಡದೆ ಏನೂ ಅರಿಯದ ಅವಳನ್ನ ಶಿಕ್ಷೆ ಮಾಡ್ತಾರೆಯೆ?

ಧ್ವನಿ (Filter)—ಯಾಕೆ ಯೋಚನೆ ಮಾಡ್ತೀ? ನಿನ್ನ ತಪ್ಪಿಗೆ ನಿನಗೆ ಶಿಕ್ಷೆ ಇದ್ದೇ ಇದೆ. ನೋಡು ಇವರೇ ನಿನಗೆ ಶಿಕ್ಷೆ ಮಾಡೋರು.

ಲಲಿತಮ್ಮ—ಯಾರಪ್ಪ ನೀವು?

ಗಂಡಸಿನ ಧ್ವನಿ (Filter)—ನಾನೇ ನಾನು ಯಮ. ಸತ್ತಮೇಲೆ ನೀನು

ನನ್ನ ಹತ್ತಿರಕ್ಕೇ ಬರೋದು. ನಿನ್ನ ಕೈಕಾಲು ಕಟ್ಟಿ ಕುದಿಯೋ ಎಣ್ಣೇಸ್ನಾನ ಮಾಡಿಸೋನು ನಾನೆ! ಗೊತ್ತಾಯಿತೆ?

ಲಲಿತಮ್ಮ—ನಿತ್ಯ ದೇವರಪೂಜೆ ಮಾಡ್ತೇನೆ. ಉಪವಾಸ ಮಾಡ್ತಿದ್ದೇನೆ. ಇಷ್ಟಾದರೂ ದೇವರಿಗೆ ಕರುಣೆ ಬಂದಿಲ್ಲವೆ?

ಯಮ (Filter)—ಸಾಕೇ ಅಷ್ಟು ಪ್ರಾಯಶ್ಚಿತ್ತ ನೀನು ಮಾಡಿದ ತಪ್ಪಿಗೆ? ಹೋಗಲಿ. ತಿಳಿದುಕೊಂಡಿರು ಈಗಲೇ: ನಿನಗೇನು ಶಿಕ್ಷೆ ಅಂತ.

Sound—ಚಪ್ಪಾಳೆ ತಟ್ಟಿದ ಸದ್ದು.

ಬಂದ ಇಬ್ಬರು—ಏನಪ್ಪಣೆ, ಮಹಾಪ್ರಭೋ!

ಯಮ—ಇವಳ ಕೈ, ಕಾಲು ಕಟ್ಟಿಹಾಕಿ ಬಾಣಲೆಗೆ ಹಾಕಿ . . . ಏನು ನೋಡ್ತಿದೀರ—ಹೂಂ!

ಸದ್ದು—(ದೇಹ ನೆಲಕ್ಕೆ ಬಿದ್ದು ಹೊರಳಾಡತೊಡಗಿದ ಸದ್ದು)

ಲಲಿತಮ್ಮ—ಅಯ್ಯೋ . . . ಬಿಡಿರೋ ನನ್ನ . . . ಬಿಡಿರೋ . . . ಬಿಡಿಸ ಬಾರೆ ಸೀತ . . . ಬಿಡಿಸ ಬಾರೋ ಚಂದ್ರು . . .

ಸೂಚನೆ—(ಲಲಿತಮ್ಮನ ಕಿರಿಚುವಿಕೆ ಮುಂದೆ ನಡೆಯುವ ಸಂಭಾಷಣೆಯ ಉದ್ದಕ್ಕೂ—ಅವಳೇ ಮಾತನಾಡಿದಾಗ ಬಿಟ್ಟು—ಕೇಳಿಬರುತ್ತಲೇ ಇರಬೇಕು)

ಸೀತ (Fading in)—ಅಮ್ಮ, ಅಮ್ಮ!

ಸದ್ದು—(ಬಾಗಿಲು ತೆಗೆದ ಸದ್ದು. ಮಳೆ . . . ಗುಡುಗು)

ಚಂದ್ರಶೇಖರಯ್ಯ (Fading in)—ನೋಡಿ, ಡಾಕ್ಟರ್ . . . ಯಾಕಮ್ಮ, ಸೀತ . . . ಏನಾಯ್ತಮ್ಮ . . .?

ಡಾಕ್ಟರ್—ಮಂಚದ ಮೇಲೆ ಮಲಗಿಸಿ . . . ಹಾಗೇ . . . ಮೆತ್ತಗೆ . . .

ಸದ್ದು—(ಬಾಗಿಲು ತೆಗೆದ ಸದ್ದು)

ಗಂಡಸು (ಒಳಗೆ ಬರುತ್ತ)—ಏನು ಸೀತ ಇದು? ಹುಷಾರಾಗಿಲ್ಲವೆ?

ಚಂದ್ರಶೇಖರಯ್ಯ—ನೋಡೇ ಲಲಿತ . . . ಲಲಿತ! ಕೃಷ್ಣಮೂರ್ತಿ ಬಂದಿದಾನೆ.

ಲಲಿತಮ್ಮ—ಅಪ್ಪಾ, ಅಂತೂ ಬಂದೆಯ! ನಿನ್ನ ದಮ್ಮಯ್ಯ ಕಣಪ್ಪ ಸೀತನ್ನ ಕರಕೊಂಡು ಹೋಗು . . .

ಚಂದ್ರಶೇಖರಯ್ಯ—ಅವನು ಬಂದಿರೋದೂ ಅದಕ್ಕೇ ಕಣೆ . . .!

ಲಲಿತಮ್ಮ—ಬೇರೆ ಮದುವೆ ಮಾಡಿಕೋ ಬೇಡಪ್ಪ . . . ಮಾಡಿಕೋ ತೀಯ . . .? ಅಯ್ಯೋ . . .

ಸೀತ—ಒಂದು ಕಾಗದ ಬರೀಬಾರದಾಗಿತ್ತೇ ನೀವು? (ಅಳು)

ಕೃಷ್ಣಮೂರ್ತಿ—ಇವತ್ತು, ನಾಳೆ ಅಂದುಕೊಂಡು ಬರೀಲೇ ಇಲ್ಲ. ಕೊನೆಗೆ ನಾನೇ ಬಂದೆ ಆದರೆ ಅದಕ್ಕೂ ಇದಕ್ಕೂ . . . ?

ಡಾಕ್ಟರ್—ಅವರೆದುರಿಗೆ ಯಾವ ಚರ್ಚೆಯೂ ಬೇಡಿ, ಮಿಸ್ಟರ್ ಕೃಷ್ಣ ಮೂರ್ತಿ . . . ಚಂದ್ರಶೇಖರಯ್ಯ, ದಯವಿಟ್ಟು ಒಂದು ಟ್ಯಾಕ್ಸಿ ತರಿಸಿ . . . ಆಸ್ಪತ್ರೇಗೆ ಈಗಲೇ ಕರಕೊಂಡು ಹೋಗೋಣ . . .

ಚಂದ್ರು—ಆಗಲಿ, ಡಾಕ್ಟರೆ. ನೀವೇ ಇಲ್ಲೇ ಇರ್ತೀರಲ್ಲ?

ಕೃಷ್ಣಮೂರ್ತಿ—ನೀವಿಲ್ಲೇ ಇರಿ, ಮಾವಯ್ಯ. ನಾನು ತರ್ತೀನೆ. (Fade out)

ಚಂದ್ರು (ಗಟ್ಟಿಯಾಗಿ)—ಮೆಂಟಲ್ ಹಾಸ್ಪಿಟಲಿಗೆ ಕಣಪ್ಪ!

Sound—ಗುಡುಗಿನ ಅಬ್ಬರ.

ಲಲಿತಮ್ಮ—ಕರೀರೇ ಅವನ್ನ. ಹಾಗೇ ಹೋಗಿಬಿಟ್ಟನಲ್ಲೇ, ಸೀತ, ನಿನ್ನಿಲ್ಲೇ ಬಿಟ್ಟುಬಿಟ್ಟು! (ಅಳುತ್ತ) ಅಯ್ಯೋ . . . ಅಯ್ಯೊ . . .

Sound—ಅವಳ ಅಳು ಬದಲಾಗಿ ಹೆಚ್ಚು ಹೆಚ್ಚಾದ ನಗುವಾಗುವದರಲ್ಲಿ ಸಿಡಿಲೊಂದು ಅಪ್ಪಳಿಸುತ್ತದೆ. . . .

ಗ್ರೀಕೋ-ಲ್ಯಾಟಿನ್ ಚದರಗಳನ್ನು ಕುರಿತು

ನಿರಪವರ್ತ ವರ್ಗಸೂಚಿಯ ಸಮುದಾಯವೊಂದನ್ನು ತೆಗೆದುಕೊಳ್ಳಿ. ಅದರ ಸೂಚಿಯು p ಆಗಿರಲಿ. ಅದರ ಘಟಕಗಳು $a_o, a_1, \ldots, a_{p-1}$ ಎನ್ನೋಣ; ಪರಿಕರ್ಮವು $a_j + a_k = a_l$ ($l \equiv j + k$, ಮಾನಿಕ p) ಆಗಿರಲಿ.

ಈಗ, ಈ ಸಮುದಾಯದಿಂದ p^2 ವರ್ಗಸೂಚಿಯ ಸಮುದಾಯ $B \equiv \{b_{ij}\}$ ಯನ್ನು ಹೀಗೆ ರಚಿಸೋಣ: ಇದರ ಘಟಕಗಳು: $b_{ij} = (a^i a^j)$;

ಪರಿಕರ್ಮ: $b_{ij} + b_{kl} = b_{(i+k\, j+l)} = (a_{i+k}\, a_{j+l})$

"B" ನಲ್ಲಿ ಸಂಸ್ಥಾಪಕವು b_{oo} ಎಂಬುದೂ, ಇದರ ಹೊರತು ಎಲ್ಲ ಘಟಕಗಳ ವರ್ಗಸೂಚಿಯೂ p ಎಂಬುದೂ ಸ್ಪಷ್ಟ.

ಈಗ, b_{ij} $(i, j \neq o)$ ನ ಚಕ್ರೀಯ ಉಪಸಮುದಾಯ $\{b_{ij}^r\}$; $r = o, 1, \ldots p-1$ ನ್ನು ತೆಗೆದುಕೊಳ್ಳೋಣ. ಇದನ್ನು B_{ij} ನಿಂದ ಸಂಕೇತಿಸಿದರೆ,

$B_{ij} = b_{oo}, b_{ij}, b_{2i,\,2j} \ldots . b_{p-1i;\,p-1j}$

ಇದರಲ್ಲಿಲ್ಲದ b_{kl} $(k, l \neq o)$ ನಿಂದ ಜನಿತವಾಗುವ ಚಕ್ರೀಯ ಉಪಸಮುದಾಯವನ್ನು B_{kl} ನಿಂದ ಸಂಕೇತಿಸೋಣ. ಈಗ, ಕ್ರಮವಾಗಿ B_{kl} ನ ಘಟಕಗಳೊಡನೆ B_{ij} ನಿಂದ ಜನಿತವಾಗುವ ಸಹಸಂಕುಲಗಳನ್ನು ರಚಿಸಿದರೆ ಅವುಗಳಲ್ಲಿ ಕೆಲವು ವೈಶಿಷ್ಟ್ಯಗಳು ಕಂಡು ಬರುತ್ತವೆ. ಅವುಗಳಲ್ಲಿ ಮುಖ್ಯವಾದವೆಂದರೆ:—

೧. B_{ij} ಮತ್ತು B_{kl} ಗಳಲ್ಲಿ, b_{oo} ಸ ಹೊರತು ಯಾವ ಉಭಯ ಸಾಮಾನ್ಯವೂ ಇಲ್ಲ.

೨. ಸಹಸಂಕುಲ $b_{ij}^r\, B_{kl}$ ನಲ್ಲಿ b_{ij} ಯ r ನ ಹೊರತು ಯಾವ ಘಾತವೂ ಬರುವುದಿಲ್ಲ.

೩. ಯಾವುದೇ ಸಹಸಂಕುಲದಲ್ಲೂ ಒಮ್ಮೆ ಬಂದ ಘಟಕವೇ ಮತ್ತೆ ಅದೇ ಸಹಸಂಕುಲದಲ್ಲಾಗಲಿ ಮತ್ತಾವುದರಲ್ಲೇ ಆಗಲಿ ಬಂದಿರುವುದಿಲ್ಲ.

$p \times p$ ಚದರವೊಂದರ ಮೊದಲ ತೋರಣ, ಸ್ತಂಭಗಳಲ್ಲಿ B_{ij}, B_{kl} ಗಳನ್ನು ಬರೆದು ಸಹಸಂಕುಲಗಳನ್ನು, ಕೋಷ್ಠಕದಲ್ಲಿನಂತೆ ಚದರದಲ್ಲಿ ಗುರುತಿಸಿದರೆ ಈ ಎಲ್ಲಾ ಸಂಗತಿಗಳೂ ಸ್ಪಷ್ಟವಾಗುತ್ತವೆ. b_{rs} ಗಳನ್ನು $(a_r\, a_s)$ ಎಂದು ಬರೆದು " ಏಕ, ದಶಕ " ಸ್ಥಾನಗಳಲ್ಲಿನ a'ಗಳನ್ನು ಬೇರೆ ಬೇರೆ ಗುಣಗಳ ಬೇರೆ ಬೇರೆ ಮಟ್ಟಗಳೆಂದಲ್ಲಿ ಮೇಲಿನ

ವಿನ್ಯಾಸವು, ಗುಣಯುಗ್ಮವು ಏಕೈಕವಾಗಿರುವಂಥದಾಗಿರುತ್ತದೆ; ಎಂದರೆ, ಒಮ್ಮೆ ನಮ್ಮ ಗುಣಗಳು ನಿರ್ದಿಷ್ಟ ಮಟ್ಟಗಳಲ್ಲಿ ಬಂದರೆ ಮತ್ತೆ ಎಲ್ಲೂ ಅವು ಅವವೇ ಮಟ್ಟಗಳಲ್ಲಿ ಒಟ್ಟಿಗೇ ಬರುವುದಿಲ್ಲ.

ಸ್ಪಷ್ಟತೆಗಾಗಿ $p=$ ೫ ರ ಉದಾಹರಣೆಯನ್ನು ಪರಿಶೀಲಿಸೋಣ. ನಮ್ಮ "a" ಗಳು ೦, ೧, ೨, ೩, ೪ ಆಗಿರಲಿ; $(ij)=$ ೧೧ ; $(k,l)=$ ೧೨ ಎನ್ನೋಣ. ಆಗ $B_{೧೧}=$ ೦೦, ೧೧, ೨೨, ೩೩, ೪೪ ಮತ್ತು $B_{೧೨}=$ ೦೦, ೧೨, ೨೪, ೩೧, ೪೩. ನಮ್ಮ ಚದರವು

೦೦	೧೧	೨೨	೩೩	೪೪	
೧೨	೨೩	೩೪	೪೦	೦೧	(ಅ)
೨೪	೩೦	೪೧	೦೨	೧೩	
೩೧	೪೨	೦೩	೧೪	೨೦	
೪೩	೦೪	೧೦	೨೧	೩೨	

ವ್ಯಾವಹಾರಿಕವಾಗಿ ಇವುಗಳಿಗೆ ಹೀಗೆ ಅರ್ಥ ಕಟ್ಟೋಣ :—ನಮ್ಮ ಸಂಖ್ಯೆಗಳಲ್ಲಿ ಏಕಸ್ಥಾನವು ಎಮ್ಮೆಯನ್ನೂ ದಶಕಸ್ಥಾನವು ಹಸುವನ್ನೂ ಸೂಚಿಸಲಿ. ಅಲ್ಲಿನ ಅಂಕವು ಆ ಪ್ರಾಣಿಯು ಕೊಡುವ ಹಾಲಿನ ಪರಿಮಾಣವನ್ನು ಸೂಚಿಸಲಿ. ಉದಾಹರಣೆಗೆ " ೨೧ " ಎಂದರೆ ೧ ಸೇರು ಹಾಲಿನ ಎಮ್ಮೆ, ಎರಡು ಸೇರು ಹಾಲಿನ ಹಸುಗಳ ಜೊತೆ ಎಂದರ್ಥ.

ಹಸು ಎಮ್ಮೆಗಳನ್ನು ಮೇಲಿನಂತೆ ಜೋಡಿಮಾಡಿ ವಿನ್ಯಾಸಗೊಳಿಸಿದರೆ ಒಮ್ಮೆ ಉಂಟಾದ 'ಜೊತೆ'ಯೇ ಮತ್ತೆ ಎಲ್ಲೂ ಬರುವುದಿಲ್ಲ.

ಕುಶಾಗ್ರಬುದ್ಧಿಯ ಓದುಗರಿಗೆ ಈ ವಿನ್ಯಾಸವು, ಇಂಥ ವಿನ್ಯಾಸಕ್ಕೆ ಈ ಬಗೆಯ ರಚನೆಯು, ಗುಬ್ಬಿಯಮೇಲೆ ಬಿಟ್ಟ ಬ್ರಹ್ಮಾಸ್ತ್ರದಂತೆ ತೋರಬಹುದು. ಹಾಗೆ ಎನಿಸುವುದೂ ಶುಭಚಿಹ್ನೆಯೇ. ಮೇಲೆ ಹೇಳಿದ "ಯುಗ್ಮಗಳ ಏಕೈಕತೆ"ಯೇ ನಮ್ಮ ಗುರಿಯಾದಲ್ಲಿ ಅದನ್ನು ಈ ಯಾವ ಸಮುದಾಯ ಕಲ್ಪನೆಯ ನೆರವೂ ಇಲ್ಲದೆಯೇ ಸಾಧಿಸಬಹುದು; ಹಾಗೆ ನೋಡಿದರೆ ೦ ೧ ೨ ೩ ೪ ರಲ್ಲಿ ಒಂದೊಂದನ್ನು ಅವುಗಳಲ್ಲಿ ಪ್ರತಿಯೊಂದರೊಡನೆಯೂ ಒಮ್ಮೊಮ್ಮೆ ಮಾತ್ರವೇ "ಸೇರಿಸಿ" ಐದೈದರ ಗುಂಪುಗಳಾಗಿ ವಿನ್ಯಾಸಗೊಳಿಸಿದರಾಯಿತಲ್ಲ! ಉದಾಹರಣೆಗೆ

೦೦	೦೧	೦೨	೦೩	೦೪	
೧೦	೧೧	೧೨	೧೩	೧೪	
೨೦	೨೧	೨೨	೨೩	೨೪	(ಆ)
೩೦	೩೧	೩೨	೩೩	೩೪	
೪೦	೪೧	೪೨	೪೩	೪೪	

ಈ ಚೌಕದಲ್ಲಿರುವ ಕುಂದೇನು ?
ನಮ್ಮ ಚೌಕಕ್ಕಿರುವ ಕೋಡು ಏನು ?

ರಾಣಿಯರ ಕತೆಯನ್ನು [1] ನೆನೆದುಕೊಂಡು ಮೇಲಿನ ವಿವರಣೆಯೊಂದಿಗೆ ಹೊಂದಿಸಿಕೊಂಡರೆ ಕೆಳಗಿನಂತೆ ಹೇಳಬಹುದು ;

ರಾಜನಿಗೆ ನಜ಼ರೊಪ್ಪಿಸಲು ಒಬ್ಬನ ಬದಲು ಇಬ್ಬರು ಪ್ರಜೆಗಳು ಬಂದರೆನ್ನಿ. ಮೈಸೂರಿನವನು ಇಪ್ಪತ್ತೈದು ಎಮ್ಮೆಗಳನ್ನೂ ಹಸೂರಿನವನು ಇಪ್ಪತ್ತೈದು ಹಸುಗಳನ್ನೂ ತಂದಿದ್ದರೆನ್ನಿ. ಜೊತೆಗೆ, ಜಾಗರೂಕರಾದ ಪ್ರಜೆಗಳು ದೊರೆಗೆ ಕಷ್ಟವಾಗದಿರಲೆಂದು ಒಬ್ಬೊಬ್ಬನೂ ೦, ೧, ೨, ೩, ೪ ಸೇರು ಹಾಲುಕರೆಯುವ ಹಸು—ಎಮ್ಮೆಗಳು ಒಂದೊಂದು ಜಾತಿಯವೂ ಐದೈದನ್ನು ತಂದಿದ್ದಾರೆಂದೂ ಎನ್ನೋಣ. ಆದರೆ, ಅದೃಷ್ಟಕ್ಕೆ ಹೊಣೆಯಾರು? ಅವರು ಊರ ಬಾಗಿಲಲ್ಲೇ ಒಬ್ಬರನ್ನೊಬ್ಬರು ಸಂಧಿಸಬೇಕೆ? ಅವರಿಗೊಂದು ಕುಚೋದ್ಯವು ಹೊಳೆಯಿತು. ನಮ್ಮ "ಸಂಖ್ಯೆ" ಗಳಲ್ಲಿನಂತೆ ಅವರು ತಮ್ಮ ಹಸು—ಎಮ್ಮೆಗಳನ್ನು "ಜೋಡಿ" ಗಳಾಗಿ ಕಟ್ಟಿದರು. ಇದರಂತೆ ಯಾವುದೇ ಜೊತೆಯೂ ಏಕೈಕವಾಯಿತು. ಈ ಇಪ್ಪತ್ತೈದು ಜೊತೆಗಳನ್ನೂ ತಂದು ದೊರೆಗೆ ಕಾಣಿಕೆಯೊಪ್ಪಿಸಿದರು.

ಬಳಿಯಲ್ಲೇ ಇದ್ದ ಮಂತ್ರಿಗೆ ಬಂತು, ತಲೆನೋವು. ಜೋಡಿಗಳನ್ನು ಬಿಚ್ಚದೆಯೇ, ಐವರು ರಾಣಿಯರಿಗೂ ಎರಡು ಬಗೆಯ ಹಾಲೂ ಸಮನಾಗಿಯೇ ದೊರೆಯುವಂತೆ, ಎಂದರೆ ಒಟ್ಟಿನಲ್ಲಿ ಮಾತ್ರವಲ್ಲ, ಪ್ರತ್ಯೇಕ ಹಸುವಿನ, ಎಮ್ಮೆಯ ಹಾಲೂ ಪ್ರತಿ ರಾಣಿಗೂ ಹತ್ತು ಹತ್ತು ಸೇರು ಬರುವಂತೆ ಐದೈದು ಜೋಡಿಗಳನ್ನು ಒಬ್ಬೊಬ್ಬ ರಾಣಿಗೂ ಕೊಡುವಂತೆ ಮಂತ್ರಿಗೆ ಆಣತಿಯಾಯಿತು. ದೊರೆಯ ಅಪ್ಪಣೆಯನ್ನು ನಡೆಸುವಲ್ಲಿ ಮಂತ್ರಿಗೆ ನೆರವು ನೀಡಲಾರಿರಾ?

ಇದುವರೆಗಿನ ಪರಿಶೀಲನೆಯಲ್ಲೇ ಮೇಲಿನ ಒಗಟೆಗೆ ಪರಿಹಾರವಿದೆಯೆಂಬುದು "ಕಾಣುವ ಕಣ್ಣುಳ್ಳವರಿಗೆ" ಗೊತ್ತಾಗಿಯೇ ಇರುತ್ತದೆ. ನಾವು ಮೊದಲು ಕಟ್ಟಿದ್ದ "ವ್ಯೂಹ"ವು, "ವಿನ್ಯಾಸ"ವು ಸಾಂಕೇತಿಕವಾಗಿ ನಮ್ಮ ಪ್ರಶ್ನೆಗೆ ಉತ್ತರವಾಗಿರುತ್ತದೆ. ಅದರಲ್ಲಿನ ತೋರಣಗಳನ್ನಾಗಲಿ, ಸ್ತಂಭಗಳನ್ನಾಗಲಿ ಕೊಟ್ಟರೆ ತೀರಿತು, ನಮ್ಮ ಸಮಸ್ಯೆ.

ಸಹಸಂಕುಲಗಳನ್ನು ರಚಿಸುವಾಗ ಉಪಸಮುದಾಯದೊಡನೆ ಅದರ ಜನಕವಾಗಿ ಬಳಸುವ ಘಟಕವು ಆ ಸಹಸಂಕುಲದ ಯಾವುದೇ ಘಟಕವೂ ಆಗಿರಬಹುದೆಂದು ನೋಡಿದ್ದೇವೆ. ಉದಾಹರಣೆಗೆ $b_{12} B_{11}$ ನ್ನು ರಚಿಸುವಾಗ, ನಮ್ಮ ಸಮುದಾಯದಲ್ಲಿ, b_{12} ರ ಬದಲು b_{23} ಯನ್ನಾಗಲಿ, b_{34} ನ್ನಾಗಲಿ . . . ಬಳಸಿದ್ದರೂ ನಮಗೆ ಬರುತ್ತಿದ್ದ ಸಹಸಂಕುಲ $b_{12}B_{11}$ ಏ, ಹಾಗೆಯೇ $b^3{}_{12}B_{11}$ ನ್ನು ರಚಿಸುವಾಗ $b^3{}_{12}=b_{31}$ ರ

1 "ಸಂಖ್ಯೆಗಳಲ್ಲಿ ಮಾನವಪದ್ಧತಿಗಳು."

ಬದಲು b_{42}, b_{03}, b_{14} ಯಾ b_{20} ಗಳಲ್ಲಿ ಯಾವುದನ್ನೇ ಜನಕವಾಗಿ ಬಳಸಿದ್ದರೂ ಅದೇ ಸಹಸಂಕುಲವೇ ಬರುತ್ತಿತ್ತು.

ಆದ್ದರಿಂದ ಗಣಿತದಲ್ಲಿ ಪ್ರಯೋಗಪಟು (!) ಗಳಾದವರು ಕುತೂಹಲದಿಂದ ಕೆಳಕಂಡಂತೆ ವ್ಯೂಹಕಟ್ಟುವ ಪ್ರಯತ್ನ ಮಾಡಬಹುದು. ಮೊದಲು, ನಮ್ಮ ಉಪಸಮುದಾಯ b_{11} ನಲ್ಲಿಲ್ಲದ ಯಾವುದಾದರೂ ಘಟಕ, ಉದಾಹರಣೆಗೆ ೩೨ ಎನ್ನಿ ಒಂದರ ಸಹಸಂಕುಲವನ್ನು ರಚಿಸುತ್ತೇವೆ. ಈಗ, B_{11}, b_{32} B_{11} ಗಳಾವುದರಲ್ಲೂ, ಇಲ್ಲದ ಒಂದು ಘಟಕ, ಉದಾಹರಣೆಗೆ ೨೦ ರಿಂದ ಸಹಸಂಕುಲವನ್ನು ರಚಿಸುತ್ತೇವೆ, ಇವು ಮೂರು ಸಂಕುಲಗಳಲ್ಲೂ ಇಲ್ಲದ ಮತ್ತೊಂದರಿಂದ . . . . . .

ಹೀಗೆ ಕಟ್ಟಿದ ವ್ಯೂಹವೊಂದನ್ನು ಪಕ್ಕದಲ್ಲಿ ಕೊಟ್ಟಿದೆ :—

೦೦	೧೧	೨೨	೩೩	೪೪	
೩೨	೪೩	೦೪	೧೦	೨೧	
೨೦	೩೧	೪೨	೦೩	೧೪	
೧೨	೨೩	೩೪	೪೦	೦೧	(ಇ)
೧೩	೨೪	೩೦	೪೧	೦೨	

ತೋರಣಗಳಾಗಿ ವಿಂಗಡಿಸಿದರೇನೋ ಇದೂ ನಮ್ಮ ಸಮಸ್ಯೆಗೆ ಪರಿಹಾರವಾಗುತ್ತದೆ. ಆದರೆ ನಾವು ಕಟ್ಟಿದ್ದ ವ್ಯೂಹ (ಅ)ನಲ್ಲಿ ಸ್ತಂಭಗಳೂ ತೋರಣಗಳಂತೆಯೇ ಸಮಸ್ಯೆಗೆ ಉತ್ತರ ಕೊಡುತ್ತಿದ್ದುವು. ಈ ಹೆಚ್ಚಿನ ಗುಣವು ಮೇಲಿನ (ಇ) ಚೌಕದಲ್ಲಿ ಇಲ್ಲ; ಸ್ತಂಭಗಳಾಗಿ ಹಂಚಿದರೆ ಹಾಲು ಸಮನಾಗಿ ಬರುವುದಿಲ್ಲ.

"ಮಾನಪದ್ಧತಿಗಳು"ನಲ್ಲಿನ ೫×೫ ಭದ್ರಾಕೃತಿಯ ಪರಿಶೀಲನೆಯನ್ನು ಸ್ಮರಿಸಿ ಕೊಂಡು ಅದರಂತೆಯೇ ಮೇಲಿನ ಚದರಗಳನ್ನೂ "ಏಕ"ಗಳ, "ಪಂಚಕ"ಗಳ ಚೌಕಗಳಾಗಿ ಒಡೆದು ಪರಿಶೀಲಿಸಿದರೆ ಈ ಕುಂದಿನ ಕಾರಣವು ಗೋಚರವಾಗುತ್ತದೆ.

ಮೂರು ಚೌಕಗಳನ್ನೂ ಕೆಳಗೆ ಹೀಗೆ ಒಡೆದು ತೋರಿಸಿದೆ :—

ಚೌಕ	ಪಂಚಕ					ಏಕ				
(ಅ)	೦	೧	೨	೩	೪	೦	೧	೨	೩	೪
	೧	೨	೩	೪	೦	೨	೩	೪	೦	೧
	೨	೩	೪	೦	೧	೪	೦	೧	೨	೩
	೩	೪	೦	೧	೨	೧	೨	೩	೪	೦
	೪	೦	೧	೨	೩	೩	೪	೦	೧	೨
(ಆ)	೦	೦	೦	೦	೦	೦	೧	೨	೩	೪
	೧	೧	೧	೧	೧	೦	೧	೨	೩	೪
	೨	೨	೨	೨	೨	೦	೧	೨	೩	೪
	೩	೩	೩	೩	೩	೦	೧	೨	೩	೪
	೪	೪	೪	೪	೪	೦	೧	೨	೩	೪

(ಇ)

೦	೧	೨	೩	೪	೦	೧	೨	೩	೪
೩	೪	೦	೧	೨	೨	೩	೪	೦	೧
೨	೩	೪	೦	೧	೦	೧	೨	೩	೪
೧	೨	೩	೪	೦	೨	೩	೪	೦	೧
೧	೨	೩	೪	೦	೩	೪	೦	೧	೨

ಇವುಗಳ ಪರಿಶೀಲನೆಯಿಂದ ಈ ಅಂಶಗಳು ಹೊರಪಡುತ್ತವೆ:—

(ಅ)ನಲ್ಲಿನ ಹಸುವಿನ, ಎಮ್ಮೆಯ ವ್ಯೂಹಗಳೆರಡೂ ಈ ವೈಶಿಷ್ಟ್ಯವುಳ್ಳವು: ಯಾವುದೇ ತೋರಣದಲ್ಲಾಗಲಿ, ಸ್ತಂಭದಲ್ಲಾಗಲಿ ಒಮ್ಮೆ ಬಂದ 'ಜಾತಿ'ಯ (ಎಂದರೆ ನಿರ್ದಿಷ್ಟ ಪ್ರಮಾಣ ಹಾಲು ಕೊಡುವ) ಹೈನವು ಮತ್ತೆ ಅದೇ ತೋರಣ ಅಥವಾ ಸ್ತಂಭದಲ್ಲಿ ಬರುವುದಿಲ್ಲ.

(ಆ)ನ ವ್ಯೂಹಗಳಲ್ಲಿ ಮೇಲಿನ ಏಕೈಕತಾಗುಣವು ಹಸುಗಳ ವ್ಯೂಹ (ಪಂಚಕ ಸ್ಥಾನ)ದಲ್ಲಿ ಸ್ತಂಭತಃ ಮಾತ್ರವೂ ಎಮ್ಮೆಗಳ (ಏಕಸ್ಥಾನದ) ವ್ಯೂಹದಲ್ಲಿ ತೋರಣತಃ ಮಾತ್ರವೂ ಇದೆ.

(ಇ)ನಲ್ಲಿ ಹಸುಗಳ ವ್ಯೂಹದಲ್ಲಾಗಲಿ, ಎಮ್ಮೆಗಳ ವ್ಯೂಹದಲ್ಲಾಗಲಿ ಏಕೈಕತೆ ಇರುವುದು ತೋರಣತಃ ಮಾತ್ರ.

ಎಂದರೆ ನಮ್ಮ ಎರಡು ಉಪವ್ಯೂಹಗಳಲ್ಲೂ ಏಕೈಕತೆಯು ಸ್ತಂಭ ತೋರಣ ಗಳೆರಡರಲ್ಲೂ ಇದ್ದಲ್ಲಿ ಮಾತ್ರವೇ ಅದು ನಮ್ಮ (ಅ)ನಲ್ಲಿನಂತೆ ಪೂರ್ಣ ವ್ಯೂಹ ವಾಗಿರುವುದು.

ಆದರೆ ಇಷ್ಟೇ ಸಾಲದು. ಎರಡು ಉಪವ್ಯೂಹಗಳಲ್ಲೂ ಒಂದೇ ವಿನ್ಯಾಸವಿದ್ದಲ್ಲಿ ನಮಗೆ ಉತ್ತರ ಸಿಕ್ಕುವ ಬದಲು ಮೊದಲ ತೋರಣದ ಒಂದು ವಿಚಿತ್ರ "ಕಾಪಿ" ಯಾಗಿ ಬಿಡುತ್ತದೆ, ನಮ್ಮ ವ್ಯೂಹ.

ತೋರಣ ಸ್ತಂಭಗಳೆರಡರಲ್ಲೂ ಏಕೈಕತೆಯುಳ್ಳ (ಅ)ನ ಚದರಗಳಂಥ ವ್ಯೂಹ ಗಳನ್ನು ಲ್ಯಾಟಿನ್ ಚದರಗಳೆನ್ನುತ್ತಾರೆ. ಗುಣವೊಂದರ ಬದಲು ಎರಡು ಗುಣಗಳಲ್ಲಿ ಇಂಥ ವೈಶಿಷ್ಟ್ಯವುಳ್ಳ (ಅ)ನಂತಹ "ಯುಗ್ಮಗಳ ಚದರ"ಗಳನ್ನು ಗ್ರೀಕೋ-ಲ್ಯಾಟಿನ್ ಚದರಗಳೆನ್ನುತ್ತಾರೆ. ಯುಗ್ಮಗಳ ಬದಲು ಎರಡಕ್ಕೂ ಹೆಚ್ಚು ಗುಣಗಳಿದ್ದು ಅವುಗಳಲ್ಲಿ ಪ್ರತಿಯುಗ್ಮವೂ ಲ್ಯಾಟಿನ್ ಚದರವಾಗುವಲ್ಲಿ ಅಂಥ ವ್ಯೂಹಗಳನ್ನು ಅತಿ ಗ್ರೀಕೋ-ಲ್ಯಾಟಿನ್ ಚದರಗಳೆಂದು ಕರೆಯುವುದು ರೂಢಿ.

ಈ ಪರಿಭಾಷೆಯಲ್ಲಿ ಹೇಳುವುದಾದರೆ: ಮೇಲಿನ ನಮ್ಮ ವಿಧಾನವು ನಿರಪವರ್ತ ವರ್ಗಸೂಚಿಯ ಸಮುದಾಯದಿಂದ ಗ್ರೀಕೋ-ಲ್ಯಾಟಿನ್ ಚದರಗಳನ್ನು ರಚಿಸುವ ಮಾರ್ಗವನ್ನು ತಿಳಿಸಿಕೊಡುತ್ತದೆ.

ಗ್ರೀಕೋ-ಲ್ಯಾಟಿನ್ ಚದರಗಳ ರಚನೆಗೆ ಇರುವುದು ಇದೊಂದೇ ಮಾರ್ಗವೆಂದಲ್ಲ. ಉದಾಹರಣೆಗೆ ಸಮುದಾಯಕ್ಕಿಂತ ಹೆಚ್ಚು ಸಂಕೀರ್ಣವಾದ "ಕ್ಷೇತ್ರ" (Field) ಕಲ್ಪನೆಯನ್ನು ಬಳಸಿಕೊಂಡು ರಚಿಸುವ ವಿಧಾನವು ಬೋಸ್—ಸ್ಟೀವನ್ಸರ ಪ್ರಮೇಯದಿಂದ ಸಿದ್ಧಿಸುವುದು. ಫಲತಃ ಆ ವಿಧಾನವೂ ನಮ್ಮದೂ ಕೆಲಬಾರಿ ಒಂದೇ ವಿನ್ಯಾಸವನ್ನು ಕೊಟ್ಟರೂ, p ಯು ನಿರಪವರ್ತವಾಗಿರುವಾಗಲಾದರೂ ನಮ್ಮ ವಿಧಾನವು ನೇರವಾದದ್ದೆಂದು ತೋರುತ್ತದೆ ; ಗಾಣಿತವಾಗಿಯೂ ಹೆಚ್ಚು ಸರಳವೆಂದು ಭಾಸವಾಗುತ್ತದೆ.[2]

ಗಾಣಿತವಾಗಿ ಇದರ ಸಾಧನೆಯನ್ನು ಹೀಗೆ ಹೇಳಬಹುದು :
ನಮ್ಮ ಸಾಧನೆಯಲ್ಲಿ ಮೂರು ಹಂತಗಳಿವೆ. ಅವೆಂದರೆ :

೧. ನಮ್ಮ ಸಮುದಾಯದಲ್ಲಿ B_{ij} ನಲ್ಲಿಲ್ಲದ ಘಟಕವೊಂದರಿಂದ ಅದರೊಡನೆ ರಚಿತವಾದ ಸಹಸಂಕುಲದಲ್ಲಿ ಪ್ರತಿಘಟಕವೂ ಒಮ್ಮೆ ಮಾತ್ರ ಬರುತ್ತದೆ; ಹಾಗೆಯೇ ಆ ಸಹಸಂಕುಲದಲ್ಲಿ (ಉಪಸಮುದಾಯವು ಒಂದು ಅಪವಾದ) ಆ ಜನಕಘಟಕದ ಒಂದನೆಯ ಹೊರತು ಯಾವ ಘಾತವೂ ಬರುವುದಿಲ್ಲ. ಆದ್ದರಿಂದ $b_{kl}^{r}\, B_{ij}$ ನ ಘಟಕಗಳು ಏಕೈಕವಾಗಿರುವುದು ಮಾತ್ರವಲ್ಲ, ಯಾವುದೇ $b_{kl}^{r}\, B_{ij}$ ನಲ್ಲೂ b_{kl}^{r} ನ ಹೊರತು b_{kl}^{r} (ಅಥವಾ b_{kl}) ನ ಮತ್ತಾವ ಘಾತವೂ ಬಂದಿರುವುದಿಲ್ಲ. ಎಂದರೆ ಯಾವುದೇ ತೋರಣದಲ್ಲಿ ಒಮ್ಮೆ ಬಂದ b_{ij} ಯು ಅದೇ ತೋರಣದಲ್ಲಿ ಮತ್ತೆ ಬರುವುದಿಲ್ಲ. ಅದೇರೀತಿ, ತೋರಣಗಳನ್ನು b_{kl} ನೊಡನೆ b_{ij}^{s} ನ ಸಂಯೋಗದಿಂದಾದ ಸಹಸಂಕುಲಗಳೆಂದು ಭಾವಿಸಬಹುದು ;

೨. ನಮ್ಮ ಸಮುದಾಯ B ಯನ್ನು ಕೆಳಗಿನಂತೆ ಸಜಾತ್ಯಂಕಿಸೋಣ : $(b_{ij}) \rightarrow a_j$.

ಈಗ ನಮ್ಮ ತೋರಣ ಉಪಸಮುದಾಯವು $a_o, a_j, a_j^2, \ldots a_j^{p-1}$ ಎಂದು ಅಂಕಿತವಾಗುತ್ತದೆ. ಹಾಗೆಯೇ "ಸ್ತಂಭ" ಉಪಸಮುದಾಯವು $a_o, a_l, a_l^2, \ldots a_i^{p-1}$ ಎಂದು ಅಂಕಿತವಾಗುತ್ತದೆ. ಆದ್ದರಿಂದ B_{ij} ಯೊಡನೆ b_{kl}^{s} ನ ಸಂಯೋಗದಿಂದ ಜನಿತವಾಗುವ ಸಹಸಂಕುಲದ ಅಂಕನವು $a_j^o . a_l^s, a_j^1 . a_l^s, \ldots a_j^{p-1} . a_l^s$ ಎಂದಾಗುತ್ತದೆ ಆದರೆ $a_j = a_1^j$ ಆದ್ದರಿಂದ ಇದೇ ಸಹಸಂಕುಲವೇ ಈ ರೂಪ ತಾಳುತ್ತದೆ :—

---

[2] ಪ್ರಸ್ತುತ ಲೇಖಕನು ಬೋಸ್, ಸ್ಟೀವನ್ಸ್, ಅಥವಾ ಮತ್ತಾರದೇ ಲೇಖನವನ್ನೂ ನೋಡಲಾಗಿಲ್ಲ. ಕೆಳಗೆ ಕೊಟ್ಟಿರುವ ಸಾಧನೆಯು ಅವನ "ಸ್ವಕಪೋಲಕಲ್ಪಿತ". ಆದ್ದರಿಂದ ಅದರಲ್ಲಿರಬಹುದಾದ ದೋಷಗಳಿಗೆ ಅವನೊಬ್ಬನೇ ಹೊಣೆ.

a_j^{jr+ls}, ($r=$ ೦, ೧, ೨, . . . , p-೧).

ಇದರ ಯಾವೆರಡು ಘಟಕಗಳೂ ಸಮಾನವಾಗಿರುವುದು ಸಾಧ್ಯವಿಲ್ಲ. ಏಕೆಂದರೆ $a_1^{r1j+sl}=a_1^{r2j+ls}$ ಎನ್ನಿ. ಆಗ $a_1^{r2j}=a_1^{r1j}$ ಆಗಬೇಕು. ಎಂದರೆ $r_1 j\equiv r_2 j$ (ಮಾನಿಕ p) ; p ಯು ನಿರಪವರ್ತವೂ r_1, r_2, j ಗಳು p ಗಿಂತ ಚಿಕ್ಕ ಧನಪೂರ್ಣಾಂಕಗಳೂ ಆಗಿರುವುದರಿಂದ $r_1=r_2$ ಆಗುತ್ತದೆ. ಇದರಂತೆಯೇ $a_1^{rj+s1l}=a_1^{rj+s2l}$ ಆಗಬೇಕಾದರೆ $s_1=s_2$ ಆಗಬೇಕು. ಎಂದರೆ ನಮ್ಮ B ಯ ಘಟಕಗಳು ಏಕಸ್ಥಾನದಲ್ಲಿ ಲ್ಯಾಟಿನ್ ಚದರವನ್ನು ಕೊಡುತ್ತವೆ.

೩. ಹಾಗೆಯೇ $(b_{ij})\rightarrow a_i$ ಎಂಬ ಅಂಕನದಿಂದ ನಮ್ಮ ಘಟಕಗಳು ದಶಕ ಸ್ಥಾನದಲ್ಲೂ ಲ್ಯಾಟಿನ್ ಚದರವನ್ನು ಕೊಡುತ್ತವೆಂದು ತೋರಿಸಬಹುದು. ಎಂದರೆ, ನಮ್ಮ ವಿಧಾನವು, p ಯು ನಿರಪವರ್ತವಾದಾಗ[3] b_{lj} ಗಳು :

೧. ಏಕೈಕವೂ, ೨. "ಏಕ" ಸ್ಥಾನಗಳಲ್ಲಿ ಹಾಗು ೩. "ದಶಕ" ಸ್ಥಾನಗಳಲ್ಲಿ ಲ್ಯಾಟಿನ್ ಚದರಗಳನ್ನು ಕೊಡುವಂತೆಯೂ ಇದೆ; ಅರ್ಥಾತ್ ಗ್ರೀಕೋ-ಲ್ಯಾಟಿನ್ ವಿನ್ಯಾಸವನ್ನು ರಚಿಸುವ ಮಾರ್ಗವನ್ನು ಕೊಡುತ್ತದೆ.

ನಿರ್ದಿಷ್ಟ b_{ij} ಅನ್ನು ಆಯ್ದುಕೊಂಡಮೇಲೆ b_{kl} ನ್ನು ಆಯ್ದುಕೊಳ್ಳಲು ಇರುವುದು ಒಂದೇ ಅವಕಾಶವೆ? ಅಲ್ಲವಷ್ಟೆ. ಈಗ b_{k11} ಎಂಬ ಘಟಕ ಮತ್ತೊಂದರಿಂದಲೂ ಹಿಂದಿನಂತೆಯೇ ಗ್ರೀಕೋ-ಲ್ಯಾಟಿನ್ ಚದರವನ್ನು ರಚಿಸಬಹುದು. ಹೀಗೆ ಅನೇಕ ಗ್ರೀಕೋ-ಲ್ಯಾಟಿನ್ ಚದರಗಳನ್ನು ರಚಿಸಬಹುದು.

ಆದರೆ ಎರಡೇ ಗುಣ (ಸ್ಥಾನ) ಗಳಿಗೇ ಈ ಗ್ರೀಕೋ-ಲ್ಯಾಟಿನ್ ಗುಣವು ಮುಗಿಯಬೇಕೆ? ಇದೇ ಸಮುದಾಯ A ನಿಂದಲೇ ಹೆಚ್ಚು ಸ್ಥಾನಗಳುಳ್ಳ ಇಂಥ ಚದರಗಳನ್ನು ರಚಿಸಲಾರೆವೆ? ಎರಡೇ ಏಕೆ, p-1 ಸ್ಥಾನಗಳುಳ್ಳ ಇಂಥ ಚದರಗಳನ್ನು ಇದೇ ಕ್ರಮದಲ್ಲಿ ರಚಿಸಬಹುದು. ಆಗ ನಮ್ಮ B ಯ ಘಟಕಗಳು $b_{ijk}\ldots=a_i\, a_j\, a_k\ldots$ ಗಳಾಗುತ್ತವೆ, ಅಷ್ಟೆ. ಆದರೆ ಆ ವಿನ್ಯಾಸದಲ್ಲಿನ ಯಾವುದೇ ಎರಡು ಸ್ಥಾನಗಳು ಗ್ರೀಕೋ-ಲ್ಯಾಟಿನ್ ರೀತಿಯಲ್ಲಿ ವಿನ್ಯಸ್ತವಾಗಿರಬೇಕಾದರೂ ಅವುಗಳ "ಜನಕ" ಘಟಕಗಳಲ್ಲಿನ ಅನುರೂಪ "a" ಗಳ ಯುಗ್ಮಗಳು ಪರಸ್ಪರ ಘಾತಗಳಾಗಿರಬಾರದು. ಹಾಗಿಲ್ಲದೆ ಅವುಗಳಲ್ಲಿ ಯಾವಸ್ಥಾನಗಳಲ್ಲಿನ ಯುಗ್ಮಗಳಾದರೂ

[3] ಇದೇ ವಿಧಾನವೇ p ಯು ಸಾಪವರ್ತಕ, ಆದರೆ ಬೆಸ, ಸಂಖ್ಯೆಯಾದಾಗಲೂ ಗ್ರೀಕೋ-ಲ್ಯಾಟಿನ್ ಚದರವನ್ನು ಕೊಡುತ್ತದೆ. ಅದರಲ್ಲಿರಬಹುದಾದ ಗುಣಗಳು ಎಂದರೆ, "ಸ್ಥಾನ" ಗಳು p ಯ ಅತಿ ಚಿಕ್ಕ ಅಪವರ್ತನಕ್ಕಿಂತ 1 ಕಡಮೆ ; ಉದಾ. ಗೆ $p=15$ ಆದರೆ, ಅದು $3-1=2$; $p=35$ ಕ್ಕೆ ಅದು $5-1=4$.

ಪರಸ್ಪರ ಘಾತಗಳಾದರೆ ವಿನ್ಯಾಸದ ಆಯಾ ಸ್ಥಾನಗಳು ತಮ್ಮ ಗ್ರೀಕೋ-ಲ್ಯಾಟಿನ್ ಗುಣವನ್ನು ಕಳೆದುಕೊಳ್ಳುತ್ತವೆ. (ಕೆಳಗಿನ ಚೌಕ "ಈ" ಯನ್ನು ನೋಡಿ). ಜನಕ ಘಟಕಗಳನ್ನು ಆಯುವಾಗ ಈ ಬಗ್ಗೆ ಎಚ್ಚರದಿಂದಿದ್ದರೆ ಪ್ರತಿಯುಗ್ಮದಲ್ಲೂ ಸಹ ಗ್ರೀಕೋ-ಲ್ಯಾಟಿನ್ ಗುಣವುಳ್ಳಂತಹ—ಎಂದರೆ ಅತಿ ಗ್ರೀಕೋ-ಲ್ಯಾಟಿನ್ ವಿನ್ಯಾಸಗಳನ್ನು ರಚಿಸಬಹುದು.

$P=$ ೫ ಕ್ಕೆ ಇಂಥ ಎರಡು ಗ್ರೀಕೋ-ಲ್ಯಾಟಿನ್ ಮತ್ತು ಅತಿ ಗ್ರೀಕೋ-ಲ್ಯಾಟಿನ್ ಚದರಗಳನ್ನು ಕೆಳಗೆ ಕೊಟ್ಟಿದೆ. (ಉ ಮತ್ತು ಊ ಚೌಕಗಳನ್ನು ನೋಡಿ)

(ಈ)

೦೦೦೦	೧೨೩೪	೨೪೧೩	೩೧೪೨	೪೩೨೧
೧೪೧೩	೨೧೪೨	೩೩೨೧	೪೦೦೦	೦೨೩೪
೨೩೨೧	೩೦೦೦	೪೨೩೪	೦೪೧೩	೧೧೪೨
೩೨೩೪	೪೪೧೩	೦೧೪೨	೧೩೨೧	೨೦೦೦
೪೧೪೨	೦೩೨೧	೧೦೦೦	೨೨೩೪	೩೪೧೩

ಈ ಚದರದಲ್ಲಿ ೨, ೩, ೪ ನೆಯ ಸ್ಥಾನಗಳು, ಎಂದರೆ "ಏಕ, ದಶಕ, ಶತಕ" ಗಳು ಒಂದೇ ತೋರಣದ "ಕಾಪಿ" ಗಳಾಗುತ್ತವೆ; ಏಕೆಂದರೆ ಜನಕ ಘಟಕಗಳಲ್ಲಿನ ಅನುರೂಪ ಸ್ಥಾನಗಳಾದ "೨೩೪", "೪೧೩" ಗಳು ಪರಸ್ಪರ ಘಾತಗಳು; $(೨೩೪)^2=೪೧೩$; $(೪೧೩)^3=೨೩೪$.

(ಉ)

೦೦	೧೨	೨೪	೩೧	೪೩
೨೩	೩೦	೪೨	೦೪	೧೧
೪೧	೦೩	೧೦	೨೨	೩೪
೧೪	೨೧	೩೩	೪೦	೦೨
೩೨	೪೪	೦೧	೧೩	೨೦

(ಊ)

೦೦೦೦	೧೧೧೧	೨೨೨೨	೩೩೩೩	೪೪೪೪
೧೨೩೪	೨೩೪೦	೩೪೦೧	೪೦೧೨	೦೧೨೩
೨೪೧೩	೩೦೨೪	೪೧೩೦	೦೨೪೧	೧೩೦೨
೩೧೪೨	೪೨೦೩	೦೩೧೪	೧೪೨೦	೨೦೩೧
೪೩೨೧	೦೪೩೨	೧೦೪೩	೨೧೦೪	೩೨೧೦

ಈ ಚದರಗಳಲ್ಲೆಲ್ಲಾ ಯಾವುದೇ ನಿರ್ದಿಷ್ಟ "ಸ್ಥಾನ" ದಲ್ಲಿನ ಸಂಖ್ಯೆಗಳನ್ನು ಸ್ತಂಭತಃ ಆಗಲಿ ತೋರಣತಃ ಆಗಲಿ ಕೂಡಿದರೂ ಮೊತ್ತವು ಒಂದೇ ಆಗುತ್ತದೆ; ನಮ್ಮ "ಸಂಖ್ಯೆ" ಗಳನ್ನು P ಮಾನ ಪದ್ಧತಿಯಲ್ಲಿನ ಸಾಮಾನ್ಯ ಸಂಖ್ಯೆಗಳೆಂದು ಭಾವಿಸಿದರೆ, ನಮ್ಮ ಚದರಗಳು "ಮಾಯಾ ಚೌಕ" ಗಳಾಗುತ್ತವೆ. (ಓರೆಮೊತ್ತವು ಸಮವಾಗಿರಬೇಕೆಂದು ಮಾತ್ರ ನಿಯಮವಿಲ್ಲ).

ಬೆಸಸಂಖ್ಯೆಯ ಮನೆಗಳ ಮಾಯಾ ಚೌಕವನ್ನು ತುಂಬುವ ಸಾಮಾನ್ಯ ವಿಧಾನದಲ್ಲಿ—ಅಲ್ಲ ಹಾಗೆ ಬರೆಯುವಾಗ ಸಂಖ್ಯೆಗಳನ್ನು ಬರೆಯುವ ವಿಧಾನದಲ್ಲಿ, ಸಣ್ಣ—ಮಾರ್ಪಾಡೊಂದನ್ನು ಮಾಡಿ ಯಾವುದೇ ಬೆಸಸಂಖ್ಯೆಯ $p \times p$ ಗ್ರೀಕೋ-ಲ್ಯಾಟಿನ್ ಚದರವನ್ನು ರಚಿಸಬಹುದು. ದಶಮಾನದ ಬದಲು p ಮಾನ ಪದ್ಧತಿಯಲ್ಲಿ O ಯಿಂದ p^2-1 ರ ವರೆಗೆ ಸಂಖ್ಯೆಗಳನ್ನು ತುಂಬಿದರೆ ಇಂಥ ಚದರವು ಸಿಕ್ಕುತ್ತದೆ; ಕೆಳಗಿನ ನಿದರ್ಶನವನ್ನೇ ನೋಡಿ :—

೩೧	೪೩	೦೦	೧೨	೨೪
೪೨	೦೪	೧೧	೨೩	೩೦
೦೩	೧೦	೨೨	೩೪	೪೧
೧೪	೨೧	೩೩	೪೦	೦೨
೨೦	೩೨	೪೪	೦೧	೧೩

ಅನುಬಂಧ

$h \beta G; e H$ ಎನ್ನಿ, ಮತ್ತು $G < H$ ಆಗಿರಲಿ; (H, G ಗಳು ಸಮುದಾಯಗಳು, G ಯು H ನ ಉಪಸಮುದಾಯ.

ಈಗ $(h g_1)^k \; e \; h \; G$ ಆದಲ್ಲಿ $(hg_1)^k = hg_2$.

ಎಂದರೆ $hg_1 \; (hg_1)^{k-1} = hg_2 \,;\; g_1 \; (hg_1)^{k-1} = g_2$.

ಎಂದರೆ $(hg_1)^{k-1} = g_1{}^{-1} g_2 = g_3$ ಎನ್ನಿ.

ಈಗ $hg_1 \; \beta \; G; \therefore hg_1 = h_1$ ಎನ್ನೋಣ.

ಎಂದರೆ $h_1{}^{k-1} = g_3$

ಈಗ $\{h_1{}^{k-1}\}$ ನ ವರ್ಗಸೂಚಿಯು H ನ ಸೂಚಿಯ ಅಪವರ್ತನ. ಆದರೆ ಅದು P^n; ಅಲ್ಲದೆ ನಮ್ಮ ಪ್ರತಿ h ನ ವರ್ಗಸೂಚಿಯೂ p. ಆದ್ದರಿಂದ $\{h_1{}^{k-1}\} = \{g_3\} = G$ ಎಂದರೆ ನಮ್ಮ $\{h\}$ ಮತ್ತು G ಗಳು ಸಮಾನ (ಒಂದೇ) ಎಂದಾಯ್ತು. ಅರ್ಥಾತ್

$h_1 = g_j$ (ಯಾವುದೋ ಒಂದು j ಗೆ); ಎಂದರೆ $h_1 E G$. ಇದು ಅಸಂಬದ್ಧ.

ಶಬ್ದಕೋಶ

ನಿರಪವರ್ತವರ್ಗಸೂಚಿಯ ಸಮುದಾಯ—Group of prime order.

ಸಹಸಂಕುಲ—Coset.

ಅಂಕನ—Mapping

ಸಜಾತ್ಯಂಕನ—Homomorphism

ನರಹರಿ ಪಂಡಿತ್

ಗಾಥಾಸಪ್ತಶತಿಯಿಂದ

೧

ಏನೇನ ಬರೆವುದೊ ಹೃದಯ ಫಲಕದೊಳು
ಆಸೆಯು ಕುಂಚದಿ ಮನವು ;
ಒಡನೆಯೆ ನಗುನಗುತ ಹುಡುಗನ ತೆರದೊಳು
ಅಳಿಸುವುದದನೆಲ್ಲ ವಿಧಿಯು.

೨

ಅವನ ಮಾತೆತ್ತಿರೆ ಪೊಂಪುಳಿವೋಗುವೆ
ದನಿ ಕೇಳೆ ಮುನಿಸನೆ ಬಿಡುವೆ ;
ಎದುರಿಗೆ ಬಂದರೆ ಮೈಯೆಲ್ಲ ನಡುಗುವೆ
ತಬ್ಬಿದರೇನಾಗಿ ಬಿಡುವೆ !

೩

ಬಿಡಿಸಿದ ಹತ್ತಿಯ ಹಿಂಜಿಯವೋಲಂತೆ
ಒಟ್ಟಿದುಪ್ಪಿನ ಬೆಟ್ಟದಂತೆ
ನೀರನು ಸುರಿಸಿರುವಭ್ರಗಳೆಸೆವುವು
ಶರದದೊಳಿದೊ ನೋಡು ಸುತನು !

೪

ಮಚ್ಚರ ಕರುಬುಗಳಿನಿಸಿಲ್ಲದಿರುವೊಂದು
ನಿರ್ವಿಕಾರದೊಳೆನ್ನ ನಿಂದು
ಸಾಮಾನ್ಯರೊಲು ನಲ್ಲನೀಕ್ಷಿಸುತಿರಲತ್ತೆ
ಕೃಶಳಾಗದಿಹೆನೆ ನಾ ಮತ್ತೆ.

ಎಸ್. ವಿ. ಪರಮೇಶ್ವರಭಟ್ಟ

ಆಂಧ್ರ-ಕರ್ಣಾಟಕ ಏಕಲಿಪಿಯ ಅವಶ್ಯಕತೆ

ಆಂಧ್ರರಿಗೂ ಕನ್ನಡಿಗರಿಗೂ ಒಂದೇ ಲಿಪಿ ಇರಬೇಕೆಂದು ಶ್ರೀ ಆಚಾರ್ಯ ವಿನೋಬಾ ಭಾವೆ ಮುಂತಾದ ಕೆಲವರು ಅಭಿಪ್ರಾಯಪಟ್ಟಿದ್ದಾರೆ. ರಾಷ್ಟ್ರಾಧ್ಯಕ್ಷರಾದ ಡಾಕ್ಟರ್ ರಾಜೇಂದ್ರ ಪ್ರಸಾದರು ಭಾರತದ ಭಾಷೆಗಳಿಗೆಲ್ಲಾ ಒಂದೇ ಲಿಪಿಯನ್ನು ಸೂಚಿಸಿದ್ದುದನ್ನು ಅನೇಕರು ತಿಳಿದಿರಬಹುದು. ಇದು ಕಷ್ಟವೆಂದು ತೋರಬಹುದಾದರೂ ಆಂಧ್ರ ಕನ್ನಡಿಗರು ಸುಲಭವಾಗಿ ಒಂದೇ ಲಿಪಿಯನ್ನು ಮಾಡಿಕೊಳ್ಳಬಹುದು. ಇದು ಸಮಂಜಸವಾಗಿಯೇ ಇದೆ. ಆಂಧ್ರ ಕನ್ನಡಿಗರು ಒಂದೇ ಸಂಸ್ಕೃತಿಗೆ ಸೇರಿದವರು. ಆಚಾರ ವ್ಯವಹಾರಗಳಲ್ಲಿಯೂ ಸಹ ಇಬ್ಬರಿಗೂ ಒಂದೇ ವಿಧವಾದ ಅನುಸರಣೆ. ಹಿಂದೆ ಆಂಧ್ರರಾಜ್ಯವು ಚಾಳುಕ್ಯ ಸಾಮ್ರಾಜ್ಯದಲ್ಲಿದ್ದಿತು. ಚಾಳುಕ್ಯರು ಕನ್ನಡಿಗರು ಸಂಬಂಧಿಗಳು. ತೆಲುಗಿನಲ್ಲಿ ೧೧ ನೆಯ ಶತಮಾನದಲ್ಲಿ ಕಾವ್ಯರಚನೆ ಆರಂಭವಾಯಿತು. ಅದಕ್ಕೆ ಹಿಂದೆ ಜನಪದ ಸಾಹಿತ್ಯವಾದ ಜೋಗುಳ ಹಾಡುಗಳು, ಗರತಿಯ ಹಾಡುಗಳು ಮತ್ತು ಸ್ತ್ರೀಯರ ಹಾಡುಗಳ ರೂಪದಲ್ಲಿ ತೆಲುಗು ಸಾಹಿತ್ಯವಿತ್ತು. ಬರೆಯುವುದಕ್ಕೆ ಎಂತಹ ಲಿಪಿಯಿತ್ತು ಎನ್ನುವುದಕ್ಕೆ ತಕ್ಕ ಆಧಾರಗಳಿಲ್ಲ. ಆದುದರಿಂದ ತೆಲುಗಿನಲ್ಲಿ ಕಾವ್ಯರಚನೆಗಿಂತ ಹಿಂದೆಯೇ ಕನ್ನಡದಲ್ಲಿ ಕಾವ್ಯರಚನೆ ಆಗಿರುವುದರಿಂದ ಕನ್ನಡಕ್ಕೆ ಒಂದು ನಿರ್ದಿಷ್ಟವಾದ ಲಿಪಿಯಿತ್ತೆಂದೂ ತೆಲುಗಿಗೆ ಹಾಗೆಯೇ ಗೊತ್ತಾದ ಒಂದು ಲಿಪಿ ಇರಲಿಲ್ಲವೆಂದೂ ತೋರುತ್ತದೆ. ಆದ್ದರಿಂದ ತೆಲುಗರು ಕೂಡ ಕನ್ನಡ ಲಿಪಿಯನ್ನೇ ಅನುಸರಿಸುತ್ತಿದ್ದರೆಂದು ತೋರುತ್ತದೆ.

ಹೀಗೆ ಹೇಳುವುದಕ್ಕೆ ಕಾರಣವಿದೆ. ತೆಲುಗು ಕನ್ನಡ ಲಿಪಿಗಳಲ್ಲಿ ಹೆಚ್ಚಿನ ಸಾಮ್ಯವಿದೆ. ಈ ಎರಡು ಭಾಷೆಗಳಿಗೂ ಸಂಸ್ಕೃತವು ಮೂಲಭಾಷೆಯಾಗಿದೆ. ಛಂದಸ್ಸಿನಲ್ಲಿಯೂ ಅನುಕರಣೆ ಇದೆ. ಕನ್ನಡದಲ್ಲಿ ಕಾವ್ಯರಚನೆ ತೆಲುಗಿಗಿಂತ ಮುಂಚೆಯೇ ಆಗಿರುವುದರಿಂದ ತೆಲುಗಿನಲ್ಲಿ ಆದಿಕಾವ್ಯವಾದ ನನ್ನಯ ಭಟ್ಟಾರಕನ ಭಾರತದಲ್ಲಿರುವ ಶೈಲಿಯ ಕೆಲವು ಅನುಕರಣೆಗಳೂ ರಚನಾ ಸಂಪ್ರದಾಯವೂ ಅಕ್ಕರ, ಮುಂತಾದ ಕೆಲವು ಛಂದೋರೂಪಗಳೂ ಕನ್ನಡದಿಂದ ಬಂದಿರುವ ಸಂಪ್ರದಾಯವೇ ಆಗಿದೆ. ಕನ್ನಡ ಕವಿಯಾದ ನಾರಾಯಣಭಟ್ಟನು ತೆಲುಗಿನ ಆದಿಕವಿಯಾದ ನನ್ನಯ ಭಟ್ಟನಿಗೆ ಆಪ್ತಮಿತ್ರ ಮತ್ತು ಸಹಾಧ್ಯಾಯಿ. ಇವನು ತನಗೆ ಶ್ರೀಕೃಷ್ಣನು ಅರ್ಜುನ

ನಿಗೆ ಹೇಗೆ ಸಹಾಯಮಾಡಿದನೋ ಹಾಗೆಯೇ ಭಾರತ ರಚನೆಯಲ್ಲಿ ತನಗೆ ಸಹಾಯಕನಾಗಿದ್ದನೆಂದು ತೆಲುಗು ಭಾರತದ ಆದಿಯಲ್ಲಿ ನನ್ನಯ ಭಟ್ಟನು ಹೇಳಿಕೊಂಡಿದ್ದಾನೆ. ನಾರಾಯಣಭಟ್ಟನು ಕರ್ಣಾಟಕ ಚಕ್ರವರ್ತಿಯಾದ ಆಹವಮಲ್ಲ ಸೋಮೇಶ್ವರನ ಮಂತ್ರಿಯಾಗಿದ್ದನು. ಇವನು ವಾಣಸ ವಂಶೀಯನಾದ ಕರ್ಣಾಟಕ ಬ್ರಾಹ್ಮಣನು. ೧೧ ನೆಯ ಶತಮಾನದಲ್ಲಿ ಕನ್ನಡ ನಾಡಿನಲ್ಲಿ ಜೈನಮತವು ಪ್ರಬಲವಾದುದರಿಂದ ವೈದಿಕ ಮತಾವಲಂಬಿಯಾದ ನಾರಾಯಣ ಭಟ್ಟನು ಆಂಧ್ರಕ್ಕೆ ಹೋಗಿರಬಹುದು.[1] ಇದೇ ರೀತಿಯಲ್ಲಿ ತೆಲುಗು ದೇಶವಾದ ವೇಂಗಿಮಂಡಲದ ವೇಂಗಿಪಟ್ಟಿನಿಂದ ಪಂಪನು ಆಂಧ್ರವನ್ನು ಬಿಟ್ಟು ಕನ್ನಡ ದೇಶಕ್ಕೆ ಬರುವುದಕ್ಕೆ ಮತಪ್ರಾಬಲ್ಯವೇ ಕಾರಣವಿರಬಹುದು. ಆಂಧ್ರದಲ್ಲಿ ಆಗ ವೈದಿಕಮತವು ವಿಜೃಂಭಿಸುತ್ತಿತ್ತು. ಪಂಪನು ಜೈನ ಮತಾವಲಂಬಿ. ಆದುದರಿಂದ ಕನ್ನಡ ದೇಶಕ್ಕೆ ಬಂದನು. ಹೀಗೆಯೇ ಕನ್ನಡದ ಅರಸರು ತೆಲುಗು ದೇಶವನ್ನಾಳಿದರು. ಶ್ರೀಕೃಷ್ಣದೇವರಾಯನು ೧೬ ನೆ ಶತಮಾನದಲ್ಲಿ ತೆಲುಗು ದೇಶವನ್ನಾಳಿದಾಗ ಅವನ ಆಸ್ಥಾನದಲ್ಲಿ ಅಷ್ಟದಿಗ್ಗಜಗಳೆಂಬ ಎಂಟು ಜನ ತೆಲುಗು ಕವಿಗಳಿದ್ದರು. ಆದುದರಿಂದ ಕರ್ಣಾಟಕ ಆಂಧ್ರ ಸಂಸ್ಕೃತಿಗಳು ಹೆಚ್ಚೂ ಕಡಿಮೆ ಹೆಣೆದುಕೊಂಡಿದ್ದು ಭಾಷೆಯಲ್ಲಿ ವ್ಯತ್ಯಾಸವಿದ್ದರೂ ಲಿಪಿಯಲ್ಲಿ ಅಂತಹ ವಿಶೇಷ ವ್ಯತ್ಯಾಸಗಳು ಕಾಣಬರದಿರುವುದರಿಂದ ಒಂದು ಲಿಪಿ ಸಂಸ್ಕರಣವು ಮತ್ತು ಉಭಯ ಭಾಷೆಗಳಿಗೆ ಒಂದೇ ಲಿಪಿಯು ಆದಲ್ಲಿ ಉಭಯತಃ ಇನ್ನೂ ಸಾಮೀಪ್ಯವು ಹೆಚ್ಚಿ ಪೂರ್ಣ ರೂಪದಲ್ಲಿ ಸಂಸ್ಕೃತಿಯು ವಿಕಸಿಸಲು ಸಹಾಯಕವಾಗುವುದು.

ಕನ್ನಡ ತೆಲುಗು ಲಿಪಿಗಳಲ್ಲಿ ಸಾಮ್ಯವಾಗಿರುವ ಅಕ್ಷರಗಳನ್ನು ನೋಡುವ:

ಸ್ವರಗಳು

ತೆಲುಗಿನಲ್ಲಿ—అ, ఆ, ఇ, ఈ, ఉ, ఊ, ఋ, ౠ,
ఎ, ఏ, ఐ, ఒ, ఓ, ఔ, అం, అః.

ಕನ್ನಡದಲ್ಲಿ—ಅ, ಆ, ಇ, ಈ, ಉ, ಊ, ಋ, ೠ,
ಎ, ಏ, ಐ, ಒ, ಓ, ಔ, ಅಂ, ಅಃ.

ವ್ಯತ್ಯಾಸಗಳು—ಉ (ఉ) ಊ (ఊ)
ಋ (ఋ) ೠ (ౠ)

[1] ನಾರಾಯಣಭಟ್ಟನ ವಿಚಾರವನ್ನು ಕುರಿತು ತೆಲುಗಿನಲ್ಲಿ ಸೂರಿ ನರಸಿಂಹಶಾಸ್ತ್ರಿಗಳು ಒಂದು ದೊಡ್ಡ ಕಾದಂಬರಿಯನ್ನು ಬರೆದಿದ್ದಾರೆ.

ವ್ಯಂಜನಗಳು

ತೆಲುಗಿನಲ್ಲಿ—క, ఖ, గ, ఘ, ఙ.
చ, ఛ, జ, ఝ, ఞ.
ట, ఠ, డ, ఢ, ణ.
త, థ, ద, ధ, న.
ప, ఫ, బ, భ, మ.
య, ర, ఱ, ల, ళ, వ.
శ, ష, స, హ.

ಕನ್ನಡದಲ್ಲಿ—ಕ, ಖ, ಗ, ಘ, ಙ.
ಚ, ಛ, ಜ, ಝ, ಞ.
ಟ, ಠ, ಡ, ಢ, ಣ.
ತ, ಥ, ದ, ಧ, ನ.
ಪ, ಫ, ಬ, ಭ, ಮ.
ಯ, ರ, (ಱ,) ಲ, ಳ, ವ,
ಶ, ಷ, ಸ, ಹ.

ವ್ಯತ್ಯಾಸಗಳು—ಕ (క), ಙ (ఙ), ಞ (ఞ),
ಚ (చ), ತ (త), ಹ (హ),

ಮೇಲೆ ಸೂಚಿಸಿರುವ ಅಕ್ಷರಗಳನ್ನು ನೋಡಿದರೆ. ಹೆಚ್ಚಿನ ವ್ಯತ್ಯಾಸಗಳು ಅಷ್ಟೇನೂ ಕಂಡುಬರುವುದಿಲ್ಲ. ಕೇವಲ ಎಂಟು ಹತ್ತು ಅಕ್ಷರಗಳಲ್ಲಿ ಸಣ್ಣಪುಟ್ಟ ಮಾರ್ಪಾಡುಗಳನ್ನು ಮಾಡಿಕೊಂಡರೆ ಎರಡು ಭಾಷೆಗಳಿಗೂ ಒಂದೇ ಲಿಪಿಯು ಸರಿಹೋಗುತ್ತದೆ. ಅಂಕಗಳಲ್ಲಿಯೂ ಕೂಡಾ ಒಂದೇ ಸಮನಾಗಿದೆ ನೋಡಿ :

ತೆಲುಗಿನಲ್ಲಿ—೧, ೨, 3, ೪, ೫, ೬, ೭, ೮, ೯, ೧೦.
ಕನ್ನಡದಲ್ಲಿ—೧, ೨, ೩, ೪, ೫, ೬, ೭, ೮, ೯, ೧೦.
ವ್ಯತ್ಯಾಸ—3 (೩) ಮಾತ್ರ.

ವ್ಯಂಜನಗಳ ಒತ್ತುಗಳಲ್ಲಿ ಏನೂ ವ್ಯತ್ಯಾಸಗಳಿಲ್ಲ. 'ಕ'ಗುಣಿತಗಳಲ್ಲಿ ಮಾತ್ರ ಕೆಲವು ವ್ಯತ್ಯಾಸಗಳುಂಟು.

ಎರಡು ಭಾಷೆಗಳ ಪ್ರತಿನಿಧಿಗಳೂ ಸಮಾವೇಶಗೊಂಡು ಟೈಪ್‌ರೈಟರ್, ಲಿನೋಟೈಪ್ ಅನುಕೂಲಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ತಕ್ಕ ಮಾರ್ಪಾಡುಗಳನ್ನು

ಮಾಡಬಹುದು. ಬೇಕಾದರೆ ಎರಡು ಭಾಷೆಗಳಲ್ಲಿಯೂ ಬಳಕೆಯಲ್ಲಿಲ್ಲದ ಕೆಲವು ಅಕ್ಷರಗಳನ್ನು ನಾವು ಬಿಡಬಹುದು. ಒತ್ತುಗಳಿಗೆ ಕೆಲವು ಸಂಕೇತಗಳನ್ನಿಡಬಹುದು, ತಮಿಳರ ಹಾಗೆ. ಇದರ ಮೂಲಕ ಕನ್ನಡ ಆಂಧ್ರರ ಸೌಹಾರ್ದವು ಇನ್ನೂ ಹೆಚ್ಚುತ್ತದೆ. ಅನೇಕ ಸಂಸ್ಕೃತ ಕಾವ್ಯಗಳನ್ನು ತೆಲುಗು ಲಿಪಿಯಲ್ಲಿಯೇ ಈಗಲೂ ಅನೇಕ ಕನ್ನಡಿಗರು ಓದುತ್ತಿದ್ದಾರೆ. ಕನ್ನಡ ಪತ್ರಿಕೆಗಳನ್ನು ದೂರದಿಂದ ನೋಡಿದರೆ ತೆಲುಗು ಪತ್ರಿಕೆಗಳ ಹಾಗೆ ಕಾಣುತ್ತವೆ. ಹಾಗೆಯೇ ತೆಲುಗು ಪತ್ರಿಕೆಗಳೂ ಕಂಡು ಬರುತ್ತವೆ. ಪುಸ್ತಕ ಪ್ರಕಟನೆ ಮತ್ತು ಟೈಪ್ ಫೌಂಡ್ರೀ ವ್ಯಾಪಾರದಲ್ಲಿ ತುಂಬಾ ಅನುಕೂಲವಾಗುತ್ತದೆ. ಸುಲಭಬೆಲೆಯಲ್ಲಿ ಇವು ಸಿಗುತ್ತವೆ.

ಬಳ್ಳಾರಿಯಲ್ಲಿ ೨೦-೧-೫೮ ರಲ್ಲಿ ಸೇರಿದ್ದ ಕನ್ನಡ ಸಾಹಿತ್ಯ ಸಮ್ಮೇಳನವು ತೆಲುಗು—ಕನ್ನಡ ಭಾಷೆಗಳಿಗೆ ಒಂದೇ ಲಿಪಿ ಇರಬೇಕೆಂದು ಹೇಳಿ ಒಂದು ನಿರ್ಣಯವನ್ನು ಅನುಮೋದಿಸಿತು. ಪ್ರೊ. ದ. ರಾ. ಬೇಂದ್ರೆ ಮುಂತಾದವರು ಇದಕ್ಕೆ ಬೆಂಬಲ ಕೊಟ್ಟು ಮಾತನಾಡಿದರು.

ಆಂಧ್ರದಲ್ಲಿ ಅತ್ಯಧಿಕ ಪ್ರಚಾರವುಳ್ಳ "ಆಂಧ್ರಪ್ರಭ" ಎಂಬ ತೆಲುಗು ದಿನ ಪತ್ರಿಕೆ ೨೪-೧-೫೮ ರಲ್ಲಿ ಈ ನಿರ್ಣಯವನ್ನು ಸ್ವಾಗತಿಸಿ ಅಗ್ರಲೇಖನವನ್ನು ಬರೆದಿತ್ತು.

ರಾಯಲಸೀಮೆಯ ಅನಂತಪುರದಲ್ಲಿ ೨೦-೨-೫೮ ರಲ್ಲಿ ನಡೆದ ಆಂಧ್ರ ರಾಷ್ಟ್ರ ಪಂಡಿತ ಪರಿಷತ್ತಿನವರು ಕನ್ನಡ ಸಾಹಿತ್ಯ ಸಮ್ಮೇಳನದವರು ಈ ಬಗ್ಗೆ ಮಾಡಿರುವ ನಿರ್ಣಯವನ್ನು ಸ್ವಾಗತಿಸಿ ಏಕಲಿಪಿ ಆಗುವುದಕ್ಕೆ ಬೇಕಾದ ಸಹಕಾರವನ್ನು ನೀಡುತ್ತೇವೆಂದು ಹೇಳಿ ಒಂದು ನಿರ್ಣಯವನ್ನು ಮಾಡಿದರು. ನಿರ್ಣಯದ ಮೇಲೆ ನಾನು ಮಾತನಾಡಿ ಇದರ ಸಾಧ್ಯತೆಯನ್ನು ವಿವರಿಸಿದೆ.

ಉಭಯ ಭಾಷೆಗಳ ಪಂಡಿತೋತ್ತಮರೂ ಕಲೆತು ಒಂದು ನಿರ್ದಿಷ್ಟ ರೂಪವನ್ನು ಕೊಟ್ಟಲ್ಲಿ ಕರ್ಣಾಟಕ-ಆಂಧ್ರದ ಸಂಸ್ಕೃತಿಯ ಬಾಂಧವ್ಯವು ಹೆಚ್ಚುವುದೇ ಅಲ್ಲದೆ ದಕ್ಷಿಣ ಭಾರತದ ಈ ವಿಶಾಲ ಭಾಗವು ಹೊಸ ಭಾರತದ ಸಂಸ್ಕೃತಿಯ ಮೇಲೆ ಇನ್ನೂ ಪ್ರಭಾವಶಾಲಿಯಾದ ಪರಿಣಾಮವನ್ನು ಉಂಟುಮಾಡುವುದೆಂದು ಆಶಿಸಬಹುದಾಗಿದೆ.

ವಿದ್ವಾನ್ ಕೆ. ಸುಬ್ಬರಾಮಪ್ಪ

ಉಪವನದ ಗೆಳೆಯ

ಮೊನ್ನೆ ದಿನ ನಮ್ಮ ಮಹಾರಾಣಿಯವರು ಆರ್ಯಪುತ್ರನ ಆರ್ತನಾದಕ್ಕೆ ಸ್ವಲ್ಪವೂ ಗಮನ ಕೊಡದೆ ಇದ್ದಕ್ಕಿದ್ದಹಾಗೆಯೇ ಸಂತಾನಸಮೇತರಾಗಿ ತೌರೂರಿಗೆ ತೆರಳಿ ನಾಲ್ಕು ದಿನಗಳಲ್ಲಿ ಬಂದುಬಿಡುತ್ತೇನೆ ಎಂದಿದ್ದವರು ಯಥಾಪ್ರಕಾರ ನಾಲ್ಕು ವಾರವಾದರೂ ಮುಖ ತೋರಿಸಲಿಲ್ಲವಲ್ಲ, ಆಗ ನನಗೆ ಉದರಪೋಷಣೆ ದೊಡ್ಡ ಸಮಸ್ಯೆಯೇ ಆಯಿತು. ಊಟದ ಹೋಟಲಿಗೆ ಹೋದರೆ ಗೊತ್ತೇ ಇದೆ—ಅಸಹ್ಯ ಕರವಾದ ಆವರಣ, ಅಕ್ಕಪಕ್ಕದಲ್ಲಿ ಕುಳಿತುಕೊಳ್ಳುವ ಎದ್ದು ಓಡಿಹೋಗಲೇ ಎನ್ನಿಸುವಷ್ಟು ಮಲಿನವಸ್ತ್ರಧಾರಿಗಳಾದ ಭೋಜನೋತ್ಸುಕಿಗಳು, ನಮಗಿಂತಲೂ ಮೊದಲು ಬಂದುಹೋದವರು ತಿಂದುಬಿಟ್ಟ ಎಂಜಲ ಶೇಷ ಕಣ್ಣು ಕೋರೈಸುವಂತೆ ಅಂಟಿಕೊಂಡಿರುವ ಮೇಜು ಕುರ್ಚಿಗಳು, ಲೋಟ—ಬಟ್ಟಲುಗಳು. ಇವೆಲ್ಲಾ ಹಾಳಾಗಲಿ ಎಂದರೆ, ಅರೆಬೆಂದ ಅನ್ನ, ಬಲಿತು ಕಟ್ಟಿಗೆಯಂತಾಗಿರುವ ಕಾಯಿಪಲ್ಯಗಳಿಂದ ತಯಾರಾದ ಹುಳಿ, ನೀರು ಸಾರು (ಅಥವಾ "ಸಾರು" ಎನ್ನಿಸಿಕೊಳ್ಳುವ ಬಿಸಿ ನೀರು), ದಾಲ್ಡಾ ತುಪ್ಪ, ಹುಳಿ ಮಜ್ಜಿಗೆಗಳನ್ನು ದುಡ್ಡು ಕೊಟ್ಟ ತಪ್ಪಿಗೆ ಕಣ್ಣು ಮುಚ್ಚಿಕೊಂಡು ತುರುಕಿಕೊಳ್ಳಬೇಕು. ಅರ್ಥ ನಷ್ಟಂ ದುರ್ಭೋಜನಂ. ಇದಕ್ಕೆ ಬದಲಾಗಿ ಯಾವುದಾದರೂ ತಿಂಡಿಯ ಹೋಟಲಿಗೆ ಹೋಗಿ ಒಂದು ಮಸಾಲೆ ದೋಸೆ ತಿಂದು ಅರ್ಧ ಕಪ್ಪು ಕಾಫಿ ಕುಡಿದು ಆರು ಕಾಸಿನ ಬೀಡಾ ಅಗಿದರೆ ಹೊಟ್ಟೆ ನಾಲಿಗೆ ಎರಡಕ್ಕೂ ಎಷ್ಟೋ ಹಿತಕರವಾಗಿರುತ್ತದೆ ಎಂದು ತರ್ಕಿಸಿ ಲಾಲ್‌ಬಾಗ್ ಕಡೆಗೆ ಹೊರಟೆ. ಲಾಲ್‌ಬಾಗಿಗೆ ಏಕೆ ಎಂದರೆ, ಅದು ನಮ್ಮ ಮನೆಗೆ ಹತ್ತೇ ಹತ್ತು ಮಾರು ದೂರದಲ್ಲಿದೆ. ಅಲ್ಲಿರುವ ಫಲಾಹಾರ ಮಂದಿರದ ಸುಂದರವಾದ ಕಟ್ಟಡದ ಎದುರಿಗಿರುವ ಕಿರುಬಯಲಿನ ಹುಲ್ಗಂಬಳಿಯ ಮೇಲೆ ತಣ್ಣಗೆ ಪ್ರಕೃತಿಮಾತೆಯ ತೊಡೆಯಲ್ಲೇ ಮಂಡಿಸಿ ಸಣ್ಣ ಪ್ರಮಾಣದಲ್ಲಿ ಒಂದು ತೆರದ ವನಭೋಜನವನ್ನೇ ನಡೆಸಬಹುದೆಂಬ ದೂರಾಲೋಚನೆ; ಗ್ರಾಸ ಸ್ವೀಕಾರದ ಅನಂತರ ಉದ್ಯಾನದ ವಿವಿಧ ಭಾಗಗಳಲ್ಲಿ ಹುಣ್ಣಿಮೆಯ ತುಂಬು ಬೆಳ್ದಿಂಗಳಿನಲ್ಲಿ ಅಡ್ಡಾಡಬೇಕೆಂಬ ಬಯಕೆ—ಇವೆರಡು ಕಾರಣಗಳೂ ನನ್ನನ್ನು "ಕೆಂಪು ಹೂ ಕಾಲ್ದಾರಿ" ಕರೆದೊಯ್ಯುವ "ಕೆಂಪು ತೋಟಕ್ಕೆ" ಧಾವಿಸುವಂತೆ ಪ್ರೇರಿಸಿದವು.

ನಾನು ಒಂದು ದೋಸೆಗೆ ಆರ್ಡರ್ ಮಾಡಿ ಸಂಜೆಯ ತಂಗಾಳಿಗೆ ಮೈಯೊಡ್ಡಿ ಎಲ್ಲೋ ನೋಡುತ್ತಾ ಕುಳಿತಿದ್ದಾಗ ಯಾವ ಮಾಯದಿಂದಲೋ ಬಂದು ನನ್ನ

ಹಿಂದೆ ನಿಂತಿದ್ದ ಆಗಂತುಕ ವ್ಯಕ್ತಿಯೊಬ್ಬ "ಸಾರ್" ಎಂದ. ನನಗೆ ಎದೆ ಝಲ್ಲೆಂದಿತು ಎಂದು ಸತ್ಯವನ್ನು ಮರೆಮಾಚದೆ ಒಪ್ಪಿಕೊಂಡುಬಿಡುತ್ತೇನೆ. ಆಗಲೇ ಸುಮಾರು ಏಳೂವರೆ ಗಂಟೆಯ ಸಮಯ. ಗಾಳಿ ಸೇವನೆಗಾಗಿ, ಬೇಸರ ಪರಿಹಾರಕ್ಕಾಗಿ, ವಿಹಾರಾರ್ಥವಾಗಿ, ಅಂಗಸಾಧನೆಗಾಗಿ, ವಸ್ತ್ರ ಭೂಷಣಗಳ ಪ್ರದರ್ಶನಕ್ಕಾಗಿ, ಸೋದರ ಮಾನವರನ್ನು (ಅದರಲ್ಲೂ ಮಾನಿನಿಯರನ್ನು) ದರ್ಶಿಸಿ ಸಂತೋಷಪಡುವುದಕ್ಕಾಗಿ ಬಗೆ ಬಗೆಯ ಉದ್ದೇಶಗಳಿಂದ ಉಪವನಕ್ಕೆ ಬಿಜಯಂಗೈದಿದ್ದ ಬಗೆ ಬಗೆಯ ಜನ ಬಹು ಮಂದಿ ಸ್ವಗೃಹಾಭಿಮುಖಿಗಳಾಗಿ ಹಿಂದಿರುಗಿದ್ದರು. ಎಲ್ಲೋ ಅಲ್ಲೊಬ್ಬರು ಇಲ್ಲೊಬ್ಬರು ಮಾತ್ರ ಮಸುಕು ಮಸುಕಾಗಿ ಕಾಣುತ್ತಿದ್ದರು. ವಾಸ್ತವವಾಗಿ ನಾನು ಕುಳಿತಿದ್ದ ಬಯಲಿನಲ್ಲಿ ಇನ್ನೊಂದು ಸರಪಿಳ್ಳೆಯೂ ಇರಲಿಲ್ಲ. ಇಂಥ ಸನ್ನಿವೇಶದಲ್ಲಿ ಅನಿರೀಕ್ಷಿತವಾಗಿ ಯಾರೋ ನಿಮ್ಮ ಹಿಂದೆ ಬಂದು "ಸಾರ್" ಎಂದರೆ ನೀವು ಬೆಚ್ಚದಿರಲು ಸಾಧ್ಯವೆ? ಸಾಮಾನ್ಯವಾಗಿ ಧೀರನೇ ಆದ ನಾನಂತೂ ಗಾಬರಿ ಬಿದ್ದೆನೆಂದು ಒಪ್ಪಿಕೊಂಡುಬಿಡುತ್ತೇನೆ. ನನ್ನ ಬಾಯಿಂದ ಪ್ರತ್ಯುತ್ತರ ಹೊರಬೀಳುವ ಮೊದಲೆ ಅವನು ನನ್ನ ಮುಂದೆ ಬಂದು "ಊಟಮಾಡಿ ಮೂರು ದಿವಸವಾಯಿತು ಒಂದು ನಾಲ್ಕಾಣೆ ಅಪ್ಪಣೆಯಾದರೆ ಏನಾದರೂ ತಿಂಡಿ ಕೊಂಡುಕೊಂಡಾದರೂ ತಿನ್ನುತ್ತೇನೆ" ಎಂದ. ಅವನ ಧ್ವನಿ ನನ್ನ ಎದೆಯನ್ನು ಕ್ಷಣಕಾಲ ತಲ್ಲಣಗೊಳಿಸಿದ್ದರೂ ಅವನ ಆಕಾರವನ್ನು ಕಣ್ಣಾರ ನೋಡಿದಾಗ ನನಗೆ ಅವನ ಮೇಲೆ ಒಂದು ತೆರದ ಅಭಿಮಾನವೇ ಮೂಡಿತು. "ಆಸಾಮಿ ದೀರ್ಘಕಾಯದವನು, ಆಜಾನುಬಾಹು. ಇಂಥವನಿಗೆ ಮೂರು ದಿವಸ ಉಪವಾಸ ಇರಬೇಕಾದ ಅಗತ್ಯ ಬಂದಿದೆಯೆಂದರೆ ಇವನ ಕತೆಯಲ್ಲಿ ಏನೋ ಸ್ವಾರಸ್ಯವಿರಬೇಕು. ಮನುಷ್ಯರ ಗುಣದೋಷಗಳ ಸಮೀಕ್ಷಣೆಯನ್ನೇ ಉದ್ಯೋಗವಾಗಿ ಕೈಕೊಂಡಿರುವ ನನ್ನಂಥವನಿಗೆ ಅಪ್ರಾರ್ಥಿತವಾಗಿ ಎಂಥ ಗಿರಾಕಿ ಸಿಕ್ಕಿತು! ಇವನನ್ನು ಪ್ರಶ್ನಿಸಿ ನೋಡಿಯೇ ಬಿಡೋಣ" ಎಂದುಕೊಂಡು, ಅವನನ್ನು ಅಲ್ಲೇ ನನ್ನೆದುರು ಹುಲ್ಲಿನ ಮೇಲೆ ಕುಳಿತುಕೊಳ್ಳುವಂತೆ ಹೇಳಿದೆ. ಅವನನ್ನು ಇಷ್ಟರಮಟ್ಟಿಗೆ ಆದರಿಸಿದವರು ಅದುವರೆಗೂ ಇನ್ನಾರೂ ಇರಲೇ ಇಲ್ಲವೆಂದು ತೋರುತ್ತದೆ. ನಾನು ಹಾಗೆಂದ ಒಡನೆಯೇ ಅತಿಶಯವಾದ ನಮ್ರತೆಯಿಂದ ನನಗೆ ಎರಡು ಅಡಿ ಆಚೆ ಕುಳಿತುಕೊಂಡ. ಆಗ ಅವನ ಮುಖ ನನಗೆ ಮೊದಲಿಗಿಂತಲೂ ಹೆಚ್ಚು ಸ್ಫುಟವಾಗಿ ಕಾಣಿಸತೊಡಗಿತು. ನಾನು ಅವನನ್ನೇ ನೋಡುತ್ತ "ನಿಮ್ಮನ್ನು ನಾನೆಲ್ಲೋ ನೋಡಿದ್ದೇನೆ. ನಿಮ್ಮ ಮುಖ ನನಗೆ ಅಪರಿಚಿತವಲ್ಲ" ಎಂದೆ. ಅವನು "ಹೌದು, ಸ್ವಾಮಿ. ನನ್ನ ಮುಖದ ಪರಿಚಯ ನಿಮ್ಮ ಹಾಗೆಯೇ ಎಷ್ಟೋ ಜನಕ್ಕಿದೆ. ಕನ್ನಡಸೀಮೆಯಲ್ಲಿ ಮಾತ್ರವೇ ಅಲ್ಲದೆ

ತೆಲುಗು ದೇಶದಲ್ಲೂ ತಮಿಳು ನಾಡಿನಲ್ಲೂ ದೊಡ್ಡ ದೊಡ್ಡ ಪಟ್ಟಣಗಳಲ್ಲೆಲ್ಲಾ ನನ್ನ ಖ್ಯಾತಿ ಹಬ್ಬಿದೆ. ಹದಿನೈದು ವರುಷಗಳ ಕಾಲ ಒಂದು ನಾಟಕದ ಕಂಪೆನಿಯಲ್ಲಿ ನಕಲಿ ಮಾಡುತ್ತಿದ್ದೆ. ನಾನು ನಗಿಸಿರುವ ಜನಗಳ ಸಂಖ್ಯೆ ಲಕ್ಷ ಎರಡು ಲಕ್ಷವಲ್ಲ. ಮೊನ್ನೆ ತಾನೇ ನಡೆದ ಬನ್ನೇರುಘಟ್ಟದ ಜಾತ್ರೆಯ ಸಮಯದಲ್ಲಿ ನನಗೂ ಕಂಪೆನಿಯ ಯಜಮಾನನಿಗೂ ಮನಸ್ತಾಪ ಬಂತು. ಅವನಿಂದ ನನಗೆ ಆರು ತಿಂಗಳ ಸಂಬಳ ಬರಬೇಕಾಗಿತ್ತು. ಅದರ ಮೇಲೆ ಇಬ್ಬರಿಗೂ ಮಾತು ಬೆಳೆಯಿತು. ಇಬ್ಬರೂ ಒಬ್ಬರನ್ನೊಬ್ಬರು ಹೊಡೆದು ಬೈದು ಬೇರೆಯಾದೆವು. ಉಳಿದಿದ್ದ ಒಂದೆರಡು ಪರದೆಗಳನ್ನೂ ಬಟ್ಟೆಗಳನ್ನೂ ಯಾರಿಗಾದರೂ ಮಾರಲೆಂದು ಅವನು ಪೇಟೆಗೆ ಹೋದ. ಈ ತೋಟದಲ್ಲಿ ಹೊಟ್ಟೆಗಿಲ್ಲದೆ ಬಿದ್ದುಕೊಂಡು ಉರುಳಾಡಲು ನಾನು ಬಂದಿದ್ದೇನೆ" ಎಂದ. ನಾನು "ನೀವು—ಬಹಳ ಯೋಗ್ಯರ ಹಾಗೆ ಕಾಣುತ್ತೀರಿ. ನಿಮ್ಮಂಥವರು ಕಷ್ಟಕ್ಕೆ ಒಳಗಾಗಿರುವುದನ್ನು ಕಂಡು ನನಗೆ ವ್ಯಸನವಾಗುತ್ತದೆ" ಎಂದೆ. ಅವನು "ನನ್ನ ಯೋಗ್ಯತೆ ಏನೇನಿದ್ದರೂ ಅದನ್ನು ನಿಮ್ಮ ಪಾದಸೇವೆಗೆ ಸಮರ್ಪಿಸಲು ನಾನು ಸದಾ ಸಿದ್ಧ. ನಾನು ಹೆಚ್ಚಾಗಿ ತಿನ್ನುವವನೆಂದು ಹೆಮ್ಮೆ ಪಡುವ ಹಾಗಿಲ್ಲದಿದ್ದರೂ ನನ್ನಷ್ಟು ಸಂತೋಷ ದಿಂದ ಕಾಲ ಕಳೆಯುವವರು ಅನೇಕ ಜನ ಇರಲಾರರೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ನನಗೇನಾದರೂ ವರುಷಕ್ಕೊಂದು ಇಪ್ಪತ್ತು ಸಾವಿರ ಆದಾಯವಿದ್ದಿದ್ದರೆ ಬಹಳ ಸಂತೋಷದಿಂದ ಇರುತ್ತಿದ್ದೆ. ಈಗ ಕೈಯಲ್ಲಿ ಮೂರು ಕಾಸೂ ಇಲ್ಲ. ಆದರೂ ಅದೃಷ್ಟವಶಾತ್ ಅಷ್ಟೇ ಸಂತೋಷದಿಂದ ಇದ್ದೇನೆ. ನನ್ನ ಜೇಬಿನಲ್ಲಿ ಎರಡಾಣೆ ಇದ್ದರೆ ಅದರಲ್ಲಿ ಅರ್ಧವನ್ನು ಇಲ್ಲದವರಿಗೆ ಕೊಟ್ಟುಬಿಡಲು ನಾನೆಂದೂ ಹಿಂದೆಗೆದವನಲ್ಲ. ಹಾಗೆಯೇ ನನ್ನ ಹತ್ತಿರ ದುಡ್ಡಿಲ್ಲದಿದ್ದಾಗ ನನಗಾಗಿ ಕಾಸು ಖರ್ಚುಮಾಡಿ ಊಟ ತಿಂಡಿ ಕೊಡಿಸುವ ಪುಣ್ಯಾತ್ಮರ ಕೃಪೆಯನ್ನು ನಾನು ಎಂದಿಗೂ ತಿರಸ್ಕಾರದಿಂದ ಕಾಣುವವನಲ್ಲ. ಸ್ವಾಮಿ, ಒಂದೇ ಒಂದು ದೋಸೆ, ಒಂದು ಬಟ್ಟಲು ಕಾಫೀಗೆ ಏನು ಹೇಳುತ್ತೀರಿ? ನೀವು ಈಗ ನಾನು ಕೇಳಿದ್ದನ್ನು ಕೊಡಿಸಿಬಿಡಿ; ಇನ್ನಾವಾಗಲಾದರೂ ನೀವು ಹಸಿವಿನಿಂದ ಬಳಲಿ, ಕೊಳ್ಳಲು ಕೈಯಲ್ಲಿ ಕಾಸಿಲ್ಲದೆ ತಿನ್ನುವುದಕ್ಕೆ ಏನಾದರೂ ಸಿಕ್ಕರೆ ಸಾಕು ಎಂದು ಇಲ್ಲೆಲ್ಲಾದರೂ ಕೂತಿರುವಾಗ ನಾನು ನಿಮಗೆ ಬೇಕಾದಷ್ಟು ಕೊಡಿಸುತ್ತೇನೆ" ಎಂದ. ಅಷ್ಟು ಹೊತ್ತಿಗೆ ಹೋಟಲಿನ ಮಾಣಿ ನಾನು ಕೇಳಿದ್ದ ದೋಸೆಗಳ ಜೊತೆಯನ್ನು ಒಂದು ತಟ್ಟೆಯಲ್ಲಿಟ್ಟುಕೊಂಡು ಬಂದು ನನ್ನ ಮುಂದಿಟ್ಟ. ನಾನು ಅವನಿಗೆ ಅದೇ ತೆರದ ಇನ್ನೆರಡು ದೋಸೆಗಳನ್ನು ತರಹೇಳಿ, ಅವನು ಮೊದಲು ತಂದಿದ್ದ ತಟ್ಟೆಯನ್ನು ನನ್ನ

ಹೊಸ ಸ್ನೇಹಿತನ ಸಮೀಪಕ್ಕೆ ತಳ್ಳಿ "ನೀವು ತೆಗೆದುಕೊಳ್ಳಿ ಇದನ್ನು" ಎಂದೆ. ಬಿಸಿ ಬಿಸಿಯಾಗಿ ಹೊಗೆಯಾಡುತ್ತಿದ್ದ ಆ ದೋಸೆಗಳನ್ನು ನೋಡಿದೊಡನೆಯೇ ಅವನ ಲವಲವಿಕೆ, ಆನಂದ, ಉತ್ಸಾಹಗಳು ಹೇಗೆ ಹೆಚ್ಚಿಹೋದವೆಂದು ವರ್ಣಿಸಲಸಾಧ್ಯ. "ಸ್ವಾಮಿ, ಈ ತಿಂಡಿ ನನಗೆ ಮೆಚ್ಚಿಗೆಯಾಗುವುದಕ್ಕೆ ಮೂರು ಕಾರಣಗಳುಂಟು. ಮೊದಲನೆಯ ಕಾರಣ, ಸ್ವಭಾವತಃ ಮಸಾಲೆ ದೋಸೆಯೆಂದರೆ ನನಗೆ ಬಹಳ ಇಷ್ಟ. ಎರಡನೆಯ ಕಾರಣ, ನಾನೀಗ ಹಸಿದಿದ್ದೇನೆ. ಮೂರನೆಯ ಮತ್ತು ಕೊನೆಯ ಕಾರಣ, ಇದು ನನಗೆ ಬಿಟ್ಟಿಯಾಗಿ ದೊರೆತಿದೆ. ನಮ್ಮ ಕೈಯಿಂದ ದುಡ್ಡು ಖರ್ಚಾಗದೆ ಸಿಕ್ಕುವ ಪದಾರ್ಥದಷ್ಟು ಇನ್ನಾವ ತಿಂಡಿಯೂ ರುಚಿಸುವುದಿಲ್ಲ" ಎಂದು ದೋಸೆಯನ್ನು ಚೂರುಮಾಡಿ ಬಾಯಿಗೊಯ್ದ. ಅವನ ಹಸಿವು ಅವನ ಅಪೇಕ್ಷೆಯಷ್ಟೇ ಹಿರಿದಾಗಿದ್ದಂತೆ ಕಾಣುತ್ತಿತ್ತು. ಅಷ್ಟರಲ್ಲಿ ಇನ್ನೆರಡು ದೋಸೆಗಳು ಬಂದದ್ದರಿಂದ ನಾನೂ ತಿನ್ನತೊಡಗಿದೆ. ಕೆಲವು ನಿಮಿಷ ಹೆಚ್ಚೇನೂ ಮಾತು ನಡೆಯಲಿಲ್ಲ. ತಿಂದುದೆಲ್ಲಾ ಮುಗಿದ ಮೇಲೆ ಅವನು "ಹಾಳಾದವರು ಈ ಹೋಟಲಿನವರೇ ಹೀಗೆ! ಸರಿಯಾಗಿ ಸುಟ್ಟೇ ಇಲ್ಲ! ಆದರೂ ನೋಡಿ ಸ್ವಾಮಿ, ಚೆನ್ನಾಗಿ ಸುಡದೆ ಹೋದರೂ ನನ್ನ ಭಾಗಕ್ಕೇನೋ ಈ ದೋಸೆ ಸೊಗಸಾದ ರಸಗವಳವೇ ಆಗಿತ್ತು. ಬಡತನದಿಂದಲೂ ಅದರಿಂದ ಉಂಟಾಗುವ ಹಸಿವಿನಿಂದಲೂ ಬರುವ ಸಂತೋಷಗಳನ್ನು ಏನೆಂದು ವರ್ಣಿಸಲಿ? ನಮ್ಮಂಥ ತಿರುಕರನ್ನು ಕಂಡರೆ ದೇವರಿಗೆ ಬಹು ಮಮತೆ. ಆತ ಹಣಗಾರರನ್ನು ಮಲಮಕ್ಕಳ ಹಾಗೆ ಕಾಣುತ್ತಾನೆ. ಅವರಿಗೆ ಯಾವುದರಿಂದಲೂ ತೃಪ್ತಿಯಿಲ್ಲ; ಏನೂ ರುಚಿಸುವುದಿಲ್ಲ. ನಮಗೆ ನೋಡಿ, ಪ್ರಪಂಚದಲ್ಲೆಲ್ಲಾ ಒಳ್ಳೆಯ ಪದಾರ್ಥಗಳೇ ಕಂಡುಬರುತ್ತವೆ. ಅದೇ ಬೇಕು ಇದೇ ಬೇಕು ಎನ್ನುವವರೇ ಅಲ್ಲ ನಾವು. ನಮಗೆ ಎಲ್ಲೂ ಆಸ್ತಿಪಾಸ್ತಿ ಏನೂ ಇಲ್ಲದಿದ್ದರೂ ಹೋದ ಕಡೆಯಲ್ಲೆಲ್ಲಾ ಸಂಪತ್ಸಮೃದ್ಧಿಯನ್ನು ಕಾಣುತ್ತೇವೆ. ದೊಡ್ಡದೊಂದು ಪ್ರವಾಹ ಬಂದು ದೇಶದ ಅರ್ಧ ಭಾಗವೇ ಕೊಚ್ಚಿಹೋಯಿತು ಎನ್ನಿ. ಅದರಿಂದ ನನ್ನ ತೃಪ್ತಿಗೆ ಎಳ್ಳಷ್ಟೂ ಕುಂದು ಬರುವುದಿಲ್ಲ. ಏಕೆ ಎನ್ನುವಿರೋ, ಅಲ್ಲಿ ನನ್ನದು ಎನ್ನಿಸಿಕೊಂಡಿರುವ ಹೊಲ ಮನೆ ಏನೂ ಇಲ್ಲ. ಯಾವ ಕಂಪೆನಿ ಯಾವ ಬ್ಯಾಂಕು ಮುಳುಗಿದರೂ ನನಗೆ ಯೋಚನೆಯಿಲ್ಲ. ಏಕೆ ಎಂದರೆ ಯಾವುದಕ್ಕೂ ನಾನು ಷೇರು ಹಾಕಿಲ್ಲ, ಎಲ್ಲೂ ದುಡ್ಡಿಟ್ಟಿಲ್ಲ" ಎಂದ.

ಈ ಮನುಷ್ಯನ ಲವಲವಿಕೆ ನನ್ನ ಕುತೂಹಲವನ್ನು ಇನ್ನಷ್ಟು ಕೆರಳಿಸಿತು. ಅವನ ಜೀವನಚರಿತ್ರೆಯನ್ನು ಸ್ವಲ್ಪಮಟ್ಟಿಗಾದರೂ ತಿಳಿದುಕೊಳ್ಳಬೇಕೆಂದು ನನಗೆ ಆಸೆಯಾಯಿತು. ಆದ್ದರಿಂದ ನಾನು ಅವನಿಗೆ ಕಾಫಿಯನ್ನೂ ಕೊಡಿಸಿ ನನ್ನ ಖರ್ಚಿ

ನಲ್ಲೇ ತಾಂಬೂಲಚರ್ವಣ ಮಾಡಿಸಿ, "ಬನ್ನಿ, ಹಾಗೇ ಬೆಳುದಿಂಗಳಲ್ಲಿ ಓಡಾಡಿ ಕೊಂಡು ಹೋಗೋಣ. ನಿಮ್ಮ ಅನುಭವಗಳ ಕತೆಯನ್ನು ಕೇಳಬೇಕೆಂದು ಆಸೆ ಯಾಗುತ್ತದೆ" ಎಂದೆ. ಅವನು "ಅಗತ್ಯವಾಗಿ ಆಗಬಹುದು. ತಮ್ಮಂಥವರು ಗುರುತಾದದ್ದು ನನ್ನ ಭಾಗ್ಯ! ತಾವು ಏನೂ ತಿಳಿದುಕೊಳ್ಳದೆ ಹೋದರೆ ಒಂದು ಕಟ್ಟು ಬೀಡಿ—" ಎಂದ. ನಾನು "ಓಹೋ! ತೆಗೆದುಕೊಳ್ಳಿ" ಎಂದೆ. ಊರಗಲ ಮುಖ ಮಾಡಿಕೊಂಡು (ಆ ಹೋಟಲಿನಲ್ಲಿ ಬೀಡಿ ಇರಲಿಲ್ಲವಾದುದರಿಂದ) "ಎಲಿ ಫೆಂಟ್" ಸಿಗರೇಟಿನ ಒಂದು ಪ್ಯಾಕೆಟ್ ತೆಗೆದುಕೊಂಡು ಜೇಬಿಗೆ ತುರುಕಿದ. ಅದಕ್ಕೂ ಒಂದು ಬೆಂಕಿಯ ಪೊಟ್ಟಣಕ್ಕೂ ನಾನೇ ದುಡ್ಡು ಕೊಟ್ಟೆ. ಇಬ್ಬರೂ ಬನಸಂಚಾರಕ್ಕೆ ಹೊರಟೆವು. ಯಾವ ದಿಕ್ಕಿನಲ್ಲಿ ತಿರುಗಿ ನೋಡಿದರೂ ಅಷ್ಟು ದೊಡ್ಡ ಉಪವನಕ್ಕೆಲ್ಲಾ ಏಳೆಂಟು ಜನಕ್ಕಿಂತ ಹೆಚ್ಚಿಗೆ ಇದ್ದಂತೆ ಕಂಡುಬರಲಿಲ್ಲ. ಹಾಗೆ ಇದ್ದವರಲ್ಲಿ ಒಬ್ಬ ರಿಬ್ಬರನ್ನು ಹತ್ತಿರದಿಂದ ನೋಡಿದಾಗ ಅವರು ತಮ್ಮನ್ನು ಬಾಧಿಸುತ್ತಿದ್ದ ಹಸಿವಿನ ಸಂಕಟವನ್ನು ಮರೆಯುವುದಕ್ಕೋಸ್ಕರ ಅಲ್ಲಿಗೆ ಬಂದಿದ್ದವರು, ಅಲ್ಲಿ ಇಲ್ಲಿ ಅಲೆದಾಡಿ ಅದನ್ನು ವೃದ್ಧಿಪಡಿಸಿಕೊಳ್ಳುವುದಕ್ಕಲ್ಲ ಎನ್ನಿಸಿತು. ನಾವು ಅತ್ತಿಂದಿತ್ತ ಇತ್ತಿಂದತ್ತ ಹೆಜ್ಜೆ ಹಾಕುತ್ತಿದ್ದಂತೆ ನನ್ನ ಜೊತೆಗಾರನ ಮಾತಿನ ಹೊನಲು ಹರಿಯುತ್ತಲೇ ಇತ್ತು. ಅದಕ್ಕೆ ಸಮರಸವಾಗಿ ಅವನ ಬಾಯಲ್ಲಿದ್ದ ಸಿಗರೇಟಿನ ಹೊಗೆಯೂ ಧಾರೆ ಧಾರೆಯಾಗಿ ಹೊರಟು ಆಕಾಶಕ್ಕೇರುತ್ತಿತ್ತು. "ನಿಮಗೆ ಬೇಡವೆ ಸಾರ್, ಸಿಗರೇಟು?" ಎಂದು ನಾನು ಕೊಡಿಸಿದ್ದ ಪದಾರ್ಥವನ್ನು ನನ್ನ ಮೂತಿಯ ಮುಂದೆಯೇ ಹಿಡಿದ. "ಬೇಡ, ನಾನು ಸೇದುವುದಿಲ್ಲ" ಎಂದೆ. "ಅದೇನೋ ಒಳ್ಳೆಯ ಅಭ್ಯಾಸವೇ. ಆದರೂ ನೋಡಿ, ಸಾರ್, ಮನಸ್ಸಿಗೆ ಬೇಜಾರಾದಾಗ, ಹಸಿವು ಬಳಲಿಕೆ ಆದಾಗ, ಅವನ್ನು ಮರೆಯಲು ಈ ಸಿಗರೇಟು ಸೇದುವುದರಂಥ ಉಪಾಯ ಮತ್ತೊಂದಿಲ್ಲ. ಭೂಮಿಯ ಮೇಲಿನ ಯಾವ ಕಷ್ಟ ಕಾರ್ಪಣ್ಯವನ್ನೇ ಆಗಲಿ ತಡೆದುಕೊಳ್ಳುವ ಶಕ್ತಿಯನ್ನು ಅನುಗ್ರಹಿಸುತ್ತದೆ ಎರಡಂಗುಲ ಉದ್ದದ ಈ ಸಿಗರೇಟು. ಮನುಷ್ಯರನ್ನು ದುಃಖದಿಂದ ಪಾರುಮಾಡುವ ಸಾಮರ್ಥ್ಯದಲ್ಲಿ ಇದು ಯಾವ ದೇವರಿಗೂ ಯಾವ ಸಂನ್ಯಾಸಿಗೂ ಕಡಿಮೆಯಲ್ಲ. ಸಂನ್ಯಾಸಿಗಳೇ ಇದನ್ನು ಉಪಯೋಗಿಸುತ್ತಾರೆ. ದೇವರು ಏನು ಮಾಡುತ್ತಾನೋ ನನಗೆ ತಿಳಿಯದು" ಎಂದ. ನಾನು "ಸೀಗರೇಟಿಗೇನು, ಅಂಗಡಿ ಬೀದಿಯಲ್ಲಿ ಒಂದು ದೊಡ್ಡ ಪೆಟ್ಟಿಗೆ ಬೇಕಾದರೂ ಕೊಡಿಸುತ್ತೇನೆ. ನಿಮ್ಮ ಚರಿತ್ರೆ ಆದಷ್ಟು ಹೇಳ್ತೇನೆ ಅಂದಿದ್ದಿರಲ್ಲ. ಕೇಳಲು ಕಾತರನಾಗಿದ್ದೇನೆ" ಎಂದೆ. ಅವನು "ಹೌದು ಸಾರ್! ಮರೆತೇ ಬಿಟ್ಟಿದ್ದೆ!" ಎಂದು ಆತ್ಮಕಥಾನಿರೂಪಣೆಯನ್ನು ಆರಂಭಿಸಿದ.

"ನೀವು ಮೊದಲು ತಿಳಿದುಕೊಳ್ಳಬೇಕಾದ ವಿಷಯ ನಾನು ಗೌರವಸ್ಥರ ಕುಲದಲ್ಲೇ ಹುಟ್ಟಿದವನು ಎಂಬುದು. ನನ್ನ ಹಿರಿಯರೇನೂ ಅನಾಮಧೇಯರಲ್ಲ. ಜಗತ್ತಿನಲ್ಲಿ ಅವರು ಅನೇಕರ ಗಮನಕ್ಕೆ ಗಣನೆಗೆ ಪಾತ್ರರಾದವರು ಎಂದು ನಾನು ಧೈರ್ಯವಾಗಿ ಹೇಳಬಲ್ಲೆ. ನಮ್ಮ ತಾಯಿ ಬೀದಿ ಬೀದಿ ಅಲೆದು ಸಗಣಿ ಸಂಗ್ರಹಿಸಿ, ಬೆರಣಿ ತಟ್ಟಿ, ಅವನ್ನು ಬುಟ್ಟಿಯಲ್ಲಿ ಸೇರಿಸಿಕೊಂಡು ಕೇರಿ ಕೇರಿಗಳಲ್ಲಿ ತಿರುಗಿ ಕೂಗಿ ಮಾರಾಟ ಮಾಡುತ್ತಿದ್ದಳು. ಎಷ್ಟೋ ಜನರ ಮನೆಗಳಲ್ಲಿ ಒಲೆ ಹೊತ್ತಿಸಿ ಅಡಿಗೆ ಮಾಡಿದ್ದು ನಮ್ಮ ಅಮ್ಮನ ಸಹಾಯದಿಂದ. ನಮ್ಮ ತಂದೆ ನಾನು ಸಣ್ಣವ ನಿದ್ದಾಗ ಬಹಳ ಹೆಸರುವಾಸಿಯಾದ ಗರಡಿ ವಸ್ತಾದಿಯಂತೆ. ಆದರೆ ನನಗೆ ಬುದ್ಧಿ ಬಂದ ಮೇಲೆ ಅವನು ಕಸರತ್ತು ಮಾಡಿದ್ದನ್ನು ಎಂದೂ ನೋಡಿದ ಹಾಗೆ ನನಗೆ ನೆನಪಿಲ್ಲ. ಮೂರು ಹೊತ್ತೂ ಗರಡಿಯ ಮನೆಯ ಜಗಲಿಯ ಮೇಲೆ ಕಾಲಿಳಿಯ ಬಿಟ್ಟುಕೊಂಡು ಕೂತಿದ್ದು ಹೋಗಿಬರುವವರನ್ನೆಲ್ಲಾ ಕರೆದು ಹರಟೆ ಹೊಡೆಯು ವುದು, ಸಂಜೆಯಾಯಿತು ಎಂದರೆ ಅಂಗಡಿಗೆ (ಯಾವ ಅಂಗಡಿಗೆ ಎಂದು ತಮ್ಮಂಥ ತಿಳಿದವರಿಗೆ ನಾನು ಹೇಳಬೇಕೇನು?) ಹೋಗುವುದು, ರಾತ್ರಿ ಬಹಳ ಹೊತ್ತಿನ ವರೆಗೂ ಇನ್ನೆಲ್ಲೋ ಹೋಗಿಬರುವುದು (ಅವನು ಎಲ್ಲಿಗೆ ಹೋಗಿ ಬರುತ್ತಿದ್ದ ಎಂದು ನನಗೆ ಈಗ ಚೆನ್ನಾಗಿ ಅರ್ಥವಾಗಿದೆ)—ಇವೇ ಅವನ ದಿನಚರಿ. ನಮ್ಮ ಮುತ್ತಾತನ ಕಾಲದ ಒಂದು ನಾಲ್ಕು ಎಕರೆ ಜಮೀನು ಇತ್ತು. ಅದನ್ನು ಸಾಗುವಳಿ ಮಾಡುವುದಕ್ಕೆ ಯಾರಿಗೋ ಗುತ್ತಿಗೆಗೆ ಕೊಟ್ಟಿದ್ದನಂತೆ. ಆ ಜಮೀನು ಎಲ್ಲಿತ್ತು, ಯಾರ ವಶದಲ್ಲಿತ್ತು, ಈಗ ಯಾರ ವಶದಲ್ಲಿದೆ, ಅದರಿಂದ ಏನು ಬರುತ್ತಿತ್ತು ಎನ್ನುವುದೆಲ್ಲಾ ನನ್ನ ಪಾಲಿಗೆ ಈವತ್ತಿಗೂ ಒಂದು ರಹಸ್ಯ ಪುರಾಣವೇ ಆಗಿದೆ. ನಮ್ಮ ಅಪ್ಪ ಸ್ವಲ್ಪ ಕಾಲ ಪೋಲೀಸಿನಲ್ಲಿದ್ದನಂತೆ. ಒಂದು ದಿನವೂ ಬೀಟ್‌ಮೇಲೆ ಹೋದವನು ಸ್ಟೇಷನ್ನಿಗೆ ಹಿಂದಿರುಗುತ್ತಲೇ ಇರಲಿಲ್ಲವಂತೆ. ಅವನನ್ನು ಹುಡುಕಲು ಇನ್ನೊಬ್ಬ ಪೋಲೀಸಪ್ಪ ಹೋಗಬೇಕಾಗಿದ್ದಿತಂತೆ. ಹೋಗಿ ನೋಡಿದರೆ ಇವನು ಮೈಮೇಲೆ ಅರಿವಿಲ್ಲದೆ ನಡುದಾರಿಯಲ್ಲೋ ಇಲ್ಲ ರಸ್ತೆಯ ಪಕ್ಕದ ಮೋರಿ ಯಲ್ಲೋ ಬಿದ್ದಿರುತ್ತಿದ್ದನಂತೆ. ಅವನೆಲ್ಲಿ ಬಿದ್ದಿದ್ದಾನೆ ಎನ್ನುವುದನ್ನು ಇಪ್ಪತ್ತು ಮಾರು ಆಚೆಯಿಂದಲೇ ಗಾಳಿಯನ್ನು ಮೂಸಿನೋಡಿ ಕಂಡುಹಿಡಿಯಬಹುದಾ ಗಿದ್ದಿತಂತೆ. ಒಂದು ದಿವಸ ಇನ್ಸ್‌ಪೆಕ್ಟರ್ ಸಾಹೇಬರೇ ತಮ್ಮ ಪವಿತ್ರ ಹಸ್ತ ಗಳಿಂದಲೇ ಅವನನ್ನು ಹಿಡಿಯಲು ಹೊರಟರಂತೆ. ಅವನು ಅವರನ್ನು ಕಾಣುತ್ತಲೇ ಕೆಂಪನೆಯ ಕಣ್ಣುಗಳನ್ನು ಅವರ ಕಡೆಗೆ ತಿರುಗಿಸಿ, 'ಏ ಕಳ್ಳ! ಬದ್ಮಾಷ್! ಏನೋ ಅದು ನೀನು ತಗೊಂಡು ಓಡಿಹೋಗ್ತಾ ಇರೋದು?' ಎಂದು ಅವರನ್ನು

ಅರೆಸ್ಟ್ ಮಾಡಲು ಹೋದನಂತೆ. ಧೈರ್ಯಶಾಲಿಗಳಾದ ಇನ್ಸ್‌ಪೆಕ್ಟರು 'ಥೂ! ನನ್ನಂಥ ದೊಡ್ಡ ಅಧಿಕಾರಿ ಒಬ್ಬ ಕಾನ್ಸ್‌ಟೇಬಲ್ ಕೈಗೆ ಸಿಕ್ಕಿಬೀಳುವುದೆ?' ಎಂದು ತಮ್ಮ ಹುದ್ದೆಯ ಪ್ರತಿಷ್ಠೆಯನ್ನು ರಕ್ಷಿಸುವ ಸಲುವಾಗಿ ಅಲ್ಲಿಂದ ದೌಡಾಯಿಸಿದರಂತೆ. ಮಾರನೆಯ ದಿವಸವೆ ನಮ್ಮ ಪೂಜ್ಯ ಪಿತನಿಗೆ ಡಿಸ್‌ಮಿಸ್ ಆಯಿತಂತೆ. ಆದರೆ ಅದರಿಂದ ಅವನ ಮನಸ್ಸಿನ ಮೇಲೆ ಯಾವ ಪರಿಣಾಮವೂ ಆಗಿದ್ದಂತೆ ನನಗೆ ತೋರಲಿಲ್ಲ. ಪೋಲೀಸಿನವನ ಕೆಲಸ ದ್ರಿಸ್ಸು ಹೋದರೂ ಜಬರ್ದಸ್ತು ಮಾತ್ರ ಮೊದಲಿಗಿಂತಲೂ ಹೆಚ್ಚಿದ ಹಾಗೆ ವರ್ತಿಸುತ್ತಿದ್ದ ಅವನು. ಅದರ ಸಂಪೂರ್ಣ ಸವಿಯನ್ನುಂಡವಳು ನಮ್ಮ ಅಮ್ಮ, ಅವಳಿಗೆ ಎರಡನೆಯವನು ನಾನು. ನಮ್ಮ ಜನಕನ ಅನೇಕ ಸದ್ಗುಣಗಳಲ್ಲಿ ಅವನ ಸಂಗೀತಪ್ರೇಮ ಅದ್ಭುತವಾದುದು ಎಂದು ನಾನು ನಿಮಗೆ ಮೊದಲೇ ಹೇಳಬೇಕಾಗಿತ್ತು. ಅವನ ಹಾಗೆ ಮದ್ದಲೆ ಬಾರಿಸುವವರು ನಮ್ಮ ಊರಿನಲ್ಲಿ ಮಾತ್ರವೇ ಅಲ್ಲದೆ ಆಜುಬಾಜು ಎಲ್ಲೂ ಇರಲಿಲ್ಲ ಎಂದು ನಾನು ಹೆಮ್ಮೆಯಿಂದ ಎದೆ ತಟ್ಟಿಕೊಳ್ಳಬಲ್ಲೆ. ನಮ್ಮ ಊರಿನಲ್ಲಿ ಯಾವ ತೇರಾಗಲಿ, ಕುಸ್ತಿವರಸೆ ಕತ್ತಿಕಾಳಗ ಏನು ನಡೆಯಲಿ, ನಮ್ಮ ಅಪ್ಪನ ಮದ್ದಲೆಯ ಸದ್ದು ಗಾಳಿಯಲ್ಲಿ ಮೇಲಕ್ಕೆದ್ದು ಸುತ್ತ ಹತ್ತು ಹಳ್ಳಿಗಳಿಗೆ ಕೇಳಿಸುತ್ತಿತ್ತು. ವರುಷಗಟ್ಟಳೆ ಮದ್ದಲೆಯನ್ನು ಬಡಿದು ಬಡಿದು ಕೈಗೆ ಅಭ್ಯಾಸವಾಗಿಬಿಟ್ಟಿದ್ದುದರಿಂದ ಒಂದೊಂದು ಸಾರಿ ಅದು ನನ್ನ ಮತ್ತು ನಮ್ಮ ಅಮ್ಮನ ಬೆನ್ನುಗಳನ್ನೇ ಶಾಸ್ತ್ರೋಕ್ತವಾದ, ಕ್ರಮವಾದ, ರೀತಿಯಲ್ಲಿ ಬಹು ಉತ್ಸಾಹದಿಂದ ಬಾರಿಸುತ್ತಿತ್ತು. ಶಬ್ದ ಮಾತ್ರ ಮದ್ದಲೆ ಬಡಿದಾಗ ಬರುತ್ತಿದ್ದ ಹಾಗೆ ಬೆನ್ನಿನಿಂದ ಮಾತ್ರ ಬರದೆ ಬಾಯಿಯಿಂದಲೂ ಬರುತ್ತಿತ್ತು. ಇದರ ಫಲವಾಗಿ ಒಂದು ಬಗೆಯ ಸ್ವರಮೇಳ ಏರ್ಪಟ್ಟು ನಮ್ಮ ಮನೆಯಲ್ಲಿ ಆಗಾಗ ಸಣ್ಣ ಪುಟ್ಟ ಸಂಗೀತ ಕಚೇರಿಗಳು ನಡೆಯುತ್ತಿದ್ದವು. ನಮ್ಮ ಅಪ್ಪನ ಸಂಗೀತಪ್ರೇಮ ವಂಶಪಾರಂಪರ್ಯವಾಗಿ ಬಂದುದಿರಬೇಕು. ಏಕೆಂದರೆ ನಮ್ಮ ಅಜ್ಜ ಬಹಳ ಚೆನ್ನಾಗಿ ತಾಳ ಹಾಕುತ್ತಿದ್ದನಂತೆ (ಯಾರ ಕುಣಿತಕ್ಕೋ ಗೊತ್ತಿಲ್ಲ); ಅವರ ಅಪ್ಪ ಶಂಖ ಊದುವುದರಲ್ಲಿ ಎತ್ತಿದ ಕೈಯಂತೆ. ಈಗ ಮಂದಟ್ಟಾಯಿತೆ, ಸ್ವಾಮಿ, ನಾನೇನು ಅಂಥ ಕೀಳು ಮನೆತನದವನಲ್ಲ ಎಂದು? ಎಷ್ಟೋ ಜನ ದೊಡ್ಡ ಮನುಷ್ಯರು ಎನ್ನಿಸಿಕೊಳ್ಳುವವರು ಕೂಡ ಇಂಥ ಸದ್ವಂಶದಲ್ಲಿ ಹುಟ್ಟಿರುವುದಿಲ್ಲ. ಅದು ಹೋಗಲಿ. ಏಕೋ ನೋಡಿ, ಅಂಥ ಮುತ್ತಜ್ಜನ ಮರಿಮಗನಾಗಿ, ಅಂಥ ಅಜ್ಜನ ಮೊಮ್ಮಗನಾಗಿ, ಅಂಥ ಅಪ್ಪನ ಮಗನಾಗಿ ಜನ್ಮವೆತ್ತಿದರೂ ನನಗೆ ಮಾತ್ರ ಅವರ ಸಂಗೀತ ಜ್ಞಾನ ಇಳಿದುಬರಲಿಲ್ಲ. ಜ್ಞಾನ ಹೋಗಲಿ ಎಂದರೆ ಪ್ರೇಮಾನಾದರೂ ಬೇಡವೆ? ಅದೂ ಇಲ್ಲ. ನನ್ನನ್ನೂ ನಗಾರಿ ಬಾರಿಸುವುದರಲ್ಲೋ ಶಂಖ ಹೊಡೆಯುವುದರಲ್ಲೋ

ತಾಳ ಹಾಕುವುದರಲ್ಲೋ ತರಬೇತುಮಾಡಿ ಕುಲದ ಕಸಬನ್ನು ಕಾಪಾಡಿಕೊಂಡು ಬರಬೇಕೆಂದು ನಮ್ಮ ಅಪ್ಪ ಬಹಳ ಪ್ರಯತ್ನಪಟ್ಟ. ಸಾಧ್ಯವಾದರೆ ನನಗೆ ರಿಸರ್ವ್ ಪೋಲೀಸಿನಲ್ಲೋ ಇಲ್ಲದಿದ್ದರೆ ಕನಿಷ್ಠಪಕ್ಷಕ್ಕೆ ಯಾವುದಾದರೂ ಟೂರಿಂಗ್ ಟಾಕೀಸಿನಲ್ಲೋ ಸರ್ಕಸ್ ಕಂಪೆನಿಯಲ್ಲೋ ಮದ್ದಲೆ ಬಡಿಯುವ ಕೆಲಸ ಕೊಡಿಸಿ ತನ್ನ ಮಗ ತನಗಿಂತಲೂ ಬುದ್ಧಿವಂತ ಎಂದು ಜನ ಹೇಳುವಂತೆ ಮಾಡಬೇಕೆಂದು ಅವನ ಕನಸಾಗಿತ್ತು. ಆದ್ದರಿಂದ ಮೂರನೆ ಕ್ಲಾಸಿಗೇ ನನ್ನ ಸ್ಕೂಲು ಓದನ್ನು ಕೊನೆಗಾಣಿಸಿ ಮನೆಯಲ್ಲಿ ತಾನೇ ಮದ್ದಲೆ ಬಾರಿಸುವುದನ್ನು ಹೇಳಿಕೊಡತೊಡಗಿದ. ಆದರೆ, ನಾನು ಆಗಲೆ ತಮ್ಮಲ್ಲಿ ಅರಿಕೆಮಾಡಿಕೊಂಡ ಹಾಗೆ, ಸಂಗೀತದಲ್ಲಿ ನನಗಿದ್ದ ಅಭಿರುಚಿ ಸೊನ್ನೆ. (ತಮ್ಮಂಥವರೆದುರಿಗೆ ಮುಚ್ಚುಮರೆ ಮಾಡಬಾರದು. ನೋಡಿ, ನಿಸ್ಸಂಕೋಚವಾಗಿ ಹೇಳಿಬಿಡ್ತೇನೆ—ಮೊದಲಿನಿಂದಲೂ ಅಷ್ಟೆ, ನಾನು ಲಕ್ಷ್ಮೀದೇವಿಯ ಭಕ್ತನೇ ಹೊರತು ಸರಸ್ವತಿಯ ಕೃಪೆಗೆ ಪಾತ್ರನಾಗಬೇಕೆಂದು ಎಂದೂ ಆಸೆಪಟ್ಟವನಲ್ಲ.) ಆದಕಾರಣ ನನ್ನ ವಿದ್ಯಾಭ್ಯಾಸ ಜಯಪ್ರದವಾಗಿ ಸಾಗಲಿಲ್ಲ. ಇದರಿಂದ ಬೇಸತ್ತು ನಮ್ಮ ಅಪ್ಪ ನನ್ನನ್ನು ಹದಿನೈದನೆಯ ವಯಸ್ಸಿನಲ್ಲೇ ಒಬ್ಬ ಸಾಹುಕಾರನ ಮನೆಯಲ್ಲಿ ಊಳಿಗದ ಕೆಲಸಕ್ಕೆ ಸೇರಿಸಿದ. ಕೋಳಿ ಕೂಗುವ ಹೊತ್ತಿಗೆ ಎದ್ದು ನನ್ನ ಶಯ್ಯಾಗೃಹವಾದ ಬೋನಿನಂತಹ ಕೋಣೆಯಿಂದ ಹೊರಬಿದ್ದು ಕೊಟ್ಟಿಗೆಯನ್ನೆಲ್ಲಾ ಚೊಕ್ಕಟ ಮಾಡುವುದು; ಮುಸುರೆ ತೊಳೆಯುವುದು; ಎಮ್ಮೆಗಳಿಗೆ ಹಸುಗಳಿಗೆ ಹುರುಳಿ ತಿರುವಿಟ್ಟು ಹಾಲು ಕರೆಯುವುದು; ಆಮೇಲೆ ಅವನ್ನು ಹುಲ್ಲುಮೇಯಲು ಕಾಡಿಗೆ ಹೋಗುವ ದನದ ಹಿಂಡಿಗೆ ಹೊಡೆದುಬರುವುದು, ಮನೆಯನ್ನೂ ಅಂಗಳವನ್ನೂ ಗುಡಿಸುವುದು; ಬಾವಿಯಿಂದ ನೀರು ಸೇದಿ ಬಟ್ಟೆ ಒಗೆಯುವುದು; ಕೆಲಸ ಮುಗಿದಮೇಲೆ ಬಾಗಿಲಿನ ಹೊರಗೆ—ಬಿಸಿಲು ಕಾಯುತ್ತಿರಲಿ, ಮಳೆ ಬೀಳುತ್ತಿರಲಿ, ಗಾಳಿ ಬೀಸುತ್ತಿರಲಿ—ಎಲ್ಲಾ ಸಮಯದಲ್ಲೂ ಒಂದೇಸಮನೆ ಕಣ್ಣು ಕಿವಿ ಎರಡನ್ನೂ ತೆರೆದಿಟ್ಟುಕೊಂಡು ನಿಂತಿರುವುದು; ಬಂದವರಿಗೆಲ್ಲಾ ಸಮಯೋಚಿತವಾಗಿ ಯಜಮಾನರು ಮನೆಯಲ್ಲೇ ಇದ್ದರೂ ಇಲ್ಲ ಎಂದು ಹೇಳುವುದು; ಅಮ್ಮಾ ಅವರು ಈಚೆ ಇಣಿಕಿ ನೋಡಿದಾಗಲೆಲ್ಲಾ ಹಿಂದಕ್ಕೆ ಸರಿದು ನಿಲ್ಲುವುದು, ಮಧ್ಯೆ ಮಧ್ಯೆ ಅವರ ಮಕ್ಕಳು ಮೊಮ್ಮಕ್ಕಳನ್ನು (ಸುಮಾರು ಎರಡು ಡಜನ್) ಹೆಗಲ ಮೇಲೆ ಏರಿಸಿಕೊಂಡು ಬೀದಿ ಸುತ್ತಿಸುವುದು—ಇವೇ ಮೊದಲಾದುವು ನಾನು ಅಲ್ಲಿ ಮಾಡಬೇಕಾಗಿದ್ದ ಕೆಲಸ. ಆ ಸಾಹುಕಾರರು ಒಂದು ಸಾರಿ ನಮ್ಮ ಊರಿಗೆ ಬಂದಿದ್ದಾಗ ಮೈಕಟ್ಟು ಮಜಬೂತಾಗಿದ್ದ ನನ್ನನ್ನು ನೋಡಿ, 'ಹುಡುಗ ಯಾರಿವನು? ಚೆನ್ನಾಗಿ ಬೆಳೆದಿದಾನೆ!' ಎಂದು ಅಪ್ಪಣೆ ಕೊಡಿಸಿದರಂತೆ. ಅಷ್ಟೇ ಸಾಕು ಎಂದು ನನ್ನ

ಪೂಜ್ಯ ತಂದೆ ನನ್ನನ್ನು ಕರೆದುಕೊಂಡುಹೋಗಿ ಅವರ ನೊಗಕ್ಕೆ ಹೂಡಿದ್ದ. ಆದರೆ ಹಿಂದೆ ನಗಾರಿ ಬಾರಿಸುವ ಕೆಲಸ ನನ್ನ ಇಷ್ಟಕ್ಕೆ ಹೇಗೆ ವಿರೋಧವಾಗಿತ್ತೋ ಹಾಗೆಯೇ ಈಗ ಈ ಪರಿಚಾರಕನ ಕೆಲಸವೂ ಅಷ್ಟೇ ಮಟ್ಟಿಗೆ ನನ್ನ ಮನಸ್ಸಿಗೆ ಒಗ್ಗದ ಚಾಕರಿಯೆಂದು ಕಂಡುಬಂತು. ತಾನೇ ದೊಡ್ಡ ಮನುಷ್ಯನಾಗಬೇಕೆಂದು ಅಪೇಕ್ಷೆಪಡುವವನಿಗೆ ದೊಡ್ಡಮನುಷ್ಯರು ಎನ್ನಿಸಿಕೊಂಡಿರುವ ಇತರರ ಕೈಕಾಯುವುದರಿಂದ ಬಾಗಿಲು ಕಾಯುವುದರಿಂದ ಏನು ಸ್ವಾಮಿ ಸುಖ ದೊರೆಯುತ್ತೆ? ಇದಲ್ಲದೆ, ನಾನು ನನ್ನ ಯಜಮಾನನಿಗೆ (ಅದಕ್ಕಿಂತಲೂ ಹೆಚ್ಚಾಗಿ ಯಜಮಾನಿಗೆ) ಸದಾ ವಿಧೇಯನಾಗಿರಬೇಕಾಗಿತ್ತು. ಇದು ನನ್ನ ಹುಟ್ಟುಗುಣಕ್ಕೆ ತೀರಾ ವ್ಯತಿರಿಕ್ತವಾಗಿತ್ತು. ಅವರ ಇಚ್ಛೆ ಅವರಿಗೆ, ನನ್ನ ಇಚ್ಛೆ ನನಗೆ, ನಿಮ್ಮ ಇಚ್ಛೆ ನಿಮಗೆ. ಯಾವ ಮನುಷ್ಯನಿಗೇ ಆಗಲಿ ಪರರ ಇಚ್ಛಾನುಸಾರ ನಡೆಯುವುದಕ್ಕಿಂತಲೂ, ಸ್ವೇಚ್ಛೆಯಾಗಿ ನಡೆಯುವುದೇ ಹೆಚ್ಚು ಹಿತಕರ, ಸಂತೋಷಕರ ಎಂದು ನಾನು ನಿಮಗೆ ಹೇಳಲೇಬೇಕಾಗಿಲ್ಲ. ಆದ್ದರಿಂದ ಆ ಜೀತದ ಜೀವನದಲ್ಲಿ ನನಗೆ ಬೇಸರ ಹುಟ್ಟಿತು. ಕೆಲಸ ಬಿಟ್ಟುಹೋಗಲು ಅಪ್ಪಣೆ ಕೇಳಿದೆ. ಆದರೆ ಎತ್ತರವಾಗಿ ದಷ್ಟಪುಷ್ಟನಾಗಿ ಬೆಳೆದಿದ್ದ, ಎರಡಾಳುಗಳ ಕೆಲಸವನ್ನು ಒಬ್ಬನೇ ಮಾಡಬಲ್ಲ ನನ್ನಂಥ ಸೇವಕ ನನ್ನು ಬಿಟ್ಟುಕೊಡಲು ಯಜಮಾನರಿಗೆ ಸುತರಾಂ ಇಷ್ಟವಿರಲಿಲ್ಲ. ಹೇಗಿದ್ದೀತು, ಪಾಪ? ಅದೂ ಅಲ್ಲದೆ, ಅವರು ನನಗೆ ಸಂಬಳವನ್ನೇ ಕೊಡಬೇಕಾಗಿರಲಿಲ್ಲವಂತೆ! ನಮ್ಮ ಅಪ್ಪ ತನ್ನ ದುರ್ವ್ಯಾಪಾರಗಳಿಗೋಸ್ಕರ ಅವರಿಂದ ಇನ್ನೂರು ರೂಪಾಯಿ ಸಾಲ ತೆಗೆದುಕೊಂಡು, ಅದನ್ನು ತೀರಿಸುವ ಸಲುವಾಗಿ ನನ್ನನ್ನು ಅವರ ಮನೆಯಲ್ಲಿ ದುಡಿಯುವ ತೊತ್ತಾಗಿ ಇಟ್ಟುಹೋಗಿದ್ದ ಎಂದು ಆಗ ತಿಳಿಯಿತು ನನಗೆ! ಕುರುವಿನ ಮೇಲೆ ಬೊಕ್ಕೆ ಎದ್ದಂತಾಗಿ ನನ್ನ ಕೆಲಸದ ವಿಷಯದಲ್ಲಿ ಇನ್ನಷ್ಟು ಅಸಮಾಧಾನವಾಯಿತು. ಬೆಳಗಿನ ಜಾವದಿಂದ ಹಿಡಿದು ನಡುರಾತ್ರಿಯವರೆಗೂ ಬಿಡುವಿಲ್ಲದೆ ಚಾಕರಿ ಬೊಗಳಿ ಬೆವರು ಸುರಿಸುವುದೂ ಅಲ್ಲದೆ ಕೈಗೆ ದುಡ್ಡೂ ಬರುವಹಾಗಿಲ್ಲ ಎಂದರೆ ಹೇಗೆ ಸ್ವಾಮಿ, ನೀವೇ ಹೇಳಿ. ನಾನು ನಮ್ಮ ತಂದೆಗೆ ಒಂದು ಕರುಣಾಜನಕವಾದ ಕಾಗದ ಬರೆದು ನನ್ನ ವಿಮೋಚನೆಗೆ ಅಗತ್ಯವಾದ ಹಣ ಕಳುಹಿಸಿಕೊಡಬೇಕೆಂದು ಬೇಡಿದೆ. ಆದರೆ ತನ್ನ ಚಟಗಳನ್ನು ತೃಪ್ತಿಪಡಿಸಿಕೊಳ್ಳುವುದಕ್ಕೇ ಸಾಕಾಗುವಷ್ಟು ಸಾಧನ ಇಲ್ಲದವನು ನನ್ನ ನೆರವಿಗೆ ಬಂದಾನೆಯೆ? ಅವನು ನನ್ನ ಕಾಗದಕ್ಕೆ ಪ್ರತ್ಯುತ್ತರವನ್ನೇ ಬರೆಯಲಿಲ್ಲ. ಆಗ ಮಾಡುವುದೇನು? 'ಬಿಡುಗಡೆ ಪಡೆಯಲು ನನ್ನ ಹತ್ತಿರ ಮೂರು ಕಾಸಿಲ್ಲ. ನಮ್ಮ ಅಪ್ಪ ನಮ್ಮ ಅಪ್ಪನಾದ್ದರಿಂದ ನನಗಿಂತಲೂ ಬುದ್ಧಿವಂತ; ಅವನು ಒಂದು ಕಾಸೂ ಕೂಡ ಕಳುಹಿಸುವುದಿಲ್ಲ, ಕಳುಹಿಸುವ ಹಾಗೂ

ಇಲ್ಲ. ಆದಕಾರಣ, ಇನ್ನಾವುದಾದರೂ ದಾರಿ ಹುಡುಕಬೇಕು. ಅದು ಯಾವುದೆಂದರೆ ಓಡಿಹೋಗುವುದು ; ಗೊತ್ತೇ ಇದೆ ! ' ಎಂದು ನನಗೆ ನಾನೇ ಹೇಳಿಕೊಂಡು ಒಂದು ಶುಭ ಮುಹೂರ್ತದಲ್ಲಿ ಅಲ್ಲಿಂದ ಕಾಲುಕಿತ್ತೆ.

"ಅನಂತರ ಎಷ್ಟೋ ದಿನ ಮತ್ತೆ ಎಲ್ಲಾದರೂ ನಮ್ಮವರ ಕೈಗೆ ಸಿಕ್ಕಿಬಿದ್ದೇನೆಂಬ ಹೆದರಿಕೆಯಿಂದ ಜನಸಂಚಾರವಿಲ್ಲದ ಹಾದಿಗಳಲ್ಲಿ ಮಾತ್ರ ಓಡಾಡುತ್ತಿದ್ದೆ. ಒಂದು ದಿನ ಸಂಜೆ ಮಬ್ಬುಗತ್ತಲಲ್ಲಿ ನಾನು ಒಂದು ಹಳ್ಳಿಯನ್ನು ಪ್ರವೇಶಿಸುತ್ತಿದ್ದಾಗ ಒಬ್ಬ ಮನುಷ್ಯ ಕಂಡುಬಂದ. ಆತ ಆ ಹಳ್ಳಿಯ ಜೋಯಿಸ ಎಂದು ನನಗೆ ಆಮೇಲೆ ತಿಳಿದುಬಂತು. ಆಗಿನ ಅವನ ಸ್ಥಿತಿ ಶೋಚನೀಯವಾಗಿತ್ತು, ಪಾಪ, ಒಂದು ಗದ್ದೆಯ ಬದುವಿನ ಬಳಿ ಕುದುರೆಯಿಂದ ಕೆಳಗೆ ಬಿದ್ದು ಕೆಸರಿನಲ್ಲಿ ಸಿಕ್ಕಿಕೊಂಡು ಸರಿಯಾಗಿ ಉಸಿರಾಡಲು ಕೂಡ ಆಗದೆ ಒದ್ದಾಡುತ್ತಿದ್ದ. ನಾನು ಅಲ್ಲಿಗೆ ಹೋದ ಕೂಡಲೆ ಅವನು ಕೈಸನ್ನೆ ಕಣ್ಸನ್ನೆಗಳಿಂದ ನನ್ನ ಸಹಾಯವನ್ನು ಬೇಡಿದ. ಕರುಣೆಗಿಂತಲೂ ಹೆಚ್ಚಾಗಿ, ಮುಂದೆ ಅವನಿಂದ ಏನಾದರೂ ಉಪಕಾರವಾಗಬಹುದೆಂಬ ಆಸೆ ನನ್ನನ್ನು ಅವನಿಗೆ ಸಹಾಯ ನೀಡುವಂತೆ ಪ್ರೇರಿಸಿತು. ಪುಣ್ಯಾತ್ಮ ಅವನನ್ನು ಕೆಸರಿನಿಂದ ಮೇಲಕ್ಕೆ ಎತ್ತಬೇಕಾದರೆ ಸ್ವಲ್ಪ ಪ್ರಯಾಸವೇ ಆಯಿತು. ಅವನು ನನಗೆ 'ಹೃತ್ಪೂರ್ವಕವಾದ' ವಂದನೆಗಳನ್ನರ್ಪಿಸಿ ಮನೆಗೆ ಹೊರಡುವುದರಲ್ಲಿದ್ದ. ಆದರೆ ನಾನೂ ಅವನ ಹಿಂದೆಯೇ ಹೊರಟೆ. ಏಕೆ ಎಂದರೆ, ಯಾರಾದರೂ ಆಗಲಿ ನನ್ನನ್ನು ವಂದಿಸಬೇಕಾದರೆ ತಮ್ಮ ಮನೆಯ ಬಾಗಿಲಲ್ಲೇ ಆ ಕೆಲಸ ಮಾಡಬೇಕೆಂದು ನನ್ನ ಅಭಿಲಾಷೆ. ಆತ ನನಗೆ ನೂರಾರು ಪ್ರಶ್ನೆ ಹಾಕಿದ: ನಾನು ಯಾರ ಮಗ, ಎಲ್ಲಿಂದ ಬಂದಿದ್ದೆ, ಸಂಬಿಕಸ್ಥನೆ ಮೊದಲಾದವು. ನಾನು ಅವನಿಗೆ ಪೂರ್ತಿ ತೃಪ್ತಿಯಾಗುವ ಹಾಗೆ ಜವಾಬು ಕೊಟ್ಟು, ಗಾಂಭೀರ್ಯದಲ್ಲೂ, ವಿಶ್ವಾಸಪರತೆಯಲ್ಲೂ, ಬುದ್ಧಿವಂತಿಕೆಯಲ್ಲೂ, ಸತ್ಯಸಂಧತೆಯಲ್ಲೂ ನನ್ನಂಥವರು ಲೋಕದಲ್ಲಿ ಅನೇಕರಿರಲಾರರು ಎನ್ನಿಸುವಷ್ಟರ ಮಟ್ಟಿಗೆ ನನ್ನನ್ನು ನಾನು ಹೊಗಳಿಕೊಂಡೆ. ಹೆಚ್ಚು ಮಾತೇಕೆ? ಅವನಿಗೆ ಒಬ್ಬ ಆಳು ಬೇಕಾಗಿತ್ತು. ಆ ಕೆಲಸ ನನಗೆ ಸಿಕ್ಕಿತು. ನಾನು ಅವನ ಮನೆಯಲ್ಲಿದ್ದುದು ಆರು ತಿಂಗಳು ಮಾತ್ರ. ನಮಗೆ ಒಬ್ಬರನ್ನೊಬ್ಬರು ಕಂಡರೆ ಆಗುತ್ತಿದ್ದುದು ಅಷ್ಟಷ್ಟೆ. ನನಗೆ ಊಟ ತಿಂಡಿ ಎಂದರೆ ಮೈಯೆಲ್ಲಾ ಬಾಯಾಗುತ್ತದೆ; ಬಾಯೆಲ್ಲಾ ನೀರೂರುತ್ತದೆ. ಅವನು ನನಗೆ ಕೊಡುತ್ತಿದ್ದುದೋ ಬಹಳ ಸ್ವಲ್ಪ. ನಾನೊಬ್ಬ ಚೆಲುವೆಯ ಮೇಲೆ ಕಣ್ಣಿಟ್ಟಿದ್ದೆ. ಈ ಜೋಯಿಸ ಆ ಹುಡುಗಿಯ ಅಪ್ಪನಿಗೆ ಹೇಳಿ ನಾನು ಅವರ ಮನೆಯ ಹತ್ತಿರಕ್ಕೆ ಕೂಡ ಹೋಗದ ಹಾಗೆ ಮಾಡಿದ. (ತಾನು ಮಾತ್ರ ಎರಡು ಸಂಸಾರ ನಡೆಸುತ್ತಿದ್ದ.) ಮೂರು ಹೊತ್ತೂ ಏನಾದರೂ

ಒಂದು ಕೆಲಸ ಇದ್ದೇ ಇರುತ್ತಿದ್ದುದರಿಂದ ನಾನು ಅತ್ತಿತ್ತ ಕಾಲಾಡಿಸುವ ಹಾಗೂ ಇರಲಿಲ್ಲ. ನನಗೆ ಪ್ರಪಂಚದಲ್ಲಿ ಚೆನ್ನಾಗಿ ಬದುಕಿ ಸುಖಪಡಬೇಕೆಂಬ ಬಯಕೆ. ಅವನೋ ಬೆಳಗ್ಗೆ ಎದ್ದರೆ ಆಯಿತು 'ಸಾಯಿಸಿಬಿಡುತ್ತೇನೆ,' 'ಸಿಗಿದುಹಾಕಿ ಬಿಡುತ್ತೇನೆ,'' 'ಹುಟ್ಟಲಿಲ್ಲ ಅನ್ನಿಸಿಬಿಡುತ್ತೇನೆ,' ಎಂದು ನಾನಾ ರೀತಿಯಲ್ಲಿ ನನಗೆ ಪ್ರಾಣಭಯ ಉಂಟುಮಾಡುತ್ತಿದ್ದ. ಅವನಿಗೆ ಸರಿಯಾದ ಹೆಂಡತಿ ಸಿಕ್ಕಿದ್ದಳು. ನೋಡುವುದಕ್ಕೆ ಎರಡು ಕಣ್ಣು ಸಾಲದು—ಅಷ್ಟು ಸುಂದರಿ ಅವಳು. ಹೆಸರು ಗೌರಮ್ಮನಾದರೂ ಗುಣದಲ್ಲಿ ಮಾರಮ್ಮ. ಮಾತೆತ್ತಿದರೆ 'ಬರಲಿ, ಅವರಿಗೆ ಹೇಳಿ ಮಾಡಿಸ್ತೇನೆ!' ಎಂದು ಬೆದರಿಸುತ್ತಿದ್ದಳು. ಅವರಿವರ ಮನೇಲಿ ಊಟ ಸಿಕ್ಕದಿದ್ದಾಗ ಜೋಯಿಸನ ಕೋಪದ ಪ್ರಭಾವ ಹೆಂಡತಿಯ ಮೇಲೆ ಹರಿಯುತ್ತಿತ್ತು. ಅವಳು ನನ್ನನ್ನೋ ಒಂದೊಂದು ಸಾರಿ ತನ್ನ ಮುದಿ ಅತ್ತೆಯನ್ನೋ ಇಲ್ಲ ಕಿರುಗೂಸನ್ನೋ ಅದಕ್ಕೆ ಆಹುತಿ ಕೊಟ್ಟು ಪುಣ್ಯ ಪಡೆಯುತ್ತಿದ್ದಳು. ಈ ಗಂಡಹೆಂಡಿರ ಕೈಯಲ್ಲಿ ಏಗುವುದು ಕಷ್ಟ ಎಂದು ಒಂದೇ ದಿನದಲ್ಲಿ ಕಂಡುಹಿಡಿದುಕೊಂಡೆ. ಆದರೂ, ನೋಡೋಣ ಎಂದು ನನ್ನ ತಾಳ್ಮೆಯನ್ನೆಲ್ಲಾ ಉಪಯೋಗಿಸಿ ಆರು ತಿಂಗಳು ತಳ್ಳಿದೆ. ಅಷ್ಟರಲ್ಲಿ ಅವರಿಬ್ಬರೂ ಸೇರಿ ನನಗೆ ಹೊಟ್ಟೆತುಂಬಾ ಅನ್ನಹಾಕದೆ ಬಿಟ್ಟಿ ಚಾಕರಿ ತೆಗೆದುಕೊಂಡು ನಿಧಾನವಾಗಿ ಸಾಯಿಸಬೇಕೆಂದು ಹವಣಿಸಿದ್ದ ಹಂಚಿಕೆ ನನಗೆ ಸ್ಪಷ್ಟ ವಾಗಿ ಅರ್ಥವಾಯಿತು. ಇಂಥ ಘೋರವಾದ ಕೊಲೆಯನ್ನು ತಪ್ಪಿಸಬೇಕೆಂದು ನಾನು ಒಳ್ಳೆಯ ಮನಸ್ಸು ಮಾಡಿದೆ. ಕೈಗೆ ಸಿಕ್ಕಿದ್ದನ್ನೆಲ್ಲಾ ಕದಿಯತೊಡಗಿದೆ. ತಿಂಡಿ ತೀರ್ಥ ಮೊದಲಾದ ಪದಾರ್ಥಗಳು ಅವರು ಎಲ್ಲಿಟ್ಟಿದ್ದರೆ ಅಲ್ಲೇ ಮಾಯವಾಗ ತೊಡಗಿದವು. ಕಣಜದಲ್ಲಿ ತುಂಬಿಟ್ಟಿದ್ದ ಕಾಳು ಕ್ರಮೇಣ ಕಡಿಮೆಯಾಯಿತು. ಅದರ ಬಾಯಿ ಮಾತ್ರ ಕಟ್ಟಿದ್ದು ಕಟ್ಟಿದ್ದ ಹಾಗೆಯೇ ಇರುತ್ತಿತ್ತು. ತಂಬಿಗೆ ತುಂಬಾ ಹಾಲು ಕೊಡುತ್ತಿದ್ದ ಹಸುಗಳು ಅರ್ಧಕ್ಕರ್ಧ ಕಡಿಮೆ ಮಾಡಿಬಿಟ್ಟವು. ಹೀಗಾಗಿ, ನನ್ನಿಂದ ತಮಗೆ ಉಳಿಗಾಲವಿಲ್ಲವೆಂದು ಅವರಿಗೆ ತಿಳಿದುಹೋಯಿತು. ಆದ್ದರಿಂದ ಒಂದು ದಿನ ಬೆಳಗ್ಗೆ ನಾನು ಕೆಲಸದಿಂದ ನಿವೃತ್ತನಾದೆ. ನಾನು ಮಾಡಿದ ಆರು ತಿಂಗಳ ಕೆಲಸಕ್ಕೆ ಎಂಟು ರೂಪಾಯಿ ಸಂಬಳ ಎಂದು ಜೋಯಿಸ ಲೆಕ್ಕ ಹೇಳಿದ.

"ಅವರು ನನಗೆ ಕೊಡಬೇಕಾದ ಹಣವನ್ನು ಕೂಡಿಸುತ್ತಿದ್ದಾಗ ನಾನು ಮನೆ ಬಿಟ್ಟು ಹೊರಡಲು ಅನುವಾಗತೊಡಗಿದೆ, ಒಂದು ಚೀಲದಲ್ಲಿ ಕೈಗೆ ಸಿಕ್ಕಿದಷ್ಟು ಜೋಳ ತುಂಬಿಕೊಂಡೆ. ಎರಡು ಉಂಡೆ ಬೆಲ್ಲವನ್ನು ಹೇಗೋ ಅಟ್ಟದ ಮೇಲಿನಿಂದ ಇಳಿಸಿ ಚೀಲಕ್ಕೆ ತುರುಕಿದೆ. ಕೊಟ್ಟಿಗೆಗೆ ಹೋಗಿ ಕೇವಲ ಅಭ್ಯಾಸಬಲದಿಂದ ಅಲ್ಲಿದ್ದ ಹಸು ವಿನ ಹಾಲನ್ನು ಬಾಯಿಗೆ ಹಿಂಡಿಕೊಂಡು ಒಂದು ಹರದಾರಿಯನ್ನಾದರೂ ನಡೆಯು

ವಷ್ಟು ತಾಕತ್ತು ಸಂಪಾದಿಸಿದೆ. ಬಾಗಿಲ ಹೊರಗಿದ್ದ ಒಂದು ತಂಬಿಗೆ ಚೀಲದಲ್ಲಿದ್ದ ಕಾಳಿನಲ್ಲಿ ಹೂತುಕೊಂಡಿತು. ಯಾರಿಗೂ ಕಾಣದ ಹಾಗೆ ಆ ಚೀಲವನ್ನು ಹಿತ್ತಲ ಬೇಲಿಯಲ್ಲಿ ಹುದುಗಿಸಿಟ್ಟೆ. ಅನಂತರ ಏನೂ ಅರಿಯದವನಂತೆ ಹಿಂತಿರುಗಿ ಬಂದು ನನ್ನ ಸಂಬಳವನ್ನು ಕೃತಜ್ಞತೆಯಿಂದ ತೆಗೆದುಕೊಂಡು, ಅಷ್ಟುದಿನ ನನ್ನನ್ನು ಪುತ್ರ ವಾತ್ಸಲ್ಯದಿಂದ ಸಲಹಿದ್ದ ಯಜಮಾನನಿಗೂ ಯಜಮಾನಿಗೂ ಹೋಗಿಬರುತ್ತೇನೆಂದು ಹೇಳಿ ಭಕ್ತಿಯಿಂದ ಕೈಮುಗಿದು ಕಣ್ಣೀರು ಸುರಿಸುತ್ತ ಹೊರಟೆ. ಐದಾರು ರಸ್ತೆಗಳನ್ನು ಬಳಸಿಕೊಂಡು ಹಿತ್ತಲಕಡೆ ಬಂದು ಬೇಲಿಯಲ್ಲಿಟ್ಟಿದ್ದ ಚೀಲವನ್ನು ಹೆಗಲಿಗೇರಿಸಿದೆ. ಊರ ಬಾಗಿಲ ಹತ್ತಿರವೇ ನನ್ನ ಚೆಲುವೆಯ ಮನೆಯಿದ್ದುದು. ಕೊನೆಗಾದರೂ ಅವಳನ್ನು ಒಂದೇ ಒಂದು ಸಾರಿಯಾದರೂ ನೋಡುವುದಕ್ಕೆ ಸಾಧ್ಯವಾಗುತ್ತದೆಯೇನೋ ಎಂದು ಅತ್ತಿತ್ತ ಎಷ್ಟು ಕಣ್ಣು ಹೊರಳಿಸಿದರೂ ಪ್ರಯೋಜನವಾಗಲಿಲ್ಲ. 'ಆ ಪಿಶಾಚಿ ಅವರ ಅಪ್ಪ ಅವಳನ್ನು ಎಲ್ಲೋ ಮೂಲೆಯಲ್ಲಿ ಕತ್ತಲ ಕೋಣೆಯ ಸೆರೆಮನೆಯಲ್ಲಿ ಬಂಧಿಸಿಟ್ಟಿರಬೇಕು, ಕಟುಕ! ಅವನಿಗೆ ಶಾಸ್ತಿ ಮಾಡಲೇಬೇಕು!' ಎಂದು ಯೋಚಿಸಿ, ಮೆಲ್ಲಗೆ ಅವರ ಹಿತ್ತಲಿಗೆ ನುಗ್ಗಿದೆ. ಅಲ್ಲಿ ಎರಡು ಕೋಳಿಗಳು ಆಗತಾನೆ ಮೊಟ್ಟೆಗಳಿಟ್ಟಿದ್ದವು. ನಾನು ಹಿಂದುಮುಂದು ನೋಡದೆ ಮೊಟ್ಟೆಗಳನ್ನೆಲ್ಲಾ ಚೀಲಕ್ಕೆ ಸೇರಿಸಿದೆ. ತಾಯಿ ಮಕ್ಕಳನ್ನು ಪ್ರತ್ಯೇಕಿಸಬಾರದು ಎಂದು ಉದಾರಬುದ್ಧಿಯಿಂದ ಕೋಳಿಗಳನ್ನೂ ತೆಗೆದುಕೊಂಡೆ. ನಾನಿನ್ನೂ ಊರಿನ ಸರಹದ್ದನ್ನು ಬಿಟ್ಟು ಬಹಳ ದೂರ ಹೋಗಿರಲಿಲ್ಲ. ಹಿಂದುಗಡೆಯಿಂದ 'ಏ ಕಳ್ಳ! ಏ ಕಳ್ಳ! ನಿಲ್ಲು! ನಿಲ್ಲು!' ಎಂಬ ಕೂಗು ಕೇಳಿಸಿತು. ಇದರಿಂದ ನನ್ನ ನಡಿಗೆಯ ವೇಗ ಇನ್ನೂ ಹೆಚ್ಚಿತು. ನಿಂತಿದ್ದರೆ ನಾನು ಮೂರ್ಖನಾಗುತ್ತಿದ್ದೆ. ಏಕೆ ಎಂದರೆ ಆ ಕೂಗಿಗೂ ನನಗೂ ಯಾವ ಸಂಬಂಧವೂ ಇಲ್ಲವೆಂದು ನನಗೆ ಚೆನ್ನಾಗಿ ಗೊತ್ತಿತ್ತು. ಯಾರಾದರೂ 'ಕಳ್ಳ!' ಎಂದು ಕೂಗಿದಾಗ ನೀವು ತಿರುಗಿ ನೋಡಿದರೆ 'ನಾನೇ ಕಳ್ಳ' ಎಂದು ಒಪ್ಪಿಕೊಂಡಹಾಗಾಗುತ್ತದೆ. ನಿಮ್ಮ ಪಾಡಿಗೆ ನೀವು ಹೋದರೆ ಆ ಅಪಕೀರ್ತಿ ನಿಮಗೆ ತಟ್ಟುವುದಿಲ್ಲ. ಏನು ದೊಡ್ಡ ಮನಸ್ಸು ಸಾರ್, ನಿಮ್ಮದು! ನೀವೇನೂ ತಿಳಿದುಕೊಳ್ಳದೆ ಹೋದರೆ ಇನ್ನೊಂದು ಸಿಗರೇಟು ಹೊತ್ತಿಸುತ್ತೇನೆ. ಇದರ ಹೊಗೆ ಯಿಂದ ನಿಮಗೆ ತೊಂದರೆಯಾದರೆ ಕ್ಷಮಿಸಬೇಕು, ಸಾರ್, ದಯವಿಟ್ಟು. ಹಾಳಾದ ವನು ಆ ಜೋಯಿಸನ ಮನೆಯಲ್ಲಿ ಇದ್ದಷ್ಟು ದಿವಸವೂ ಒಂದು ಬೀಡಿಯನ್ನು ಕೂಡ ತುಟಿಗೆ ಒಯ್ಯಲಿಲ್ಲ!

"ಸರಿ, ಮತ್ತೆ ಸ್ವಲ್ಪದಿನ ಅಲ್ಲಿ ಇಲ್ಲಿ ಸುತ್ತಾಡಿದೆ. ನಾನು ಮುಂಜಾಗ್ರತೆ ವಹಿಸಿ ಚೀಲದಲ್ಲಿ ತುಂಬಿಕೊಂಡು ಬಂದಿದ್ದ ಬುತ್ತಿಯೆಲ್ಲಾ ಕ್ರಮೇಣ ಕರಗಿತು.

ಇನ್ನೇನು ಗತಿ ಎಂದು ಅನ್ನಿಸುವ ಸ್ಥಿತಿ ಬರುವಷ್ಟರಲ್ಲಿ ಒಂದು ನಾಟಕ ಮಂಡಲಿಯವರ ಸಹವಾಸ ಲಭಿಸಿತು. ಒಂದು ದಿನ ಬಟ್ಟಬಯಲಿನಲ್ಲಿ ಒಬ್ಬನೇ ಕಾಲೆಳೆದುಕೊಂಡು ಹೋಗುತ್ತಿದ್ದಾಗ ದಾರಿಯಲ್ಲಿ ಎರಡು ಗಾಡಿಗಳು ಅಡ್ಡವಾದವು. ನೋಡುತ್ತೇನೆ, ಒಂದೊಂದರಲ್ಲೂ ಪರದೆಗಳು, ಬಣ್ಣದ ಬಟ್ಟೆಗಳು, ಆಯುಧಗಳು, ಮೊದಲಾದ ನಾಟಕ ಪ್ರದರ್ಶನಕ್ಕೆ ಬೇಕಾದ ಪದಾರ್ಥಗಳು ತುಂಬಿಹೋಗಿದ್ದವು. ಎಂಟು ಹತ್ತು ಜನ ನಟರು ಅದರಲ್ಲಿ ಕೆಲವರು, ಇದರಲ್ಲಿ ಕೆಲವರು ಕುಳಿತಿದ್ದರು. ಅವರನ್ನು ನೋಡಿದುದೇ ತಡ, ನನ್ನ ಹೃದಯ ಸಂತೋಷದಿಂದ ಉಬ್ಬಿಹೋಯಿತು; ನನ್ನ ಮನಸ್ಸೆಲ್ಲಾ ಅವರಲ್ಲಿ ತಲ್ಲೀನವಾಯಿತು. ಒಂದು ಕಡೆ ನಿಲ್ಲದೆ ಊರೂರು ತಿರುಗುವ ಜನರನ್ನು ಕಂಡರೆ ನನಗೆ ಸ್ವಾಭಾವಿಕವಾದ ಒಂದು ರೀತಿಯ ಅಭಿಮಾನವಿತ್ತು. ದಾರಿಯಲ್ಲಿ ಒಂದು ಮಟ್ಟಿ ಸಿಕ್ಕಿತು. ಅದರ ಮೇಲೆ ಕಗ್ಗಲ್ಲು ಹೆಚ್ಚಾಗಿದ್ದು ಬಂಡಿಗಳ ಚಕ್ರಗಳು ಉರುಳುವುದೇ ಕಷ್ಟವಾಯಿತು. ಅವುಗಳಲ್ಲಿ ಕುಳಿತಿದ್ದವರಲ್ಲಿ ಕೆಲವರು ಕೆಳಗಿಳಿದು ಅತಿ ಪ್ರಯಾಸದಿಂದ ಗಾಲಿಗಳನ್ನು ತಳ್ಳಲಾರಂಭಿಸಿದರು. ಆ ಸಮಯಕ್ಕೆ ಸರಿಯಾಗಿ ನಾನು ಅವರನ್ನು ಸಮೀಪಿಸಿದೆ. ಗಾಲಿ ಹಾಕುವುದರಲ್ಲಿ ನಾನೂ ಸಹಾಯ ಮಾಡುತ್ತೇನೆಂದು ಹೇಳಿದೆ. ಅವರು ಒಪ್ಪಿದರು. ಸ್ವಲ್ಪಹೊತ್ತಿನಲ್ಲೇ ನಮ್ಮ ಪರಿಚಯ ಬೆಳೆಯಿತು. ನಾನು ನಾಟಕ ಮಂಡಲಿಯ ಸೇವಕನಾದೆ. ಅವರ ಸಹವಾಸ ನನಗೊಂದು ಸ್ವರ್ಗವಾಗಿತ್ತು. ಅವರು ಹಾಡುವುದು, ಕುಣಿಯುವುದು, ಕುಡಿಯುವುದು, ತಿನ್ನುವುದು, ತಿರುಗುವುದು—ಎಲ್ಲವನ್ನೂ ಒಂದೇಬಾರಿ ಒಟ್ಟಿಗೆ ಮಾಡುತ್ತಿದ್ದರು. ರಾವಣಾಸುರನ ಆಣೆ ಹೇಳುತ್ತೇನೆ, ನೋಡಿ ಸಾರ್, ನನಗೆ ಹೊಸದಾಗಿ ಜೀವಬಂದಂತಾಯಿತು. ಚಿಟ್ಟೆಯಂತೆ ನಲಿದು ನೆಗೆದಾಡತೊಡಗಿದೆ. ಅವರು ಆಡುತ್ತಿದ್ದ ಪ್ರತಿಯೊಂದು ಮಾತೂ ನಗು ಉಕ್ಕಿಸುತ್ತಿತ್ತು. ನನಗೆ ಅವರ ಮೇಲೆ ಎಷ್ಟು ಅಭಿಮಾನ ಹುಟ್ಟಿತೋ ಅವರಿಗೆ ನನ್ನ ಮೇಲೆ ಅಷ್ಟೇ ಅಭಿಮಾನ ಮೂಡಿತು. ನಾನು ಆಗಲೇ ಹೇಳಿದ ಹಾಗೆ ನನ್ನ ಮುಖದ ವರ್ಚಸ್ಸೂ ಮೈಕಟ್ಟೂ ಬಹಳ ಚೆನ್ನಾಗಿದ್ದವು. ಇದರ ಮೇಲೆ, ನಾನು ಬಡವನಾದರೂ ಮಾತಾಡದೆ ಸುಮ್ಮನಿರುವವನಾಗಿರಲಿಲ್ಲ; ಈಗಲೂ ಆಗಿಲ್ಲ ಎಂದು ನಿಮ್ಮ ಅನುಭವಕ್ಕೇ ಬಂದಿದೆ.

"ತಿರುಗಾಟದ ಜೀವನದಷ್ಟು ನನಗೆ ಪ್ರಿಯವಾದುದು ಪ್ರಪಂಚದಲ್ಲಿ ಇನ್ನಾವುದೂ ಇಲ್ಲ. ಕೆಲವು ವೇಳೆ ಅದೃಷ್ಟ ಚೆನ್ನಾಗಿರುತ್ತದೆ, ಕೆಲವು ವೇಳೆ ಇರುವುದಿಲ್ಲ; ಈವತ್ತು ಬೆಚ್ಚಗೆ ಮಲಗಿರಬಹುದು, ನಾಳೆ ಚಳಿಯಲ್ಲಿ ನಡಗುತ್ತಿರಬೇಕಾಗಬಹುದು. ಸಿಕ್ಕಿದಾಗ ತಿನ್ನಬಹುದು, ಇದ್ದಾಗ ಕುಡಿಯಬಹುದು. ನಾವು ಅದೇ ದಿನ ಸಾಯಂಕಾಲದ ಹೊತ್ತಿಗೆ ಹಂದಿಪಾಳ್ಯ ಎಂಬ ಊರನ್ನು ತಲಪಿ ಒಂದು ಛತ್ರದಲ್ಲಿ

ಇಳಿದುಕೊಂಡೆವು. ಅಲ್ಲೇ ನಾವು 'ಗಿರಿಜಾ ಕಲ್ಯಾಣ'ದ ಕೆಲವು ದೃಶ್ಯಗಳನ್ನು ಆಡಿ ತೋರಿಸಬೇಕೆಂದು ನಿಶ್ಚಯಿಸಿದೆವು. ಛತ್ರದ ಜಗಲಿಯೇ ರಂಗಸ್ಥಳವಾಯಿತು; ಅದರ ಒಂದು ಬದಿಗಿದ್ದ ಕಿರುಗೋಣೆ 'ಗ್ರೀನ್ ರೂಮ್' ಆಯಿತು; ಸುತ್ತಲೂ ಈಚಲು ಚಾಪೆಗಳನ್ನು ಕಟ್ಟಿ 'ಥಿಯೇಟರ್' ನಿರ್ಮಿಸಿದೆವು. ಸಾಮಾನುಗಳನ್ನು ತುಂಬುವುದಕ್ಕೆ ಉಪಯೋಗಿಸುತ್ತಿದ್ದ ಒಂದು ದೊಡ್ಡ ಜಾಕಾಯಿ ಮರದ ಪೆಟ್ಟಿಗೆ ಪರಶಿವನ ಪೀಠಸ್ಥಾನವಾದ ಕೈಲಾಸ ಪರ್ವತದ ಪದವಿಗೇರಿತು. ಹಿಂದೆ ಎಂದೂ ರಂಗಭೂಮಿಯ ಮೇಲೆ ಕಾಲಿಡದಿದ್ದ ಹದಿನೈದು-ಹದಿನಾರು ವರ್ಷದ ಹುಡುಗ ನೊಬ್ಬ ಪಾರ್ವತೀದೇವಿಯಾಗಿ ಅವತಾರ ಮಾಡಬೇಕಾಗಿತ್ತು. ನಮ್ಮ 'ಕಂಪೆನಿ'ಗೆ ಮುಖ್ಯ ಆಶ್ರಯದಾತರಾಗಿ 'ಕಾಂಪ್ಲಿಮೆಂಟರಿ ಪಾಸ್' ಪಡೆದಿದ್ದ ಪಂಚಾಯಿತಿ ಛೇರ್ಮನ್ನರ ಮಗಳ ಹಳೆಯ ಪೀತಾಂಬರವೊಂದನ್ನು ಎರವಲಾಗಿ ತಂದು ಅವನಿಗೆ ಉಡಿಸಿದೆವು. ಅವನು ದಿನವೂ ತೊಟ್ಟುಕೊಳ್ಳುತ್ತಿದ್ದ ಹಸುರು ಬಣ್ಣದ ಷರಟನ್ನೇ ತೋಳುಗಳನ್ನು ಮೇಲಕ್ಕೆ ಮಡಿಚಿ ಕುಪ್ಪಸವಾಗಿ ಪರಿವರ್ತಿ ಸಿದ್ದಾಯಿತು. ಹೊಳೆಹೊಳೆಯುವ 'ವರ್ತರೇಕು'ಗಳ ಚೂರುಗಳನ್ನು ನಕ್ಷತ್ರ ಗಳೋಪಾದಿಯಲ್ಲಿ ಕತ್ತರಿಸಿ ಕಿವಿ ಮೂಗುಗಳಿಗೆ ಆಭರಣಗಳನ್ನಿಟ್ಟೆವು. ಇನ್ನೂ ಒಂದು ವಿಶೇಷವೇನೆಂದರೆ ಸಾಕ್ಷಾತ್ ಪರಮೇಶ್ವರಿಯಾದ ಆ ಪಾರ್ವತಿ ತಾನು ಇಹಲೋಕದ ಯಾವ ಹೆಂಗಸಿಗೂ ಕಡಿಮೆಯಿಲ್ಲವೆಂದು ತೋರಿಸಿಕೊಳ್ಳಲು ಬಣ್ಣದ ಚಪ್ಪಲಿಗಳನ್ನು ಮೆಟ್ಟಿದ್ದಳು. ಈಶ್ವರನ ಹೆಗಲಿನ ಮೇಲೆ ಉದ್ದವಾದ ಒಂದು ರಬ್ಬರ್ ಹಾವು ಭಯಂಕರವಾಗಿ ಮಲಗಿ ನಿದ್ರಿಸುತ್ತಿತ್ತು. ಅವನ ಪಾದಪದ್ಮಗಳನ್ನು 'ಕ್ಯಾನ್‌ವಾಸ್ ಷೂ'ಗಳು ಅಲಂಕರಿಸಿದ್ದವು. ತ್ರಿಶೂಲ ಸಮಯಕ್ಕೆ ಸರಿಯಾಗಿ ದೊರೆಯದೆ ಇದ್ದುದರಿಂದ ಅವನ ಕೈಯಲ್ಲಿ ನಿಂಬೆಹಣ್ಣು ಸಿಕ್ಕಿಸಿದ್ದ ಒಂದು ಕತ್ತಿ ಕಂಗೊಳಿಸುತ್ತಿತ್ತು. ನನ್ನ ಕೆಲಸ ಏನು ಎನ್ನುವಿರೋ? ರಂಗಭೂಮಿಯ ಮುಂದು ಗಡೆಯೂ ಥಿಯೇಟರಿನ ಮಹಾದ್ವಾರದಲ್ಲೂ ಸುಯ್ಯೆಂದು ಉರಿಯುತ್ತಿದ್ದ ಮೂರು ಹಳೆಯ ಪೆಟ್ರೊಮ್ಯಾಕ್ಸ್ ದೀಪಗಳನ್ನು ಕೆಟ್ಟುಹೋಗದಂತೆ ನೋಡಿಕೊಳ್ಳುವುದು (ಎಂದರೆ, ಐದೈದು ನಿಮಿಷಕ್ಕೊಂದು ಸಾರಿ ಅವಕ್ಕೆ 'ಪಂಪ್ ಹೊಡೆಯುವುದು'). ರಂಗಭೂಮಿಯ ಮೇಲೆ ಬೇರೆ ಬೇರೆಯ ದೃಶ್ಯಗಳಿಗೆ ಬೇಕಾದ ಸಲಕರಣೆಗಳನ್ನು ತಂದಿಡುವುದು, ಅವುಗಳ ಆವಶ್ಯಕತೆ ಮುಗಿದ ಕೂಡಲೆ ತೆಗೆದುಕೊಂಡು ಹೋಗು ವುದು—ಇವೇ ಮೊದಲಾದ ಚಿಲ್ಲರೆ ಕೆಲಸಗಳು ನನಗೆ ವಹಿಸಲ್ಪಟ್ಟಿದ್ದವು. ಆ ನಾಟಕ ಪ್ರದರ್ಶನದಲ್ಲೆಲ್ಲಾ ಉಚಿತ ರೀತಿಯಲ್ಲಿ ಬಟ್ಟೆ ಉಟ್ಟಿದ್ದವನೆಂದರೆ ನಾನೊಬ್ಬನೆ! ಅದು ಹೇಗಾದರೂ ಇರಲಿ, ನಮ್ಮ ನಾಟಕದಿಂದ ಎಲ್ಲರ ಮನಸ್ಸಿಗೂ

ಸಂತೋಷವೂ ತೃಪ್ತಿಯೂ ಉಂಟಾದವು ಎನ್ನುವುದರಲ್ಲಿ ಸಂದೇಹವೇ ಇಲ್ಲ. ಹಂದಿಪಾಳ್ಯದ ಜನ ಒಳ್ಳೆ ಅಭಿರುಚಿಯಿರುವವರು. ಅಂಥವರು ಕೂಡ ನಮ್ಮ ಯೋಗ್ಯತೆಯನ್ನು ನೋಡಿ ಬೆರಗಾಗಿಹೋದರು.

"ಹಳ್ಳಿಗಾಡಿನಲ್ಲಿ ತಿರುಗಾಡುವ ನಟರು ನೋಡುವವರ ಮೆಚ್ಚಿಗೆಯನ್ನು ಸಂಪಾದಿಸಿಕೊಂಡು ಜಯಶೀಲರಾಗಬೇಕಾದರೆ ಒಂದು ನಿಯಮವುಂಟು. ಅದೇನು ಎಂದರೆ, ವ್ಯಕ್ತಿಗಳನ್ನೂ ಅವರ ಗುಣಗಳನ್ನೂ ಅದ್ಭುತವಾಗಿ ಅಸಾಧಾರಣವಾಗಿ ಕಾಣುವಂತೆ ಎತ್ತಿ ತೋರಿಸುವುದು. ಸಾಮಾನ್ಯ ಜೀವನದಲ್ಲಿರುವಂತೆಯೇ ಮಾತಾಡುವುದೂ ಕೆಲಸ ಮಾಡುವುದೂ ಓಡಾಡುವುದೂ ನಾಟಕವೆನ್ನಿಸಿಕೊಳ್ಳುವುದಿಲ್ಲ. ಜನ ಬರುವುದು ಇಂಥ ನಾಟಕವನ್ನು ನೋಡುವುದಕ್ಕಲ್ಲ. ಸಹಜವಾದ ಮಾತುಕತೆ ಸಕ್ಕರೆ ಪಾನಕದಂತೆ ಸುಲಭವಾಗಿ ನಾಲಗೆಯ ಮೇಲೆ ಹರಿದು ಹೋಗಿಬಿಡುತ್ತದೆ; ಅದರ ರುಚಿಯ ಗುರುತು ನಾಲಗೆಯ ಮೇಲೆ ಉಳಿಯುವುದಿಲ್ಲ. ಅದೇ ಒಂದು ಪಾತ್ರದ ಮಾತುಕತೆಯನ್ನು ಗುಣಾವಗುಣಗಳನ್ನು ಉತ್ಪ್ರೇಕ್ಷೆಮಾಡಿ ಎತ್ತಿ ತೋರಿಸಿದರೆ ಅದು ಹುಳಿಮಜ್ಜಿಗೆಯ ಹಾಗೆ ಚೆನ್ನಾಗಿ ಮನಸ್ಸಿಗೆ ಗೋಚರವಾಗುತ್ತದೆ. ಪಟ್ಟಣದಲ್ಲಾಗಲಿ ಹಳ್ಳಿಗಾಡಿನಲ್ಲಾಗಲಿ ಜನಸಾಮಾನ್ಯರನ್ನು ತಲೆದೂಗಿಸಬೇಕಾದರೆ ಚಿತ್ರವಿಚಿತ್ರವಾದ ವಸ್ತ್ರಾಭರಣಗಳನ್ನು ಧರಿಸುವುದು; ಅತ್ತು ಗೋಳಾಡುವುದು; ಗಹಗಹಿಸಿ ನಗುವುದು; ಕೂಗುವುದು; ಕಿರಿಚುವುದು; ಕೂದಲು ಕೆದರಿಕೊಳ್ಳುವುದು; ಪ್ರಜ್ಞೆ ತಪ್ಪಿದವರಂತೆ ಕುಸಿದು ಬೀಳುವುದು; ಮಾತುಗಳನ್ನು ಗಟ್ಟಿಯಾಗಿ ಎತ್ತಿ ಆಡುವುದು; ಒತ್ತಿ ಹೇಳುವುದು—ಇವೇ ಮೊದಲಾದ ಅಂಗವಿನ್ಯಾಸಗಳ ಆವಶ್ಯಕತೆ ಬಹಳ. ಜನರಿಂದ 'ಶಹಬಾಸ್' ಎನ್ನಿಸಿಕೊಳ್ಳಬೇಕಾದರೆ ಹಾಗೆ ಮಾಡಬೇಕು. ಹಾಗೆ ಮಾಡಿದರೆ ಮಾತ್ರವೇ ಅವರು ಸುಪ್ರೀತರಾಗುವುದು, ಹೊಗಳುವುದು.

"ಈ ಮೊದಲನೆಯ ಪ್ರದರ್ಶನದಲ್ಲೇ ನಾವು ತೋರಿಸಿದ ಅತಿಶಯವಾದ ಕೌಶಲದಿಂದ ನಮಗೆ ದೊರೆತ ಮನ್ನಣೆ, ಖ್ಯಾತಿ, ಅಷ್ಟಿಷ್ಟಲ್ಲ. ಈ ಖ್ಯಾತಿಯಲ್ಲಿ ಒಂದು ಭಾಗ ನನ್ನಿಂದ ಬಂದುದೆಂದು ನಾನು ಭಾವಿಸಿದುದು ಸಹಜವೇ ಆಗಿತ್ತು. ಹೇಗೆ ಎನ್ನುವಿರೊ? ದೀಪಗಳನ್ನು ಸರಿಯಾಗಿ ಉರಿಸುವುದು ನನ್ನ ಕೆಲಸವಾಗಿತ್ತೆಂದು ಆಗಲೆ ಹೇಳಿದ್ದೇನೆ. ಈಗಲೂ ಹೇಳುತ್ತೇನೆ, ಸ್ವಾಮಿ—ಯಾವ ನಾಟಕ ಪ್ರದರ್ಶನದಲ್ಲೇ ಆಗಲಿ, ದೀಪಗಳನ್ನು ಸರಿಯಾಗಿ ನೋಡಿಕೊಳ್ಳುವವನಿಲ್ಲದಿದ್ದರೆ ಆ ನಾಟಕ ಅರ್ಧ ಕಳೆಯನ್ನೇ ಕಳೆದುಕೊಳ್ಳುತ್ತದೆ ಎಂದು ನನ್ನ ಅಭಿಪ್ರಾಯ. ನಾಟಕದ ಕತೆ ಹೇಗೇ ಇರಲಿ, ರಂಗಸ್ಥಳದ ಸಜ್ಜು ಸಲಕರಣೆಗಳು ಹೇಗೇ ಇರಲಿ, ಅವಕ್ಕೆಲ್ಲಾ

ಮೆರಗು ಕೊಡುವುದು ದೀಪ. ಅಂಥ ಎರಡು ದೀಪಗಳನ್ನು ಸಮರ್ಪಕವಾಗಿಟ್ಟಿರು ತಿದ್ದವನು ನಾನು. ಆದ್ದರಿಂದ ಆ ನಾಟಕ ಜಯಪ್ರದವಾಗಿ ನಡೆದುದಕ್ಕೆ ನನ್ನ ಮುತುವರ್ಜಿಗೂ ಕೈಚಳಕಕ್ಕೂ ಒಂದಿಷ್ಟು ಪ್ರಶಂಸೆ ಸಲ್ಲಲೇಬೇಕಾಗಿತ್ತು.

"ಆ ಊರಿನಲ್ಲಿ ನಾವು ಇನ್ನೂ ಒಂದೆರಡು ನಾಟಕಗಳನ್ನು ಆಡಿದೆವು. ದಿನ ದಿನಕ್ಕೂ ನಮ್ಮ ಖ್ಯಾತಿ ಬೆಳೆಯಿತು. ನಮ್ಮ ನಾಟಕಗಳನ್ನು ನೋಡಲು ಸುತ್ತಮುತ್ತ ಹತ್ತಿಪ್ಪತ್ತು ಮೈಲಿಗಳಿಂದಲೂ ಜನ ಬಹು ಸಂಖ್ಯೆಯಲ್ಲಿ ಬಂದು ಸೇರುತ್ತಿದ್ದರು. ಇದರಿಂದ ಪ್ರೋತ್ಸಾಹಿತರಾಗಿ ನಾವು ಅಲ್ಲಿ ಹದಿನೈದು-ಇಪ್ಪತ್ತು ದಿನಗಳು 'ಕ್ಯಾಂಪ್' ಮಾಡಿದೆವು ನಾವು ಆ ಊರನ್ನು ಬಿಟ್ಟು ಹೊರಡುವ ಮೊದಲು ನಮ್ಮ ಅತ್ಯುತ್ತಮವಾದ ನಾಟಕವನ್ನು ಪ್ರದರ್ಶಿಸಬೇಕೆಂದೂ ನಿಶ್ಚಯಿಸಿದೆವು. ಈ ಕೊನೆಯ ಪ್ರದರ್ಶನದಲ್ಲಿ ನಮ್ಮ ಸಾಮರ್ಥ್ಯವನ್ನೆಲ್ಲಾ ತೋರಿಸಬೇಕಾಗಿತ್ತು. ಈ ಪ್ರದರ್ಶನದಿಂದ ದೊರೆಯಬಹುದಾದ ಲಾಭದ ವಿಷಯದಲ್ಲೂ ಬರಬಹುದಾದ ಒಳ್ಳೆಯ ಹೆಸರಿನ ವಿಷಯದಲ್ಲೂ ನಮ್ಮ ನಿರೀಕ್ಷೆ ಬಹಳವಾಗಿತ್ತು. ಈ ಕಾರಣದಿಂದಲೇ ನಾವು 'ಟಿಕೇಟಿ'ನ ದರಗಳನ್ನು ಸ್ವಲ್ಪ ಹೆಚ್ಚಿಸಿದೆವು.

"ಆಗ—ವಿಧಿವಿಲಾಸ ಏನು ಹೇಳಲಿ, ಸ್ವಾಮಿ!—ನಮ್ಮ ನಟವರ್ಗದವರಲ್ಲಿ ಪ್ರಮುಖನಾದ ಒಬ್ಬನಿಗೆ ಪ್ರಬಲವಾದ ಜ್ವರ ಬಂದು ಅವನು ಹಾಸಿಗೆ ಹಿಡಿದುಬಿಟ್ಟ. ನಮ್ಮ ಸಣ್ಣ ನಾಟಕಮಂಡಲಿಗೆ ಇದರಿಂದ ಸಿಡಿಲು ಬಡಿದಂತಾಯಿತು. ಇಂಥ ಸಂದಿಗ್ಧ ಸಮಯದಲ್ಲಿ ಕಾಯಿಲೆಯಿಂದ ಮಲಗಿದ್ದಕ್ಕೂ ಅದಕ್ಕಿಂತಲೂ ಹೆಚ್ಚಾಗಿ ವೆಚ್ಚಕ್ಕೆ ಆಸ್ಪದ ಕೊಡುವಂತಹ ರೋಗಕ್ಕೆ ತನ್ನ ದೇಹದಲ್ಲಿ ಎಡೆ ನೀಡಿದ್ದಕ್ಕೂ ಅವನನ್ನು ಎಲ್ಲರೂ ಸೇರಿ ಒಟ್ಟಿಗೆ ಹೋಗಿ ಮನಸಾರ ಬೈಯಬೇಕೆಂದು ಅವರು ತೀರ್ಮಾನಿಸಿದರು. ನನ್ನ ಪರಿಸ್ಥಿತಿಯನ್ನು ಉತ್ತಮಗೊಳಿಸಿಕೊಳ್ಳಲು ಇದು ಸಕಾಲ ವೆಂದು ನನಗೆ ತೋರಿತು; ಅವನ ಬದಲು ನಾನು ಅವನು ವಹಿಸುತ್ತಿದ್ದ ಪಾತ್ರವನ್ನು ತೆಗೆದುಕೊಳ್ಳುವುದಾಗಿ ಹೇಳಿದೆ. ಅವರಿಗೂ ಬೇರೆಯ ದಾರಿ ಇರಲಿಲ್ಲ. ಆದ್ದರಿಂದ ನಾನು ಹೇಳಿದುದಕ್ಕೆ ಒಪ್ಪಿದರು. ನಾನು ಮೂರನೆ ತರಗತಿಯವರೆಗೆ ಓದಿದ್ದೆನೆಂದು ನಿಮಗೆ ಆಗಲೇ ಸೂಚನೆ ಕೊಟ್ಟಿದ್ದೇನೆ. ನನಗೆ ಸಾಕಾದಷ್ಟು ಅಕ್ಷರಜ್ಞಾನವಿತ್ತು. ಸರಿ—ನಾಲ್ಕು ಲೋಟ ಕಾಫಿ ಕುಡಿದು ಒಂದು ಕಟ್ಟು ಬೀಡಿ ಮುಂದಿಟ್ಟುಕೊಂಡು (ಸ್ವಾಮಿ, ನಿಮಗೆ ದೇವರು ಆಯುರಾರೋಗ್ಯಗಳನ್ನು ದಯಪಾಲಿಸಲಿ) ಪಟ್ಟು ಹಿಡಿದು ಕುಳಿತು ನಾಟಕದ ಒಂದು ಪ್ರತಿಯನ್ನು ಓದಿ ಓದಿ ನಾನು ವಹಿಸಬೇಕಾ ಗಿದ್ದ ಪಾತ್ರದ ಮಾತುಗಳನ್ನೆಲ್ಲಾ ಬಾಯಿಪಾಠಮಾಡಿದೆ. ಬೀಡಿ ಕಾಫಿಗಳ ಅನು ಗ್ರಹದಿಂದ ನನ್ನ ಜ್ಞಾಪಕಶಕ್ತಿ ಬಹುಮಟ್ಟಿಗೆ ಉತ್ತಮಗೊಂಡಿದ್ದುದಾಗಿ ನನಗೆ

ಕಂಡುಬಂತು. ಕೆಲವೇ ಗಂಟೆಗಳಲ್ಲಿ ನಾನು ಆಡಬೇಕಾಗಿದ್ದ ಮಾತುಗಳನ್ನೆಲ್ಲಾ ಸ್ವಲ್ಪವೂ ತಡವರಿಸದೆ ಒಂದನ್ನೂ ಮರೆಯದೆ ಒದರಿಬಿಡಲು ಸಮರ್ಥನಾದುದನ್ನು ಕಂಡು ನನಗೇ ಆಶ್ಚರ್ಯವಾಯಿತು. ಅಂದಿನಿಂದಲೇ ಪೆಟ್ರೊಮ್ಯಾಕ್ಸ್ ದೀಪಗಳಿಗೆ 'ಪಂಪ್' ಹೊಡೆಯುವ ಕೆಲಸಕ್ಕೆ ಕೈಮುಗಿದು ನಟನ ಸ್ಥಾನಕ್ಕೆ 'ಬಡ್ತಿ' ಪಡೆದೆ. ಅದೃಷ್ಟದೇವತೆ ನನ್ನನ್ನು ಇನ್ನೂ ಹೆಚ್ಚು ಗೌರವಾರ್ಹವಾದ ಉನ್ನತವಾದ ಕೆಲಸಗಳನ್ನು ಕೈಗೊಳ್ಳಲು ನಿರ್ದೇಶಿಸಿದ್ದಂತೆ ನನಗೆ ತೋರಿತು. ಆದ್ದರಿಂದ ನಾನು ಸಮಯ ಸಿಕ್ಕಿದಾಗಲೆಲ್ಲಾ ಆಕೆಯ ಕೃಪಾಕಟಾಕ್ಷವನ್ನು ಸಂಪಾದಿಸಬೇಕೆಂದು ನಿಶ್ಚಯಿಸಿದೆ. ನಾಟಕದ ಅಭ್ಯಾಸಕ್ಕೆಂದು ಎಲ್ಲರೂ ಒಂದುಕಡೆ ಕಲೆತೆವು. ನಾನು ಆಗ ನನ್ನಲ್ಲಿ ತೋರಿಬಂದಿದ್ದ ವಿಸ್ಮಯಕರವಾದ ಬದಲಾವಣೆಯನ್ನು ನನ್ನ ಸಹೋದ್ಯೋಗಿಗಳಿಗೆ (ಈಗ ಅವರು ನನ್ನ ಯಜಮಾನರಲ್ಲ) ತಿಳಿಸಿದೆ. 'ಆ ಕಾಯಿಲೆಯ ಮನುಷ್ಯ ಗುಣಮುಖನಾಗಲು ಅವಸರಪಡಬೇಕಾದುದೇನೂ ಇಲ್ಲ. ನಾನು ಅವನ ಪಾತ್ರವನ್ನು ಎಲ್ಲರಿಗೂ ತೃಪ್ತಿಯಾಗುವಂತೆ ನಿರ್ವಹಿಸುತ್ತೇನೆ. ಒಂದು ವೇಳೆ ಅವನು ಸತ್ತುಹೋದರೂ ನೀವೇನೂ ಯೋಚಿಸಬೇಕಾದುದಿಲ್ಲ. ಅವನ ನೆನಪೇ ನಿಮ್ಮ ಮನಸ್ಸಿಗೆ ಬಾರದ ಹಾಗೆ ನೋಡಿಕೊಳ್ಳುವುದಾಗಿ ನಾನು ಪ್ರಮಾಣ ಮಾಡಿ ಹೇಳುತ್ತೇನೆ' ಎಂದು, ನಾನು ಅಭ್ಯಾಸಮಾಡಿಕೊಂಡಿದ್ದ ಪಾತ್ರವನ್ನು ಅವರೆಲ್ಲರೆದುರಿಗೂ ಅಭಿನಯಿಸಿ ತೋರಿಸಿದೆ. ನನ್ನ ಅಭಿನಯವನ್ನೂ ಅದಕ್ಕೆ ಅನುಗುಣವಾಗಿ ಹೊರಬಿದ್ದ ಮಾತು ಮತ್ತು ಮುಖಭಾವಗಳನ್ನೂ ಎಲ್ಲರೂ ಮೆಚ್ಚಿ ಚಪ್ಪಾಳೆ ತಟ್ಟಿದರು. ಆ ನಾಟಕ ನಡೆಯಲು ಗೊತ್ತಾಗಿದ್ದ ದಿನಕ್ಕೆ ಒಂದು ವಾರದ ಹಿಂದೆಯೇ ಉತ್ತಮನೂ ಪ್ರಸಿದ್ಧನೂ ಆದ ನಟನೊಬ್ಬನು ರಂಗಭೂಮಿಯ ಮೇಲೆ ಬರುವುದಾಗಿ ಊರಿನಲ್ಲೆಲ್ಲಾ ಡಂಗೂರ ಹೊಡೆಸಿ ಹ್ಯಾಂಡ್ ಬಿಲ್ಲುಗಳನ್ನೂ ಹಂಚಿದರು. ಟಿಕೀಟುಗಳು ಎಂದಿಗಿಂತಲೂ ಹೆಚ್ಚಾಗಿಯೇ ಮಾರಾಟವಾದವು. ಆದರೆ ಇಷ್ಟರಲ್ಲಿ ನನಗೆ ಇನ್ನೊಂದು ಯೋಚನೆ ಹೊಳೆಯಿತು. ನಾಟಕಮಂಡಲಿಗೆ ದುಡ್ಡು ಬರಲಿದ್ದುದು ನನ್ನಿಂದ; ಆದಕಾರಣ ಅದರ ಲಾಭದಲ್ಲಿ ನನಗೂ ಒಂದು ಭಾಗ ಬರಬೇಕಾದುದು ನ್ಯಾಯವೆಂದು ತೀರ್ಮಾನಿಸಿದೆ. ಮಂಡಲಿಯವರನ್ನು 'ಮಹನೀಯರೆ, ನಿಮಗೆ ಆಜ್ಞೆಮಾಡುವ ದೊಡ್ಡಸ್ತಿಕೆ ನನಗೆ ಬೇಡ. ನಿಮ್ಮಿಂದ ನನಗೆ ಎಷ್ಟೋ ಉಪಕಾರವಾಗಿದೆ. ಅದನ್ನು ಮರೆತುಬಿಡುವಂತಹ ಕೀಳುಮನ ನನ್ನಿಂದ ಯಾವಾಗಲೂ ದೂರವಾಗಿರಲಿ. ನೀವು ಹಸ್ತಪತ್ರಿಕೆಗಳಲ್ಲಿ ನನ್ನ ಹೆಸರನ್ನು ಅಚ್ಚು ಹಾಕಿಸಿ ಅತಿಶಯವಾದ ಒಳ್ಳೆಯತನವನ್ನು ತೋರಿರುವಿರಿ. ಇಂದಿನ ಪರಿಸ್ಥಿತಿಯಲ್ಲಿ ನನ್ನನ್ನು ಬಿಟ್ಟರೆ ನಿಮಗೆ ಬೇರೆ ಗತಿಯಿಲ್ಲ. ನಾನಿಲ್ಲದೆ ನೀವು ಈಗ ನಾಟಕವನ್ನು ಆಡುವಂತಿಲ್ಲ. ಈ ಗೌರವವನ್ನು ನನಗೆ ನೀಡಿದ್ದಕ್ಕಾಗಿ ನಾನು

ನಿಮ್ಮನ್ನು ಹೃತ್ಪೂರ್ವಕವಾಗಿ ವಂದಿಸುತ್ತೇನೆ; ನಿಮ್ಮೆಲ್ಲರ ಹಾಗೆಯೇ ನಾನೂ ಕೂಡ ನನ್ನ ಅಭಿನಯಕ್ಕೆ ತಕ್ಕ ಸಂಭಾವನೆಯನ್ನು ನಿರೀಕ್ಷಿಸುತ್ತೇನೆ. ಇಲ್ಲ ಎಂದರೆ ಇಗೋ ಹೊರಟೆ; ಮೊದಲಿನಂತೆ ನನ್ನ ದೀಪ ಉರಿಸುವ ಕೆಲಸ ನನಗಿರಲಿ' ಎಂದು ಹೇಳಿ ಹೆದರಿಸಿದೆ. ಈ ಮಾತು ಅವರಿಗೆ ಸರ್ವಥಾ ಒಪ್ಪಿಗೆಯಾಗಲಿಲ್ಲ. ಆದರೆ ಆಗಿನ ಸಂದರ್ಭದಲ್ಲಿ ನನ್ನ ಇಚ್ಛೆಯಂತೆ ನಡೆಯದೆಹೋದರೆ ಅವರಿಗೆ ಬೇರೆ ಮಾರ್ಗವೇ ಇರಲಿಲ್ಲ. ಅದಕ್ಕೆ ತಕ್ಕಹಾಗೆ ನಾನೂ ಸ್ವಲ್ಪ ಬಿಗಿಯಾಗಿಯೇ ಇದ್ದೆ; ಜಪ್ಪಯ್ಯ ಎಂದರೂ ಜಗ್ಗಲಿಲ್ಲ. ಅವರು ಒಪ್ಪಲೇಬೇಕಾಯಿತು. ನಾವು ಆಡಬೇಕಾಗಿದ್ದ ನಾಟಕ 'ಬಕಾಸುರ ವಧೆ.' ನಾನು ಭೀಮಸೇನನ ವೇಷ ಹಾಕಬೇಕಾಗಿತ್ತು. ಭೀಮಸೇನ ಬಕಾಸುರನ ಬಳಿಗೆ ತೆಗೆದುಕೊಂಡು ಹೋಗುವ ಅನ್ನ ಒಂದು ಬಂಡಿ ಇಲ್ಲದಿದ್ದರೆ ಹೋಗಲಿ, ಒಂದು ತಪ್ಪಲೆ ತುಂಬುವಷ್ಟಾದರೂ ಇರಲೇಬೇಕೆಂದು ಹಟ ಹಿಡಿದು, ಅಷ್ಟು ಅನ್ನವನ್ನೂ ರಂಗಭೂಮಿಯ ಮೇಲೆ ಸಭಿಕರ ಕಣ್ಣೆದುರಿಗೇ ತಿಂದು ಹಾಕಿದೆ. ಬಕಾಸುರನ ಪಾರ್ಟು ಮಾಡಿದ್ದವನಿಗೂ ನನಗೂ ಕೆಲವು ದಿನಗಳಿಂದ ಯಾವುದೋ ಕಾರಣದಿಂದ ಸ್ವಲ್ಪ ವೈಮನಸ್ಸಿತ್ತು. ಆ ಜಿದ್ದನ್ನೆಲ್ಲಾ ನಾಟಕದ ಭೀಮಸೇನನಾಗಿ ತೀರಿಸಿದೆ. ಆಹಾಹಾಹಾ! ಏನು ಜೋರಾಗಿತ್ತು ಎನ್ನುತ್ತೀರಿ ನನ್ನ ವೇಷ! ನಿಜವಾದ ಭೀಮಸೇನ ಕೂಡ ಅಷ್ಟು ಭಯಂಕರನಾಗಿದ್ದನೋ ಇಲ್ಲವೋ! ನಾನು ರಂಗಭೂಮಿಯ ಮೇಲೆ ಬಂದು ಮೀಸೆ ಹುರಿಮಾಡಿದ್ದೇ ತಡ, ನೆರೆದಿದ್ದ ಪ್ರೇಕ್ಷಕರೆಲ್ಲಾ ಕಿವಿ ಕಿವುಡಾಗುವಹಾಗೆ ಚಪ್ಪಾಳೆ ತಟ್ಟಿದರು. ಬಿದಿರಿನ ಕಡ್ಡಿಗಳಿಂದ ಮಾಡಿ ಬಣ್ಣದ ಕಾಗದ ಅಂಟಿಸಿದ್ದ ಗದೆಯನ್ನು ಎಡಗೈಯಲ್ಲಿ ಹಿಡಿದು ಒಂದು ಠೀವಿಯಿಂದ ಮೇಲಕ್ಕೆತ್ತಿ ಬುಗುರಿಯ ಹಾಗೆ ತಿರುಗಿಸಿದೆ. ಮತ್ತೆ ನಭೋ ಮಂಡಲಕ್ಕೇರಿತು ಕರತಾಡನದ ಸದ್ದು. ನಾನು ತಪ್ಪಲೆಯಲ್ಲಿದ್ದ ಅನ್ನವನ್ನೆಲ್ಲಾ ನಿಮಿಷಮಾತ್ರದಲ್ಲಿ ಮುಕ್ಕಿ ಮುಗಿಸಿದಾಗ ಸಭಿಕರ ಆನಂದೋತ್ಸಾಹಗಳು ಮೇರೆ ಮೀರಿದವು. 'ಏ!' ಎನ್ನುವವರು ಕೆಲವರು; 'ಭೀಮ ಅಂದರೆ ಹಾಗಿರಬೇಕು!' ಎಂದು ಸಂತೋಷದಿಂದ ಕೂಗಿದವರು ಕೆಲವರು; 'ಶಹಬಾಸ್!' ಎಂದು ಅಲ್ಲಲ್ಲೇ ನೆಗೆದಾಡಿದವರು ಕೆಲವರು; 'ರುಸ್ತುಂ!' ಎಂದವರು ಕೆಲವರು; 'ಭಲಪ್ಪಾ!' ಎನ್ನುವವರು ಕೆಲವರು; ಅಂತೂ ಎಲ್ಲೆಲ್ಲೂ ಅಚ್ಚರಿಯೋ ಅಚ್ಚರಿ! ಮೆಚ್ಚಿಗೆಯೋ ಮೆಚ್ಚಿಗೆ! ನಾನು ಗರ್ಜಿಸಿದಾಗ ಬೆಚ್ಚಿಬಿದ್ದ ಹೆಂಗಸರು ಮಕ್ಕಳು ಎಷ್ಟು ಮಂದಿಯೋ ಹೇಳಲಾರೆ. ತಪ್ಪಲೆ ಅನ್ನವನ್ನು ತಿಂದು ಬಕಾಸುರನನ್ನು ಕೊಂದು ಮೀಸೆಯ ಮೇಲೆ ಕೈಯಾಡಿಸಿ ಕೊನೆಗೆ ಒಂದು ಬೀಡಿ ಹೊತ್ತಿಸಿ ಕಾಲಮೇಲೆ ಕಾಲು ಹಾಕಿಕೊಂಡು ಕುಳಿತೆನೋ ಇಲ್ಲವೋ ಸಕಲ ಸಭಿಕರೂ ಮುಗ್ಧರಾಗಿ

ಹೋದರು. ಬಹಳ ಚೆನ್ನಾಗಿತ್ತು, ಸ್ವಾಮಿ, ನನ್ನ ಅಭಿನಯ! ಬಹಳ ಚೆನ್ನಾಗಿತ್ತು! ಅಷ್ಟು ಚೆನ್ನಾಗಿ ಹೇಗೆ ಅಭಿನಯಿಸಿದೆನೋ ವರ್ಣಿಸಿ ಹೇಳುವುದು ನನಗೇ ಕಷ್ಟ. ಒಟ್ಟಿನ ಮೇಲೆ ನನ್ನ ಅಭಿನಯ ಅದ್ಭುತವಾಗಿತ್ತು. ನಾಟಕ ಮುಗಿದ ಕೂಡಲೆ ಊರಿನ ದೊಡ್ಡ ಮನುಷ್ಯರು ನನಗೆ ಧನ್ಯವಾದಗಳನ್ನರ್ಪಿಸಲು ಬಂದರು. ಒಬ್ಬ ನನ್ನ ಗಂಟಲನ್ನು ಹೊಗಳಿದ; ಇನ್ನೊಬ್ಬ ನನ್ನ ಮೈಕಟ್ಟೂ ಅಂಗವಿನ್ಯಾಸವೂ ನಡಿಗೆಯ ಠೀವಿಯೂ ಗತ್ತು ಗಾಂಭೀರ್ಯಗಳೂ ಬಹು ಸೊಗಸಾಗಿದ್ದವು ಎಂದ; 'ನಮ್ಮಪ್ಪನ ಆಣೆ ಹೇಳ್ತೀನೆ. ನಮ್ಮ ಸೀಮೆಯಲ್ಲೇ ಇಂಥಾ ನಟ ಬೇರೆ ಯಾರೂ ಇಲ್ಲ. ಇದನ್ನು ಹೇಳುವವನು ನಾನು! ನಾಟಕದ ವಿಚಾರ ನನಗೂ ಸ್ವಲ್ಪ ಗೊತ್ತಿದೆ!' ಎಂದ, ಹಂದಿಪಾಳ್ಯದ ಹಿರಿಯರಲ್ಲಿ ಹಿರಿಯನಾದ ಪಂಚಾಯಿತಿ ಛೇರ್ಮನ್. ಒಬ್ಬ ಮುದುಕಿ ಇಷ್ಟು ಜನ ಗಂಡಸರ ನಡುವೆ ಹೇಗೋ ದಾರಿ ಬಿಡಿಸಿಕೊಂಡು ಬಂದು, 'ಏನು ಚೆನ್ನಾಗಿ ಮಾಡಿದಪ್ಪಾ! ನಿಜವಾಗಲೂ ಬೀಮನ್ನೇ ನೋಡಿದಂಗಾತು ನಿನ್ನ ನೋಡಿ' ಎಂದು ಮತ್ತೆ ಮತ್ತೆ ನನ್ನನ್ನೇ ವೀಕ್ಷಿಸುತ್ತಾ ತನ್ನ ಮೆಚ್ಚಿಗೆಯನ್ನು ಕಣ್ಣುಗಳಲ್ಲಿ ದೀರ್ಘಕಾಲ ಹೊರಸೂಸಿದಳು. ಇಷ್ಟು ಜನ ಇಷ್ಟು ಧಾರಾಳ ವಾಗಿ ಹೊಗಳುತ್ತಿರುವಾಗ ನನ್ನಲ್ಲಿ ನಿಜವಾಗಿಯೂ ಅತಿಶಯವಾದ ಸಾಮರ್ಥ್ಯ ಇರಲೇಬೇಕೆಂದು ನನಗನ್ನಿಸಿತು; ಹಿಂದೆಂದೂ ಇರದಿದ್ದ ಆತ್ಮವಿಶ್ವಾಸ ನನ್ನ ಮನಸ್ಸಿ ನಲ್ಲಿ ಪ್ರಬಲವಾಗಿ ಬೇರೂರಿತು. ನಾವು ಅದೇ ನಾಟಕವನ್ನೇ ಇನ್ನೊಂದು ಸಾರಿ ಆಡಬೇಕೆಂದು ಜನ ಅಪೇಕ್ಷಿಸಿದರು. ಆಡಿದೆವು. ನನಗೆ ಮೊದಲಿಗಿಂತಲೂ ಹೆಚ್ಚಾಗಿ ಜನಮನ್ನಣೆ ಲಭಿಸಿತು.

"ಆ ಊರಿಗೆ ಸುಮಾರು ಇಪ್ಪತ್ತೈದು ಮೈಲಿ ದೂರದಲ್ಲಿದ್ದ ಖದೀಮನಗರ ದಲ್ಲಿ ಒಂದು ಜಾತ್ರೆ ನಡೆಯಲಿತ್ತು. ಭಾರಿ ಜಾತ್ರೆ. ಸಾವಿರಾರು ಜನಗಳೂ ದನಗಳೂ ಸೇರಿ ಹತ್ತೆಂಟು ದಿನ ನಡೆಯುವಂತಹುದು. ಅಲ್ಲಿಗೆ ಹೋಗಬೇಕೆಂಬ ಉದ್ದೇಶದಿಂದ ನಾವು ಹಂದಿಪಾಳ್ಯವನ್ನು ಬಿಟ್ಟು ಹೊರಟೆವು. ಇಂದಿಗೂ, ಸ್ವಾಮಿ, ಕೃತಜ್ಞತೆ ಯಿಂದಲೂ ಗೌರವದಿಂದಲೂ ಪ್ರೇರಿತವಾದ ಕಣ್ಣೀರು ಸುರಿಸದೆ ನನಗೆ ಆ ಊರನ್ನು ನೆನೆಯುವುದಕ್ಕೆ ಕೂಡ ಆಗುವುದಿಲ್ಲ. ಒಳ್ಳೆ ಅಭಿರುಚಿ ಅಲ್ಲಿಯ ಜನಗಳದು. ಹೆಂಗಸರು ಗಂಡಸರು ಎಲ್ಲಾ ನಾಟಕಗಳ ವಿಚಾರದಲ್ಲಿ ನಟರ ವಿಚಾರದಲ್ಲಿ ಉತ್ತಮ ವಾದ ವಿಮರ್ಶೆಮಾಡುವ ಯೋಗ್ಯತೆಯುಳ್ಳವರು. ಪರಮಾತ್ಮ ಅವರಿಗೆಲ್ಲಾ ಆಯುರಾರೋಗ್ಯ ಐಶ್ವರ್ಯಗಳನ್ನು ಸದಾ ದಯಪಾಲಿಸಿ ಕಾಪಾಡಲಿ. ನಾನು ಆ ಊರಿಗೆ ಬಂದಾಗ ಇದ್ದ ನನ್ನ ಸ್ಥಿತಿಗೂ ಅಲ್ಲಿಂದ ಹೊರಟಾಗ ಇದ್ದ ಸ್ಥಿತಿಗೂ ಬಹಳ ವ್ಯತ್ಯಾಸವಿತ್ತು. ನಾನು ಆ ಊರನ್ನು ಪ್ರವೇಶಿಸಿದ್ದು ದೀಪ ಉರಿಸುವ ಕಸ

ಗುಡಿಸುವ ಸೇವಕನಂತೆ, ಅದನ್ನು ಬಿಟ್ಟು ಹೊರಟದ್ದು ಎಲ್ಲರ ಆದರಕ್ಕೂ ಪಾತ್ರನಾದ ಎಲ್ಲರ ಕಣ್ಣಿಗೂ ಹಬ್ಬವನ್ನುಂಟುಮಾಡುತ್ತಿದ್ದ ಶೂರನಂತೆ. ಪ್ರಪಂಚವೇ ಹೀಗೆ—ಈವತ್ತು ಸಣ್ಣದಾಗಿರುವುದು ನಾಳೆ ದೊಡ್ಡದಾಗುತ್ತದೆ. ಆ ವಿಷಯದ ಮೇಲೆ ನಾನು ಇನ್ನೂ ಬೇಕಾದಷ್ಟು ಹೇಳಬಲ್ಲೆ. ಅದೃಷ್ಟದ ಏರಿಳಿತಗಳನ್ನು ಕುರಿತು ಒಂದು ಅಮೂಲ್ಯವಾದ ಉಪನ್ಯಾಸವನ್ನೇ ಕೊಡಬಲ್ಲೆ. ಆದರೆ ಅದರಿಂದ ನನಗೂ ವ್ಯಥೆಯಾಗುತ್ತದೆ, ನಿಮಗೂ ವ್ಯಥೆಯಾಗುತ್ತದೆ ಆದ್ದರಿಂದ ಇಷ್ಟಕ್ಕೇ ಸಾಕುಮಾಡೋಣ.

"ನಾವು ಖದೀಮನಗರವನ್ನು ಸೇರಿದಾಗ ಆ ಜಾತ್ರೆ ಆಗಲೆ ಕೊನೆಯ ಹಂತಕ್ಕೆ ಬಂದಿತ್ತು. ಇದರಿಂದ ನಮ್ಮ ನಾಟಕಮಂಡಲಿಗೆ ಆದ ಆಶಾಭಂಗ ಅಷ್ಟಿಷ್ಟಲ್ಲ. ಆದರೂ ನಾವು ಎಷ್ಟು ಸಿಕ್ಕರೆ ಅಷ್ಟೇ ಆಯಿತು, ಅನುಮಾನಿಸಿದರೆ ಅದೂ ಹೋಗುತ್ತದೆ ಎಂದು ಅಲ್ಲಿ ಕೆಲವು ದಿನ ಬೀಡುಬಿಟ್ಟೆವು. ನಾನು ಇಲ್ಲೂ ಕೂಡ ಪ್ರಮುಖವಾದ ಪಾತ್ರಗಳನ್ನೇ ಆರಿಸಿಕೊಂಡು ಬಹು ಯಶಸ್ವಿಯಾಗಿ ಅಭಿನಯಿಸಿದೆ. ದಿನದಿನಕ್ಕೂ ವೃದ್ಧಿಹೊಂದುತ್ತಿದ್ದ ನನ್ನ ಕಲಾ ಪ್ರೌಢಿಮೆಯ ವ್ಯವಸಾಯ ಹೀಗೇ ಮುಂದುವರಿದಿದ್ದರೆ ನಾನು ನಮ್ಮ ದೇಶಕ್ಕೆಲ್ಲಾ ಭೂಷಣಪ್ರಾಯನಾದ ನಟನಾಗುತ್ತಿದ್ದೆನೆಂದು ಇಂದಿಗೂ ನನ್ನ ನಂಬಿಕೆ. ಆದರೆ ದುರದೃಷ್ಟದ ಚಳಿಗಾಳಿ ಬೀಸಿಬಂದು ನನ್ನ ಹಿರಿಮೆಯನ್ನು ಮೊಗ್ಗಿನ ದೆಸೆಯಲ್ಲೇ ನಾಶಮಾಡಿ ನನ್ನನ್ನು ಜನಸಾಮಾನ್ಯರ ಕೀಳುಮಟ್ಟಕ್ಕೆ ತಳ್ಳಿತು. ನಾನು ಮತ್ತೆ ಮತ್ತೆ ವಹಿಸಿದ ಪಾತ್ರ ವಿದೂಷಕನದು. ಒಂದೆರಡು ದಿನ ಏನು ಹೇಳಲಿ ನನ್ನ ಪ್ರಭಾವವನ್ನು ! ನಾನು ಬಾಯಿಬಿಟ್ಟರೆ ಸಾಕು ಹಳ್ಳಿಯ ಹೆಂಗಸರೆಲ್ಲಾ ಗೊಳ್ಳೆಂದು ನಗುತ್ತಿದ್ದರು. ನನ್ನ ಉಡಿಗೆ, ತೊಡಿಗೆ, ನಡಿಗೆ, ಮಾತು, ಮಂಗಾಟ ಒಂದೊಂದೂ ಇಡೀ ನಾಟಕ ಶಾಲೆಯನ್ನೇ ಹಾಸ್ಯದ ಕಡಲಿನಲ್ಲಿ ಮುಳುಗಿಸುತ್ತಿತ್ತು. ನಕ್ಕು ನಕ್ಕು ಎಷ್ಟೋ ಜನಕ್ಕೆ ಹೊಟ್ಟೆ ಹುಣ್ಣಾಗಿಹೋಯಿತು.

"ಹೀಗಿರುವಾಗ ಆ ಊರಿನ ನಿರುದ್ಯೋಗಪೋಷಕ ಸಮಾಜದವರು ನಾವು ತಮಗಾಗಿ ಒಂದು 'ಬೆನಿಫಿಟ್ ಷೋ' ಕೊಡಬೇಕೆಂದು ಕೇಳಿಕೊಂಡರು. ಅವರೂ ನಮ್ಮ ಹಾಗೆಯೇ ರಸಿಕರೆಂದೂ ಅಂಥವರಿಗೆ ಸಹಾಯ ನೀಡುವುದು ನಮ್ಮ ಧರ್ಮವೆಂದೂ ಬಗೆದು ನಾವು ಒಪ್ಪಿದೆವು. ಅವರು ನೂರಾರು ರೂಪಾಯಿಗಳ ಟಿಕೆಟ್ಟುಗಳನ್ನು ಹತ್ತಾರು ಮೈಲಿಗಳಷ್ಟು ಸುತ್ತಲೂ ಮಾರಿದರು. ನಮ್ಮ ನಾಟಕಕ್ಕೆ ಎಂದೂ ಇಲ್ಲದ ಜಾಹೀರು ದೊರೆತಿತ್ತು. ನಾಟಕ ಪ್ರದರ್ಶನದ ಅಧ್ಯಕ್ಷತೆಯನ್ನು ವಹಿಸಲು ಆ ಜಿಲ್ಲೆಯ ಹಿರಿಯ ಅಧಿಕಾರಿಗಳೊಬ್ಬರನ್ನು ಬರಮಾಡಿದ್ದರು. ಆತ

ಸತೀದ್ವಿತೀಯನಾಗಿ ದಯಮಾಡಿಸಿದ. ಅವರಿಗೆ—ಅದರಲ್ಲೂ ಆಕೆಗೆ—ಹಳ್ಳಿಯ ನಾಟಕಗಳೆಂದರೆ ತಿರಸ್ಕಾರ. ಪಟ್ಟಣಗಳಲ್ಲಿ ಸಿನೀಮಾಗಳನ್ನೂ ಸಿನೀಮಾ ತಾರೆಗಳನ್ನೂ ನೋಡಿ ನೋಡಿ ಪರಿಶುದ್ಧವಾದ ಕಲಾಭಿರುಚಿಯನ್ನು ಕೆಡಿಸಿಕೊಂಡಿದ್ದವರವರು. ಮೇಲಾಗಿ, ಬಲವಂತಕ್ಕೆ ಬಂದು ಕೂತಿದ್ದವರು. ಗಂಡಹೆಂಡಿರು ಸರ್ಕಾರದ ವೆಚ್ಚದಲ್ಲಿ ಹಾಗೇ ಒಂದೆರಡು ದಿನ ತಿರುಗಾಡಿಕೊಂಡು ಬರೋಣವೆಂದು 'ಸರ್ಕೀಟ್' ಹೊರಟಿದ್ದರೆ ಊರಿನ ಜನ ಅವರನ್ನು ಹಿಡಿದುಕೊಂಡು ಬಂದು ನಾಟಕಶಾಲೆಯಲ್ಲಿ ಸೆರೆ ಹಾಕಿದ್ದರು. ಹೋಗಲಿ, ಈ ನೆಪದಲ್ಲಿ ಸಂಸ್ಕೃತಿ ಪ್ರಸಾರವನ್ನು ಗ್ರಾಮಾಂತರ ಸೀಮೆಯಲ್ಲೆಲ್ಲಾ ನಡೆಸುತ್ತಿದ್ದೇನೆಂದು ಮೇಲಧಿಕಾರಿಗಳಿಗೂ ಮಂತ್ರಿಗಳಿಗೂ ವರದಿಮಾಡಬಹುದೆಂಬ ದೂರಾಲೋಚನೆಯಿಂದ ಸಾಹೇಬರು ಅಧ್ಯಕ್ಷತೆಯ ಭಾರವನ್ನು ಹೊರಲು 'ಅಸ್ತು' ಎಂದಿದ್ದರು. ಆದರೆ ಅಮ್ಮಾವರಿಗೆ ಒಂದು ಕಡೆ ನಿದ್ದೆ; ಇನ್ನೊಂದು ಕಡೆ ಜಂಭ; ಮತ್ತೊಂದು ಕಡೆ ಹತ್ತು ಜನರ ಮುಂದೆ ತನ್ನ ವೈಶಿಷ್ಟ್ಯವನ್ನು ಪ್ರದರ್ಶಿಸಬೇಕೆಂಬ ಸ್ತ್ರೀ ಸಹಜವಾದ ಚಾಪಲ್ಯ. ಇವೆಲ್ಲವುಗಳ ಫಲವಾಗಿ ನನಗೆ ಶನಿ ವಕ್ರಿಸಿತು. ಏಕೆಂದರೆ ನಾನು ಏನೇನೇ ಚಮತ್ಕಾರಗಳನ್ನು ಮಾಡಲಿ ಸಭಿಕರೆಲ್ಲಾ ಆಕೆಯ ಕಡೆ ನೋಡುತ್ತಿದ್ದರೇ ಹೊರತು ನಗುತ್ತಿರಲಿಲ್ಲ. ಆಕೆ ನಕ್ಕರೆ ತಾವೂ ನಗೋಣ, ಆಕೆಯ ಪ್ರತಿಕ್ರಿಯೆ ಏನೋ ಮೊದಲು ತಿಳಿಯೋಣ ಎಂದು ಎಲ್ಲರ ಕುತೂಹಲ. ಆ ಮಹರಾಯಿತಿಯೋ ಏನೇ ಆಗಲಿ ನಗಬಾರದು ಎಂದು ಮೊದಲೇ ನಿರ್ಧರಿಸಿಕೊಂಡು ಬಂದಿದ್ದವಳು. ಕೊನೆಯವರೆಗೂ ನಾನು ಎಷ್ಟೇ ಬಗೆಯಲ್ಲಿ ಪ್ರಯತ್ನಪಟ್ಟರೂ ನಗದೆ ಅಲ್ಲಾಡದೆ ಗೊಂಬೆಯ ಹಾಗೆ ಕೂತಿದ್ದು ಮಧ್ಯೆ ಎದ್ದುಹೋದಳು. ಅವಳ ಹಿಂದೆಯೇ ನನ್ನ ಕೀರ್ತಿ ಪ್ರತಿಷ್ಠೆಗಳೂ ಹಾರಿಹೋದವು. ಕೆಲಸವೂ ಕೈಬಿಟ್ಟಿತು.

"ಆಮೇಲೆ ನನ್ನ ಪಾಡು ನಾಯಿಯ ಹಾಗೆ ಅಲೆದಾಡುವುದಾಯಿತು. ಚಿಲ್ಲರೆ ಪಲ್ಲರೆ ನಾಟಕಮಂಡಲಿಗಳಲ್ಲಿ ಅವರು ಕೊಟ್ಟಷ್ಟು ಕಾಸಿಗೆ ಚಾಕರಿ ಮಾಡುವುದಾಗಿ ಒಪ್ಪಿಕೊಂಡು ಒದ್ದಾಡಿದೆ. ಈ ಬೆಂಗಳೂರಿನಲ್ಲೇ ಎರಡು ಮೂರು ಸಾರಿ ರಂಗಭೂಮಿಯ ಮೇಲೆ ಕಾಣಿಸಿಕೊಂಡಿದೇನೆ. ನೀವು ನನ್ನ ಮುಖವನ್ನು ಆಗ ಎಲ್ಲೋ ನೋಡಿರಬೇಕು. ನಾನು ತಮ್ಮಲ್ಲಿ ಆಗಲೇ ಅರಿಕೆಮಾಡಿಕೊಂಡ ಹಾಗೆ ಮೊನ್ನೆ ಬನ್ನೇರುಘಟ್ಟದ ಜಾತ್ರೆಯ ಸಮಯದಲ್ಲಿ ನಿರುದ್ಯೋಗ ಮತ್ತೆ ನನ್ನ ಬೆನ್ನಂಟಿಕೊಂಡಿತು. ಅಂದಿನಿಂದ ಹಸಿವು ಸಂಕಟಗಳು ನನ್ನ ಒಡನಾಡಿಗಳಾಗಿವೆ."

ಇಷ್ಟರಲ್ಲಿ ನಾವು ಉಪವನದ ಹೆಬ್ಬಾಗಿಲಿಗೆ ಬಂದೆವು, ಅವನು "ಸ್ವಾಮಿ, ತಮಗೆ ಹೊತ್ತಾಯಿತು, ದಯಮಾಡಿ" ಎಂದು ಯಾವ ಕಡೆಯೋ ನಿಮಿಷಮಾತ್ರ

ದಲ್ಲಿ ಕಣ್ಮರೆಯಾದ. ಅವನ ಸಾಹಸಗಳ ಚರಿತ್ರೆಯನ್ನು ಮನಸ್ಸಿನಲ್ಲೇ ತಿರುವಿ ಹಾಕುತ್ತಾ ನಾನು ನಿಧಾನವಾಗಿ ಹೆಜ್ಜೆಯಿಟ್ಟು ಮಧ್ಯರಾತ್ರಿಯ ಸುಮಾರಿಗೆ ಮನೆ ಸೇರಿದೆ. ಆಗಲೇ ಹೇಳಿದೆನಲ್ಲಾ ನಿಮಗೆ—ಮನೆಯವರೆಲ್ಲಾ ಊರಿಗೈದಿದ್ದರು ಎಂದು. ಆದ್ದರಿಂದ ಹೊತ್ತು ಎಷ್ಟಾಗಿದ್ದರೂ ಧೈರ್ಯವೇ!

ಸರಿಯೆ, ಹೊಟ್ಟೆಗಿಲ್ಲದ ಆ ತಿರುಕ ಇಷ್ಟು ಸೊಗಸಾದ ಶೈಲಿಯಲ್ಲಿ ಕಥಾ ನಿರೂಪಣೆ ಮಾಡಿದನೆ ಎಂದು ನಿಮಗೆ ಶಂಕೆ ಬಂದಿರಬಹುದು. ಅದಕ್ಕಾಗಿ ನಾನು ನಿಮ್ಮನ್ನು ವಂದಿಸಬೇಕು. ಏಕೆಂದರೆ ಈ ಲೇಖನದ ಶೈಲಿ ಚೆನ್ನಾಗಿದೆ ಎಂದು ನೀವು ಒಪ್ಪಿಕೊಂಡ ಹಾಗಾಯಿತಲ್ಲ! ಅಷ್ಟೇ ಸಾಕು ನನಗೆ! ಅವನು ಕಥೆ ಹೇಳಿದ ಶೈಲಿ ಹೇಗಿದ್ದರೇನು? ಅದನ್ನು ನಿಮ್ಮ ಉದ್ಧಾರಕ್ಕಾಗಿ ಬರೆದಿರುವವನು ನಾನಲ್ಲವೇ? ನನ್ನ ಶೈಲಿಯೇ ಅನ್ನಿ, ಏನು ನಿಮ್ಮ ಗಂಟು ಹೋಗುವುದು? ಅದೂ ಅಲ್ಲದೆ ದೀರ್ಘ ಕಾಲ ನಾಟಕಾಭ್ಯಾಸ ಮಾಡಿದ್ದುದರ ಫಲವಾಗಿ ಅವನಿಗೆ ಇಂತಹ ಪರಿಣಾಮಕಾರಿಯಾದ ವಾಕ್‌ಶಕ್ತಿ ಬಂದಿತ್ತೋ ಏನೋ! ಯಾರು ಬಲ್ಲರು, ಸ್ವಾಮಿ? ನೀವು ಇನ್ನೂ ಒಂದು ಆರೋಪಣೆ ಮಾಡಬಹುದು—ಗೋಲ್ಡ್‌ಸ್ಮಿತ್ ಕವಿಯ ಪ್ರಬಂಧವೊಂದರ ಛಾಯೆ ಈ ಲೇಖನದಲ್ಲಿದೆ ಎಂದು. ನಾನೇನು ಇಲ್ಲ ಅಂತೀನೇನು?

ಎಂ. ರಾಮರಾವ್

ಮಿದುಳಿನ ವಿದ್ಯುತ್ಕ್ರಿಯೆ*

ಈ ಶತಮಾನದ ಮೊದಲ ವರ್ಷಗಳಿಂದ ಇತರ ರಾಷ್ಟ್ರಗಳ ಜನಗಳಂತೆಯೆ ನಾವೂ ವಿದ್ಯುಚ್ಛಕ್ತಿಯನ್ನು ವರ್ಷ ವರ್ಷವೂ ಹೆಚ್ಚು ಹೆಚ್ಚು ಪ್ರಮಾಣದಲ್ಲಿ, ಹೆಚ್ಚು ಹೆಚ್ಚು ಕೆಲಸಗಳಿಗೆ ಬಳಸಿಕೊಳ್ಳುತ್ತ ಬಂದಿದೇವೆ. ವಿದ್ಯುಚ್ಛಕ್ತಿ ಶಾಸ್ತ್ರದ ಒಂದು ದೊಡ್ಡ ಉಪಶಾಖೆಯಾದ ಇಲೆಕ್ಟ್ರಾನಿಕ್ಸ್ ಅಂದರೆ ವಿದ್ಯುತ್ಕಣ ಶಾಸ್ತ್ರದ ಅಭ್ಯಾಸ ಆರಂಭವಾದಂದಿನಿಂದಂತಲೂ ಈ ವಿದ್ಯುತ್ಕಣ ಶಾಸ್ತ್ರದ ಸಾಧನೋಪಕರಣಗಳನ್ನು ನಿಯೋಜಿಸಿಕೊಳ್ಳದೆ ಇರುವ ಮಾನವಕ್ರಿಯೆಯೇ ಇಲ್ಲವೆಂದು ಹೇಳಿದರೆ ಉತ್ಪ್ರೇಕ್ಷೆಯಾಗುವುದಿಲ್ಲ.

ಇಲೆಕ್ಟ್ರಾನಿಕ್ಸ್ ಅಥವಾ ವಿದ್ಯುತ್ಕಣ ಶಾಸ್ತ್ರ ಹೀಗೆ ಸರ್ವವ್ಯಾಪಿಯಾಗಿರುವುದಕ್ಕೆ ಎರಡು ಮುಖ್ಯ ಕಾರಣಗಳಿವೆ. ಮೊದಲನೆಯದಾಗಿ ಪ್ರಪಂಚದಲ್ಲಾಗುತ್ತಿರುವ ಎಲ್ಲ ವಿಧವಾದ ವ್ಯಾಪಾರಗಳನ್ನೂ ಅಂದರೆ ಎಲ್ಲ ರೀತಿಯ ಬದಲಾವಣೆಗಳನ್ನೂ ಆ ಬದಲಾವಣೆಗಳಿಗನುಗುಣವಾಗಿ ಅವನ್ನು ವಿದ್ಯುತ್ಪ್ರವಾಹಗಳನ್ನಾಗಿ ಈ ಇಲೆಕ್ಟ್ರಾನಿಕ್ಸ್ ಸಾಧನಗಳು ಪರಿವರ್ತಿಸಬಲ್ಲವು, ಹಾಗೆ ಪರಿವರ್ತಿಸಿದ್ದನ್ನು ಅಳೆದು ಚಿತ್ರಿಸಬಲ್ಲವು. ಎರಡನೆಯದಾಗಿ ಅತ್ಯಲ್ಪ ಶಕ್ತಿವ್ಯಯದಿಂದ, ಕಾಲವಿಳಂಬ ಮಾಡದೆ ಈ ಕ್ರಿಯೆಗಳನ್ನು ಹತೋಟಿಯಲ್ಲಿಡಬಲ್ಲವು.

ಇಷ್ಟೆಲ್ಲ ಹೇಳಿದಮೇಲೆ ಮನುಷ್ಯನ ದೃಷ್ಟಿಪಾಟವವನ್ನು, ಶ್ರವಣಶಕ್ತಿಯನ್ನು, ಧ್ವನಿಗುಣಗಳನ್ನು, ಹೃದಯಸ್ಪಂದನದ ತಾಳಲಯಗಳನ್ನು, ರಕ್ತಪರಿಚಲನೆಯ ಏರಿಳಿತಗಳನ್ನು ಮತ್ತು ಇಂಥ ಇತರ ದೈಹಿಕ ವ್ಯಾಪಾರಗಳನ್ನು ಇಲೆಕ್ಟ್ರಾನಿಕ್ಸ್ ಯಂತ್ರಗಳಿಂದ ಅಳೆಯಬಹುದೆಂದು ತಿಳಿಸಿದರೆ ನಿಮಗೆ ಆಶ್ಚರ್ಯವಾಗಲಾರದು. ಆದರೆ ಇದರ ಜೊತೆಗೆ ಮಾನವನ ಮನೋವ್ಯಾಪಾರವನ್ನೂ, ಚಿತ್ತಪ್ರವೃತ್ತಿಗಳನ್ನೂ ಈ ಸಾಧನಗಳು ಸ್ವಲ್ಪಮಟ್ಟಿಗೆ ಚಿತ್ರಿಸಬಲ್ಲವು, ಹಾಗೂ ಅಳೆಯಬಲ್ಲವು ಎಂದರೆ ಆಶ್ಚರ್ಯವಾಗದೆ ಇರಲಾರದು. ಈ ದಿಕ್ಕಿನಲ್ಲಿ ವಿಜ್ಞಾನಿಗಳು ಇದುವರೆಗೆ ಎಷ್ಟು ದೂರ ಸಾಗಿದ್ದಾರೆ ಎಂಬುದನ್ನು ಸಂಕ್ಷೇಪವಾಗಿ ನಿಮಗೆ ತಿಳಿಸಬೇಕೆಂಬುದೇ ಈ ಸಂಜೆಯ ನನ್ನ ಉದ್ದೇಶ.

---

* ಆಲ್ ಇಂಡಿಯಾ ರೇಡಿಯೋ ಕೃಪೆಯಿಂದ.

ಪ್ರಾಣಿಗಳ ಜೀವಕ್ರಿಯೆಗಳೆಲ್ಲವುಗಳ ಹಿಂದೆಯೂ ಒಂದಲ್ಲ ಒಂದು ವಿಧವಾದ ವಿದ್ಯುತ್ಕ್ರಿಯೆ ಇದೆ ಎಂಬುದನ್ನು ಕೇಟನ್ ಎಂಬಾತ ೧೮೭೪ ರಲ್ಲಿ ಮೊಟ್ಟಮೊದಲು ಸ್ಥೂಲವಾಗಿ ತೋರಿಸಿದನು. ಆಮೇಲೆ ೧೮೯೦ ರಲ್ಲಿ ಬೆಕ್ ಎಂಬಾತ ನಾಯಿಯ ಮಿದುಳಿನಲ್ಲಿ ಸತತವಾಗಿ ವಿದ್ಯುಚ್ಛಕ್ತಿ ಉತ್ಪಾದನೆಯಾಗುತ್ತಿರುತ್ತದೆಯೇ ಅಲ್ಲದೆ, ನಾಯಿಯ ಕಣ್ಣುಗಳಿಗೆ ಬೀಳುವ ನೋಟ ಬದಲಾದಂತೆ, ಬೆಳಕಿನ ತೀಕ್ಷ್ಣತೆ ಹೆಚ್ಚುಕಡಮೆಯಾದಂತೆ, ಮಿದುಳಿನ ವಿದ್ಯುತ್ಕ್ರಿಯೆಯಲ್ಲಿಯೂ ಹೆಚ್ಚುಕಡಮೆಗಳು ಕಂಡುಬರುತ್ತವೆಂದು ತೋರಿಸಿದನು. ಆದರೆ ಈ ಪ್ರಯೋಗಗಳನ್ನು ಜರ್ಮನಿಯ ಕಾಫ್ಮನ್ ೧೯೧೨ ರಲ್ಲಿ ಪುನಃ ಸಮರ್ಥನೆ ಮಾಡುವವರೆಗೆ ಇವು ವೈದ್ಯರ ಮತ್ತು ಇತರ ವಿಜ್ಞಾನಿಗಳ ಗಮನಕ್ಕೆ ಬಂದಂತೆ ಕಾಣುವುದಿಲ್ಲ. ಅಲ್ಲಿಂದ ಹನ್ನೆರಡು ವರ್ಷಗಳು ಕಳೆದಮೇಲೆ ೧೯೨೪ ರಲ್ಲಿ ಬರ್ಗರ್ ಎಂಬ ಮತ್ತೊಬ್ಬ ಜರ್ಮನ್ ವೈದ್ಯಶಾಸ್ತ್ರಜ್ಞ ಮನುಷ್ಯನ ಮಿದುಳಿನ ವಿದ್ಯುತ್ಕ್ರಿಯೆಗಳನ್ನು ನಿರೂಪಿಸುವ ಸಾಹಸದ ಕೆಲಸಕ್ಕೆ ಕೈ ಹಾಕಿದನು. ಆರೇಳು ವರ್ಷಗಳ ಈತನ ನಿರಂತರ ಶ್ರಮದ ಪರಿಣಾಮವಾಗಿ ಮಾನವನ ಮಿದುಳಿನ ಹಲವಾರು ಚಿತ್ತಪ್ರವೃತ್ತಿಗಳನ್ನು ಪ್ರತಿಬಿಂಬಿಸುವ ನೂರಾರು ವಿದ್ಯುತ್ಕ್ರಿಯಾ ಚಿತ್ರನಿರೂಪಣಗಳು ಪ್ರಕಟವಾದುವು. ಆದರೆ ಈ ಚಿತ್ರ ನಿರೂಪಣಗಳನ್ನಾಗಲಿ, ಅವುಗಳಿಂದ ಬರ್ಗರ್ ಸಾಧಿಸಿದ ತೀರ್ಮಾನಗಳನ್ನಾಗಲಿ ಆಗಿನ ವೈದ್ಯ ವಿದ್ವಾಂಸರು ವಿಶ್ವಾಸದಿಂದ ಸ್ವಾಗತಿಸಲಿಲ್ಲ. ಇದಕ್ಕೆ ಎದೆಗುಂದದೆ ಬರ್ಗರ್ ತನ್ನ ಅನ್ವೇಷಣೆಗಳನ್ನು ಮುಂದುವರಿಸಿದನು; ಈತನ ಶ್ರಮಕ್ಕೆ ಮನ್ನಣೆ ೧೯೩೪ ರಲ್ಲಿ ದೊರೆಯಿತು.

ಆ ವರ್ಷ ಇಂಗ್ಲೆಂಡಿನ ಪ್ರಮುಖ ವೈದ್ಯಶಾಸ್ತ್ರಜ್ಞ ಏಡ್ರಿಯನ್, ಬರ್ಗರ್‌ನ ವಿದ್ಯುತ್ಕ್ರಿಯಾ ನಿರೂಪಣಗಳು ತೀರ ನಿರರ್ಥಕಗಳಲ್ಲ, ಅವುಗಳ ವ್ಯಾಸಂಗದಿಂದ ಮಾನವನ ಮಿದುಳು ರೋಗಗಳ ನಿಧಾನ, ಚಿಕಿತ್ಸೆಗಳಿಗೆ ಅಲ್ಪಸ್ವಲ್ಪ ಅನುಕೂಲ ವಾದೀತು; ಇಂಥ ಪ್ರಯೋಗಗಳನ್ನು ತಿರಸ್ಕರಿಸುವ ಮುನ್ನ ಅವುಗಳನ್ನೆ ಕೂಲಂಕಷವಾಗಿ ಪರೀಕ್ಷಿಸಬೇಕಾದದ್ದು ವೈದ್ಯವಿಜ್ಞಾನಿಗಳ ಕರ್ತವ್ಯ ಎಂಬ ತನ್ನ ಅಭಿಪ್ರಾಯವನ್ನು ಪ್ರಕಟಿಸಿ ಬರ್ಗರ್‌ನನ್ನು ಅಭಿನಂದಿಸಿದನು. ಅಂದಿನಿಂದ ಈ ಶಾಖೆ ಹಲವು ದಿಕ್ಕುಗಳಲ್ಲಿ ಬೆಳೆಯುತ್ತ ಬಂದಿದೆ.

ಮಿದುಳಿನ ವಿದ್ಯುತ್ಕ್ರಿಯೆಗಳನ್ನು ಹೇಗೆ ಚಿತ್ರಿಸುತ್ತಾರೆಂದು ತಿಳಿದುಕೊಳ್ಳಲು ಈಗ ಪ್ರಯತ್ನಿಸೋಣ. ಮಿದುಳು ಕೋಟ್ಯನುಕೋಟಿ ನರ್ವ್‌ಸೆಲ್‌ಗಳ ಅಂದರೆ ರಜ್ಜು ಕೋಶಗಳ ಮತ್ತು ಆ ಅಸಂಖ್ಯಾತ ರಜ್ಜುಕೋಶಗಳನ್ನು ಒಂದಕ್ಕೊಂದನ್ನು ಪರಸ್ಪರ ಕೂಡಿಸಿರುವ ಅಸಂಖ್ಯಾತ ರಜ್ಜುಗಳ ಅಥವಾ ನರಗಳ ವ್ಯವಸ್ಥೆ. ಪ್ರತಿಯೊಂದು

ರಜ್ಜುಕೋಶವೂ ಒಂದು ಪುಟ್ಟ ವಿದ್ಯುತ್ಕೋಶ, ಅಂದರೆ ನಾವು ಟಾರ್ಚ್ ಲೈಟಿನಲ್ಲಿ ಉಪಯೋಗಿಸುವಂಥ ಸೆಲ್. ಟಾರ್ಚ್ ಲೈಟಿನ ವಿದ್ಯುತ್ಕೋಶಕ್ಕೂ, ಮಿದುಳಿನ ರಜ್ಜು ಕೋಶಕ್ಕೂ ಇರುವ ವ್ಯತ್ಯಾಸ ನಮ್ಮ ಈಗಿನ ಸಂಕುಚಿತ ದೃಷ್ಟಿಯಿಂದ ಇಷ್ಟೇ: ಟಾರ್ಚ್ ಲೈಟಿನ ವಿದ್ಯುತ್ಕೋಶದ ಶಕ್ತಿ ಸುಮಾರು ಒಂದೂವರೆ ವೋಲ್ಟ್, ರಜ್ಜು ಕೋಶದ ಶಕ್ತಿ ಒಂದು ವೋಲ್ಟಿನ ಹಲವಾರು ಲಕ್ಷಾಂಶಗಳಷ್ಟು ಮಾತ್ರ. ಇನ್ನೊಂದು ವ್ಯತ್ಯಾಸವೂ ಇದೆ. ಟಾರ್ಚ್ ಲೈಟಿನ ವಿದ್ಯುಚ್ಛಕ್ತಿ ಹೆಚ್ಚು ಕಡಮೆ ಏಕರೀತಿಯಾಗಿರುತ್ತದೆ, ರಜ್ಜುಕೋಶದ ವಿದ್ಯುತ್ತು ಚಂಚಲ, ರಜ್ಜುಕೋಶ ಜೀವಂತ ವಾಗಿರುವಷ್ಟು ಕಾಲ ಅದರ ವಿದ್ಯುತ್ತು ವಿರಾಮವಿಲ್ಲದೆ ಏರಿ ಇಳಿದು, ಇಳಿದು ಏರುತ್ತಿರುತ್ತದೆ.

ಈಗ ತಿರುಪುಹಿಡಿಗಳಿರುವ ಬೆಳ್ಳಿಯ ಎರಡು ಬಿಲ್ಲೆಗಳನ್ನು ಒಬ್ಬ ಮನುಷ್ಯನ ತಲೆಯ ಮೇಲೆ ಬಿಗಿಸಿಟ್ಟರೆ ಆ ಬಿಲ್ಲೆಗಳ ಕೆಳಗಿರುವ ಮಿದುಳಿನ ಪ್ರಾಂತದ ರಜ್ಜು ಕೋಶಗಳು ಉತ್ಪತ್ತಿಮಾಡುವ ವಿದ್ಯುಚ್ಛಕ್ತಿಯು ಬಿಲ್ಲೆಗಳನ್ನು ಪ್ರವೇಶಿಸುತ್ತದೆ. ಆದರೆ ಈಗತಾನೆ ತಿಳಿಸಿರುವಂತೆ ಈ ವಿದ್ಯುತ್ತು ಅತಿ ಕ್ಷೀಣಶಕ್ತಿಯದಾದ್ದರಿಂದ ಅದನ್ನು ವಿದ್ಯುದ್ವರ್ಧಕಗಳಿಂದ ವರ್ಧಿಸಬೇಕಾದದ್ದು ಅತ್ಯವಶ್ಯ. ಈ ವಿದ್ಯುದ್ವರ್ಧಕ ಗಳು ವಿಶೇಷ ರೀತಿಯವಾಗಿರಬೇಕು. ಏಕೆಂದರೆ ಇವುಗಳ ವರ್ಧಕ ಸಾಮರ್ಥ್ಯ ಹತ್ತಿಪ್ಪತ್ತು ಲಕ್ಷಗಳಷ್ಟಾದರೂ ಇರಬೇಕಾಗುತ್ತದೆ. ಇದಕ್ಕಿಂತ ಮುಖ್ಯವಾಗಿ ರಜ್ಜುಕೋಶಗಳು ಉತ್ಪತ್ತಿಸುವ ವಿದ್ಯುತ್ತಿನ ಏರಿಳಿತಗಳ ರೂಪವನ್ನು ಕಿಂಚಿತ್ತೂ ವಿರೂಪಮಾಡದೆ ಇವು ಈ ಅಗಾಧ ಪ್ರಮಾಣದಲ್ಲಿ ವರ್ಧಿಸಬೇಕು. ಹೀಗೆ ವರ್ಧನಗೊಂಡ ಪ್ರವಾಹವನ್ನು ಪ್ರವಾಹಮಾಪಕವೊಂದರ ತುದಿಗಳಿಗೆ ಹರಿಸಿದರೆ, ಆಗ ಮಾಪಕದ ಮುಳ್ಳು ಪ್ರವಾಹಕ್ಕನುಗುಣವಾಗಿ ಕಂಪಿಸುತ್ತದೆ. ಮುಳ್ಳಿನ ಬದಲು ಒಂದು ಲೇಖನಿಯನ್ನು ಪ್ರವಾಹಮಾಪಕಕ್ಕೆ ಜೋಡಿಸಿದರೆ, ಮತ್ತು ಲೇಖನಿಯ ಕೆಳಗೆ ಒಂದು ಕಾಗದದ ಹಾಳೆಯನ್ನು ಸಮವೇಗದಲ್ಲಿ ಸರಿಯುವಂತೆ ಏರ್ಪಡಿಸಿದರೆ ಲೇಖನಿ ರಜ್ಜುಕೋಶಗಳ ವಿದ್ಯುತ್ತಿನ ವೃದ್ಧಿಕ್ಷಯಗಳ ರೂಪವನ್ನು ಕಾಗದದ ಮೇಲೆ ಬರೆಯುತ್ತದೆ.

ಹೀಗೆ ಬರೆದ ರೇಖಾಚಿತ್ರ ಎರಡು ಬಿಲ್ಲೆಗಳ ಸಮೀಪದಲ್ಲಿರುವ ಮಿದುಳಿನ ಭಾಗ ಮಾತ್ರದ ವಿದ್ಯುತ್ಕ್ರಿಯಾ ಚಿತ್ರ. ಮಿದುಳಿನ ಎಲ್ಲ ಭಾಗಗಳ ವಿದ್ಯುತ್ಕ್ರಿಯಾ ಚಿತ್ರ ನಮಗೆ ಬೇಕಾದರೆ ತಲೆಯಮೇಲೆಲ್ಲ ನಾವು ಇಪ್ಪತ್ತು ಮುವ್ವತ್ತು ಬೆಳ್ಳಿಯ ಬಿಲ್ಲೆಗಳ ಜಾಲವನ್ನು ಬಂಧಿಸಿ ಅವುಗಳಲ್ಲೆರಡೆರಡನ್ನು ಒಂದೊಂದು ವಿದ್ಯುದ್ವರ್ಧಕಕ್ಕೆ ಸೇರಿಸಿ, ಆ ವಿದ್ಯುದ್ವರ್ಧಕಗಳೊಂದೊಂದಕ್ಕೂ ಬೇರೆ ಬೇರೆ ಲೇಖನಿಗಳನ್ನು ಜೋಡಿಸ


ಬೇಕು. ಆಗ ಮಿದುಳಿನ ವಿವಿಧ ಭಾಗಗಳ ವಿದ್ಯುತ್ಕ್ರಿಯಾ ಚಿತ್ರಗಳನ್ನು ಲೇಖನಿಗಳು ಏಕಕಾಲದಲ್ಲಿಯೆ, ಸರಿಯುತ್ತಿರುವ ಹಾಳೆಯ ಮೇಲೆ ಬರೆಯುತ್ತವೆ. ಇಂಥ ಯಂತ್ರಕ್ಕೆ ಇಲೆಕ್ಟ್ರೋ ಎನ್‌ಸೆಫಲೋಗ್ರಾಫ್ ಅಂದರೆ ವಿದ್ಯುನ್ಮಸ್ತಿಷ್ಕ ಲೇಖಕ ಎಂದು ಹೆಸರು. ಈ ಯಂತ್ರ ಬರೆಯುವ ರೇಖಾಚಿತ್ರ ವ್ಯೂಹಕ್ಕೆ ಇಲೆಕ್ಟ್ರೋ ಎನ್‌ಸೆಫಲೋಗ್ರಾಂ ಅಂದರೆ ವಿದ್ಯುನ್ಮಸ್ತಿಷ್ಕ ಲೇಖನ ಎಂದು ಹೆಸರು. ಈ ಎರಡು ಹೆಸರುಗಳೂ ನಾಲಗೆಯನ್ನು ತೊಡರಿಸುವಂಥವೇ ಆದ್ದರಿಂದ ಎರಡನ್ನೂ ಸಂಕ್ಷೇಪವಾಗಿ ಇ. ಇ. ಜಿ. ಅಥವಾ ವಿಮಲೇ ಎಂಬ ಒಂದೇ ಸಂಕೇತನಾಮದಿಂದ ಕರೆಯುವುದು ರೂಢಿಯಾಗಿದೆ.

ಈಗಿನ ಕಾಲದಲ್ಲಿ ಎಂಟಕ್ಕಿಂತ ಕಡಮೆ ಸಂಖ್ಯೆಯ ವರ್ಧಕಗಳಿರುವ ವಿಮಲೆಗಳನ್ನು ಬಳಸುತ್ತಿರುವವರು ಅಪರೂಪ. ಇಂಥ ವಿಮಲೆಗಳನ್ನು ಎಂಟು ನಾಲೆಗಳ ವಿಮಲೆ ಎಂದು ಕರೆಯುತ್ತಾರೆ (ಚಿತ್ರ ೧). ಹನ್ನೆರಡು ಹದಿನಾರು ನಾಲೆಗಳ ವಿಮಲೆಗಳೂ ಉಪಯೋಗದಲ್ಲಿವೆ. ಈ ಯಂತ್ರಗಳು ಚಿತ್ರಿಸುವುದು ಅಕ್ಷರಶಃ ನಮ್ಮ ಹಣೆಯ ಬರಹವನ್ನು.


ಕಣ್ಣುಮುಚ್ಚಿಕೊಂಡು ನಿಶ್ಚಿಂತನಾಗಿ ಮಲಗಿರುವ ಮನುಷ್ಯನೊಬ್ಬನ ತಲೆಯ ಹಿಂಭಾಗದಿಂದ ಹುಟ್ಟಿಬಂದ ವಿದ್ಯುನ್ಮಸ್ತಿಷ್ಕ ಲೇಖನಗಳು ಸಾಮಾನ್ಯವಾಗಿ ಸುಸ್ಪಷ್ಟಾಕಾರದ ಅಲೆಗಳ ರೂಪ ತಾಳುತ್ತವೆ. ಇವುಗಳ ಆವರ್ತಸಂಖ್ಯೆ ಸೆಕಂಡೊಂದಕ್ಕೆ ಹತ್ತರ ಸುಮಾರಿನಲ್ಲಿರುತ್ತದೆ. ಕಣ್ಣುಮುಚ್ಚಿಕೊಂಡಿರುವ ಮನುಷ್ಯ ಕಣ್ಣು ತೆರೆದ ಕೂಡಲೆ ಅಥವಾ ಮುಚ್ಚಿಕೊಂಡಿದ್ದರೂ ಲೆಕ್ಕ ಮಾಡಲು ತೊಡಗಿದರೆ, ಇಲ್ಲವೆ ಯಾವ ವಿಷಯವಾಗಿಯಾಗಲಿ ಚಿಂತನೆ ಮಾಡತೊಡಗಿದರೆ, ಈ ಅಲೆಗಳು ಮಾಯವಾಗಿ ಅವುಗಳ ಸ್ಥಾನದಲ್ಲಿ ಸೆಕಂಡಿಗೆ ೨೦-೨೫ರ ಅನಿರ್ದಿಷ್ಟಾಕಾರದ ಅಲೆಗಳು ರೂಪುಗೊಳ್ಳುತ್ತವೆ.

ತಲೆಯ ಹಿಂಭಾಗದಲ್ಲಿರುವುದು ನಮ್ಮ ಮಿದುಳಿನ ದೃಷ್ಟಿಕೇಂದ್ರ. ನಾವು ಕಣ್ಣುಮುಚ್ಚಿಕೊಂಡು ಶಾಂತಚಿತ್ತರಾಗಿರುವಾಗ ದೃಷ್ಟಿಕೇಂದ್ರದ ರಜ್ಜುಕೋಶಗಳು ನಮ್ಮ ಕಣ್ಣುಗಳು ನೋಡಬೇಕಾದದ್ದು ಏನನ್ನು ಎಂಬುದನ್ನು ಹುಡುಕುತ್ತ ಇರುತ್ತವೆ. ಹೀಗೆ ಹುಡುಕುವಾಗ ಸೆಕಂಡಿಗೆ ಹತ್ತು ತಾಳದ ಗೀತವನ್ನು ಹಾಡುತ್ತಿರುತ್ತವೆ. ಕಣ್ಣಿಗೆ ಯಾವುದಾದರೊಂದು ನೋಟ ಸಿಕ್ಕಿದ ಕೂಡಲೆ ಹುಡುಕುವುದು ನಿಂತುಹೋಗಿ ಮನಸ್ಸು ನೋಟದಲ್ಲಿ ನಿಲ್ಲುತ್ತದೆ. ಹತ್ತು ತಾಳದ ಗೀತ ಅಡಗಿಹೋಗುತ್ತದೆ. ಆದ್ದರಿಂದ ಈ ದಶತಾಳ ಗೀತವನ್ನು[1] ದೃಷ್ಟ್ಯಾಕಾಂಕ್ಷೆಯ ಗೀತ ಎಂದು ಕರೆಯಬಹುದು.

[1] alpha rhythm




[ಚಿತ್ರ ೧. ಎಂಟು ನಾಲೆಗಳ ವಿಮಲೆ (ಇ. ಇ. ಜಿ.)]



A

ಚಿತ್ರ ೨—A. ಸಾಮಾನ್ಯ ಮನುಷ್ಯನೊಬ್ಬನ ವಿದ್ಯುನ್ಮಸ್ತಿಷ್ಕ ಲೇಖನ.



B


B. ಶ್ರವಣ ವಿಷಯಜ್ಞನೊಬ್ಬನ ವಿಮಲೆ.

ಎರಡು ಲೇಖನಗಳ ಎಡ ಪಕ್ಕದಲ್ಲಿಯೂ ಎಂಟು ನಾಲೆಗಳು ತಲೆಯ ಯಾವ ಎಂಟು ಪ್ರದೇಶಗಳಲ್ಲಿ ಜರುಗುತ್ತಿರುವ ವಿದ್ಯುತ್ಕ್ರಿಯೆಗಳ ಚಿತ್ರಗಳನ್ನು ಬರೆದಿವೆಯೆಂದು ಆಯಾ ೧, ೨, ೩, ೪, ೫, ೬, ೭, ೮ ಸಂಖ್ಯೆಗಳು ತಿಳಿಸುತ್ತವೆ. ಎಂಟು ಲೇಖನಗಳ ಮೇಲಿನ ಮತ್ತು ಕೆಳಗಿನ ರೇಖೆಗಳಲ್ಲಿರುವ ಗುಬುಟುಗಳು ಸೆಕೆಂಡುಗಳನ್ನು ಸೂಚಿಸುತ್ತವೆ.

A ಚಿತ್ರದಲ್ಲಿ O ಎಂದು ಗುರುತಿಸಿರುವ ಕ್ಷಣದಿಂದ ವ್ಯಕ್ತಿ ಕಣ್ಣು ತೆರೆದಿದ್ದಾನೆ. ೪ ರಿಂದ ೮ ನಾಲೆಗಳಲ್ಲಿ O ವರೆಗೆ ದಶತಾಳ ಗೀತ ಸೂಚಿತವಾಗಿದ್ದು, ಅಲ್ಲಿಂದ ಮುಂದಕ್ಕೆ ಮಾಯವಾಗಿದೆ ಎಂಬುದನ್ನು ಗಮನಿಸಬೇಕು.


B ಚಿತ್ರದಲ್ಲಿ S ಎಂದು ಗುರುತಿಸಿರುವ ಕ್ಷಣದಲ್ಲಿ ಅದುವರೆಗೂ ಕಣ್ಣು ತೆರೆದಿದ್ದವನು ಕಣ್ಣು ಮುಚ್ಚಿದ್ದಾನೆ. ಆದರೆ ದಶತಾಳ ಗೀತಕ್ಕೆ ಯಾವ ಚ್ಯುತಿಯೂ ಬಂದಿಲ್ಲ.

ಬೆಂಗಳೂರಿನ ಆಲ್ ಇಂಡಿಯ ಇನ್‌ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್ ಡೈರೆಕ್ಟರವರ ಕೃಪೆಯಿಂದ



A


ಚಿತ್ರ ೩—A. ದೃಷ್ಟಿ ವಿಷಯಜ್ಞನೊಬ್ಬನ ವಿಮಲೆ. ಇಲ್ಲಿಯೂ O ಕ್ಷಣದಲ್ಲಿ ವ್ಯಕ್ತಿ ಕಣ್ಣು ತೆರೆದಿದ್ದಾನೆ. ಆದರೆ O ಗೆ ಮುಂಚೆಯೂ ದಶತಾಳಗೀತ ಇಲ್ಲ. ಆಮೇಲೂ ಇಲ್ಲ.



B


B. ದೀರ್ಘ ನಿಶ್ವಾಸೋಚ್ಛ್ವಾಸಗಳ ಪರಿಣಾಮವಾಗಿ ತ್ರಿತಾಳ ಗೀತ ಹುಟ್ಟಿಬಂದಿರುವುದನ್ನು ಈ ಲೇಖನ ತೋರಿಸುತ್ತದೆ.

ಬೆಂಗಳೂರಿನ ಆಲ್ ಇಂಡಿಯ ಇನ್‌ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್ ಡೈರೆಕ್ಟರವರ ಕೃಪೆಯಿಂದ



A

ಚಿತ್ರ ೪—A. ನಿದ್ರಿಸುತ್ತಿರುವವನೊಬ್ಬನ ವಿಮಲೆ.



B

B. ದ್ಯುತಿಜನಿತ ಅಪಸ್ಮಾರ ರೋಗಿಯೊಬ್ಬನ ವಿಮಲೆ. ಇಲ್ಲಿ ಎಂಟನೆಯ ನಾಲೆ ವ್ಯಕ್ತಿಯ ಕಣ್ಣ ಮೇಲೆ ಬೀಳುತ್ತಿರುವ ದ್ಯುತಿ ಸ್ಪಂದನವನ್ನು ಗುರುತಿಸಿದೆ. ಉಳಿದ ಏಳು ನಾಲೆಗಳಲ್ಲಿಯೂ ಚಿತ್ರಿತವಾಗಿರುವ ದಶತಾಳ ಗೀತ ದ್ಯುತಿಸ್ಪಂದನದ ಪರಿಣಾಮವಾಗಿ ಗಲಭೆಯಾಗಿ ಮಾರ್ಪಾಟಾಗಿರುವುದನ್ನು ಗಮನಿಸಬೇಕು.

ಬೆಂಗಳೂರಿನ ಆಲ್ ಇಂಡಿಯ ಇನ್‌ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್ ಡೈರೆಕ್ಟರವರ ಕೃಪೆಯಿಂದ

ಆದರೆ ಕೆಲವರು ಕಣ್ಣು ಮುಚ್ಚಿಕೊಂಡಿರಲಿ, ತೆರೆದಿರಲಿ, ಈ ದಶತಾಳಗೀತ ಅವರ ವಿದ್ಯುನ್ಮಸ್ತಿಷ್ಕ ಲೇಖನದಲ್ಲಿ ರೂಪುಗೊಳ್ಳುವುದೇ ಇಲ್ಲ. ಇಂಥವರು ತಮ್ಮ ಮನಸ್ಸಿನಲ್ಲಿಯೇ ಯಾವಾಗಲೂ ಚಿತ್ರಗಳನ್ನು ಕಾಣುತ್ತಿರುತ್ತಾರೆ. ಇವರು ಯಾವ ಮಾತನ್ನು ಕೇಳಿದರೂ ಅದರ ಚಿತ್ರ ಇವರ ಕಣ್ಣ ಮುಂದೆ ನಿಂತಂತಿರುತ್ತದೆ. ಇಂಥವರನ್ನು ದೃಷ್ಟಿ ವಿಷಯಜ್ಞರು ಎಂದು ಕರೆಯಬಹುದು.

ಇದಕ್ಕೆ ಪ್ರತಿಯಾಗಿ ಮತ್ತೆ ಕೆಲವರ ದಶತಾಳಗೀತ ಅಳಿಸಿಹೋಗುವುದೇ ಇಲ್ಲ. ಕಣ್ಣು ತೆರೆದಿದ್ದಾಗ, ವಿಚಾರಪರರಾಗಿದ್ದಾಗ ಕೂಡ ಇವರ ರಜ್ಜುಕೋಶಗಳು ಸೆಕಂಡಿಗೆ ಹತ್ತುತಾಳ ಹಾಕುತ್ತಲೇ ಇರುತ್ತವೆ. ಇವರ ದೃಷ್ಟ್ಯಾಕಾಂಕ್ಷೆಗೆ ವಿರಾಮವೇ ಇಲ್ಲ. ಇಂಥವರನ್ನು ಶ್ರವಣ ವಿಷಯಜ್ಞರು ಅಥವಾ ಸ್ಪರ್ಶ ವಿಷಯಜ್ಞರು ಎಂದು ಕರೆಯಬಹುದು. ಸಾಮಾನ್ಯ ಜನಸಮುದಾಯದಲ್ಲಿ ನೂರಕ್ಕೆ ಇಪ್ಪತ್ತು ಮಂದಿ ದೃಷ್ಟಿ ವಿಷಯಜ್ಞರು, ಇಪ್ಪತ್ತು ಮಂದಿ ಶ್ರವಣ ವಿಷಯಜ್ಞರು ಇರುವುದಾಗಿ ಕಂಡು ಬಂದಿದೆ. ಚಿತ್ರ ೨, ೩ ರಲ್ಲಿ ಈ ಮೂರು ವರ್ಗದ ಜನಗಳ ವಿಮಲೆಗಳನ್ನು ತೋರಿಸಿದೆ.

ಕೆಲವರ ಗಂಡಸ್ಥಳದಿಂದ ಹುಟ್ಟಿಬಂದ ವಿದ್ಯುನ್ಮಸ್ತಿಷ್ಕ ಲೇಖನದಲ್ಲಿ ಸೆಕಂಡಿಗೆ ಐದಾರರ ಸಂಖ್ಯೆಯ ಅಲೆಗಳು ಒಂದೊಂದು ಸಲ ಕಾಣಿಸಿಕೊಳ್ಳುತ್ತವೆ. ಇವರು ಭಾವೋದ್ರಿಕ್ತರಾದಾಗ, ಇವರಿಗೆ ಸಿಟ್ಟು ಬಂದಾಗ ಈ ಐದು ತಾಳದ ಗೀತ ಸಾಮಾನ್ಯವಾಗಿ ಹೊರಡುತ್ತದೆ. ಇವರು ಸಮಾಧಾನರಾದಾಗ ಈ ಗೀತ ಮಾಯವಾಗುತ್ತದೆ. ಆದ್ದರಿಂದ ಪಂಚತಾಳ ಗೀತ[2] ಸುಖಾಕಾಂಕ್ಷೆಯ ಗೀತ. ಜಿತೇಂದ್ರಿಯನ ಗಂಡಸ್ಥಳ ಪಂಚತಾಳ ಗೀತವನ್ನು ಎಂದೆಂದೂ ಹಾಡುವುದಿಲ್ಲ.

ಮತ್ತೆ ಕೆಲವರಲ್ಲಿ ಆಗಾಗ್ಗೆ ಸೆಕೆಂಡಿಗೆ ಮೂರರ ಸುಮಾರಿನ ಮಂದ್ರ ತರಂಗಗಳು ಕಾಣಿಸಿಕೊಳ್ಳುತ್ತವೆ. ಇಂಥವರು ಅಪಸ್ಮಾರ ರೋಗಿಗಳು, ಕಡೆಯ ಪಕ್ಷ ಸುಪ್ತ ಅಪಸ್ಮಾರ ರೋಗಿಗಳಾದರೂ ಆಗಿರುತ್ತಾರೆ. ಮೂರುತಾಳದ ಗೀತ ರಜ್ಜುಕೋಶಗಳ ಅವನತ ಸ್ಥಿತಿಯನ್ನು, ಅನಾರೋಗ್ಯ ಸ್ಥಿತಿಯನ್ನು ಸೂಚಿಸುತ್ತದೆ. ಎರಡು ಮೂರು ವರ್ಷಗಳೊಳಗಿನ ಮಕ್ಕಳ ಮತ್ತು ಪೂರ್ಣ ನಿದ್ರಾವಸ್ಥೆಯಲ್ಲಿರುವ ಆರೋಗ್ಯವಂತರ ವಿದ್ಯುನ್ಮಸ್ತಿಷ್ಕ ಲೇಖನಗಳಲ್ಲಿಯೂ ಮೂರರ ಅಲೆಗಳು ಕಾಣುತ್ತವೆ. ಒಟ್ಟಿನಲ್ಲಿ ತ್ರಿತಾಳ ಗೀತೆಯನ್ನು[3] ಮರಣಗೀತೆ ಅಥವಾ ಲಯಗೀತೆ ಎಂದು ಕರೆಯಬಹುದು.

ಈ ವಿದ್ಯುದ್ರೂಪಗಳನ್ನು ದಶತಾಳ ಗೀತೆ, ಪಂಚತಾಳ ಗೀತೆ, ತ್ರಿತಾಳ ಗೀತೆ ಎಂದು ಕರೆದಿರುವುದು ಸಂಪೂರ್ಣವಾಗಿ ಆಲಂಕಾರಿಕ ದೃಷ್ಟಿಯಿಂದಲ್ಲ. ಏಕೆಂದರೆ

---

[2] theta rhythm [3] delta rhythm

ವಿಮಲೆಯ ವಿದ್ಯುದ್ವರ್ಧಕದಿಂದ ಹೊರಬಿದ್ದ ವಿದ್ಯುತ್ಪ್ರವಾಹವನ್ನು ಪ್ರವಾಹ ಮಾಪಕದಲ್ಲಿ ಹರಿಯಿಸುವುದರ ಬದಲು ಲೌಡ್ ಸ್ಪೀಕರ್‌ನಲ್ಲಿ ಅಥವಾ ಪ್ರಬಲ ವಾಚಿಯಲ್ಲಿ ಹರಿಯಿಸಿದರೆ ಈ ಗೀತಗಳು ನಮ್ಮ ಕಿವಿಗಳಿಗೆ ಹತ್ತು, ಐದು, ಮೂರು ತಾಳಗಳಾಗಿ ಅಸಂದಿಗ್ಧವಾಗಿ ಕೇಳಬರುತ್ತವೆ.

ಸಾಮಾನ್ಯ ಸ್ಥಿತಿಯಲ್ಲಿರುವಾಗ ಜನಗಳ ವಿಮಲೆಗಳನ್ನು ಬರೆಸುವುದರ ಜೊತೆಗೆ ಅವರ ದೃಷ್ಟಿಕೇಂದ್ರಗಳನ್ನೋ, ಶ್ರವಣಕೇಂದ್ರಗಳನ್ನೋ ವಿಶೇಷವಾಗಿ ಉದ್ದೀಪನ ಗೊಳಿಸಿ, ಇಲ್ಲವೇ ದೀರ್ಘ ಉಚ್ಛ್ವಾಸ ನಿಃಶ್ವಾಸಗಳಿಂದ ಅವರನ್ನು ಉದ್ದೀಪನ ಗೊಳಿಸಿ ವಿಮಲೆಗಳನ್ನು ಬರೆಸಿದರೆ ಅವರ ವ್ಯಕ್ತಿತ್ವ ಮತ್ತಷ್ಟು ಸ್ಪಷ್ಟವಾಗಿ ಹೊರ ಬೀಳುತ್ತದೆ. ಬಹುಜನರ ಲೇಖನಗಳು ಹೀಗೆ ಉದ್ದೀಪನಗೊಂಡಾಗಲೂ ಏನು ಬದಲಾವಣೆಯನ್ನೂ ತೋರುವುದಿಲ್ಲ. ಆದರೆ ಕೆಲವರು ಎಲ್ಲ ವಿಧದಲ್ಲಿಯೂ ಆರೋಗ್ಯ ವಂತರಾಗಿಯೇ ಕಂಡರೂ, ಅವರ ಕಣ್ಣ ಮೇಲೆ ಆವರ್ತವಾಗಿ ಬೆಳಕು, ನೆರಳು, ಬೆಳಕು, ನೆರಳುಗಳು ಒಂದು ಗೊತ್ತಾದ ತಾಳದಲ್ಲಿ—ಸಾಮಾನ್ಯವಾಗಿ ದಶತಾಳದಲ್ಲಿ—ಬಿದ್ದಾಗ, ಅವರ ವಿದ್ಯುನ್ಮಸ್ತಿಷ್ಕ ಲೇಖನ ಒಂದು ದೊಡ್ಡ ತಳಮಳವನ್ನೇ, ಬಿರು ಗಾಳಿಯನ್ನೇ ಬರೆಯುತ್ತದೆ (ಚಿತ್ರ ೪). ಇಂಥವರು ದ್ಯುತಿಜನಿತ ಅಪಸ್ಮಾರ ರೋಗಿಗಳು[4]. ಇವರು ದಟ್ಟವಾದ ಗಿಡಮರಗಳಿರುವ ರಸ್ತೆಯಲ್ಲಿ ವಾಹನಗಳಲ್ಲಿ ವೇಗವಾಗಿ ಹೋಗುತ್ತಿರುವಾಗ ಸೂರ್ಯನ ಬೆಳಕು ಮರಗಳ ಎಲೆಗಳ ಸಂದುಗಳಿಂದ ಆವರ್ತವಾಗಿ ಇವರ ಕಣ್ಣ ಮೇಲೆ ಬೀಳುವುದು ಸಂಭವ. ಈ ಆವರ್ತಕಾಂತಿ ಇವರ ರಜ್ಜುಕೋಶಗಳ ತಾಳಗತಿಗೆ ಸಮವಾದರೆ, ಹಾಗೆ ಅದೇ ಆವರ್ತದಲ್ಲಿ ಬೆಳಕು ಕಣ್ಣ ಮೇಲೆ ಬೀಳುತ್ತಿರುವಷ್ಟು ಕಾಲವೂ ಇವರಿಗೆ ತಮ್ಮ ಇಂದ್ರಿಯಗಳ ಮೇಲಿರುವ ಹತೋಟಿ ತಪ್ಪಿಹೋಗುತ್ತದೆ, ಇವರು ನಷ್ಟಪ್ರಜ್ಞರಾಗುತ್ತಾರೆ. ದ್ಯುತಿಜನಿತ ಅಪಸ್ಮಾರ ರೋಗಿಗಳು ಪ್ರಾಯಶಃ ನಮ್ಮ ಜನಸಂಖ್ಯೆಯಲ್ಲಿ ಶೇಕಡ ೪ ಇದ್ದಾರು.

ಇದೇ ರೀತಿಯಲ್ಲಿ ಧ್ವನಿಜನಿತ ಅಪಸ್ಮಾರ ರೋಗಿಗಳೂ[5] ಇರುವುದುಂಟು. ಇವರ ಸಂಖ್ಯೆ ನೂರಕ್ಕೆ ಒಂದಕ್ಕಿಂತ ಕಡಮೆಯೇ ಇರಬೇಕು. ಹಾಗೆಯೇ ಕೆಲವು ಜಾತಿಯ ಶ್ರವಣಭ್ರಾಂತರ ಮತ್ತು ದೃಷ್ಟಿಭ್ರಾಂತರ ಕಣ್ಣ ಮೇಲೆ ಆವರ್ತಕಾಂತಿ ಬಿದ್ದಾಗ ಅವರ ವಿಮಲೆಗಳು (ಇ. ಇ. ಜಿ. ಗಳು) ಒಂದು ವಿಚಿತ್ರ ರೀತಿಯಲ್ಲಿ ದ್ಯುತಿ ಸ್ಪಂದನಗಳನ್ನು ಅನುಸರಿಸುವಂತೆ ಈಚಿನ ನಮ್ಮ ಅನ್ವೇಷಣೆಗಳಿಂದ ಕಂಡುಬಂದಿದೆ.

ಹೀಗೆಯೇ ಇನ್ನೆಷ್ಟೇ ಹೇಳಿದರೂ, ವಿಮಲೆಯ ಲಿಪಿಗಳಲ್ಲಡಗಿರುವ ರಹಸ್ಯ

---

[4] Photogenic epileptics

[5] Audiogenic epileptics

ಗಳಲ್ಲಿ ನೂರರಲ್ಲೊಂದು ಭಾಗವನ್ನು ಕೂಡ ನಾವಿನ್ನೂ ಹೊರಗೆಡಹಿಲ್ಲವೆಂಬುದನ್ನು ಮರೆಯಬಾರದು, ಈ ಕೊರತೆಯನ್ನು ನೀಗಿಸುವುದಕ್ಕೆಂದೇ ಪ್ರಪಂಚದ ಹಲವಾರು ಸಂಸ್ಥೆಗಳು ಅನ್ವೇಷಣೆ ನಡೆಸುತ್ತಿವೆ. ಅವುಗಳಲ್ಲಿ ಬೆಂಗಳೂರಿನ ಆಲ್ ಇಂಡಿಯ ಇನ್‌ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್, ಅಂದರೆ ಅಖಿಲ ಭಾರತ ಮಾನಸಾರೋಗ್ಯ ಸಂಸ್ಥೆಯೂ ಒಂದು.

ಇಂಗ್ಲೆಂಡಿನ ಸುಪ್ರಸಿದ್ಧ ಜೀವಶಾಸ್ತ್ರಜ್ಞ, ಅದರಲ್ಲಿಯೂ ವಿಶೇಷವಾಗಿ ರಜ್ಜು ಶಾಸ್ತ್ರದಲ್ಲಿ ನಿಷ್ಣಾತನಾಗಿದ್ದ ಸರ್ ಚಾರ್ಲ್ಸ್ ಷೆರಿಂಗ್‌ಟನ್ ಹೇಳಿರುವಂತೆ ನಮ್ಮ ಮಿದುಳು ಒಂದು ಐಂದ್ರಜಾಲಕ ಮಗ್ಗದಂತೆ ಇದೆ; ಮಗ್ಗದಲ್ಲಿ ಥಳಥಳಿಸುವ ಲಾಳಿಗಳು ಕ್ಷಣಕ್ಷಣವೂ ಕರಗಿ ಅಳಿಸಿಹೋಗುತ್ತಿರುವ ಅದೆಷ್ಟೋ ಮಾದರಿ ನವಿರು ಬಟ್ಟೆಗಳನ್ನು ನೇಯುತ್ತಿವೆ. ಪ್ರತಿಯೊಂದು ಮಾದರಿಯೂ ಅರ್ಥಪೂರ್ಣವಾಗಿದ್ದರೂ ಯಾವುದೊಂದೂ ಶಾಶ್ವತವಲ್ಲ.

ಆರ್. ಎಲ್. ನರಸಿಂಹಯ್ಯ

ಪರೀಕ್ಷಾ ಮಂದಿರದಲ್ಲಿ

ತಲೆಯ ತುರಿಸುತ ಕುಳಿತಿಹನು ಇಲ್ಲಿ ವಿದ್ಯಾರ್ಥಿ ;
ಪ್ರಶ್ನೆಪತ್ರಿಕೆಯು ಕೈಲಿ.
ಸ್ಮೃತಿಯ ಕಂಬಿಯು ಮೇಲೆ ಮನದ ರೈಲೋಡುತಿದೆ
ಹಿಂದಕ್ಕೆ ಮೈಲಿ ಮೈಲಿ !
ಇದು ಪರೀಕ್ಷೆಯು ನಡೆಯುತಿರುವ ಕೋಣೆ :
ಪ್ರಶ್ನೆಗಳು ಮಿಡಿಯುತಿರೆ
ಝೇಂಕರಿಸುತಿಹುದಿವನ ಹೃದಯ ವೀಣೆ !
ಮೇಲೇನು ಕಂಡೀತು ? ಇವನ ಮಾನಸ ಗುಹೆಯ
ಸ್ವಲ್ಪ ಇಣುಕು :
ನೋಡದೋ : ಮಿಂಚುಹುಳುಗಳ ಹೋಲಿ ಸುಳಿಯುತಿವೆ
ನೂರೆಂಟು ನೆನಪುಗಳ ತುಣುಕು ತುಣುಕು !
ಮಹಾಮೌನದ ಸ್ವಪ್ನ ಚಿತ್ರಗಳೊ ಎಂಬಂದ
ಕುಳಿತ ಅಭ್ಯರ್ಥಿವೃಂದ.
ನಿಶ್ಶಬ್ದ ; ಅಂತರ್ಯವನು ಹೊಕ್ಕವೊಲು ಶಬ್ದ
ಬಡಿಯುತಿದೆ ಎದೆಯು ಬಲು ಬಿರುಸಿನಿಂದ !
ಭೂತಗನ್ನಡಿ ಹಿಡಿದು ವೀಕ್ಷಿಸದೊ ಕಾಣುವುದು :
ಇವನಂತರಾಳದಲ್ಲಿ ಘೋರ ತುಮುಲ !
ಮೇಲೆ ಸೌಮ್ಯ, ಪ್ರಸನ್ನ ಪೃಥುವಿ ; ಒಳಗೆ ಪ್ರಚಂಡ
ಅಲ್ಲೋಲ ಕಲ್ಲೋಲ, ಕೋಲಾಹಲ !
ಅಂಕಗಳ ಆಮಿಷವ ನೆನಪು ಗಾಳಕೆ ಬಿಗಿದು
ತಲೆಯ ಕೊಳದೊಳಗೆಸೆದು—ಕಾತರದಲಿ
ತೊಡಗಿಹನು ಅಂಶಗಳ ಸಂಗ್ರಹದಲಿ !
ಎಂಥ ಪಾಡು, ಫಜೀತಿ, ಅಯ್ಯೊ ಪಾಪ !
ಕರ್ತವ್ಯ ಪಥದಿ ನಿಲ್ಲದೆ ಬೇಗಸಾಗುತಿಹ
ಕಾಲಸೂಚಿಗೆ ಹಾಕುತಿಹನು ಶಾಪ !

ಸಿ. ಪಿ. ಕೆ.

ಶ್ರೀ ರಾಮಾಯಣ ದರ್ಶನದಲ್ಲಿ ಧರ್ಮಾಧರ್ಮದ ಪ್ರಶ್ನೆ

I

"... ಕಾಮಾಂಧವಶನಾಗಿ ಲಂಪಟನೊರ್ವ
ಮತಿಗೆಟ್ಟು ಮುಪ್ಪು ದೊರೆ ಹೆಂಗುಸೊರ್ವಳ ಪದಕೆ
ದಾಸನಾಗುರುಳಿದರೆ, ಪೂಜ್ಯನೀ ರಾಮಚಂದ್ರಂ
ರಾಜ್ಯಮಂ ತ್ಯಜಿಸಿ ವಿಪಿನಾಂತರದ ವಾಸಮಂ
ಕೈಕೊಳ್ವುದೇಕೆ? ತೆಗೆ ತೆಗೆ! ಧರ್ಮವಿಲ್ಲದಾ
ನೀಚ ನೃಪನಂ ಪ್ರಜಾಶಕ್ತಿ ಸಂಹರಿಪಂತೆ
ಕೊಲೆಗರ್ಹನಲ್ತೆ ನಾಣಿಲಿ ತಂದೆ? ಪಿತನಾದೊಡೇಂ"

—ಶ್ರೀ ಕುವೆಂಪು
(ಮಹಾ ಸಂಪುಟ ೧. ಪುಟ ೮೦. ಸಾ. ೬೩)

೧

'ಹೆಣ್ಣೊಲಿದ ಗಂಡನಿರೆ, ಗಂಡೊಲಿದ ಮಡದಿಯಿರೆ, ಅಂಥ ಬಂಗಾರದಂಥ ಬಾಳಿಗೆ, ಸಿಂಗಾರದ ಸೊಗಸಿಗೆ ಬದುಕಿನಲ್ಲಿ ಸರಿಸಮಾನವಾದುದು ಉಂಟೇ?' ಸೀತೆ ಒಲಿದ ರಾಮ; ರಾಮನೊಲಿದ ಸೀತೆ! ಅವರ ಬಂಗಾರದಂಥ ಬಾಳಿಗೆ, ಅಂದು—ತ್ರೇತಾಯುಗದಲ್ಲಿ—ಒಂದೇ ಅಲ್ಲ, ಸರಿಸಮಾನವಾದಂಥ ದಾಂಪತ್ಯಜೀವನ ಇಂದಿನ ವರೆಗೂ ಲೋಕದಲ್ಲಿ ಆಗಿಲ್ಲ. 'ಸೀತಾಕಾಂತೆ, ತನ್ನ ತನವನ್ನೇ ಸೊನ್ನೆಮಾಡಿ, ತನ್ನ ರಮಣನ ಆನಂದಕ್ಕೆ, ತನ್ನ ಎಲ್ಲದನ್ನೂ ನೈವೇದ್ಯಮಾಡಿ ನಲಿಯುತ್ತಿದ್ದಳು . . .' ಅದಕ್ಕಿಂತಲೂ ಮಿಕ್ಕ ಸ್ವರ್ಗವಿರಬಹುದೇ? ಸ್ವರ್ಗಕ್ಕೆ ಕೋಡುಗಳೇನಾದರೂ ಉಂಟೇ? ಶ್ರೀರಾಮಚಂದ್ರನ ಪ್ರೇಮದಲ್ಲಿಯೇ ತನ್ನ ಜೀವನದ ಪರಮ ಪುರುಷಾರ್ಥವನ್ನೂ ಜನಕಜಾತೆ ಕಂಡಳು.

'ಸೀತಾದೇವಿ ಹೀಗಿರಲು, ಶ್ರೀರಾಮಚಂದ್ರನಾದರೂ ತನ್ನ ಮಡದಿಯ ಜೀವವೆಂಬ ದೀವಿಗೆಗೆ ತೈಲದೋಪಾದಿಯಲ್ಲಿದ್ದ. ಆ ದೀವಿಗೆಯು ಕಾಂತಿಯೂ ಅವನೇ ಆಗಿದ್ದ. ತಂದೆತಾಯಿಗಳ ಬಾಳಿನ ದೋಣಿಯಂತೆ ಇದ್ದ. ಸೀತೆಯನ್ನು ಕಣ್ತುಂಬ ನೋಡಿ ನಲಿಯುವನು. ಅವಳ ದನಿಯನ್ನು ಕೇಳಿ ಸವಿಯುವನು. ಅವಳ ಮೈಯ್ಯ ಸೋಂಕಿಗೆ ಪುಳಕಿಸುವನು. ಸೀತೆಯ ಕೈಬಳೆಯ ಸದ್ದನ್ನು ಕೇಳಲು

ಮತ್ತೆಮತ್ತೆ ಚಾತಕಪಕ್ಷಿಯಂತೆ ಕಾತರಿಸುವವನು . . . ದೇಹದ ಎರಡು ಕಣ್ಣುಗಳಂತೆ ಸೀತಾರಾಮರಿದ್ದರು. ಕಣ್ಣೆರಡಾದರೂ ದೃಷ್ಟಿ ಒಂದೇ ಇರುವಂತೆ ಸೀತಾರಾಮರಿಬ್ಬರಾದರೂ ಒಬ್ಬರೇ ಇದ್ದಂತೆ ಇದ್ದರು.[1]'

ಹೀಗೆ ಸೀತಾ ರಾಮರು ಸೊಗಸಿನ ಹಾಲುಜೇನಿನಲ್ಲಿ ತಮ್ಮ ಬಾಳಿನ ದೋಣಿಯನ್ನು ತೇಲಿಸುತ್ತಿದ್ದಾಗ, ಒಂದಿರುಳು ಅಯೋಧ್ಯೆ ವಿಸ್ಮಯ ಭಯ ಆಶ್ಚರ್ಯದಿಂದ ಬೆದರಿತು. ಅಯೋಧ್ಯೆಯ ಶುಭ್ರಾಕಾಶದಲ್ಲಿ ಧೂಮಕೇತುವೊಂದು ಕಂಡಿತು. ಕೋಸಲಕೆ ಕೇಡು ಬಂತೆಂದು ಜನ ನರಳಿದರು. ದಶರಥ ಚಕ್ರವರ್ತಿ ತನ್ನ ಅವಸಾನ ಕಾಲ ಸಮೀಪಿಸಿತೆಂದು ನಿಶ್ಚಯಿಸಿ ಸಚಿವರನ್ನೂ ಗುರುಗಳನ್ನೂ ಪ್ರಜೆಗಳನ್ನೂ ಕರೆಸಿ ಈ ರೀತಿ ಹೇಳಿದ, 'ನಾನಿನ್ನು ವಿಶ್ರಾಂತಿ ಪಡೆಯುತ್ತೇನೆ. ಸರ್ವರ ಅನುರಾಗಕ್ಕೂ ಪಾತ್ರನಾದವನು ಶ್ರೀರಾಮಚಂದ್ರ. ನನ್ನ ಈ ಕಿರೀಟವನ್ನು ಧರಿಸುವವರು ರಾಮನಲ್ಲದೆ ಮತ್ತೆ ಇನ್ನಾರೂ ಇಲ್ಲ. ಆದ್ದರಿಂದ ರಾಮನಿಗೆ ಪಟ್ಟಕಟ್ಟಿ ನಾನು ತಪಸ್ಸಿಗೆ ಹೊರಡುತ್ತೇನೆ.[2]'

ಶ್ರೀರಾಮ ಪಟ್ಟಾಭಿಷೇಕಕ್ಕಾಗಿ ಸಕಲಸಿದ್ಧತೆಗಳೂ ನಡೆದವು. ಮಂಗಳ ದ್ರವ್ಯಗಳೆಲ್ಲವೂ ಅಯೋಧ್ಯೆಗೆ ಬಂದು ಸೇರಿದವು. ಮರುದಿನ ಬೆಳಗಾಗುವುದರ ಒಳಗಾಗಿಯೇ ಅಯೋಧ್ಯಾನಗರ ಹಸುರು ತೋರಣಗಳಿಂದ, ಹೂಮಳೆಯ ಚೆಲುವಿನಿಂದ ಕಂಪಿಡಿದ ತಣ್ಣೀರಿನಿಂದ ತೋಯ್ದ ನೆಲದಿಂದ ವಿಸ್ತಾರವಾದ ಕಲ್ಯಾಣ ಮಂಟಪದಂತೆ ಕಂಗೊಳಿಸಿತು.

ಹೀಗೆ ಶ್ರೀರಾಮ ಪಟಾಭಿಷೇಕೋತ್ಸವಕ್ಕೆ ಎಷ್ಟು ಬೇಗನೆ ಸರ್ವ ಸಿದ್ಧತೆಗಳೂ ನಡೆದುವೋ ಅಷ್ಟೇ ಬೇಗನೆ ಅವುಗಳೆಲ್ಲ ನಿಂತುಹೋದುವು. ಮಂಥರೆಯ ಮಮತೆಯ ಸುಳಿ, ಕೈಕೆಯ ಆತ್ಮವನ್ನು ಹೊಕ್ಕು ತ್ರೇತಾಯುಗದ ಮಹಾ ನಾಟಕಕ್ಕೆ ನಾಂದಿಯನ್ನು ಹಾಕಿತು! ಕೇವಲ ಕೆಲವೇ ಘಳಿಗೆಗಳ ಹಿಂದೆ ಸಂತೋಷ ಸಾಗರದಲ್ಲಿ ಓಲಾಡುತ್ತಿದ್ದ ಅಯೋಧ್ಯಾನಗರಿ, ಗೋಳಿನಾಗೋರಿಯಾಗಿ ಪರಿಣಮಿಸಿತು. ಪಿತೃವಾಕ್ಯ ಪರಿಪಾಲನೆಗಾಗಿ, **ಧರ್ಮರಕ್ಷಣೆಗಾಗಿ** ಶ್ರೀರಾಮಚಂದ್ರ ಅರಮನೆಯ ಭೋಗವನ್ನು, ಕಿರೀಟಧಾರಣೆಯ ಯೋಗವನ್ನು, ದಾಂಪತ್ಯಸುಖದ ರಾಗವನ್ನು ತ್ಯಾಗಮಾಡಿ ಅರಣ್ಯದ ಕಾರ್ಪಣ್ಯಕ್ಕೆ ವಲ್ಕಲ ಜಟೆಗಳ ದಾರಿದ್ರ್ಯಕ್ಕೆ ತೆರಳುತ್ತಾನೆ! ಅವನು ಅಯೋಧ್ಯೆಯನ್ನು ಬಿಟ್ಟು ತೆರಳಿದಾಗ:

---

1 ಶ್ರೀ ರಾಮಾಯಣ ದರ್ಶನಂ. ಮಹಾ ಸಂಪುಟ ೧ ; ಅಯೋಧ್ಯಾ ಸಂಪುಟ ; ಸಂಚಿಕೆ ೩. ಸಾಲು ೧ ರಿಂದ ೫೨.

2 ಅದೇ. ಸಾಲು ೮೧ ರಿಂದ ೧೦೭.

"ರಥಮೊಂದೆ ಪರಿದೋಡುತಿರ್ದತ್ತದಂ ಬೆಂಬಿಡಿದು
ವಿವಿಧ ವರ್ಗದ ಮಂದಿ ಸಂದಣಿಸಿ ಪರಿದುದಯ್,
ಪುರ್ಚಮರ್ದ್ದಂತೆ. ಕೆಲರೆದೆಬಡಿದು ಕೂಗಿದರ್.
ಕಿಳ್ತು ನವಿರಂ ಮುಡಿಗೆದರಿ ಗೋಳಾಡಿದರ್ ಕೆಲರ್.
ತೊಟ್ಟುಡುಗೆಯಂ ಪರಿದು ತತ್ತರಿಸಿದರ್ ಕೆಲರ್.
ಹೊಡೆಮೋದಿದರ್ ಕೆಲರ್."[3]

. . . . ದಶರಥ ನೃಪಂ
ಪುರಜನಂ ಮತ್ತಮಂತಃಪುರ ಸ್ತ್ರೀಜನಂ
ಕಣ್ಣ ಕಾರ್ಗಾಲದಿಂ ರೋದನ ಧ್ವಾನದಿಂ . . .
ಪಿಂದೋಡಿದರ್, ಬೇಡಿ ಕೈ ನೀಡಿ."[4]

ಇನ್ನು ಕೆಲವೇ ಘಳಿಗೆಗಳಲ್ಲಿ ಪಟ್ಟಾಭಿಷಿಕ್ತನಾಗಿ ಕೋಸಲದೇಶದ ಅರಸನಾಗಬೇಕಾಗಿದ್ದ ಶ್ರೀರಾಮಚಂದ್ರ ಅನಿರೀಕ್ಷಿತವಾಗಿ ವಲ್ಕಲ ಜಟಾಧಾರಿಯಾಗಿ ಹೀಗೆ ವನವಾಸವನ್ನು ಕೈಕೊಂಡ. ಶ್ರೀರಾಮಚಂದ್ರ ದಶರಥನ ಪಟ್ಟಮಹಿಷಿ ಕೌಸಲ್ಯೆಯ ಮಗ. ದಶರಥನ ನಾಲ್ವರು ಮಕ್ಕಳಲ್ಲೂ ಅವನೇ ಹಿರಿಯನು. ಅಲ್ಲದೆ ಅರಸನಾಗ ಬೇಕಾದವನಿಗಿರಬೇಕಾದ ಸಕಲ ಸಲ್ಲಕ್ಷಣಗಳೂ ಅವನಿಗಿದ್ದುವು. ಯಾವ ದೃಷ್ಟಿಯಿಂದಲೂ ಅವನು ಪಟ್ಟಕ್ಕೆ ಸರ್ವಥಾ ಯೋಗ್ಯನಾಗಿದ್ದ.

"ಶ್ರೀರಾಮನಾಹ್ಲಾದ ರೂಪಿ. ಔದಾರ್ಯನಿಧಿ.
ನಿರಸೂಯೆಯಿಂ ಸರ್ವರನುರಾಗ ಭಾಜನಂ.
ಕಲಿ. ಮತ್ಸರವಿದೂರನತ್ಯಂತ ಶಾಂತಿಖನಿ.
ಪ್ರಿಯಭಾಷಿ. ಹಿತಸಖಂ. ವಿತಮಾರ್ಗಿ. ಧೀರವಶಿ.
ನಗುಮೊಗದ ಸಂಯಮಿ. ಕೃತಜ್ಞತಾಮೂರ್ತಿ. ಮೋಕ್
ಜ್ಞಾನಿ. ಸಜ್ಜನಪ್ರೇಮಿ. ಸೂಕ್ಷ್ಮಮತಿ. ಪಂಡಿತಂ.
ಶ್ರುತಿವಿದಂ ; ಸುವಿಚಾರಿ ; ನಿತ್ಯಂ ಪ್ರಜಾಪ್ರೇಮಿ !
ಸುಸ್ಥಿರಂ ; ಸಂಬುದ್ಧ ಪ್ರಜ್ಞಾ ಮಹೇಶ್ವರಂ !
ಶಸ್ತ್ರಾಸ್ತ್ರ ವಿದ್ಯಾಪ್ರವೀಣ ರಣ ಪಂಡಿತಂ.
. . . .
ರಾಮನಲ್ಲದೆ ಬೇರೆ ನನ್ನೀ ಕಿರೀಟಮಂ
ಧರಿಸುವ ಸಮರ್ಥರಂ ಕಾಣೆನಾಂ."[5]

---

[3] ಶ್ರೀ ರಾ. ದ. ಮಹಾ ಸಂಪುಟ ೧. ಅಯೋಧ್ಯಾ ಸಂಪುಟ. ಸಂಚಿಕೆ ೪. ಸಾಲು ೪೧೩-೪೧೮.

[4] ಅದೇ. ಸಾಲು : ೪೨೪-೩೭.

[5] ಶ್ರೀ ರಾ. ದ. ಮಹಾ ಸಂಪುಟ ೧. ಅಯೋಧ್ಯಾ ಸಂಪುಟ. ಸಂಚಿಕೆ ೩. ಸಾಲು ೯೧-೧೦೪.

ಎಂದು ದಶರಥ ಚಕ್ರವರ್ತಿಯೇ ಶ್ರೀರಾಮನ ಗುಣಗಾನಮಾಡಿದ್ದಾನೆ. ದಶರಥನ ಅಭಿಪ್ರಾಯಕ್ಕೆ ಅವನ ಪ್ರಜೆಗಳ ಒಪ್ಪಿಗೆಯೂ ಇತ್ತು. ನ್ಯಾಯ, ಧರ್ಮ, ಶಾಸ್ತ್ರ—ಎಲ್ಲ ದೃಷ್ಟಿಯಿಂದಲೂ ಶ್ರೀರಾಮಚಂದ್ರ ಕೋಸಲದ ಸಿಂಹಾಸನಕ್ಕೆ ಸರ್ವಥಾ ಯೋಗ್ಯನಾಗಿದ್ದ.

ಆದರೂ, ರಾಜನಾಗಬೇಕಾಗಿದ್ದ ಶ್ರೀರಾಮಚಂದ್ರ ಅಡವಿ ಪಾಲಾದ! ತನ್ನ ಹೆತ್ತ ತಾಯ್ತಂದೆಗಳ ಹೊಟ್ಟೆಯಲ್ಲಿ ಕಿಚ್ಚಿಟ್ಟು, ಸೋದರರ ದುಃಖಕ್ಕೆ ಕಾರಣನಾಗಿ, ಪ್ರಜೆಗಳ ಗೋಳಿಗೆ ದಾರಿಮಾಡಿ ಅರಮನೆಯನ್ನು ಬಿಟ್ಟು ಅರಣ್ಯಕ್ಕೆ ತೆರಳಿದ.

೨

ಹೀಗೆ, ನ್ಯಾಯ, ಶಾಸ್ತ್ರ, ಧರ್ಮ—ಎಲ್ಲ ದೃಷ್ಟಿಯಿಂದಲೂ ಪಟ್ಟಾಭಿಷೇಕಕ್ಕೆ ಸರ್ವಥಾ ಯೋಗ್ಯನಾದ ಶ್ರೀರಾಮ ಅರಣ್ಯಕ್ಕೆ ಹೋಗಬೇಕಾಗಿ ಬಂದುದು ಲೋಕದ ಕರುಣೆಯನ್ನೇ ಸೂರೆಗೊಂಡ ಅತ್ಯಂತ ವ್ಯಥೆಯ ಕಥೆ. ಇನ್ನೆರಡು ಘಂಟೆಗಳಲ್ಲಿ ಅಯೋಧ್ಯೆಯ ಸಿಂಹಾಸನವನ್ನು ಹತ್ತಿ, ಬೆಳ್ಗೊಡೆಯ ತಣ್ಣೆಳಲಿನಲ್ಲಿ ಕುಳಿತು, ರಾಜ್ಯದ ಸಪ್ತಾಂಗಗಳಿಗೂ ಅಧಿಪತಿಯಾಗಿ ಮೆರೆಯಬೇಕಾಗಿದ್ದ ರಾಜಕುಮಾರ, ಇದ್ದಕ್ಕಿದ್ದ ಹಾಗೆ ಕಾಡುಪಾಲಾಗಿ, ಕುಸುಮ ಕೋಮಲೆಯಾದ ಸತಿಯನ್ನು ಸಂಕಟ ಪರಂಪರೆಗೆ ಈಡುಮಾಡಿ, ರಾಜ್ಯವನ್ನೆಲ್ಲ ದುಃಖದ ದಾವಾನಲದಲ್ಲಿ ತಳ್ಳಿ, ತಂದೆಗೆ ಮರಣವನ್ನೂ, ತಾಯಿಗೆ ಆಜೀವ ದುಃಖ ಶಿಕ್ಷೆಯನ್ನೂ ವಿಧಿಸಿಬಿಟ್ಟ!!

ಇದಕ್ಕೆಲ್ಲ 'ಕಾರಣ' ಕಾಮಾಂಧವಶನಾಗಿ, ತನ್ನ ಕಿರಿ ಹೆಂಡತಿಯ, ಚೆಲುವೆಂಬ ಚೆಂಗಳ್ಳನ್ನು ಕುಡಿದು ಮೈಮರೆತು ಮತ್ತನಾಗಿ 'ಧರ್ಮಾಧರ್ಮ' ವಿವೇಚನೆಯೂ ಇಲ್ಲದೆ ಮಾತುಕೊಟ್ಟ ಮುಪ್ಪಿನ ಬೆಪ್ಪ ಆ ದಶರಥ. ಆದ್ದರಿಂದಲೇ ಶ್ರೀರಾಮನ ಬಗೆಗೆ ಉಂಟಾಗುವ ನಮ್ಮ ಕರುಣೆಯ ಕೋಡಿ, ದಶರಥ, ಕೈಕೆ, ಮಂಥರೆಯರ ಮೇಲೆ ಕೋಪ ಪ್ರವಾಹವಾಗಿ ಪರಿಣಮಿಸುತ್ತದೆ. ಈ ದುರಂತ ಘಟನೆಯ ಬಗ್ಗೆ ನಮ್ಮೆದೆ ಮಿಡಿಯುವುದನ್ನೇ ಲಕ್ಷ್ಮಣ ನುಡಿಯುತ್ತಾನೆ:

"... ಕಾಮಾಂಧವಶನಾಗಿ ಲಂಪಟನೊರ್ವ
ಮತಿಗೆಟ್ಟ ಮುಪ್ಪು ದೊರೆ ಹೆಂಗುಸೊರ್ವಳ ಪದಕೆ
ದಾಸನಾಗುರುಳಿದರೆ, ಪೂಜ್ಯನೀ ರಾಮಚಂದ್ರಂ
ರಾಜ್ಯಮಂ ತ್ಯಜಿಸಿ ವಿಪಿನಾಂತರದ ವಾಸಮಂ
ಕೈಕೊಳ್ವುದೇಕೆ? ತೆಗೆ ತೆಗೆ! ಧರ್ಮವಿಲ್ಲದಾ
ನೀಚ ನೃಪನಂ ಪ್ರಜಾಶಕ್ತಿ ಸಂಹರಿಪಂತೆ
ಕೊಲೆಗರ್ಹನಲ್ತೆ ನಾಣಿಲಿ ತಂದೆ? ಪಿತನಾದೊಡೇಂ?"[6]

[6] ಶ್ರೀ ರಾ. ದ. ಮಹಾ ಸಂಪುಟ ೧. ಅಯೋಧ್ಯಾ ಸಂಪುಟ, ಪುಟ ೮೦.

ಲಕ್ಷ್ಮಣನಾಡುವ ಈ ಒಂದೊಂದು ನುಡಿಯೂ ನಮ್ಮ ದೃಷ್ಟಿಯಲ್ಲಿ ಸತ್ಯವಾಗಿಯೇ ತೋರುತ್ತದೆ. ನ್ಯಾಯ, ಶಾಸ್ತ್ರ, ಧರ್ಮ—ಯಾವುದಕ್ಕೂ ಸಮ್ಮತವಲ್ಲದ ದಶರಥನ ವರ್ತನೆಯಿಂದ ಲಕ್ಷ್ಮಣ ಕುಪಿತನಾಗುವುದು ನ್ಯಾಯವಾಗಿಯೇ ತೋರುತ್ತದೆ. ಶಾಸ್ತ್ರ ಸಮ್ಮತವೂ ಆಗಿರುವಂತೆ ಅನಿಸುತ್ತದೆ. ಲಕ್ಷ್ಮಣನ ಭಾಗಕ್ಕೆ ಅದು ಧರ್ಮವೂ ಆಗಿದೆ.

ಆದರೆ, ಲಕ್ಷ್ಮಣನ ಈ ಕೋಪಾಟೋಪ ಶ್ರೀರಾಮನ ದೃಷ್ಟಿಯಲ್ಲಿ ಕೇವಲ ಅಧರ್ಮವಾಗಿ ತೋರುತ್ತದೆ. ವಿಪಿನಾಂತರಕ್ಕೆ ಹೋಗಬೇಕಾದ ತನ್ನ ನಿರ್ಧಾರ ವನ್ನು ಸಮರ್ಥಿಸಿ ಶ್ರೀರಾಮಚಂದ್ರ:

" ನನಗೆ
" ಧರ್ಮಮಂ ಬಿಟ್ಟನ್ಯ ಸಿರಿಯಿಲ್ಲ. ಧರ್ಮಸಹಿತಂ
ವಿಪಿನಮರಮನೆ; ಧರ್ಮರಹಿತಮಿಾ ರತ್ನಮಯ
ರಾಜಸೌಧಂ ಶ್ಮಶಾನಕೆ ಮಿಗಿಲ್ ಭೀಕರಂ."[7]

ಎಂದು ಉತ್ತರ ಕೊಡುತ್ತಾನೆ! ಅರಣ್ಯಕ್ಕೆ ಹೋಗುವುದನ್ನು ವಿರೋಧಿಸಿ ತಂದೆಯು ಕೊಲೆಗರ್ಹನೆಂದು ಕೋಪಿಸಿದ ಲಕ್ಷ್ಮಣನೂ **ಧರ್ಮ**ವನ್ನೇ ಆಧಾರವನ್ನಾಗಿಟ್ಟು ಕೊಂಡು ಆರ್ಭಟಿಸುತ್ತಿದ್ದಾನೆ. ಹಾಗೆಯೇ ಅರಣ್ಯಕ್ಕೆ ಹೋಗಲು ಹೊರಟು ನಿಂತ ಶ್ರೀರಾಮನೂ ಅದೇ **ಧರ್ಮದ** ಹೆಸರಿನಲ್ಲಿಯೇ ತನ್ನನ್ನು ಸಮರ್ಥಿಸಿಕೊಳ್ಳು ತ್ತಿದ್ದಾನೆ! ಎಂದಮೇಲೆ ಲಕ್ಷ್ಮಣನ ದೃಷ್ಟಿಯಲ್ಲಿ ಅರಣ್ಯಕ್ಕೆ ಹೋಗುವುದು ಧರ್ಮ ವಿರುದ್ಧವಾದ ಕಾರ್ಯ. ಶ್ರೀರಾಮನಾದರೋ **ಧರ್ಮ**ಪರಿಪಾಲನೆಗಾಗಿಯೇ ಅರಣ್ಯಕ್ಕೆ ಹೋಗುತ್ತೇನೆಂದು ಹೇಳುತ್ತಾನೆ! ಇಬ್ಬರೂ ಧರ್ಮದ ಹೆಸರಿನಲ್ಲೇ ವಿರುದ್ಧ ಕೃತ್ಯಗಳನ್ನು, ಕಾರ್ಯಾಚರಣೆಯನ್ನು ಸಮರ್ಥಿಸುತ್ತಾರೆ! ಹಾಗಾದರೆ ಅವರಿಬ್ಬರ ಮನಸ್ಸಿನಲ್ಲಿರುವುದೂ ಒಂದೇ ಧರ್ಮವೇ? ಅಥವಾ ಒಬ್ಬೊಬ್ಬರಿಗೂ ಭಿನ್ನಭಿನ್ನವಾದ **ಧರ್ಮ** ಅವರ ದೃಷ್ಟಿಯಲ್ಲಿದೆಯೇ? ಹಾಗಾದರೆ ಯಾವುದು ಆ ಧರ್ಮ?

೩

ತಂದೆ ಎಂದೋ ತನ್ನ ಮಡದಿಗೆ ಕೊಟ್ಟ ಮಾತನ್ನು ನಡೆಸಿಕೊಡುವುದು ಧರ್ಮವೋ? ಇಲ್ಲವೇ ಕಾಮಾಂಧವಶನಾಗಿ, ಹಿಂದು ಮುಂದನ್ನು, ಒಳಿತು ಕೆಡುಕನ್ನು, ನ್ಯಾಯಾನ್ಯಾಯವನ್ನು ಧರ್ಮಾಧರ್ಮವನ್ನು ಯೋಚನೆಮಾಡದೆ, ಬೆಪ್ಪುತನದಿಂದ ಕೊಟ್ಟ ಮಾತನ್ನು ಕಡೆಗಾಣಿಸುವುದು ಧರ್ಮವೋ? ಪಿತೃವಾಕ್ಯ ಪರಿಪಾಲನೆಯೇ ಧರ್ಮಸಮ್ಮತ ಎಂದು ವಾದಿಸುವವರಿಗೆ, ಆ ಪಿತೃವೇ ಧರ್ಮೋ

[7] ಅದೇ. ಪುಟ ೮೧.

ಲ್ಲಂಘನೆ ಮಾಡಿದರೆ? ಎಂಬ ಸವಾಲನ್ನು ಹಾಕಬೇಕಾಗುತ್ತದೆ. ಆಗ—ತಂದೆಯ ನಡೆನುಡಿಯನ್ನು ಧರ್ಮಾಧರ್ಮವೆಂದು ಪರೀಕ್ಷಿಸುವ ಹಕ್ಕು ಮಗನಿಗಿಲ್ಲ ಎಂಬ ನಿರಂಕುಶ ಹಿಟ್ಲರ್ ವಾದವನ್ನು ಮಾತ್ರ ಮುಂದೊಡ್ಡಬಹುದು. ಆದರೆ, ಇದು ನಿರಂಕುಶಾಧಿಕಾರಿಗಳ ಯುಗವಲ್ಲ; ನಿರಂಕುಶಮತಿಗಳ ಯುಗ! ಆದ್ದರಿಂದ, ಪಿತೃವಾಕ್ಯವೇ ಧರ್ಮೋಲ್ಲಂಘನೆ ಮಾಡಿದಾಗ ಸುತನು ಆ ಪಿತೃವಾಕ್ಯಪರಿಪಾಲನೆ ಮಾಡದಿರುವುದೇ ಧರ್ಮ ಎಂಬ ಸಿದ್ಧಾಂತಕ್ಕೆ, ನಾವು ಎಷ್ಟೇ ಬೇಡವೆಂದರೂ, ಬಂದು ನಿಲ್ಲಬೇಕಾಗುತ್ತದೆ.

ಹಾಗಾದರೆ, ಇಲ್ಲಿ ಶ್ರೀರಾಮಚಂದ್ರನ ಬಾಯಿಂದ ಮಹಾಕವಿ ಕುವೆಂಪು 'ನನಗೆ **ಧರ್ಮವಂ** ಬಿಟ್ಟನ್ಯ ಸಿರಿಯಿಲ್ಲ. **ಧರ್ಮಸಹಿತಂ** ವಿಪಿನವರಮನೆ. **ಧರ್ಮರಹಿತ**ಮೀ ರಾಜಸೌಧಂ ಶ್ಮಶಾನಕೆ ಮಿಗಿಲ್ ಭೀಕರಂ' ಎಂದು ನುಡಿಸಿರುವುದರಲ್ಲಿ ಯಾವ ಧರ್ಮವಿದೆ? ಲೋಕಸಾಮಾನ್ಯವಾದ ನೀತಿಯ ಮತ್ತು ಧರ್ಮದ ದೃಷ್ಟಿಗೆ, ಶ್ರೀರಾಮಚಂದ್ರನು ಅರಣ್ಯದಲ್ಲಿ ಪರಿಪಾಲಿಸುವ ಧರ್ಮವಾಗಲೀ, ಅರಮನೆಯಲ್ಲಿದ್ದು, ಆಚರಿಸುವ ಅಧರ್ಮವಾಗಲೀ ಕಂಡುಬರುವುದಿಲ್ಲ. ಶ್ರೀರಾಮನು ಅರಣ್ಯಕ್ಕೆ ಹೋಗಿ ಕೈಕೊಳ್ಳುವ ಅಂಥ ಪರಮ ಧರ್ಮಕಾರ್ಯವಾವುದೂ ನಮ್ಮ ಕಣ್ಣಿಗೆ ಕಾಣುವುದಿಲ್ಲ; ಬುದ್ಧಿಗೆ ವೇದ್ಯವಾಗುವುದಿಲ್ಲ. ತದ್ವಿರುದ್ಧವಾಗಿ ಅವನು ಅರಮನೆಯಲ್ಲಿದ್ದಿದ್ದರೆ ಆಕಾಶ ಕಳಚಿಬಿದ್ದು ಭೂಮಿ ಇಬ್ಭಾಗವಾಗುವಂತಹ ಯಾವ ಅಧರ್ಮವೂ ಅವನಿಂದ ನಡೆಯುತ್ತಿತ್ತೆಂದು **ನಮಗೆ** ಅನಿಸುವುದಿಲ್ಲ. ಹಾಗಾದರೆ ರಾಮಚಂದ್ರನು ಆಡಿದ ಆ ಮಾತುಗಳು ಅರ್ಥವಿಲ್ಲದ ಬರಿಯ ಮಾತುಗಳೇ? ರಾಮಚಂದ್ರನಾಡಿದ ಮಾತುಗಳಿಗೆ ಅರ್ಥವಿದೆ ಎಂಬುದಾದರೆ, ಲಕ್ಷ್ಮಣನ **ಕಲ್ಪನೆಯ** ಧರ್ಮವೇ ಬೇರೆ; ರಾಮಚಂದ್ರನು **ಕಂಡಿದ್ದ** ಧರ್ಮವೇ ಬೇರೆ ಎಂದು ಸ್ಪಷ್ಟವಾಗುತ್ತದೆ. ಲಕ್ಷ್ಮಣನ ಕಲ್ಪನೆಯ ಧರ್ಮ **ಲೋಕಸಾಮಾನ್ಯ ನೀತಿಯ ಧರ್ಮ.** ರಾಮಚಂದ್ರ ಕಂಡಿದ್ದ ಧರ್ಮ **ವಿಧಿಯ ವಿನ್ಯಾಸದ ಧರ್ಮ!** ತಾಯಿ ಕೌಸಲ್ಯೆ ರಾಮನನ್ನು ಹರಸಿ ಕಳುಹುವಾಗ:

> "ನಿನಾವ ಧರ್ಮಮಂ
> ಗುರಿಗೆಯ್ದು ಹೊರಟಿಹೆಯೊ ಆ ಧರ್ಮದೇವತೆಯೆ
> ರಕ್ಷೆಯಾಗಲಿ ನಿನಗೆ!"[8]

ಎಂದು ಹೇಳಿ ಕಳಿಸುತ್ತಾಳೆ. ಇಲ್ಲಿಯೂ ಕವಿ, ರಾಮಚಂದ್ರನು ಕಂಡಿದ್ದ ಧರ್ಮವೇನು ಎಂಬುದನ್ನು ಸ್ಪಷ್ಟಪಡಿಸಿಲ್ಲ. ಆ ಧರ್ಮವನ್ನು ನಾವು ಗೊತ್ತುಹಚ್ಚಬೇಕಾಗಿದೆ.

---

[8] ಶ್ರೀ ರಾ. ದ. ಮಹಾ ಸಂಪುಟ ೧. ಅಯೋಧ್ಯಾ ಸಂಪುಟ. ಪುಟ ೮೫. ಸಾಲು ೧೯೦ರಿಂದ ೧೯೨.

"ಧರ್ಮ ಎಂಬ ಪದವು ನೈತಿಕ ಹಾಗೂ ವ್ಯಾವಹಾರಿಕ ಅರ್ಥವನ್ನೂ, ನೈಸರ್ಗಿಕ ಹಾಗೂ ತಾತ್ತ್ವಿಕ ಅರ್ಥವನ್ನೂ, ಹಾಗೂ ಧಾರ್ಮಿಕ ಮತ್ತು ಆಧ್ಯಾತ್ಮಿಕ ಅರ್ಥವನ್ನೂ ಸೂಚಿಸುತ್ತದೆ. ಇವುಗಳಲ್ಲಿ ಯಾವುದಾದರೂ ಒಂದೇ ಅರ್ಥದಲ್ಲಿ ಆ ಪದವನ್ನು ಉಪಯೋಗಿಸಬಹುದು. ಕೇವಲ ನೈತಿಕ, ಇಲ್ಲವೆ ತಾತ್ತ್ವಿಕ ಇಲ್ಲವೇ ಕೇವಲ ಧಾರ್ಮಿಕ ಯಾವುದಾದರೊಂದು ಅರ್ಥದಲ್ಲಿ ಉಪಯೋಗಿಸಬಹುದು. ನೈತಿಕವಾಗಿ, ಧರ್ಮ ಎಂದರೆ ಋಜುಮಾರ್ಗ ನಿಯಮ, ಒಳ್ಳೆಯ ನಡವಳಿಕೆ, ಇನ್ನೂ ವ್ಯಾವಹಾರಿಕ ಅರ್ಥದಲ್ಲಿ ಸಾಮಾಜಿಕ ಹಾಗೂ ರಾಜಕೀಯ ನ್ಯಾಯ ಎಂದಾಗುತ್ತದೆ.[9]

ಆದರೆ, "ಭಾರತೀಯರ ಅಭಿಪ್ರಾಯದಲ್ಲಿ ಧರ್ಮ ಎಂದರೆ ಕೇವಲ ಒಳ್ಳೆಯದು, ಸರಿಯಾದುದು, ನೀತಿ, ನ್ಯಾಯ, ಸತ್‌ಶೀಲ ಎಂದಿಷ್ಟೇ ಅರ್ಥವಲ್ಲ . . . . ಧರ್ಮ[10] ಎಂದರೆ, ಯಾವುದನ್ನು ನಾವು ಅವಲಂಬಿಸಿದ್ದೇವೆಯೋ ಹಾಗೂ ಯಾವುದು ನಮ್ಮ ಅಂತರಂಗ ಬಹಿರಂಗ ಕಾರ್ಯಕಲಾಪಗಳಿಗೆ ಆಧಾರವಾಗಿದೆಯೋ ಅದು ಧರ್ಮ ಎಂಬ ಎರಡರ್ಥವಾಗುತ್ತದೆ. ಅದರ ಪ್ರಾಥಮಿಕ ಅರ್ಥದಲ್ಲಿ, ಯಾವುದು ನಮ್ಮ ಎಲ್ಲ ಕಾರ್ಯಾಚರಣೆಗಳನ್ನೂ ರಹಸ್ಯವಾಗಿ ರೂಪಿಸುತ್ತದೆಯೋ ಆ ನಮ್ಮ ಸ್ವಭಾವದ ಮೂಲಭೂತ ನಿಯಮ ಎಂದಾಗುತ್ತದೆ. ಈ ಅರ್ಥದಲ್ಲಿ ಪ್ರತಿಯೊಂದು ಜೀವಿಗೂ, ವ್ಯಕ್ತಿಗೂ, ಗುಂಪಿಗೂ, ಒಂದೊಂದು ಅದರದರ ಧರ್ಮ ಇದ್ದೇ ಇರುತ್ತದೆ. ಎರಡನೆಯದಾಗಿ ದೈವೀ ಸ್ವಭಾವವೆಂಬುದೂ ಒಂದಿದೆ. ಈ ದೈವೀ ಸ್ವಭಾವವು ನಮ್ಮಲ್ಲಿ ವೃದ್ಧಿಯಾಗಿ ಪ್ರಕಟಗೊಳ್ಳಬೇಕಾಗಿದೆ; ಈ ಅರ್ಥದಲ್ಲಿ ಧರ್ಮ ಎಂದರೆ, ನಮ್ಮಲ್ಲಿರುವ ದೈವೀ ಸ್ವಭಾವವು ವೃದ್ಧಿಹೊಂದಲು ಅಂತರಂಗದ ಕಾರ್ಯಾಚರಣೆಗಳ ನಿಯಮ, (ವಿಧಿ ವಿನ್ಯಾಸ) ಎಂದಾಗುತ್ತದೆ. ಮೂರನೆಯದಾಗಿ, ಯಾವ ನಿಯಮ, ನಿಯತಿಯಿಂದ ನಮ್ಮ ಭಾವಗಳು ರೂಪುಗೊಳ್ಳುತ್ತವೆಯೋ ನಮ್ಮ ಕಾರ್ಯಾಚರಣೆಯು ಬದ್ಧವಾಗಿದೆಯೋ, ದೈವೀ ಆದರ್ಶದತ್ತ ಮಾನವಜಾತಿಯನ್ನು

---

[9] "Dharma is a word which has an ethical and practical, a natural and philosophical and a religious and spiritual significance and it may be used in any of these senses exclusive of the others. . . . Ethically it means the law of righteousness, the moral rule of conduct, or in a still more outward and practical significance social and political justice, or even simply the observation of the social law."

—SRI AUROBINDO
The Essays on the Gita, I Series, p. 211.

[10] ಧೃ ಎಂಬ ಧಾತುವಿಗೆ ಧಾರಣೆ, ಆಧಾರ ಎಂಬುದರಿಂದ ಧರ್ಮ ಎಂಬ ಪದವಾಗಿದೆ.

ಬೆಳೆಸುವುದಕ್ಕೂ, ನಾವೇ ಸ್ವತಃ ಆ ಆದರ್ಶದತ್ತ ಬೆಳೆಯಲು ನಾವು ಇತರರೊಡನೆ ಇಟ್ಟುಕೊಳ್ಳುವ ಸಂಬಂಧಕ್ಕೂ ಧರ್ಮ ಎಂದಾಗುತ್ತದೆ."[11]

ಹೀಗೆ "ಧರ್ಮ ಎಂಬುದು ಅದರ ಅತ್ಯಂತ ಪರಿಪೂರ್ಣ, ವಿಶಾಲವಾದ, ಆಳವಾದ, ಅರ್ಥದಲ್ಲಿ ಮಾನವಕುಲದ ಆಧ್ಯಾತ್ಮಿಕ ವಿಕಾಸವನ್ನುಂಟುಮಾಡಲು, ಆ ಆಧ್ಯಾತ್ಮಿಕ ವಿಕಾಸದ ಪರಿಸರವನ್ನು ಮತ್ತು ಪರಿಣಾಮವನ್ನು ಆ ಮಾನವ ಕುಲದಮೇಲೆ ಉಂಟುಮಾಡಲು **ದೈವೇಚ್ಛೆಯೂ ಮತ್ತು ದೈವೀಜ್ಞಾನವು ಅನುಸರಿಸುವ ಅಂತರಂಗ ಬಾಹ್ಯ ನಿಯತಿಯೇ ಧರ್ಮ**"[12]

೪

'ಧರ್ಮ' ಎಂಬ ಪದದ **ಮೊದಲನೆಯ** ಸಂಕುಚಿತ ಪರಿಮಿತಿವ್ಯಾಪ್ತಿಯ ಅರ್ಥವನ್ನೂ **ಎರಡನೆಯ**, ವಿಶಾಲವಾದ ಆಳವಾದ ಪರಿಪೂರ್ಣ ಅರ್ಥವನ್ನೂ ಮೇಲಿನ ಶ್ರೀ ಅರವಿಂದರ ವ್ಯಾಖ್ಯೆಯ ಬೆಳಕಿನಲ್ಲಿ ತಿಳಿದುಕೊಂಡರೆ, ಧರ್ಮ ಎಂಬ ಪದವನ್ನು ಲಕ್ಷ್ಮಣ ಯಾವ ಅರ್ಥದಲ್ಲಿ ಉಪಯೋಗಿಸುತ್ತಿದ್ದಾನೆ, ರಾಮ ಯಾವ ಅರ್ಥದಲ್ಲಿ ಉಪಯೋಗಿಸುತ್ತಿದ್ದಾನೆ ಎಂಬುದನ್ನು ಗ್ರಹಿಸುವುದು ಈಗ ಕಷ್ಟವಾಗಲಾರದು. 'ಧರ್ಮವಿಲ್ಲದಾ ನೀಚನೃಪನಂ ಪ್ರಜಾಶಕ್ತಿ ಸಂಹರಿಪಂತೆ ಕೊಲೆಗರ್ಹನಲ್ತೆ ನಾಣಿಲಿ ತಂದೆ' ಎಂದು ಲಕ್ಷ್ಮಣನು ಕೋಪಾಟೋಪದಿಂದ ಆರ್ಭಟಿಸುವಾಗ, ಲೋಕಸಾಮಾನ್ಯದ, ವ್ಯಾವಹಾರಿಕವಾದ, ಋಜುಮಾರ್ಗಾನುವರ್ತನೆ,

---

[11] "Dharma in the Indian conception is not merely the good, the right, morality and justice, ethics . . . Dharma is both that which we hold to and that which holds together our inner and outer activities. In its primary sense it means a fundamental law of our nature which secretly conditions all our activities, and in this sense each being, type, species, individual, group has its own dharma. *Secondly* there is the divine nature which has to develop and manifest in us, and in this sense dharma is the law of the inner workings by which that grows in our being. *Thirdly* there is the law by which we govern our outgoing thought and action and our relations with each other so as to help best both our own growth and that of the human race towards the divine ideal."

—Sri Aurobindo
Essays on the Gita, I Series, p. 214

[12] "Take the idea of the Dharma in its fullest, deepest and largest conception as the inner and the outer law by which the divine will and wisdom work out the spiritual evolution of mankind and its circumstances and results in the life of the race."

—Sri Aurobindo
Ibid, p. 213.

ಸಾಮಾಜಿಕ ಹಾಗೂ ರಾಜಕೀಯ ನ್ಯಾಯವನ್ನೇ ತನ್ನ ಕಣ್ಮುಂದೆ, ಮನಸ್ಸಿನ ಮುಂದೆ ಇಟ್ಟುಕೊಂಡಿದ್ದಾನೆ. ಆದರೆ 'ಧರ್ಮ ಸಹಿತಂ ವಿಪಿನವರಮನೆ, ಧರ್ಮ ರಹಿತಮಾ ರತ್ನ ಮಯ ರಾಜಸೌಧಂ ಶ್ಮಶಾನಕೆ ಮಿಗಿಲ್ ಭೀಕರಂ' ಎಂದು ಶ್ರೀರಾಮಚಂದ್ರನು ಅರಣ್ಯವಾಸಕ್ಕೆ ತೆರಳುವಾಗ ಮಾನವಕುಲದ ಆಧ್ಯಾತ್ಮಿಕ ವಿಕಾಸವನ್ನುಂಟು ಮಾಡಲು ದೈವೇಚ್ಛೆಯು ಅನುಸರಿಸುವ ಅಂತರಂಗ ಬಾಹ್ಯ ನಿಯತಿ ಎಂಬ ಅರ್ಥ ಅವನ ಮನದ ಮುಂದಿದೆ!

ಶ್ರೀರಾಮಚಂದ್ರ ಭೂಲೋಕದಲ್ಲಿ ಅವತರಿಸಿದುದು, ಇದುವರೆಗೆ ಬಹುಜನರು ಸಾಮಾನ್ಯವಾಗಿ ತಿಳಿದುಕೊಂಡಂತೆ, ಧರ್ಮಕಂಟಕರಾದ ರಾವಣ ಕುಂಭಕರ್ಣರನ್ನು ವಧಿಸಲಿಕ್ಕಾಗಿಯೇ ಮಾತ್ರವಲ್ಲ. ಶ್ರೀರಾಮನು ಅವತರಿಸದೆ ಇದ್ದಿದ್ದರೂ, ಹುಟ್ಟಿದವರೆಲ್ಲರೂ ಸಾಯಲೇಬೇಕೆಂಬ ನಿಯಮದಂತೆ ರಾವಣ ಕುಂಭಕರ್ಣರು ಸ್ವಲ್ಪ ತಡವಾಗಿಯಾದರೂ ಕಾಲವಶರಾಗಿಯೇ ಆಗುತ್ತಿದ್ದರು. ಹಾಗೆ ಅವರು ನಿಸರ್ಗನಿಯಮಕ್ಕೆ ಒಳಗಾಗಿ ಅನಿವಾರ್ಯವಾಗಿಯೂ ಖಂಡಿತವಾಗಿಯೂ ಸಾಯುತ್ತಿದ್ದವರನ್ನು ಕೊಲ್ಲುವುದಕ್ಕಾಗಿಯೇ ಶ್ರೀವಿಷ್ಣು ಅವತಾರವೆತ್ತಿ ಬರಬೇಕಾಯಿತು ಎಂಬುದು ಬೆಳೆದುನಿಂತ ಮಾನವಬುದ್ಧಿಗೆ ಅಷ್ಟೇನೂ ಸಮರ್ಪಕವಾಗಿ ತೋರುವುದಿಲ್ಲ. ಆದ ಕಾರಣ ಶ್ರೀರಾಮನ ಅವತಾರಕ್ಕೆ ರಾವಣ ಕುಂಭಕರ್ಣರ ವಧೆಗಿಂತಲೂ ಗಹನವಾದ, ಮಹತ್ತರವಾದ, ಪರಿಪೂರ್ಣವಾದ ಅರ್ಥ, ಉದ್ದೇಶ ಇದ್ದಿರಲೇಬೇಕು. ಆ ಉದ್ದೇಶ, ಅಂದಿನ ಮಾನವಕುಲದ ಮತ್ತು ಅದರ ಮುಂದಿನ ಇಂದಿನವರೆಗೂ ಆಗಿರುವ ಇನ್ನು ಮುಂದೆಯೂ ಆಗಲಿರುವ ಅಸಂಖ್ಯಾತ ಮಾನವಕುಲದ, ಅಷ್ಟೇ ಏಕೆ "ಸೃಷ್ಟಿಯ ಸಮಷ್ಟಿಪ್ರಜ್ಞೆಯ ಸಾಮೂಹಿಕ ವಿಕಾಸಕ್ಕಾಗಿಯೂ, ಸರ್ವತೋಮುಖವಾದ ಚೈತನ್ಯೋನ್ಮೇಷನಕ್ಕಾಗಿಯೂ, ನವೋನವ ಋತಶಕ್ತಿ ಪ್ರಕಾಶನಕ್ಕಾಗಿಯೂ"[13] ಎಂಬುದಾಗಿರಲೇಬೇಕು. ಶ್ರೀರಾಮಚಂದ್ರ ಸಂಸ್ಥಾಪನೆ ಮಾಡಬೇಕಾಗಿದ್ದ ಧರ್ಮವೂ ಇದೇ: ಮಾನವಕುಲವು ಆಧ್ಯಾತ್ಮಿಕ ವಿಕಾಸವನ್ನುಂಟುಮಾಡಲು ದೈವೇಚ್ಛೆಯು ಅನುಸರಿಸುವ ಅಂತರಂಗ ಬಾಹ್ಯ ನಿಯಮವನ್ನು ಪರಿಪಾಲಿಸುವುದೇ ಆಗಿದೆ.

ಸೃಷ್ಟಿಯ ಸಮಷ್ಟಿಪ್ರಜ್ಞೆಯ ಸಾಮೂಹಿಕ ವಿಕಾಸ, ಮಾನವಕುಲದ ಆಧ್ಯಾತ್ಮಿಕ ವಿಕಾಸ ತನ್ನಿಂದ ಹೇಗೆ ಹೇಗೆ, ಯಾವ ಯಾವ ರೀತಿಯಲ್ಲಿ, ಯಾವ ಯಾವಾಗ ಆಗಬೇಕೆಂಬುದನ್ನು ಶ್ರೀರಾಮಚಂದ್ರ ತರ್ಕಬುದ್ಧಿಯಿಂದ ಅರಿತಿಲ್ಲ

[13] ಶ್ರೀ ಕುವೆಂಪು ಅವರ, ಶ್ರೀಕೃಷ್ಣಜನ್ಮಾಷ್ಟಮಿ ಎಂಬ ದರ್ಶನಪ್ರಬಂಧ. ಪ್ರಬುದ್ಧ ಕರ್ಣಾಟಕ ಸಂಪುಟ ೩೬, ಸಂಚಿಕೆ ೪, ಪುಟ ೯.

ದಿದ್ದರೂ, ತನ್ನ ಅಂತರ್ದೃಷ್ಟಿಯಿಂದ (Intutive mind) ಕಂಡಿದ್ದ. ಅವನು ಪರಿಪಾಲಿಸಬೇಕಾಗಿದ್ದ ಧರ್ಮ ಬುದ್ಧಿನಿರ್ಮಿತ ತರ್ಕವಲ್ಲ (Intellectual construction), ಹೃದಯಗೋಚರ ಸತ್ಯ. ಮುಂದೆ ಶ್ರೀರಾಮ ಏನೇನು ಮಾಡಬೇಕು ಎಂಬುದನ್ನು ಆ ವಿರಾಡ್‌ಮನ ಆಗಲೇ ನಿರ್ಧರಿಸಿದೆ. ಆ ವಿರಾಡ್‌ಮನ ಬರೆದಿಟ್ಟ ವೇಳಾಪಟ್ಟಿಯಂತೆ (Time-table) ಕಾರ್ಯಕ್ರಮದಂತೆ (Programme) ಒಂದೂ ಕೂದಲೆಳೆಯಷ್ಟೂ ತಪ್ಪದೆ ನಡೆದೇ ನಡೆಯುತ್ತದೆ. ಆ ವೇಳಾಪಟ್ಟಿ ಕಾರ್ಯಕ್ರಮ ನಮ್ಮ ಕಣ್ಣು ಕಿವಿ ಮನಸ್ಸು ಬುದ್ಧಿಗಳಿಗೆ ಗೋಚರವಾಗದೆ ಇರಬಹುದು. ಆದರೆ ಇರುವ ಆ ಸತ್ಯ ನಮಗೆ ಗೋಚರವಾಗದಿದ್ದ ಮಾತ್ರಕ್ಕೆ, ಇಲ್ಲವೆಂದಲ್ಲ. ನಮಗೆ ತಿಳಿಯಲಿ ತಿಳಿಯದೆ ಇರಲಿ, ತರ್ಕಕ್ಕೆ ಮೆಚ್ಚಿಕೆಯಾಗಲಿ ಆಗದಿರಲಿ ಆ ಸತ್ಯ, ಆ ಕಾರ್ಯಕ್ರಮ, ಚಾಚೂತಪ್ಪದೆ ನೆರವೇರಿಯೇ ತೀರುವುದು. ವಿಧಿಯು, ಆ ವಿರಾಡ್ ಮನದ ಉದ್ದೇಶಕ್ಕೆ ನೆರವಾಗುವ

"ಮಂಥರೆ ಸೀತೆ ರಾಮ ರಾವಣರೆಲ್ಲರುಂ
ಸೂತ್ರಗೊಂಬೆಗಳಲ್ತೆ ಆ ವಿಧಿಯ ಹಸ್ತದಲಿ?" 14

ಶ್ರೀರಾಮನು ಇಲ್ಲಿ ವನವಾಸಕ್ಕೆ ಹೊರಡುವುದೂ ಆ ವಿಧಿವಿನ್ಯಾಸದ, ವಿರಾಡ್ ಮನದ, ದೈವೇಚ್ಛೆಯ, ದೈವೀಪ್ರಜ್ಞೆಯು ಅನುಸರಿಸಬೇಕೆಂದು ವಿಧಿಸಿದ ಒಂದು ಅನಿವಾರ್ಯವಾದ ಘಟನೆ. ನ್ಯಾಯವಾಗಿ ನೋಡಿದರೆ, ಶ್ರೀರಾಮನು ಅರಣ್ಯಕ್ಕೆ ಹೋಗುವುದಕ್ಕೆ ಮುಂಚೆಯೇ—ಬಹುಶಃ ಅವನು ಅವತರಿಸುವ ಮುಂಚೆಯೇ ರಾಮ ರಾವಣರ ಯುದ್ಧ ನೆರವೇರಿದೆ—ವಿಧಿಯ ಭಾವದಲ್ಲಿ. ಅದನ್ನು ರಾಮ ರಾವಣರು ಭವದಲ್ಲಿ ತೋರಿಸಿದರು ಅಷ್ಟೆ. ಇದೇ ಸತ್ಯವನ್ನು ಶ್ರೀಕೃಷ್ಣಪರಮಾತ್ಮ ಭಗವದ್ಗೀತೆಯಲ್ಲಿ ಅರ್ಜುನನಿಗೆ ತೋರಿಸುವನು. ಇನ್ನೂ ಕುರುಕ್ಷೇತ್ರ ಯುದ್ಧ ನಡೆಯಬೇಕಾಗಿದೆ. ಅರ್ಜುನನಿನ್ನೂ ಯುದ್ಧ ಮಾಡಬೇಕಾಗಿದೆ. ಭೀಷ್ಮ ದ್ರೋಣ ಕರ್ಣರು ಇನ್ನೂ ಯುದ್ಧರಂಗದಲ್ಲಿ ಬೀಳಬೇಕಾಗಿದೆ. ಆದರೆ, ಅರ್ಜುನನು ಗಾಂಢೀವಿಯನ್ನು ಕೆಳಗಿಳಿಸಿ ಯುದ್ಧ ಮಾಡುವುದಿಲ್ಲವೆಂದು ಕೈಕಟ್ಟಿ ಕುಳಿತಿದ್ದರೂ:

"ಅಮೀ ಚ ತ್ವಾಂ ಧೃತರಾಷ್ಟ್ರಸ್ಯ ಪುತ್ರಾಃ ಸರ್ವೇಸಹೈವಾವನಿಪಾಲಸಂಘೈಃ |
ಭೀಷ್ಮೋದ್ರೋಣಃ ಸೂತಪುತ್ರಸ್ತಥಾಸೌ ಸಹಾಸ್ಮದೀಯೈರಪಿ ಯೋಧಮುಖ್ಯೈಃ ||
ವಕ್ತ್ರಾಣಿ ತೇ ತ್ವರಮಾಣಾ ವಿಶಂತಿ ದಂಷ್ಟ್ರಾಕರಾಲಾನಿ ಭಯಾನಕಾನಿ |
ಕೇಚಿದ್ವಿಲಗ್ನಾ ದಶನಾಂತರೇಷು ಸಂದೃಶ್ಯಂತೇ ಚೂರ್ಣಿತೈರುತ್ತಮಾಂಗೈಃ" ||

ಗೀತೆ. ಅಧ್ಯಾಯ XI. ಶ್ಲೋಕ ೨೬-೨೭

---

14 ಶ್ರೀ ರಾ. ದ. ಮಹಾ ಸಂಪುಟ ೧. ಅಯೋಧ್ಯಾ ಸಂಪುಟ. ಪುಟ ೫೯. ಸಾಲು ೧೩೩-೩೪.

"ರಾಜ ಸಮೂಹಗಳಿಂದ ಕೂಡಿರುವ ಧೃತರಾಷ್ಟ್ರನ ಈ ಸಮಸ್ತ ಪುತ್ರರು ಭೀಷ್ಮ ದ್ರೋಣ ಮತ್ತು ಕರ್ಣ—ಇವರೆಲ್ಲಾ ನಮ್ಮ ಮುಖ್ಯರಾದ ಯೋಧರಿಂದ ಕೂಡಿ, ಕೋರೆದಾಡೆಗಳಿಂದ ಕರಾಳವೂ ಭಯಂಕರವೂ ಆದ ನಿನ್ನ ಮುಖಗಳನ್ನು ತ್ವರೆಯಿಂದ ಪ್ರವೇಶಿಸುತ್ತಿರುವರು. ಕೆಲವರು ನಿನ್ನ ಹಲ್ಲಿನ ಸಂದುಗಳಲ್ಲಿ ಸಿಕ್ಕಿಕೊಂಡು ಪುಡಿಪುಡಿಯಾದ ತಲೆಗಳಿಂದ ಕಾಣುತ್ತಿರುವರು."[15] ಅರ್ಜುನನು ಒಂದು ಅಂಬನ್ನೂ ತನ್ನ ಬಿಲ್ಲಿನ ಹೆದೆಗೆ ಹೂಡದೆ ಇದ್ದರೂ, ಆಗಲೇ ಭೀಷ್ಮ ದ್ರೋಣ ಕರ್ಣರು ಹತರಾದುದನ್ನು ಶ್ರೀಕೃಷ್ಣಪರಮಾತ್ಮ ಮೊದಲೇ ತೋರಿಸಿಬಿಡುತ್ತಾನೆ. ಎಂದರೆ, ಏನಾಗಬೇಕೆಂಬುದನ್ನು ಆಗಲೇ ನಾನು ನಿರ್ಧರಿಸಿಬಿಟ್ಟಿದ್ದೇನೆ. ಅದರಂತೆ ಆಗಿಯೇ ಆಗುತ್ತದೆ. ಆದರೆ ನೀನೀಗ ನಿಮಿತ್ತಮಾತ್ರನಾಗಿರು" ಎಂದು ಶ್ರೀಕೃಷ್ಣ ಬೋಧಿಸುತ್ತಾನೆ.

ಇಲ್ಲಿಯಾದರೂ ಆಗಬೇಕಾದುದೂ ಅಷ್ಟೇ. ಸೃಷ್ಟಿಯ ಸಮಷ್ಟಿಪ್ರಜ್ಞೆಯ ಸಾಮೂಹಿಕ ವಿಕಾಸವನ್ನು ಮಾನವಕುಲದ ಆಧ್ಯಾತ್ಮಿಕ ವಿಕಾಸವನ್ನುಂಟು ಮಾಡುವ ಧರ್ಮಸಂಸ್ಥಾಪನೆಯ ಕಾರ್ಯ ಶ್ರೀರಾಮಚಂದ್ರನಿಂದ ಆಗಬೇಕಾಗಿದೆ. ಅದನ್ನೇ ಮಹಾಕವಿ ಕುವೆಂಪು ಧ್ವನಿಪೂರ್ಣವಾಗಿ ಸೂಚಿಸಿದ್ದಾರೆ:

"   ಕಬಂಧನ ಮೊರೆಯೋ?
ಶಬರಿಯ ಕರೆಯೊ? ರಾಮನಾತ್ಮಾಭಿಲಾಷಿತಮೊ?
ಪಾತ್ರಂಗಳಂತರಾಳದಿ ತನ್ನ ಸೂತ್ರಂಗಳಂ
ನಡೆಯಿಪಂತರ್ಯಾಮಿ ಶಕ್ತಿಯ ವಿಲಾಸಿತಮೊ?"[16]

ಕಬಂಧನ ರಾಕ್ಷಸತನ ಅಳಿದು ಆಧ್ಯಾತ್ಮಿಕ ಪ್ರಗತಿ ಉಂಟಾಗಬೇಕಿತ್ತು. ಶಬರಿಯ ತಪಸ್ಸು ಫಲಿಸಿ ದೈವಸಾಕ್ಷಾತ್ಕಾರವುಂಟಾಗಬೇಕಾಗಿತ್ತು. ಹಾಗೆಯೇ ಶ್ರೀರಾಮಚಂದ್ರನು ಸೃಷ್ಟಿಯ ಸಮಷ್ಟಿಪ್ರಜ್ಞೆಯ ಸಾಮೂಹಿಕ ವಿಕಾಸವನ್ನು ಮಾನವ ಕುಲದ, ಒಟ್ಟು ಸೃಷ್ಟಿಯ ಆಧ್ಯಾತ್ಮಿಕ ವಿಕಾಸವನ್ನು ಸಾಧಿಸಬೇಕಾಗಿತ್ತು. ಆದ್ದರಿಂದಲೇ:

"   ನಿತ್ಯಮೆನ್ನಂ ಕರೆವ
ಕನಸೊಂದನೊರೆವೆನಾಲಿಪುದು. ಏನೆಂದರಿಯೆನಾಂ.
ಗೋಚರಿಸುತಿವೆ ಕಡಲ್ ಕಾಡುಗಳ್, ತರತರದ
ಪ್ರಾಣಿಗಳ್, ಪರ್ವತಶ್ರೇಣಿಗಳ್. ದಿನದಿನಂ
ಗಿರಿಸದೃಶ ಭವ್ಯನೊರ್ವಂ ಮಹಾವಾನರಂ

[15] ಶ್ರೀಮದ್ಭಗವದ್ಗೀತಾ. ಶ್ರೀ ಸ್ವಾಮಿ ಆದಿದೇವಾನಂದರು. ಪುಟ ೧೩೨.
[16] ಶ್ರೀ ರಾ. ದ. ಮಹಾ ಸಂಪುಟ ೧. ಪುಟ ೭೨. ಸಾಲು ೪೮೧-೮೪.

ಬೆಳಬೆಳೆಯುತಾಕಾಶ ಚುಂಬಿ ಶೈಲಾಗ್ರದೊಳ್
ವಿಸ್ತೃತವ್ಯೋಮ ಪಟಕೆದುರಾಗಿ ನಿಂದೆನಗೆ
ಕೈವೀಸಿ ಕರೆಯುತಿರ್ಪನ್ ದಕ್ಷಿಣಾಪಥಕೆ.
ಮನಮರಿಯದದರರ್ಥಮಂ ; ತುಡಿವುದಾತ್ಮವಾ
ದೆಸೆಗೆ. ಆ ಕರೆಯ ಕೂರ್ಮೆಯಿ ಇಲ್ಲಿ ನಮ್ಮ ಬಾಳಂ
ಕಡೆದು ತೆರೆತೆರೆಯಬ್ಬಿಸಿರ್ಪುದೆನೆ, ದೈವಮಂ
ವಿೀರ್ವರಾರ್ ? ”[17]

ಹೀಗೆ ಶ್ರೀರಾಮಚಂದ್ರನಿಂದ ಸಂಸ್ಥಾಪನೆಯಾಗಬೇಕಾದ ಧರ್ಮ—ಸಮಸ್ತ ಸೃಷ್ಟಿಯ ಸಾಮೂಹಿಕ ಪ್ರಜ್ಞೆಯ ವಿಕಾಸ, ಇಡೀ ವಿಶ್ವದ, ಮಾನವಕುಲದ ಆಧ್ಯಾತ್ಮಿಕ ವಿಕಾಸ—ವಿಧಿ ತಾನೇ ಮೊದಲೇ ನಿರ್ಧರಿಸಿದ ರೀತಿಯಲ್ಲಿ ಸಂಸ್ಥಾಪನೆಯಾಗಬೇಕಾಗುತ್ತದೆ. ಈ ಗುರಿಯ ಸಾಧನೆಯಲ್ಲಿ ರಾಮಚಂದ್ರ ಅರಣ್ಯಪ್ರವೇಶ ಮಾಡಬೇಕಾಗಿ ಬಂದುದೇನೂ ಅನಿಷ್ಟವಲ್ಲ. ಅಧರ್ಮವಲ್ಲ. ಪರಶುರಾಮಾವತಾರದಲ್ಲಿ ತಾಯಿಯನ್ನೇ ಕೊಲ್ಲುವುದರಲ್ಲಿ ಯಾವ ಧರ್ಮವಿದೆ ? ಆ ಆಧ್ಯಾತ್ಮಿಕ ವಿಕಾಸಕ್ಕೆ, ಸೃಷ್ಟಿಯ ಸಮಷ್ಟಿಪ್ರಜ್ಞೆಯ ಸಾಮೂಹಿಕ ವಿಕಾಸಕ್ಕೆ, ಏನೇನು ಬೇಕೋ—ತಾಯಿ ರೇಣುಕೆಯನ್ನೇ ಕೊಲ್ಲುವುದರಿಂದ ಹಿಡಿದು, ವೈರಿ ರಾವಣನನ್ನು ಕೊಲ್ಲುವುದರ ವರೆಗೆ—ಎಲ್ಲವೂ ನಡೆಯಲೇಬೇಕು.

“ ನಡೆವುದೆಲ್ಲಮುಂ
ನಡೆವುದೊಳ್ಪಿಗೆ : ಸರ್ವಶಕ್ತಿಯ ಜ್ಞಾನಮುಂ
ಮತ್ತೆ ಕಲ್ಯಾಣಮುಂ ತಾನಪ್ಪ ಕೃಪೆ ತಾನೆ
ಪಿಡಿದಿದೆ ಜಗದ್‌ರಥವನೆಳೆವ ಶಕ್ತ್ಯಶ್ವಕುಲ
ವಾಘೆಯಂ ! ”[18]

ಅದರಲ್ಲಿ ಮೇಲು ಕೀಳುಗಳೆಂಬುವಿಲ್ಲ. ಒಳಿತು ಕೆಡುಕುಗಳೆಂಬುವಿಲ್ಲ. ಎಲ್ಲರೂ ಅವನಿಂದ ನಡೆಯುವ ಕಾರ್ಯವೆಂದು, ಅವನೇ ಕಾರಣನೆಂದು ಅವನ ಕೈಯಲ್ಲಿ ಮಂಥರೆ ಕೈಕೆ ರಾಮರಾವಣರೆಲ್ಲ ಕೇವಲ ಕರಣಗಳಾಗುತ್ತಾರೆ. ಅವರು ಮಾಡುವುದೇನಿದ್ದರೂ ಅವರು ಮಾಡಿದಂತೆಯೇ ಅಲ್ಲ. ಎಲ್ಲವುದನ್ನು ಮಾಡುವವನೂ ಅವನೇ. ಹೀಗೆ ಸ್ಥಿತಪ್ರಜ್ಞನಂತೆ, ಯೋಗಿಯಂತೆ, ಕುಶಲಿಯಾದ ಕರ್ಮಿಯಾಗಿ ನಿಸ್ತ್ರೈಗುಣ್ಯನಾಗಿ ಎಲ್ಲವುವನ್ನೂ ಮಾಡುತ್ತಾನೆ ಶ್ರೀರಾಮಚಂದ್ರ. ಸರ್ವಧರ್ಮವನ್ನೂ ಪರಿತ್ಯಜಿಸಿ ಅವನಲ್ಲೇ ಶರಣಾಗತನಾಗಿ ಏನುಮಾಡಿದರೂ ಮಾಡದಂತೆ, ಏನೂ

17 ಶ್ರೀ ರಾ. ದ. ಮಹಾ ಸಂಪುಟ ೧. ಪು. ೮೧-೮೨. ಸಾಲು ೯೬-೧೦೬.

18 ಅದೇ. ಪುಟ ೭೬. ಸಾಲು. ೬೦೧ ರಿಂದ ೬೦೪.

ಮಾಡದೆ ಎಲ್ಲವನ್ನೂ ಮಾಡಿದಂತೆ ಶ್ರೀರಾಮಚಂದ್ರ ಇಲ್ಲಿ ಕಾಡಿಗೆ ಹೋಗುತ್ತಾನೆ. ಆದ್ದರಿಂದಲೇ, ಅವನು ಅರಣ್ಯಕ್ಕೆ ಹೊರಟಾಗ ಕೋಸಲದೇಶವೆಲ್ಲ ಹೃದಯ ಇಬ್ಭಾಗವಾಗುವಂತೆ ಗೋಳಿಟ್ಟರೂ

ಜಾನಕಿಯ ಪತಿ
ಕುರಿತು ಕೌಸಲ್ಯೆಯಂ : "ನೀನಳಲದಿರು, ತಾಯೆ ;
ಕಿರಿದು ಬೇಗನೆ ಮುಗಿಸಿ ಬರ್ಪೆನೆಂಟಾರರಾ
ವನವಾಸಮಂ . . . .
ಹೋಗಿಬರುವೆನು ಹರಕೆಗೈ, ತಾಯೆ ; ದುಃಖಿಸದೆ
ಹರಕೆಗೈ. ಕೋಸಲಕ್ಷೇಮಕ್ಕೆ ಹರಕೆಗೈ.
ರವಿಕುಲದ ಜಸಕಾಗಿ ಹರಕೆಗೈ. ಸತ್ಯಕ್ಕೆ
ಧರ್ಮಕ್ಕೆ, ಪಿತೃವಾಕ್ಯಪರಿಪಾಲನಕ್ಕೆ, ಮೇಣ್
ನಿನ್ನೀ ಕುಮಾರನಾತ್ಮೋದ್ಧಾರಕೋಸುಗಮೆ
ಹರಕೆಗೈ ; ಹರಕೆಗೈ ! ಹೋಗಿಬರುವೆನು, ತಾಯೆ ; "[19]

ಎಂದು ಹೇಳುತ್ತಾನೆ. ಶ್ರೀರಾಮಚಂದ್ರನು ಸ್ಥಾಪಿಸಬೇಕೆಂದಿರುವ, ಪಾಲಿಸಬೇಕೆಂದಿರುವ ಧರ್ಮ ಯಾವುದೆಂಬುದನ್ನು ತಿಳಿದಾಗ ನಾವು ಅಂತ್ಯಂತ ಸಮಾಧಾನದಿಂದ ಶ್ರೀರಾಮನನ್ನು ಅರಣ್ಯಕ್ಕೆ ಬೀಳುಕೊಡುತ್ತೇವೆ. ಧರ್ಮ ಸಂಸ್ಥಾಪನೆಯ ಕಾರ್ಯದಲ್ಲಿ ಭಾಗಿಗಳಾಗುತ್ತೇವೆ.

ಕೋ. ಚೆನ್ನಬಸಪ್ಪ

---

[19] ಶ್ರೀ ರಾ. ದ. ಮಹಾ ಸಂಪುಟ ೧. ಪು. ೮೩-೮೪.

ಅಂತರ್ವಾಣಿ*

ಅಸ್ಮಾಸ್ವಂತರಹರ್ನಿಶಂ ಪ್ರಚಲಿತಂ ಸಂಗೀತಮೈಶಂ ಪರಂ
ದೃಷ್ಟೇರ್ವಾ ಶ್ರವಣದ್ವಯಸ್ಯ ಕಿಮು ವಾ ಬಾಹ್ಯೇಂದ್ರಿಯಾಣಾಂ ತಥಾ।
ಅರ್ಥಾದಾಕಲಿತಾದತೀವ ಸರಸಂ ಭಿನ್ನಂ ಚ ತತ್ಪೇಶಲಂ
ಸಂಗೀತಂ ರಭಸಾನ್ನಿಮೀಲಯತಿ ಸಾ ತಾರೇಂದ್ರಿಯಾಣಾಂ ಕ್ರಿಯಾ ॥

ನಮ್ಮ ಅಂತರಂಗದಲ್ಲಿ ಆ ದಿವ್ಯ ಗಾನವು ಅನವರತವೂ ಅನುರಣಿತವಾಗುತ್ತಿದೆ. ಸರ್ವಶ್ರೇಷ್ಠವಾದ ಆ ಮಂದ್ರನಾದವನ್ನು ಇಂದ್ರಿಯಗಳ ಗದ್ದಲವು ಮುಳುಗಿಸುತ್ತಿದೆ.

—ಮಹಾತ್ಮಾ ಗಾಂಧಿ.

---

* ಡಾ|| ಸಿ. ಡಿ. ದೇಶಮುಖ್‌ರವರ ಸಂಕಲನ. 'ಶ್ರೀಯುತರು ಮಹಾತ್ಮರ ನೂರು ಮುಕ್ತಕ ಸದೃಶ ನುಡಿಗಳನ್ನು ಮೇಲಿನಂತೆ ಸಂಸ್ಕೃತಕ್ಕೆ ಅನುವಾದ ಮಾಡಿ "ಗಾಂಧೀ ಸೂಕ್ತ ಮುಕ್ತಾವಲೀ" ಎಂಬ ಹೆಸರಿನಿಂದ ಪ್ರಕಟಿಸಿದ್ದಾರೆ. ಪ್ರಕಾಶಕರು : ಗಾಂಧೀ ಸ್ಮಾರಕನಿಧಿ, ರಾಜಘಾಟ್, ಹೊಸ ದೆಹಲಿ.

ಕವಿ–ಸಹೃದಯ*

ಮಾನ್ಯರೇ, ಮಿತ್ರರೇ,

ಈ ಗೋಷ್ಠಿಯಲ್ಲಿ ನನ್ನನ್ನು ಆದರಿಸಿ ಈ ಸ್ಥಾನದಲ್ಲಿ ಕುಳ್ಳಿರಿಸಿದುದಕ್ಕಾಗಿ ತಮಗೆಲ್ಲ ತುಂಬ ಕೃತಜ್ಞನಾಗಿದ್ದೇನೆ. ಇಂಥ ಸೇರುವೆಯಲ್ಲಿ ಎಲ್ಲರೂ ಪ್ರಧಾನರೇ. ಏರುಪೇರುಗಳೇನಿದ್ದರೂ ಅವು ವ್ಯಾವಹಾರಿಕ ಜಗತ್ತಿಗೆ ಸಂಬಂಧಪಟ್ಟವು. ರಸ ರಾಜ್ಯದಲ್ಲಿ ವಿಷಮತೆಗಾಗಲಿ ಅಸಮತೆಗಾಗಲಿ ಎಡೆಯಿರದು. ಪರಸ್ಪರ ಭಾವನೆಯಿಂದ ಶ್ರೇಯಸ್ಸನ್ನು ಪಡೆಯಬೇಕೆಂಬುದೇ ಇಂಥ ಸರಸ ಸುಹೃತ್‌ಗೋಷ್ಠಿಗಳ ಉದ್ದೇಶ. ಈ ತೆರದ ಕವಿ– ಸಹೃದಯ ಸಮ್ಮೇಳನದಲ್ಲಿ ನಾವು ಬಯಸುವುದು ತಾನೇ ಏನನ್ನು— ಸೌಮನಸ್ಯವನ್ನಲ್ಲದೆ, ಚಿತ್ತೋತ್ಕರ್ಷವನ್ನಲ್ಲದೆ, ಸತ್ತ್ವಸಮೃದ್ಧಿಯನ್ನಲ್ಲದೆ? ಏಕೆಂದರೆ, ಒಳ್ಳೆಯ ಕಾವ್ಯ ಕೊಡಬೇಕಾದ ಫಲ ಇವು.

ಆದರೆ ಸತ್‌ಕಾವ್ಯ ನಾವು ಬಯಸುವಷ್ಟು ಸುಲಭವಾಗಿ ಸಿಕ್ಕುವ ವಸ್ತುವಲ್ಲ. ದೊರೆತರೆ ನಮ್ಮ ಭಾಗ್ಯ ಅಷ್ಟೆ. ಸತ್‌ಕವಿಯಿಂದ ಸತ್‌ಕಾವ್ಯದ ಪಡೆವು ನಮಗೆ. ಅಂಥ ಕವಿಯೋ ಯೋಗಿ, ಸಂತ, ಭಕ್ತರಷ್ಟೇ ದುರ್ಲಭ. ಕುಶಲನಾದ ಕವಿಯೂ ಕೂಡ ಒಂದು ಕವಿತೆ ತನ್ನಿಂದಾಯಿತು ಎನ್ನುವಷ್ಟು ಧಾರ್ಷ್ಟ್ಯಕ್ಕೆ ಹೋಗುವುದಿಲ್ಲ. ಇದು ಸರಸ್ವತೀ ಪ್ರಸಾದವೆನ್ನುತ್ತಾನೆ. ಕಾವ್ಯರಚನೆಯಲ್ಲಿ ಪ್ರಯತ್ನವೇನೋ ಬಹಳ; ಸಿದ್ಧಿ ವಿರಳ. ಒಳ್ಳೆಯ ಪದ್ಯವನ್ನು ರಚಿಸುವ ಕಷ್ಟವನ್ನರಿತ ಸುಸಂಸ್ಕೃತನಾದ ಹಳೆಯಕಾಲದ ಕವಿಯೊಬ್ಬನ ಈ ಹಲುಬಿಕೆಯನ್ನು ಕೇಳಿರಿ :—

> "ಅರ್ಥೋಽಸ್ತಿ ಚೇನ್ನ ಪದಶುದ್ಧಿರಥಾಸ್ತಿ ಸಾಪಿ
> ನೋ ರೀತಿರಸ್ತಿ ಯದಿ ಸಾ ಘಟನಾ ಕುತಸ್ತ್ಯಾ?
> ಸಾಪ್ಯಸ್ತಿ ಚೇನ್ನ ನವವಕ್ರಗತಿಸ್ತದೇತತ್
> ವ್ಯರ್ಥಂ ವಿನಾ ರಸಮಹೋ ಗಹನಂ ಕವಿತ್ವಂ"

"ಅರ್ಥವಿತ್ತು ಪದಶುದ್ಧಿಯಿಲ್ಲ. ಪದಶುದ್ಧಿಯಿತ್ತು, ರೀತಿಯಿಲ್ಲ, ಒಂದು ವೇಳೆ ರೀತಿಯೂ ಇತ್ತು, ಆಗ ಘಟನೆಯೆಲ್ಲಿದೆ? ಸುಸಾಂಗತ್ಯವೂ ಇತ್ತು ಆದರೆ ನವ ವಕ್ರಗತಿ ಯೆಲ್ಲಿ? ಒಂದುಪಕ್ಷ ಆದಿದ್ದರೂ ರಸವಿಲ್ಲದಿದ್ದರೆ ಎಲ್ಲ ವ್ಯರ್ಥ. ಕವಿತ್ವ ಬಹಳ ಕಷ್ಟದ ಕೆಲಸವಪ್ಪ." ಒಳ್ಳೆ ಪರಿಶ್ರಮಿಯ ಮಾತು—"ವ್ಯರ್ಥಂ ವಿನಾ ರಸಮಹೋ ಗಹನಂ

---

* ಬಳ್ಳಾರಿಯಲ್ಲಿ ನಡೆದ ೪೦ ನೆಯ ಸಾಹಿತ್ಯ ಸಮ್ಮೇಳನದ ಅಂಗವಾಗಿ ನಡೆದ ಕವಿಗೋಷ್ಠಿಯ ಅಧ್ಯಕ್ಷ ಭಾಷಣ. (ಜನವರಿ ೧೯, ೧೯೫೮).

ಕವಿತ್ವಂ "—ಅರ್ಥ, ಪದಶುದ್ಧಿ, ರೀತಿ, ಸಾಂಗತ್ಯ, ನವ ವಕ್ರಗತಿ ಮುಂತಾದುವುಗಳೆಲ್ಲ ಕಾವ್ಯತಂತ್ರಕ್ಕೆ ಸಂಬಂಧಿಸಿದ ವಿಷಯಗಳು. ರಸಮಾತ್ರ ಅದು ತಾನೊಲಿದವರಿ ಗುಂಟು ಮಿಕ್ಕವರಿಗಿಲ್ಲ. ಅದರ ನೆಲೆ ಸಿಕ್ಕರೆ ಮಿಕ್ಕೆಲ್ಲವೂ ತಮಗೆ ತಾವಾಗಿ ಯತ್ನ ಶಾಲಿಗೆ ದೊರೆಯುತ್ತವೆ—ಶುಭದಿಂದ ಕೂಡಿದವನಿಗೆ ಶುಭಶಕುನಗಳೊದಗುವ ತೆರದಲ್ಲಿ, "ಯಥಾ ಶ್ರಿಯಾಜುಷ್ಟಮಿವೋಪ ಜೀವಿನಃ." ರಸವೇ ಕಾವ್ಯದೈಸಿರಿ.

"ರಸ"ವೆಂದುಚ್ಚರಿಸಿದಕ್ಷಣ ನಾವು ಅಸ್ಪಷ್ಟಾರ್ಥವುಳ್ಳ ಶಬ್ದದ ತೊಡಕಿನಲ್ಲಿ ಸಿಕ್ಕಿಬೀಳುತ್ತೇವೇನೋ. "ಆತ್ಮ" ಶಬ್ದದಷ್ಟೇ ಗಹನವಾದ ಮಾತದು. ಇದರ ಅರ್ಥ ವಿವರಣೆಗೆ ತೊಡಗಿದರೆ ಪುಂಖಾನುಪುಂಖವಾಗಿ ಜಿಜ್ಞಾಸೆಯೇಳುವುದು ಸಹಜ. ಈ ದೇಹದಲ್ಲಿ ಪ್ರಾಣವೆಲ್ಲಿದೆ ಎಂದು ಕೇಳುವ ಹಾಗೆ, ಅಭಿನವಗುಪ್ತನ ಮಾತಿನಲ್ಲಿ, ಸರ್ವಾಂಗಸುಂದರಳಾದ ತರುಣಿಯಲ್ಲಿ ಲಾವಣ್ಯವೆಲ್ಲಿದೆ ಎಂದು ಹುಡುಕುವ ಹಾಗೆ, ಕಾವ್ಯದಲ್ಲಿ ರಸವೆಲ್ಲಿದೆ ಎಂದು ಕೇಳುವ ಮಾತೂ ಹಾಗೆಯೇ. ಅದು ಮುಕ್ತನಿಂದ ಮುಮುಕ್ಷುವಿಗೆ ಹರಿಯುವ ಸಮ್ಮೋದಲಹರಿ. ಅದರಿಂದ ನಮಗೆ ನಮ್ಮರಿವಿಕೆಯ ಅತ್ಯಂತ ಉತ್ಕೃಷ್ಟಾವಸ್ಥೆ ದೊರೆಯುತ್ತದೆ. ಅದು ನಮ್ಮ ಮನಸ್ಸನ್ನು ಶೋಕ ಮೋಹ ಭೂಯಿಷ್ಠವಾದ ದಿನಬಳಕೆಯ ಜೀವನದಿಂದ ಎತ್ತಿ ತೊಳೆಯುತ್ತದೆ, ಅಲಂಕರಿಸುತ್ತದೆ, ಉತ್ಸವದಲ್ಲಿರಿಸುತ್ತದೆ. "ರಸ"ವನ್ನು ಇನ್ನೇನೆಂದು ಕರೆಯೋಣ? ಅದನ್ನು ಪಡೆದಾಗ ನಮ್ಮ ಪ್ರಜ್ಞೆ ನಿರುಪಾಧಿಕ ಸಂವೇದನಾರೂಪದಲ್ಲಿರುತ್ತದೆ. ನಮಗೆ ಯಾವಾಗ ಕಟ್ಟಿಲ್ಲದ ನಿಟ್ಟಿಲ್ಲದ ಒಲುಮೆರೂಪಿನ ಬಗೆಹೆಚ್ಚಳದ ಎಚ್ಚರಿಕೆ ಪ್ರಾಪ್ತವಾಗುತ್ತದೋ ಆಗ ನಾವು ರಸಸ್ಥಿತಿಯಲ್ಲಿದ್ದೇವೆ ಎನ್ನಬಹುದು. ಅಂಥ ಇರವಿನ ನೆಲೆಯನ್ನು ನಮಗೆ ಕೊಡುವ ಕವಿತೆ ರಸವತ್ತಾದ ಕವಿತೆ. ಅದರಿಂದ ನಾವು ಪಡೆಯಬೇಕಾದುದು ನಮ್ಮಿರವಿನ ಸತ್ತ್ವಮಸ್ಥಿತಿ.

ಆ ನೆಲೆಯನ್ನು ತಾನು ಮುಟ್ಟದೆ ಕವಿಯೆಂತು ಸಹೃದಯನಿಗೆ ಅದನ್ನು ದೊರಕಿಸಿ ಕೊಡಬಲ್ಲ? ಅನಿರ್ಬದ್ಧ ಶುದ್ಧ ಸಂವೇದನಾರೂಪ ಪ್ರಜ್ಞೆಯನ್ನು ತಾನು ಪಡೆದರಲ್ಲವೆ ವಾಗರ್ಥಬಂಧದಲ್ಲಿ ಅದನ್ನು ಆತ ಅಳವಡಿಸಿ ಅಂಥ ಚಿತ್ತದ ಸಂಸರ್ಗವನ್ನು ಸಹೃದಯನಿಗೆ ಕಲ್ಪಿಸಬಲ್ಲ? ರಸದ ಪ್ರಶ್ನೆ ಅನುಪಾಧಿಕ ಸಂವೇದನಾರೂಪದಲ್ಲಿರುವ ಅರಿವನ್ನು ಪಡೆಯುವ ಪ್ರಶ್ನೆ.

ನಿತ್ಯಜೀವನದ "ಭವಸ್ತರ"ದಲ್ಲಿ ಈ ಅರಿವನ್ನು ಪಡೆಯುವುದು ಕಷ್ಟ. ರಸದ ನೆಲೆಯಲ್ಲಿ ನಾವು ಪಡುವ ಪಡುವಿಕೆಯೇ ಬೇರೆ, ಭವದಲ್ಲಿನ ಪಡುವಿಕೆಯೇ ಬೇರೆ. ಯಾವ ಪಡುವಿಕೆಯಲ್ಲಿ ಲೋಭಮೋಹ ಭಯಾದಿಗಳ ಮಿಶ್ರಣವಿದೆಯೋ ಆ ಪಡುವಿಕೆ ಯಲ್ಲಿ ನೆಮ್ಮದಿಯಿಲ್ಲ, ತುಂಬಿಲ್ಲ, ಸುಮ್ಮಾನವಿಲ್ಲ. "ರಸಸ್ತರ"ದಲ್ಲಿನ ಸಂವೇದನೆಯಲ್ಲಿ

ಯೋಗಕ್ಷೇಮ ಚಿಂತೆಯ ಮತ್ತು ಅದಕ್ಕೆ ಉಪಕಾರಕವಾದ ಕಾಮಕ್ರೋಧಾದಿಗಳ ಉಪಶಮವಿರುವುದರಿಂದ, ಅದರಲ್ಲಿ ನಾವು ಪ್ರಸನ್ನತೆಯನ್ನೊಂದನ್ನೇ ಅಲ್ಲದೆ ಪುಷ್ಟಿಯನ್ನೂ ತುಷ್ಟಿಯನ್ನೂ ಪಡೆಯುತ್ತೇವೆ. ಇವುಗಳನ್ನು ಸ್ವಲ್ಪವಾಗಿಯಾದರೂ ದೈನಂದಿನ ವಿಷಯ ವ್ಯವಹಾರದಲ್ಲಿ ಪಡೆಯುವದರಿಂದಲ್ಲವೆ ವಿಷಯಾಸಕ್ತಿ ಬೆಳೆಯುವುದು ? ವಿಷಯಾಸಕ್ತನ ಮನಸ್ಸು ಎಳಮನಸ್ಸು. ತಾವು ಕೊಡುವ ಸ್ವಲ್ಪ ಸುಖದಿಂದ ವಿಷಯಗಳು ಇಂದ್ರಿಯಗಳನ್ನೆಳೆಯುತ್ತವೆ, ಇಂದ್ರಿಯಗಳು ಮನಸ್ಸನ್ನು ಎಳೆಯುತ್ತವೆ, ಮನಸ್ಸು ಬುದ್ಧಿಯನ್ನು ಸೆಳೆಯುತ್ತದೆ ; ಆ ಬುದ್ಧಿಯೋ ಆಯಾ ಆಸಕ್ತಿಗಳೇ ಹಿತವೆಂದು ಸ್ಥಾಪಿಸುವುದಕ್ಕಾಗಿ ಒಂದು ದೊಡ್ಡ ತರ್ಕಬದ್ಧ ಕಾರಣಕಲ್ಪವನ್ನೇ ವಿರಚಿಸುತ್ತದೆ. ಅಂಥ ಬುದ್ಧಿಯಿಂದ ರಸಪ್ರಜ್ಞೆಗೆ ಅಪೋಹ. ಏತರ ಕಟ್ಟೊ ಕಾವಲೂ ಇಲ್ಲದ ಪಡುವರಿವಿನ ಪಡೆವು ಸಾತ್ವಿಕನಿಗಾಗಲಿ ರಾಜಸನಿಗಾಗಲಿ ತಾಮಸನಿಗಾಗಲಿ ದೊರೆಯುವುದು, ಆಯಾ ಗುಣಬಂಧನದಿಂದ ಆತ ತಪ್ಪಿಸಿಕೊಳ್ಳದಿದ್ದರೆ ದುಸ್ಸಾಧ್ಯ. ಮಾಂಸದಲ್ಲಿ ಸಕ್ತನಾದವನಿಗೆ ಆ ಪ್ರಾಣಿಯ ಪ್ರಾಣೇಚ್ಛೆಯ ನೈಜ ಸಂವೇದನೆಯಿಲ್ಲ. ಕಾಮಿಗೆ ಸತೀತ್ವದ ಸಂವೇದನೆಯಿಲ್ಲ, ಲೋಭಿಗೆ ಪರದುಃಖ ಸಂವೇದನೆಯಿರದು, ದೇಹಾಭಿಮಾನಿಗೆ ತಪಸ್ವಿಯ ಸಂವೇದನೆಯಿಲ್ಲ, ಸೀತಾಶೋಕಾಸಕ್ತರಿಗೆ ರಾಮ ಸಂವೇದನೆಯಿಲ್ಲ, ಹಾಗೆಯೇ ಶೈವ ಶಾಕ್ತ ವೈಷ್ಣವ ಬೌದ್ಧ ಕ್ರೈಸ್ತ ಮೊಹಮ್ಮದೀಯ ಮತ ಪ್ರಕ್ರಿಯಾಸಕ್ತರಿಗೆ ಮಿಕ್ಕ ಮತದವರು ಪಡುವ ದೈವಭಾವ ಜಾಗರದ ಸಂವೇದನೆಯಿಲ್ಲ. ಹೀಗೆಯೇ ಇದು ಪರಸ್ಪರ. ಒಂದು ಆಸಕ್ತಿಯಿಂದ ಅನೇಕ ಸೂಕ್ಷ್ಮ ಸಂವೇದನೆಗಳು ನಷ್ಟವಾಗುತ್ತವೆ. ಸಂವೇದನೆಯಿಲ್ಲದೆ ಅರಿವೇ ಹುಟ್ಟಲಾರದುದರಿಂದ, ಈ ಸಂವೇದನೆಗಳೊಡನೆ ಆಯಾ ಅರಿವೂ ನಷ್ಟವಾಗುತ್ತದೆ. ರಾಮನನ್ನು ನೆನೆದಾಗ ನಮಗಾಗುವ ಸುಖದ ಪಾಶವನ್ನು ಕಡಿದ ಹೊರತು ರಾವಣನಲ್ಲಿ ನಮ್ಮ “ ಪ್ರೇಮರೂಪಾಶೇಮುಷೀ ” ಅಪ್ರತಿಹತವಾಗಿ ಹರಿದು ಅವನ ಸ್ವಭಾವವನ್ನು ನೈಜರುಚಿಯಲ್ಲಿ ಎಂತು ದ್ಯೋತಿಸೀತು ? ಆದುದರಿಂದ ಕವಿ ತಾಮಸನಾದರೂ, ರಾಜಸನಾದರೂ, ಕೊನೆಗೆ ಸಾತ್ವಿಕನಾದರೂ, ಆತನಿಂದ ಒಳ್ಳೆಯ ಕಾವ್ಯ ದೊರೆಯಲಾರದು. ಅಂಥವ ಗುಣಮಲಿನ. ಆದುದರಿಂದ ಅವನ ಪ್ರಜ್ಞೆ ಅಕುಂಠಿತವಲ್ಲ. ಕವಿ ಗುಣಾತೀತನ ಸ್ತರಕ್ಕೆ ಏರಿದಾಗ ಮಾತ್ರ ಆತನ ಕೃತಿ ನಲ್ಕಳೆಯಿಂದ ಮೆರೆಯುತ್ತದೆ. ಅಂಥವನು “ ಸರ್ವ ಭೂತಾತ್ಮ ಭೂತಾತ್ಮ ”ನಾಗಬಲ್ಲನಾದುದರಿಂದ ಆತನ ನಿರಾಸಕ್ತ ಪ್ರೇಮಪೂರ್ಣ ದೃಷ್ಟಿಗೆ “ ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಂ.” ಆತ ವಸ್ತು ಹೃದಯವನ್ನು ಹೊಕ್ಕು ನೋಡಬಲ್ಲ, ಪದ ಪದಗಳಲ್ಲಿ ಅವುಗಳ ಇರುವಿಕೆಯ ಮರ್ಮದ ಅರಿವನ್ನೂ ಆನಂದವನ್ನೂ ಕೊಡಬಲ್ಲ. ಮಲಿನಚಿತ್ತರಿಂದ ಮಲಿನಚಿತ್ತರಿ

ಗೇನು ಪ್ರಯೋಜನ? ಆದರೆ ನಿರ್ಮಲನೂ, ಅನಿರ್ಬದ್ಧನೂ, ಸುಸಂಸ್ಕೃತನೂ ಆದ ವನ ಪ್ರೇಮರೂಪಚಿತ್ತದ ಭಾವನೆಗೆ ಬರುವ ತ್ರೈಗುಣ್ಯೋದ್ಭವವಾದ ಲೋಕ ಚರಿತವೆಲ್ಲ ದಿವ್ಯಕಳೆಯಿಂದ ಶೋಭಿಸಿ ಸುಂದರವಾಗುತ್ತದೆ. ಆತ 'ಆಹಾ, ಅಲಲಲ' ಎಂದರೆ ಸಾಕು; ಆನಂದ ಎಲ್ಲೆಡೆಯಿಂದಲೂ ಚಿಮ್ಮಿ ಹರಿಯುತ್ತದೆ. ಆತನು ಓಂ ಎಂಬ ಒಂದಕ್ಷರದಲ್ಲೇ ಬ್ರಹ್ಮಾಂಡವನ್ನು ಹಿಡಿದಿಡಬಲ್ಲ. ಆತ ಕಣ್ಬೆಳಕು ಚೆಲ್ಲಿದ ಕಾಮ ಶೃಂಗಾರವಾಗುತ್ತದೆ; ಶೋಕ ಕರುಣೆಯಾಗುತ್ತದೆ. ಕೋಪ ರೌದ್ರವಾಗುತ್ತದೆ; ಜುಗುಪ್ಸಿತವಸ್ತುವೂ ಬೀಭತ್ಸ ರಸಸ್ಯಂದಿಯಾಗಿ ಸಮ್ಮೋದವನ್ನೇ ಕೊಡುತ್ತದೆ. ರಾಮಾಯಣದಲ್ಲಿ ವಾಲ್ಮೀಕಿಯ ಕರುಣೆ ಯಾರಲ್ಲಿ ಹರಿದಿಲ್ಲ? ವ್ಯಾಸಮುನಿಗಳು ತೆರದಿಡದ ವಸ್ತುಸ್ವಭಾವವಾವುದು? ಕಾಮ ಲೋಭ ಮೋಹಗಳು ತಾವು ಕೊಡುವ ಅಲ್ಪ ಸುಮ್ಮಾನಕ್ಕಾಗಿ ನಮ್ಮನ್ನು ಎಷ್ಟು ಪರಿಯಲ್ಲಿ ದುಡಿಸುತ್ತವೆ! ಭೂಮಿಯನ್ನು ಅಗೆಸುತ್ತವೆ, ಕಡಲಲ್ಲಿ ಮುಳುಗಿಸುತ್ತವೆ, ಬೆಟ್ಟಕ್ಕೇರಿಸುತ್ತವೆ, ಪಾತಾಳಕ್ಕಿಳಿಸುತ್ತವೆ. ಇವುಗಳನ್ನು ಆಚೆ ನೂಕಿ ಆಗಾಗ ರಸಸ್ತರಕ್ಕೇರುವ ಕವಿಯೋ, ಗಾಳಿಗೆ ಕೈಚಾಚಿ ಹಿಡಿಹಿಡಿಯಲ್ಲಿ ಹೊನ್ನನ್ನು ಕರೆಯಬಲ್ಲ. ಇಷ್ಟು ಸ್ವಲ್ಪ ವಸ್ತುಗಳಿಂದ ಅಷ್ಟು ಸುಮ್ಮಾನವನ್ನು ಮತ್ತಾರು ಕೊಡಬಲ್ಲರು? ಹೊಳೆ ಹರಿಯುತ್ತಿದೆ, ಗಿಳಿ ಹಾರುತ್ತಿದೆ, ಹೊಲ ಬಿಸಿಲಲ್ಲಿ ಮಲಗಿದೆ, ತಿಳಿಬಾನಿನಲ್ಲಿ ಬಿಳಿ ಮೋಡ ತೇಲುತ್ತಿದೆ, ಇರುಳು ತನ್ನ ಸೆರಗನ್ನು ನಾಡಿನ ಮೇಲೆ ಚೆಲ್ಲಿತು, ಬೆಳುದಿಂಗಳು ಮರದಮೇಲೆ ಕುಳಿತು ತೂಗಡಿಸುತ್ತಿದೆ, ಇಂಥ ಮಾತಿಗೆ ಮೊದಲುಂಟೆ—ಕೊನೆಯುಂಟೆ? ಆದರೆ ಇವು ಎಷ್ಟು ಸುಖವನ್ನೂ ನೆಮ್ಮದಿಯನ್ನೂ ಎರಚಿಹೋಗುತ್ತವೆ! ಕವಿಯ ದಿವ್ಯ ಚಿತ್ತಸಂಸರ್ಗದಿಂದ ಇವಕ್ಕೆ ಎಂಥ ಮಹತ್‌ಪದವಿ ಪ್ರಾಪ್ತವಾಗಿದೆ! ಆ ಚಿತ್ತಮಧುವನ್ನು ಹಿಡಿದು ನಮಗುಣಿಸುವುದರಿಂದ ನಮ್ಮ ಪ್ರೀತಿಯನ್ನು ಅವು ಎಂತು ಸೆಳೆದುಕೊಳ್ಳುತ್ತವೆ! ರಸದೀಪ್ತ ಕವಿಯ ಕಣ್ಬೆಳಕು ಈ ಸಾಮಾನ್ಯವಸ್ತುಗಳ ಮೇಲೆ ಬಿದ್ದುದರಿಂದ ಅವಕ್ಕೆ ಈ ಅಲೌಕಿಕ ಕಾಂತಿ. ರವಿಯ ಬೆಳಕು ಮಾತ್ರ ಅವುಗಳ ಮೇಲೆ ಬಿದ್ದಿದ್ದರೆ ಅವಕ್ಕೆ ನಮ್ಮ ಪ್ರೀತಿ ಹೇಗೆ ದೊರೆಯುತ್ತಿತ್ತು? ನಿದ್ರೆಯಿಂದ ನಮ್ಮನ್ನು ಬಿಡಿಸಿ, ಕರಣ ವಿಷಯ ವ್ಯಾಪಾರಗಳನ್ನು ಪ್ರಚೋದಿಸಿ, ರವಿಯ ಬೆಳಕು ನಮಗೆ ಭವಜಾಗರವನ್ನು ತರುತ್ತದೆ. ನಿದ್ರೆಯ ಜಡಸ್ಥಿತಿಗಿಂತ ಮಂಗಳಕರವಾದ ಸ್ಥಿತಿಯಿದು, ನಿಜ. ಈ ಜಾಗರಿಕೆಯಲ್ಲೇ ಭವಸ್ತರದ ನಿರ್ಮಾಣ. ಈ ಸ್ತರದಲ್ಲಿ ಕಾಮಕ್ರೋಧಗಳಿಲ್ಲದೆ ಇರವು ಸಾಗದು. ಆದರೆ ಕವಿಯೋ ನಮ್ಮನ್ನು ಇಲ್ಲಿಂದ ಬಿಡಿಸಿ ಮಂಗಳತರವಾದ ರಸಜಾಗರಕ್ಕೆ ಎತ್ತುತ್ತಾನೆ. ಈ ಸ್ತರದಲ್ಲಿ ಇಚ್ಛಾದ್ವೇಷಗಳ ಸೋಂಕೆದ್ದರೆ ಇರುವಿಕೆ ಗೆಡೆಯಿಲ್ಲ; ಅದು ಕೆಳಗೆ ಬೀಳುತ್ತದೆ. ನಿದ್ರಾ—ಭವ—ರಸಗಳು, ಅವುಗಳ ತೆರ ಬೇರೆ

ಯಾದರೂ, ಪರಸ್ಪರ ಹಿತೈಷಿಗಳು. ನಿದ್ರೆಯಂತೆ ರಸವೂ ಭವವಿಶ್ರಾಂತಿಸ್ಥಾನ. ಆದರೆ ಇಲ್ಲಿ ಇಂದ್ರಿಯ ಮನೋಬುದ್ಧಿಗಳು ಜಡವಾಗಿರುವುದಿಲ್ಲ, ಇನ್ನಿಲ್ಲದ ಕಳೆಯಿಂದ ಹೊಳೆಯುತ್ತಿರುತ್ತವೆ. ಚಿತ್ತವೋ ಭವಸ್ತರದಲ್ಲಿ ತಾನು ಪಡಲಾಗದ ನೂತನಾನುಭೂತಿಗಳನ್ನು ಪಡೆದು, ನವಸತ್ಯಗಳನ್ನು ಕಾಣುತ್ತಾ ಸಂತೋಷಾಶ್ಚರ್ಯಗಳಲ್ಲಿ ಮುಳುಗಿರುತ್ತದೆ. ಒಳ್ಳೆ ರಸವತ್ ಕವಿತೆ ನಾವು ಭವಸ್ತರದಲ್ಲಿ ಪಡೆದ ಅಥವಾ ಪಡೆಯಬಹುದಾದ ವರ್ಣನೆಯ ಮಾತಲ್ಲ; ಅಲ್ಲಿ ಪಡೆಯಲಾಗದ, ಇಲ್ಲಲ್ಲದೆ ಮತ್ತೆಲ್ಲೂ ದೊರೆಯದ, ಅನುಭೂತಿಯ ಮಾತು. ಕವಿತೆಯ ಹುಚ್ಚು ಹಿಡಿದ ಯಶಸ್ತಿಲಕ ಚಂಪೂಕಾರನ ಈ ವಾಕ್ಯವನ್ನು ಕೇಳಿರಿ:

> 'ನಿದ್ರಾಂ ವಿದೂರಯಸಿ ಶಾಸ್ತ್ರರಸಂ ರುಣತ್ಸಿ, ಸರ್ವೇಂದ್ರಿಯಾರ್ಥಮಸಮರ್ಥ
> ವಿಧಿಂ ವಿಧತ್ಸೇ! ಚೇತಶ್ಚ ವಿಭ್ರಮಯಸೇ, ಕವಿತೇ, ಪಿಶಾಚಿ . . . .'

"ನಿದ್ರೆಯನ್ನು ಓಡಿಸುತ್ತೀಯೆ, ಬುದ್ಧಿಯನ್ನು ಉದ್ದೀಪನಗೊಳಿಸುವ ಶಾಸ್ತ್ರರಸವನ್ನು ತಡೆಹಿಡಿಯುತ್ತೀಯೆ, ಗಂಧ ಪುಷ್ಪಫಲ ಗೀತ ವನಿತಾದಿಗಳಾವುವೂ ನನಗೀಗ ರುಚಿಸದಂತೆ ಮಾಡಿದ್ದೀಯೆ, ಚಿತ್ತವೂ ಹೊಸ ಹೊಸ ನೈಜಸಂವೇದನೆಗಳನ್ನು ಪಡೆಯುತ್ತ ಅದು ಸತ್ಯವೋ ಇದು ಸತ್ಯವೋ ಏನು ಭ್ರಮೆಯಿದು ಎಂದು ಬೆರಗುವಡೆವಂತೆ ಮಾಡಿದ್ದೀಯಲ್ಲ; ಎಲೆ ಕವಿತೇ, ಪಿಶಾಚಿ, ಆದರೂ ನಿನ್ನಿಂದಲ್ಲವೆ ನಾನು ಕೃತಕೃತಿ." ಕವಿತಾ ರಸದ ಮರ್ಮವನ್ನೇ ಹಿಡಿದು ಹೇಳಿದಾನೆ ಕವಿ. ಇಂದ್ರಿಯ ಮನೋಬುದ್ಧಿಗಳಿಗೆ ರಸದ ನೆಲೆಯಲ್ಲಿ ವಿಷಯಗಳಲ್ಲಿ ವ್ಯವಹರಿಸುವುದಕ್ಕೆ ಇಷ್ಟವಿಲ್ಲ. ಅವು ಅಲ್ಲಿ ಆನಂದದ ಪ್ರಿಯಾತಿಥಿಗಳು; ಕೂಳಿಗಾಗಿ ಕಾಯುತ್ತಿರುವ ಆಳುಗಳಲ್ಲ. ಅದರ ಆದರಣೆಯನ್ನು ಸ್ವೀಕರಿಸುತ್ತಾ ಸ್ವಸ್ಥವಾಗಿಯೂ ಸನ್ಮಾನಿತವಾಗಿಯೂ ಇರುವುದಕ್ಕೆ ಅವಕ್ಕೆ ಆಸೆ. ಚಿತ್ತಕ್ಕೂ ಅಷ್ಟೆ, ಸಂವೇದನೆಗಳ ಹೊಸಹೊಸ ರುಚಿಗಳನ್ನು ಕಂಡು ಸಂಭ್ರಮ ಮತ್ತು ಬೆರಗು. ಜೀವನದಲ್ಲಿ ಮತ್ತೆಲ್ಲೂ ದೊರೆಯದ ತುಂಬುನೆಮ್ಮದಿ ಸುಮ್ಮಾನಕ್ಕೆ ನಮಗೆ ಕವಿಯ ಕಾವ್ಯ, "ಮನೋಧರ್ಮ"ವುಳ್ಳವರ ಗಾನ, ನೃತ್ಯ, ನಟನಾದಿಗಳು, ಶಿಲ್ಪಿಯ ಶಿಲ್ಪ, ಚಿತ್ರಗಾರನ ಚಿತ್ರ, ಸತ್ಸಂಗ, ಸದಾಗಮಕಲ್ಪಗಳಲ್ಲಿ ಪಾಲುಗೊಳ್ಳುವಿಕೆ, ಸರಸ ಸುಹೃತ್‌ಗೋಷ್ಠಿ—ಇವೆ ಆಕರಗಳು, ಇವೆ ಗತಿ.

ಆದುದರಿಂದ ಕವಿತೆಯಿಂದ ನಾವು ಬಯಸುವುದೇನನ್ನು? ನಿರ್ಲಿಪ್ತವೂ, ಜ್ಞಾನದೀಪ್ತವೂ, ಪ್ರೇಮಲವೂ ಆದ ಚಿತ್ತದ ಸಂಸರ್ಗವನ್ನು; ಅದು ಸಂಸ್ಕೃತವೂ ದೃಢವೂ ಸೂಕ್ಷ್ಮವೂ ಆದ ಬುದ್ಧಿಯೊಡನೆ ಪರಿಪರಿಯ ಪರಿಸರಗಳಲ್ಲಿ ಬಗೆಬಗೆಯ ವಸ್ತುಸ್ವಭಾವಗಳೊಳಗೆ ಚರಿಸುವಾಗ ಪಡುವ ಅಪೂರ್ವ ಸಂವೇದನೆಗಳನ್ನು. ಆ

ಚಿತ್ತಸಂಸರ್ಗದಿಂದ ನಮ್ಮ ಮನಸ್ಸು ಪ್ರಸನ್ನತೆಯನ್ನು ಪಡೆದು ವಿಶ್ರಾಂತವಾಗುತ್ತದೆ. ಸುಹೃನ್ಮಿತ್ರಾರ್ಯುದಾಸೀನಮಧ್ಯಸ್ಥದ್ವೇಷ್ಯಬಂಧುಗಳಲ್ಲೂ, ಸಾಧುಗಳಲ್ಲೂ, ಪಾಪಿಗಳಲ್ಲೂ ಸಮಬುದ್ಧಿಯಿಂದ ವ್ಯವಹರಿಸುವ ಕವಿಯ ಸಂವೇದನೆಗಳಲ್ಲವೆ ಸಮಸ್ತ ಸಾಂಸ್ಕೃತಿಕ ಮೌಲ್ಯ ಮಾತೃಕೆಗಳು? ಅವುಗಳ ಸಾಮರಸ್ಯದಿಂದ ಸಮಾಜವು ಸಮುನ್ನತವೂ, ಸ್ವಸ್ಥವೂ, ಸಮೃದ್ಧವೂ, ಹೃಷ್ಟವೂ, ತುಷ್ಟವೂ, ಆದ ಬಾಳುವೆಯನ್ನು ಬಾಳುವುದಕ್ಕಾಗಿ ಕಾಲಕಾಲಕ್ಕೆ ತನ್ನ ವ್ಯಾವಹಾರಿಕ ನೀತಿನಯಗಳನ್ನು ಕಲ್ಪಿಸಿಕೊಳ್ಳುತ್ತದೆ. ಸತ್‌ಕವಿ ಮತ್ತು ಸಚ್ಚಿತ್ತರು ರಸಸ್ತರದಲ್ಲಿ ಪಡುವ ಸಂವೇದನೆಗಳಿಂದ ನೀತಿನಯಗಳು ಉದ್ಭವಿಸಬೇಕೇ ಹೊರತು ತತ್‌ತತ್‌ಕಾಲೀನ ನೀತಿನಯಗಳ ಪಾಲನೆಗಾಗಿ ಕಾವ್ಯಗಳು ಹೊರಡತಕ್ಕದ್ದಲ್ಲ. ನೀತಿಗಾಗಿ ಹೊರಟ ಕಾವ್ಯದಲ್ಲಿ ನೈಜ ಸಂವೇದನೆಗಳೆಂತು ದೊರೆತಾವು? ಅವುಗಳಿಂದ ದೊರೆಯತಕ್ಕದ್ದು ಭವೋಲ್ಬಣವಷ್ಟೆ, ಬೌದ್ಧಿಕರಿಂದ ಪ್ರಾಪ್ತವಾಗುವ ತರ್ಕಲಬ್ಧಜ್ಞಾನವಷ್ಟೆ, ಮತ್ತು ಅದರಿಂದ ದೊರೆಯುವ ಬುದ್ಧಿಮಾಂದ್ಯ. ಇದರಿಂದ ಕೆಲವರು ಸುಸ್ಥಿತರಿಗಲ್ಲದೆ ಸಮಾಜಕ್ಕಾದರೂ ಏನು ಪ್ರಯೋಜನ? ಆದರೆ ನೈಜಕವಿಗಳು, ಸಾಧುಸಿದ್ಧಯೋಗಿಗಳಂತೆ, ನಿರಂಕುಶರು. "ದಿವ್ಯಂದದಾಮಿ ತೇ ಚಕ್ಷುಃ ಪಶ್ಯಮೇ ರೂಪಮೈಶ್ವರಂ" ಎಂದು ಭಗವಂತನು ಸತ್‌ಕವಿಗಳ ಕಾವ್ಯಚಕ್ಷುಸ್ಸನ್ನು ನಮಗೆ ತನ್ನ ಕರುಣೆಯಿಂದ ಆಗಾಗ ದಯಪಾಲಿಸುತ್ತಿರುತ್ತಾನೆ. ಆ ಬೆಳಕು ಪ್ರಸರಿಸದಂತೆ ಆಯಾ ಕಾಲದ ಭವಾವೇಗಗಳು ಮರೆಮಾಡಬಹುದು. ಅದರ ದಿವ್ಯ ತೇಜಸ್ಸನ್ನು ಮಾತ್ರ ಅವು ಕಳೆಯಲಾರವು.

ಹೀಗೆ ಕವಿಗಿರುವ ಮೊದಲ ಪ್ರಶ್ನೆ ನಿರ್ಮಲ ಅನಿರ್ಬದ್ಧ ಪ್ರೇಮರೂಪೀಚಿತ್ತಸಂಪಾದನೆ; ತದನಂತರ ತ್ರೈಗುಣ್ಯೋದ್ಭವ ಲೋಕಚರಿತದಲ್ಲಿ ಅದನ್ನು ಕೂರಿಸುವಿಕೆ. ಈ ತಂತ್ರದಲ್ಲಿ ಆತ ಕುಶಲನಾದಷ್ಟೂ ಒಳ್ಳೆಯದು. ಮೊದಲು ಅರ್ಥ, ಬಾಹ್ಯ ಪ್ರಪಂಚಕ್ಕೆ ಸೇರಿದ್ದು; ಕೊನೆಗೆ ರಸ, ತನ್ನ ಭಾವನೆಗೆ ಸೇರಿದ್ದು. ಅರ್ಥದಲ್ಲಿ ಅದರ ಸ್ವಭಾವಕ್ಕೆ ಕುಂದುತಾರದೆ ಅದರಲ್ಲಿ ತನ್ನ ಭಾವನೆಯಿಂದುಂಟಾದ ಸಂವೇದನೆ ಮೈತಳೆಯುವಂತೆ ಮಾಡುವುದು. ಇಲ್ಲಿದೆ ಕಾವ್ಯರಚನೆಯ ರಹಸ್ಯ, ಇಲ್ಲಿದೆ ಕವಿಯ ಪ್ರತಿಭೆ. ಇದಕ್ಕೆ ಪದಶುದ್ಧಿ, ರೀತಿ, ಸಂಘಟನೆ, ನವ ವಕ್ರಗತಿ, ಇವೆಲ್ಲ ಅತ್ಯವಶ್ಯವಾಗಿ ಸಾಧಿತವಾಗಬೇಕಾದ ತಂತ್ರಗಳು. ವಾಗರ್ಥಗಳೆಲ್ಲ ಭವಸ್ತರದಲ್ಲಿ ನಿಯುಕ್ತವಾದವುಗಳು (ಕೂರುವಾಗ ಕುರ್ಚಿ ಮಲಗುವಾಗ ಮಂಚ ಎಂಬ ಸರಕಿನಂತೆ); ಸಂವೇದನೆಯೋ ರಸಸ್ತರದಲ್ಲಿ ಹುಟ್ಟಿದ್ದು. ಇವುಗಳಿಂದ ಅದು ವ್ಯಂಜಿಸಲ್ಪಡಬೇಕಾಗಿರುವುದರಿಂದ ಪದಗಳು ತಮ್ಮ ತಮ್ಮ ರುಚಿಯನ್ನು ಕಳೆದುಕೊಳ್ಳದೆಯೇ ಪರಸ್ಪರ ಸಾಂಗತ್ಯದಿಂದ ಭವದ ವಾಸನೆಯನ್ನು ಮಾತ್ರ ಕಳೆದುಕೊಂಡು ರಸೋಪಯೋಗಿಯಾಗುವಂತೆ

ಅವುಗಳನ್ನು ಆಯ್ದು ಜೋಡಿಸಬೇಕು. ಪದ್ಯದಲ್ಲಿ ಛಂದಸ್ಸು ನೇರವಾಗಿ ರಸೋಪಯೋಗಿ, ಗದ್ಯದಲ್ಲಿ ಈ ಸೌಲಭ್ಯವೂ ಇಲ್ಲ. ಬರಿಯ ನವ ವಕ್ರಗತಿಯಿಂದಲೇ ರಸವ್ಯಂಜನೆ ಸಾಗದು. ಇವೆಲ್ಲ ಅಭ್ಯಾಸ ಪರಿಶ್ರಮಗಳಿಂದ ಕಾಲಾನುಕಾಲಕ್ಕೆ ಲಭ್ಯವಾಗತಕ್ಕ ಕೌಶಲಗಳು. ಅರ್ಥ ಮತ್ತು ಅವುಗಳಲ್ಲಿ ಮೈತಳೆಯಬೇಕಾದ ಅಪೂರ್ವ ಮತ್ತು ಭವಸ್ತರ—ದುರ್ಲಭ ರಸಸಂವೇದನೆಗಳು, ಇವುಗಳಂತೆ ಈ ಪ್ರಜ್ಞಾಪ್ರವಹಣ ತಂತ್ರಗಳೂ ನವ್ಯವಾಗುತ್ತವೆ, ಪ್ರತಿಭಾಜನಿತವೆನಿಸುತ್ತವೆ. ನವ್ಯತಂತ್ರಗಳಿದ್ದರೂ ಭವಸ್ತರಾರ್ಥಗಳಲ್ಲೆ ವಿರಮಿಸುವ ಕಾವ್ಯದಿಂದ ಸಹೃದಯರಿಗೇನು ಲಾಭ, ಕವಿಗೇನು ಲಾಭ? ವಸ್ತುಸ್ವಭಾವವನ್ನರಿತು ಅದರೊಳಹೊಕ್ಕು ಮೈತಳೆವ ರಸವತ್ ವಾಗರ್ಥ-ಬಂಧ ಮಾತ್ರ ರಮಣೀಯ ಮತ್ತು ನವ್ಯ. ಅದರ ಲಾಭದಿಂದ ರಸಿಕ ತುಷ್ಟನಾಗುತ್ತಾನೆ, ಸುಮನಃ ಪದವಿಗೇರಿ ಅಚ್ಚರಿಪಡುತ್ತಾನೆ, ಕವಿಗೆ ಕೃತಜ್ಞನಾಗಿ ಅಭಿನಂದಿಸುತ್ತಾನೆ.

ಮಿತ್ರರೇ, ದೇವರ ದಯದಿಂದ ಅಂಥ ರಸವತ್ ಕಾವ್ಯ ಹೊಸಗನ್ನಡದಲ್ಲೂ, ನಡುಗನ್ನಡದಲ್ಲೂ, ಹಳಗನ್ನಡದಲ್ಲೂ ಎಂಥ ರಸಿಕರನ್ನೂ ತಣಿಸುವಷ್ಟಿದೆ. ಇದನ್ನು ನಾವೆಲ್ಲರೂ ಅರಿಯುವುದು ಶ್ರೇಯಸ್ಕರ. ಏಕೆಂದರೆ, ಸಹೃದಯ ದಾರಿದ್ರ್ಯವೇ ಕವಿಗೂ ಕಲೆಗಾರನಿಗೂ ಇರುವ ನಿಜವಾದ ದಾರಿದ್ರ್ಯ. ಒಳ್ಳೆಯ ಕಾವ್ಯವನ್ನು ನೋಡಿ ಸಂತೋಷಪಡದಿದ್ದರೆ ನಾವು ಇನ್ನೂ ಅಸಂಸ್ಕೃತರೆಂದು ಹೇಳಬೇಕು. ಹಾಗೆ ಸಂತೋಷಪಡುವವರು ಇರುವುದರಿಂದಲೇ ನನ್ನಂಥವನಿಗೆ ಈ ಸಭೆಯಲ್ಲಿ ಈ ಆದರ ದೊರೆಯಿತು. ಏಕೆಂದರೆ—

"ಖ್ಯಾತಿಂ ಗಮಯತಿ ಸುಜನಃ
ಸುಕವಿರ್ವಿದಧಾತಿ ಕೇವಲಂ ಕಾವ್ಯಂ
ಪುಷ್ಣಾತಿ ಕಮಲಮಂಭಃ
ಲಕ್ಷ್ಮ್ಯಾ ತು ರವಿರ್ನಿಯೋಜಯತಿ"

ಕಾವ್ಯಕ್ಕೆ ಕಳೆ ಬರುವುದು ಸಹೃದಯರಿಂದ. ಕವಿಗೆ ತನ್ನ ಕಾವ್ಯ ಒಳ್ಳೆಯದೆಂದು ಗೊತ್ತಾಗುವುದುತಾನೆ ಹೇಗೆ? ರಸಿಕರಿಂದಲ್ಲವೆ? ವಸ್ತುವಿಂದ ಆದೃತವಾದ ಹೊರತು ಬೆಳಕು ತನ್ನಿರವನ್ನೇ ತೋರಗೊಡಲಾರದು.

ಭಾರತೀಯ ಕವಿಪರಂಪರೆ ಈಗಿನದಲ್ಲ. ಅದರ ಕಾವ್ಯಕಲೆಗೂ ಒಂದು ಮಾರ್ಗವುಂಟು, ಒಂದು ರೀತಿಯುಂಟು, ಒಂದು ದರ್ಶನವುಂಟು, ಒಂದು ಸಂಪ್ರದಾಯವುಂಟು. ಕಸಿ ಮಾಡಬೇಕಾದರೂ ಮೂಲತಃ ಕಾಡುಗಿಡವಿರಬೇಕಲ್ಲವೇ? ಕಸಿಯಿಂದ

ಕಸಿ ಹುಟ್ಟಿದು. ನಮ್ಮ ಬೇರುಗಳನ್ನು ಕಿತ್ತೊಗೆದು ನಾವು ಬರಡಾಗಬಾರದು. ಬದಲಾವಣೆಯಿಲ್ಲದೆ ಜೀವವೇ ಇಲ್ಲ ಎಂದಮೇಲೆ ಕಾವ್ಯದ ರೀತಿಯಲ್ಲೂ ಹೊಸ ಹೊಸ ನಡೆ ಬೆಡಗುಗಳು ಆವಶ್ಯಕ. ಪ್ರಾಣಿಗಳಲ್ಲಿ ಮನುಷ್ಯ ಮಾತ್ರ ತನ್ನ ಪರಿಸರವನ್ನು ತಾನೇ ಕಲ್ಪಿಸಿಕೊಂಡು ಬಾಳಬಲ್ಲ. ಹಾಗೆಯೇ ಕಾವ್ಯಕಲೆಯ ವಿಚಾರದಲ್ಲೂ ಸಹ, ಕವಿ ತನ್ನ ರಸಸಂವೇದನೆಗಳಿಗೆ ತಕ್ಕಂತೆ ತನ್ನ ವಾಗರ್ಥಬಂಧಗಳನ್ನೂ ನಿರ್ಮಿಸಿಕೊಳ್ಳಬಲ್ಲ. ನಮ್ಮ ಪರಾನುಕರಣ ವೈಭವವನ್ನು ನೋಡಿ ನನಗೆ ಒಂದೊಂದು ವೇಳೆ ನಾವು ಈಗ ನಮ್ಮ ಸಂಸ್ಕೃತಿಯ ವಿಚಾರದಲ್ಲಿ ಪೃಥ್ವೀರಾಜ ಜಯಚಂದ್ರರ ಕಾಲ ದಲ್ಲಿದ್ದೇವೋ, ನಮ್ಮ ಆಧ್ಯಾತ್ಮಿಕ ಸಂಪತ್ತೆಲ್ಲವನ್ನೂ ಸೂರೆಗೊಟ್ಟು ಪರಸಂಸ್ಕೃತಿಗೆ ಮಾರುಹೋಗುತ್ತೇವೋ ಎನಿಸುತ್ತದೆ. ಹೀಗೆ ತಲ್ಲಣಿಸುವಾಗ ಇದ್ದಕ್ಕಿದ್ದ ಹಾಗೆ ಅತಿ ಮನೋಹರ ಶಾಸ್ತ್ರೀಯ ಸಂಗೀತ ಕಿವಿಗೆ ಬೀಳುತ್ತದೆ, ರಸರುಚಿರ ನವ್ಯೋನವ ಆಧುನಿಕ ಕವಿತೆ ಕಣ್ಣಿಗೆ ಬೀಳುತ್ತದೆ. ಇವು ನನ್ನ ಮನೋಮಾಲಿನ್ಯವನ್ನು ಕಳೆದು ಉಲ್ಲಾಸಗೊಳಿಸಿ ನಮ್ಮ ರಸಸೌಭಾಗ್ಯದ ವಿಚಾರದಲ್ಲಿ ನನಗೆ ವಿಶ್ವಾಸ ಮೂಡಿಸುತ್ತವೆ. ನಮ್ಮ ದೇಶದ ಐಶ್ವರ್ಯವೆಲ್ಲ ರಸಸ್ತರದಲ್ಲಿನದು; ನಮ್ಮ ಕವಿ, ಸಂತ, ಮುನಿ, ಯೋಗಿ, ಋಷಿಗಳ ಪೌರುಷದಿಂದ ಉದ್ಧೃತವಾದದ್ದು. ಅಲ್ಲಿ ನಮಗೆ ದೊರೆಯುವ ಭಾವನಾ ವೈಭವವನ್ನು ಎಷ್ಟೆಂದು ಹೇಳೋಣ. ಆ ಐಶ್ವರ್ಯವನ್ನು ನಾವು ವಜ್ರದ ಹರಳನ್ನು ಕೊಟ್ಟು ಗಾಜುಬಳೆಗಳನ್ನು ಕೊಂಡ ಅನಭಿಜ್ಞರಂತೆ ಕಳೆದುಕೊಳ್ಳುವುದೆ? ನಮ್ಮ ಭಾಷೆಯ ವಿಚಾರದಲ್ಲೂ ಎಷ್ಟು ನಾವು ಸಂವೇದನಾ ರಹಿತರಾಗಿದ್ದೇವೆ! ನಮ್ಮ ನಾಲಗೆ ನಮ್ಮ ಕರುಳಿನ ಕುಡಿ ಎಂಬುದನ್ನೇ ನಾವು ಮರೆತಂತಿದೆ.

ಏನಿಲ್ಲದಿದ್ದರೂ ನಾವು ಸೌಮನಸ್ಯವನ್ನೂ ಸಂತೋಷವಾಗಿರುವಿಕೆಯನ್ನೂ ನಮ್ಮ ಹಿರಿಯರಿಂದ ಕಲಿತಿದ್ದೇವೆ. ಆ ಕೌಶಲವನ್ನು ಕಳೆದುಕೊಂಡು ನಾವು ಅರಸಿಕರಾದರೆ, ಏನಿದ್ದರೇನು? ನಾವೇನಾದರೇನು? ಸತ್ ಕವಿತೆ ನಮ್ಮನ್ನು ಸಂತೋಷದಲ್ಲಿಡುವ ಸಾಧನೆಗಳಲ್ಲೊಂದು. ಅದರ ಸೆಲೆ ನಮ್ಮ ದೌರ್ಬಲ್ಯ ವ್ಯಾಮೋಹಗಳಿಂದ ಹಿಂಗದಿರಲಿ. ಅದಕ್ಕೆ ತಕ್ಕ ಆತ್ಮಪ್ರತ್ಯಯವನ್ನು ಸರಸ್ವತೀದೇವಿ ನಮಗೆ ಕರುಣಿಸಲಿ.

ಇಂಥ ಸಮ್ಮೇಳನದಲ್ಲಿ, ಸಭಾಸದರು ಉಲ್ಲಾಸವನ್ನೂ ಸಹೃದಯರಸಿಕರು ಚಿತ್ತೋತ್ಕರ್ಷವನ್ನೂ ಕವಿಗಳು ಸತ್ವಸಮೃದ್ಧಿಯನ್ನೂ ಪಡೆಯಬಯಸುವುದು ಸಹಜ. ಅವರ ನಿರೀಕ್ಷೆ ಇಂದಿನ ಕಾರ್ಯಕ್ರಮದಿಂದ ಸಫಲವಾಗಲೆಂದು ಹಾರೈಸುತ್ತೇನೆ.

ಈ ಹಾರೈಕೆಗೆ ಬೆಂಬಲವಾಗಿರಲೆಂದು, ರಸಾಗಾರನಾದ ಕತೆಗಾರನನ್ನು ಸ್ತುತಿಸಿ ನಮಿಸೋಣ:

ವ್ಯಥೆಗಳ ಕಳೆಯುವ ಕತೆಗಾರ
ನಿನ್ನ ಕಲೆಗೆ ಯಾವುದು ಭಾರ?
ಯಾವುದು ದುಸ್ತರ ಯಾವುದು ವಿಸ್ತರ
ನಿನಗೆಲೆ ಹರ್ಷದ ಹರಿಕಾರ?

ಕಪಿ ಹಾರಿತು ಹೆಗ್ಗಡಲನು ಎಂಬೆ
ಕಡಲನು ಕಡೆದರು ಬೆಟ್ಟದೊಳೆಂಬೆ
ನಿನ್ನೂಹೆಯ ಹೇರಾಳವ ತುಂಬೆ
ಸೃಷ್ಟಿಕರ್ತನಿಗು ಅರಿದೆಂಬೆ.

ಒಲುಮೆ ಬೇಹಿಗಾ ಮೇಘಮರಾಳ
ಮುನಿಯ ತೋಹಿಗೆಮರಾಂಗನೆ ಮೇಳ
ಸುರರೆದೆಯೊಳೆ ಕಲಿಪುರುಷ ಕರಾಳ
ಅರಿವರಾರು ನಿನ್ನೈಂದ್ರಜಾಲ?

ಮಾತೊಳೆ ವಿಶ್ವವ ತೋಲಿಸುವ
ಮನದೊಳಿವೆಲ್ಲವ ಜಾಲಿಸುವ
ಮುದದೊಳಗೆಲ್ಲರ ಕೀಲಿಸುವ
ನಿನ್ನನದಾವಗೆ ಹೋಲಿಸುವ?

ವೆತೆಗಳ ಕಳೆಯುವ ಕತೆಗಾರ
ನಿನ್ನ ಕಲೆಗೆ ಯಾವುದು ಭಾರ?

|| ಸಿರಿಗನ್ನಡಂ ಗೆಲ್ಗೆ ||

ಪು. ತಿ. ನರಸಿಂಹಾಚಾರ್

ಋಷಿವಾಣಿ

ಇಮಾ ಜುಹ್ವಾನಾ ಯುಷ್ಮದಾ ನಮೋಭಿಃ
ಪ್ರತಿಸ್ತೋಮಂ ಸರಸ್ವತಿ ಜುಷಸ್ವ |
ತವ ಶರ್ಮನ್ ಪ್ರಿಯತಮೇ ದಧಾನಾ
ಉಪಸ್ಥೇಯಾಮ ಶರಣಂ ನ ವೃಕ್ಷಂ ||

ಹೇಳು ತಾಯಿ ಸರಸ್ವತಿ, "ಭಕ್ತಿಪೂರ್ವಕವಾದ ನಮನಗಳೊಡನೆ ನಿಮ್ಮ ಅರ್ಪಣೆಯನ್ನು ತಂದಿದ್ದೀರಿ" ಎಂದು ಹೇಳು. ನಮ್ಮ ಒಂದೊಂದು ಪ್ರಾರ್ಥನೆಯಿಂದಲೂ ಸುಪ್ರೀತಳಾಗು. ಓ ಪ್ರೇಮಮಯೀ ನಮ್ಮನ್ನು ನಿನ್ನ ರಕ್ಷೆಯಲ್ಲಿಟ್ಟುಕೋ. ನೆಳಲಿಗಾಗಿ ಮರದಡಿಗೆ ಶರಣು ಹೊಗುವಂತೆ ನಾವು ನಿನ್ನಡಿಗೆ ಬರುತ್ತಿದ್ದೇವೆ.

—ಋಗ್ವೇದ

ಯಸ್ತೇ ಸ್ತನಃ ಶತಯೋ ಯೋ ಮಯೋಭೂರ್
ಯೇನ ವಿಶ್ವಾ ಪುಷ್ಯಸಿ ವಾರ್ಯಾಣಿ |
ಯೋ ರತ್ನಧಾ ವಸುವಿದ್ ಯಃ ಸುದತ್ರಃ
ಸರಸ್ವತಿ ತಮ್ ಇಹ ಧಾತವೇ ಕಃ ||

ತೆರೆ ತಾಯೆ ಓ ಸರಸ್ವತಿ, ವಿಶ್ವಪೋಷಕವಾದ, ಸರ್ವೈಶ್ವರ್ಯ ಸಮನ್ವಿತವಾದ ಆ ನಿನ್ನ ಸ್ತನ್ಯ ತವನಿಧಿಯನ್ನು ತೆರೆ, ನಮ್ಮ ಪುಷ್ಟಿಗಾಗಿ ತೆರೆ.

—ಋಗ್ವೇದ

ಹಿಂದೀ ಸಾಹಿತ್ಯ ಚರಿತ್ರೆ

ಹಿಂದೀ ಭಾಷೆಯು ಭಾರತದ ಹದಿನಾಲ್ಕು ಅಧಿಕೃತ ಭಾಷೆಗಳಲ್ಲೊಂದು. ಅದು ಆಡಳಿತಭಾಷೆಯೂ ಆಗಬೇಕೆಂದು ತೀರ್ಮಾನವಾಗಿದೆ. ಭಾರತದ ೨೯ ಪ್ರಾಂತಗಳಲ್ಲಿ ಬೀಹಾರ್, ಉತ್ತರಪ್ರದೇಶ್, ಮಧ್ಯಭಾರತದ ಬಹುಭಾಗ, ಮಧ್ಯ ಪ್ರದೇಶ್, ರಾಜಾಸ್ಥಾನ, ವಿಂಧ್ಯಪ್ರದೇಶ, ಭೂಪಾಲ್, ಡೆಲ್ಲಿ, ಹಿಮಾಚಲ ಪ್ರದೇಶ, ಪೂರ್ವ ಪಂಜಾಬ್ ಮೊದಲಾದ ೧೧ ಪ್ರಾಂತಗಳ ಭಾಷೆ ಹಿಂದಿ. ಈ ಪ್ರದೇಶದ ವಿಸ್ತೀರ್ಣ ೫,೭೧,೦೦೦ ಚದರಮೈಲಿಗಳು. ಸುಮಾರು ೧೫ ಕೋಟಿ ಜನಗಳು ಆಡುವ ಭಾಷೆ. ಈ ಭಾಷಾಪ್ರಾಂತದ ಸುತ್ತಲೂ ಪಶ್ಚಿಮಕ್ಕೆ ಪಂಜಾಬಿ, ಪೂರ್ವಕ್ಕೆ ಬಂಗಾಳಿ, ದಕ್ಷಿಣಕ್ಕೆ ಮರಾಠಿ ಭಾಷಾಪ್ರಾಂತಗಳಿವೆ. ಒಟ್ಟಿಗೆ ಹೇಳುವುದಾದರೆ ಭಾಗಲ್‌ಪುರದವರೆಗಿನ ಗಂಗಾನದಿ ಪ್ರವಾಹಭೂಮಿ ಹಿಂದಿ ಎಂದು ಹೇಳಬಹುದು. ಪ್ರಾಚೀನ ಕಾಲದಲ್ಲಿ ಇದಕ್ಕೆ ಮಧ್ಯದೇಶವೆಂಬ ಹೆಸರಿತ್ತು.

ಈ ವಿಸ್ತಾರವಾದ ಪ್ರದೇಶದಲ್ಲಿ ಸಾಮಾನ್ಯಜನ ಪರಸ್ಪರ ಸಂಬಂಧವಿರುವ ೧೨ ಪ್ರತ್ಯೇಕ ಪ್ರಾಂತಭಾಷೆಗಳನ್ನಾಡುತ್ತಾರೆ. ಪ್ರತಿಯೊಂದರಲ್ಲೂ ಬಹುಕಾಲದಿಂದ ವಿಶೇಷವಾಗಿ ಜನಪದ ಸಾಹಿತ್ಯ ಬೆಳೆದುಬಂದಿದೆ. ಇದರಲ್ಲಿ ಅನೇಕವು ಮಧ್ಯಕಾಲದಲ್ಲಿ ಕಾವ್ಯಭಾಷೆಗಳಾಗಿ ಪರಿವರ್ತಿತವಾಗಿ ಉಚ್ಚಸಾಹಿತ್ಯ ನಿರ್ಮಾಣಕ್ಕೆ ಸಹಾಯಕವಾಗಿವೆ. 'ಹಿಂದಿ' ಎಂದು ನಾವು ವ್ಯವಹರಿಸುವಾಗ ಈ ಎಲ್ಲ ವ್ಯಾಪಹಾರಿಕ ಮತ್ತು ಕಾವ್ಯ ಭಾಷಾ ಪ್ರಭೇದಗಳನ್ನು ಗಮನಿಸಬೇಕು. ಅವುಗಳಲ್ಲಿ ಕಾವ್ಯದೃಷ್ಟಿಯಿಂದ ಶೌರಸೇನೀ ಪ್ರಾಕೃತದಿಂದ ವಿಕಸಿತವಾದ ಬ್ರಜಭಾಷೆ, ಶೌರಸೇನಿ ಮತ್ತು ಪೈಶಾಚೀ ಭಾಷೆಯ ಪ್ರಭಾವದಿಂದ ಬೆಳದಿರುವ ಖಡೀಬೋಲಿ, ಶೌರಸೇನಿ ಮತ್ತು ಮಾಗಧಿಯ ವಿಶೇಷತೆಗಳನ್ನು ಪ್ರತಿಬಿಂಬಿಸುವ ಅವಧೀ ಮತ್ತು ಮಾಗಧಿಯ ವಿಕಸಿತರೂಪವಾದ ಮೈಥಿಲಿ ಇವು ಮುಖ್ಯವಾದುವು.

ಹಿಂದೀ ಸಾಹಿತ್ಯದ ಉಗಮ ೮, ೧೦, ೧೨ ನೆಯ ಶತಮಾನಗಳೆಂದು ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಆದಿಕಾಲದ ಸಾಹಿತ್ಯವು ಅಪಭ್ರಂಶ[1] ಸಾಹಿತ್ಯದಲ್ಲಿ ಐಕ್ಯವಾಗುವುದರಿಂದ ಅದರ ಸರಿಯಾದ ಉಗಮಸ್ಥಾನವನ್ನು ನಿರ್ಧರಿಸುವುದು ಕಷ್ಟ. ಅಪಭ್ರಂಶ ಸಾಹಿತ್ಯದಲ್ಲಿ ಎರಡು ಪಂಗಡಗಳಿವೆ. ಪಶ್ಚಿಮ

[1] ಪ್ರಾಕೃತ ಭಾಷೆಯು ಆಧುನಿಕ ಭಾಷೆಗಳ ರೂಪಕ್ಕೆ ಪರಿವರ್ತಿತವಾಗುವುದಕ್ಕೆ ಹಿಂದೆ ಇದ್ದ ರೂಪಕ್ಕೆ ಅಪಭ್ರಂಶವೆಂದು ಹೆಸರು.

ರಾಜಾಸ್ಥಾನ ಮತ್ತು ಗುಜರಾತಿನ ನಾಗರ ಅಪಭ್ರಂಶದಲ್ಲಿ ರಚಿತವಾಗಿರುವ ಜೈನ ಸಾಹಿತ್ಯ, ಬೀಹಾರ್ ಬಂಗಾಳದಲ್ಲಿ ಪ್ರಚಾರದಲ್ಲಿದ್ದ ಮಾಗಧೀ ಅಪಭ್ರಂಶದ ಸಿದ್ಧಸಾಹಿತ್ಯ. ಪಂಡಿತ ಚಂದ್ರಧರಶರ್ಮರು ಜೈನಸಾಹಿತ್ಯದ ಪ್ರಾಮುಖ್ಯತೆಯನ್ನು ವಿಶದಪಡಿಸಿ ಅದನ್ನು ಪುರಾಣೀ ಎಂದು ಕರೆದಿದ್ದಾರೆ. ರಾಹುಲ ಸಂಕೃತ್ಯಾಯನರು ಸಿದ್ಧಸಾಹಿತ್ಯದ ಪ್ರಾಮುಖ್ಯತೆಯನ್ನು ತಿಳಿಯಪಡಿಸಿದ್ದಾರೆ. ಈ ಅಪಭ್ರಂಶಗಳು ಭಾಷಾಸಾಹಿತ್ಯಗಳ ಉಗಮವಾದಮೇಲೆ ಥಟ್ಟನೆ ನಿಂತುಹೋಗಲಿಲ್ಲ. ಅವುಗಳೊಡನೆಯೇ ೧೫ ನೆಯ ಶತಮಾನದವರೆಗೂ ಅಪೂರ್ವವಾಗಿ ಉಪಯೋಗವಾಗುತ್ತಲೇ ಇತ್ತು. ಮೈಥಿಲ ಕೋಕಿಲ ವಿದ್ಯಾಪತಿ ತಮ್ಮ 'ಕೀರ್ತಿಲತಾ' ಎಂಬ ಗ್ರಂಥವನ್ನು ಮೈಥಿಲಿ ಅಪಭ್ರಂಶದಲ್ಲಿ ರಚಿಸಿರುವುದು ಇದಕ್ಕೆ ಉದಾಹರಣೆ.

ಈ ಅಪಭ್ರಂಶ ಸಾಹಿತ್ಯಕ್ಕೆ ಭಿನ್ನವಾದ ಆದಿಕಾಲದ ಭಾಷಾಸಾಹಿತ್ಯವನ್ನು ನಾಥಸಾಹಿತ್ಯ ಮತ್ತು ಚಾರಣಸಾಹಿತ್ಯ ಎಂದು ಎರಡು ಭಾಗ ಮಾಡಬೇಕು. ನಾಥ ಸಂಪ್ರದಾಯವು ಗೋರಕ್‌ನಾಥರಿಂದ ಆರಂಭವಾಯಿತು. ಇವರು ೮೪ ಜನ ಸಿದ್ಧರಲ್ಲೊಬ್ಬರು. ಇವರು ಹತ್ತನೆಯ ಶತಮಾನದವರಿರಬಹುದು. ನಾಥ ಸಮಾಜದ ಸುಧಾರಣೆಯೇ ಇವರ ಉಪದೇಶಗಳ ಗುರಿಯಿರಬೇಕು. ಇವರೂ ಇವರ ಅನುಯಾಯಿಗಳೂ ಗ್ರಂಥರಚನೆ ಮಾಡಿದ್ದಾರೆ. ಬೌದ್ಧ ಸಂಪ್ರದಾಯ ಇಳಿಮುಖವಾದಮೇಲೆ ೧೪-೧೫ ನೆಯ ಶತಮಾನಗಳಲ್ಲಿ ಭಕ್ತಿಪಂಥ ರೂಢಿಮೂಲವಾಗುವುದಕ್ಕೆ ಮುಂಚೆ ನಾಥಸಂಪ್ರದಾಯವಿದ್ದಿರಬೇಕು.

ಉತ್ತರ ಭಾರತದಲ್ಲಿ ದೊಡ್ಡ ಚಕ್ರಾಧಿಪತ್ಯವನ್ನು ಕಟ್ಟಿ ಆಳಿದ ಹರ್ಷ ಚಕ್ರವರ್ತಿಯು ಆಗಿಹೋದಮೇಲೆ ಅಲ್ಲಿ ದೀರ್ಘಕಾಲ ಒಂದು ವಿಧವಾದ ಗೊಂದಲವೂ ಅರಾಜಕತೆಯೂ ಉಂಟಾಯಿತು. ಪುನಃ ಮಹಮ್ಮದೀಯ ದೊರೆಗಳು ಭಾರತದಲ್ಲಿ ತಮ್ಮ ಚಕ್ರಾಧಿಪತ್ಯವನ್ನು ಸ್ಥಾಪಿಸುವವರೆಗೆ ಭಾರತದ ಐಕ್ಯತೆ ಶಿಥಿಲವಾಗಿಹೋಯಿತು. ಈ ಕಾಲದಲ್ಲಿ ಅನೇಕ ರಾಜಪುತ್ರ ಸಂಸ್ಥಾನಗಳು ತಲೆಯೆತ್ತಿ ಆ ಕಾಲದ ಇತಿಹಾಸದಲ್ಲಿ ಪ್ರಧಾನ ಪಾತ್ರವನ್ನು ವಹಿಸಿದವು. ಇವು ಪರಸ್ಪರ ಪರಮಾಧಿಕಾರಕ್ಕಾಗಿ ಹೊಡೆದಾಡುತ್ತಿದ್ದು ಪಶ್ಚಿಮದಿಂದ ಮಹಮ್ಮದೀಯರ ಆಕ್ರಮಣವಾದಾಗ ಸಮಾನ ಶತ್ರುವನ್ನು ಎದುರಿಸುವುದಕ್ಕಾಗಿ ಒಟ್ಟುಗೂಡುತ್ತಿದ್ದುದೂ ಉಂಟು. ಪ್ರಾರಂಭದಲ್ಲಿ ಕಾಬೂಲ್, ಪಂಜಾಬ್, ಸಿಂಧ್ ಪ್ರಾಂತಗಳೂ ಮಹಮ್ಮದೀಯರ ವಶವಾಗಿದ್ದರೂ ೧೧೭೫ ರಲ್ಲಿ ಮಹಮ್ಮದ್ ಘೋರಿಯು ತನ್ನ ದಂಡಯಾತ್ರೆಯನ್ನು ಪ್ರಾರಂಭಿಸುವವರೆಗೆ ಭಾರತವು ಪೂರ್ಣವಾಗಿ ಪರಾಧೀನವಾಗಿರಲಿಲ್ಲ. ೧೧೯೧ ರಲ್ಲಿ ಭಾರತೀಯ ರಾಜರುಗಳೆಲ್ಲ ಅಜ್ಮೀರ್ ಮತ್ತು ಡೆಲ್ಲಿಯ

ಚೌಹಾನ್ ಮನೆತನದ ಪೃಥ್ವೀರಾಜನ ಆಶ್ರಯದಲ್ಲಿ ಒಂದು ಸಂಯುಕ್ತ ಶಕ್ತಿಯಾಗಿ ಒಟ್ಟುಗೂಡಿದರು. ಆದಿಯಲ್ಲಿ ಅವರಿಗೆ ಜಯಲಭಿಸಿದರೂ ಮಾರನೆಯ ವರ್ಷ ಅವರೆಲ್ಲ ಸೋತು ಪೃಥ್ವೀರಾಜನು ಬಂಧಿತನಾಗಿ ಕೊಲ್ಲಲ್ಪಟ್ಟನು. ಡೆಲ್ಲಿಯು ಪರಕೀಯರ ಅಧೀನವಾಯಿತು. ಮಹಮ್ಮದೀಯರ ಪ್ರಾಬಲ್ಯ ಕ್ರಮ ಕ್ರಮವಾಗಿ ಹೆಚ್ಚಿ ೧೩೪೦ ರಲ್ಲಿ ಮಹಮ್ಮದ್‌ಬಿನ್‌ತೊಗಲಕನ ಕಾಲದಲ್ಲಿ ಪರಮೋಚ್ಚಸ್ಥಾನವನ್ನು ಪಡೆಯಿತು. ಆದರೆ ಅನೇಕ ರಾಜಪುತ್ರ ಸಂಸ್ಥಾನಗಳು ಸೋತು ನಾಶವಾದರೂ ಕೆಲ ವಂತೂ ಪುನಃ ಎಚ್ಚೆತ್ತು ತಮ್ಮ ಅಸ್ತಿತ್ವವನ್ನು ಸ್ಥಾಪಿಸಿಕೊಂಡು ಮಹಮ್ಮದೀಯರ ಅಧೀನವಾಗದೆಯೇ ಇದ್ದವು. ಅನೇಕ ಹೊಸ ಸಂಸ್ಥಾನಗಳೂ ಸ್ಥಾಪಿತವಾದುವು. ಮುಂದಿನ ಮಹಮ್ಮದೀಯ ದೊರೆಗಳು ಇವರೊಡನೆ ಕಾದಾಡುವುದಕ್ಕಿಂತ ಸ್ನೇಹವನ್ನು ಬೆಳಸುವುದು ಕ್ಷೇಮಕರವೆಂದು ಭಾವಿಸಿ ಮಿತ್ರರಾದರು.

ಈ ಕಾಲದಲ್ಲಿಯೇ ಭಾರತೀಯ ದೇಶಭಾಷೆಗಳು ಒಂದು ಪ್ರತ್ಯೇಕ ಆಕಾರವನ್ನು ಪಡೆದುದು. ಆದಿಕಾಲದ ಹಿಂದೂಸ್ಥಾನ್ ಭಾಷೆಯು ರಾಜಪುತ್ರಸ್ಥಾನದ ಚಾರಣ ಸಾಹಿತ್ಯರೂಪದಲ್ಲಿ ಆರಂಭವಾಯಿತು. ಆ ವೀರಯುಗದ ಅನೇಕ ಘಟನೆಗಳು ಆ ಕಾಲದ ಆಸ್ಥಾನಕವಿಗಳ ಕಾವ್ಯಕ್ಕೆ ಅಮೌಲ್ಯವಾದ ವಸ್ತುವನ್ನು ಒದಗಿಸಿದವು. ರಾಜರುಗಳ ಉದಾರಾಶ್ರಯವು ಗ್ರಂಥರಚನೆಗೆ ವಿಶೇಷ ಪ್ರೋತ್ಸಾಹವನ್ನಿತ್ತವು. ಆ ಸಾಹಿತ್ಯದ ಬಹುಭಾಗವು ಆಶ್ರಯದಾತರ ಶಕ್ತ್ಯುತ್ಸಾಹಗಳನ್ನು ಕುರಿತ ಸ್ತೋತ್ರ ಮಾಲಿಕೆಗಳಾದರೂ ಅವುಗಳಲ್ಲಿ ಆ ವೀರಯುಗದ ಹಿಂದೂ ಮುಸ್ಲಿಮರ ಅಪ್ರತಿಹತ ಹೋರಾಟದ ಪ್ರತ್ಯಕ್ಷ ಚಿತ್ರವನ್ನು ಕಾಣಬಹುದು.

ರಾಜಪುತ್ರರು ಸಣ್ಣ ಸಣ್ಣ ಸಂಸ್ಥಾನಗಳನ್ನು ಸ್ಥಾಪಿಸಿ ಮಹಮ್ಮದೀಯ ರೊಂದಿಗೆ ಜಗಳವಾಡುತ್ತಿದ್ದ ಕಾಲದಲ್ಲಿ ಪ್ರತಿಯೊಂದು ಸಂಸ್ಥಾನದಲ್ಲಿಯೂ ಆಸ್ಥಾನ ಕವಿಗಳೂ ವಂದಿಮಾಗಧರೂ ಇರುತ್ತಿದ್ದರು. ಇವರು ತಮ್ಮ ಆಶ್ರಯದಾತರನ್ನು ಕುರಿತು ಪ್ರಗಾಥಗಳನ್ನು ರಚಿಸುತ್ತಿದ್ದರು. ಇವರು ಒಂದು ಪ್ರತ್ಯೇಕ ಪಂಗಡಕ್ಕೆ ಸೇರಿದವರು. ಇವರಲ್ಲಿ ಚಾರಣರು, ಭಟ್ಟರು, ಸೇವಕರು, ಪಂಚೋಳಿಗಳು ಎಂಬ ಪ್ರಭೇದಗಳುಂಟು. ಮೊದಲೆರಡು ಗುಂಪಿನವರು ಬ್ರಾಹ್ಮಣರು. ಇವರು ಪ್ರಾರಂಭ ದಲ್ಲಿ ಉಪಯೋಗಿಸುತ್ತಿದ್ದ ಸ್ಥಳೀಯ ಭಾಷೆ ಪ್ರಾಕೃತವಿರಬೇಕು. ಇವೇ ಮುಂದೆ ಆಧುನಿಕ ಭಾಷೆಗಳಾಗಿ ಬೆಳೆದಿರಬೇಕು. ಸುಮಾರು ೭೦೦ ರಿಂದ ೧೧೫೦ ರ ವರೆಗೆ ಅನೇಕ ಚಾರಣರು ಗ್ರಂಥರಚನೆ ಮಾಡಿರುವುದಾಗಿ ಪ್ರತೀತಿ ಇದೆ. ಪುಷ್ಯ, ಕೇದಾರ, ಅನನ್ಯದಾಸ್, ಮಸಾವುದ್, ಕುತುಬ್ ಅಲಿ, ಅಕರಾಮ್, ಮೊದಲಾದವರು ಇವರಲ್ಲಿ ಮುಖ್ಯರು. ಇವರ ಗ್ರಂಥಗಳು ಉಪಲಭ್ಯವಲ್ಲದುದರಿಂದ ಇವರ ಭಾಷೆ ಪ್ರಾಕೃತವೋ

ಹಿಂದಿಯೋ ಹೇಳಲಾಗುವುದಿಲ್ಲ. ಸುಮಾರು ೧೬ ನೆಯ ಶತಮಾನಕ್ಕೆ ಸೇರಿದ ಮೇವಾರ್ ಸಂಸ್ಥಾನದ ರಾಜಮನೆತನವನ್ನು ಕುರಿತ 'ಕುಮಾನ್ ರಾಸೊ' ಎಂಬ ಚಾರಣಗೀತೆಯೊಂದು ಒಂಬತ್ತನೆಯ ಶತಮಾನದಲ್ಲಿ ರಚಿತವಾದ ಮೂಲಕೃತಿಯ ಆಧಾರದ ಮೇಲೆ ರಚಿತವಾಗಿದೆಯೆಂದು ಪ್ರತೀತಿ. ಮೂಲದ ಯಾವ ಭಾಗವೂ ಸಿಕ್ಕಿಲ್ಲವಾಗಿ ಅದರ ವಿಷಯವಾಗಿ ಏನನ್ನೂ ಹೇಳಲಾಗುವುದಿಲ್ಲ. ೧೧೪೩ ರಲ್ಲಿ ಗುಜರಾತಿನ ದೊರೆಯಾದ ಕುಮಾರಪಾಲನೆಂಬುವನು ಅನ್ಹಿಲ್‌ವಾರ ಎಂಬ ರಾಜಧಾನಿಯಲ್ಲಿ ರಾಜ್ಯವಾಳುತ್ತಿದ್ದು ಜೈನವಿದ್ವಾಂಸನಾದ ಹೇಮಚಂದ್ರನ ಉಪದೇಶದಿಂದ ಜೈನನಾದನೆಂದೂ ಹೇಮಚಂದ್ರನು ಅವನ ವಿಷಯವಾಗಿ ಕೆಲವು ಕಾಲದ ಮೇಲೆ 'ಕುಮಾರಪಾಲ ಚರಿತ'ವೆಂಬ ಶೃಂಗಾರಕಾವ್ಯವನ್ನು ಪ್ರಾಕೃತದಲ್ಲಿ ರಚಿಸಿದನೆಂದೂ, ಪ್ರತೀತಿ. ಬಹುಶಃ ಇದರ ಆಧಾರದ ಮೇಲೆ ಅನಾಮಧೇಯ ಕವಿಯೊಬ್ಬನು ಆದಿಕಾಲದ ಭಾಷೆಯಲ್ಲಿ ಇದೇ ಹೆಸರಿನ ಮತ್ತೊಂದು ಗ್ರಂಥವನ್ನು ರಚಿಸಿದನು. ಸುಮಾರು ೧೦೦೧ ರಲ್ಲಿ ವಿಶಾಲದೇವನು ಅಜ್ಮೀರದ ರಾಜನಾಗಿದ್ದನು. ಅವನ ವಿಷಯವಾಗಿ 'ಬಿಸಲ್‌ದೇವ ರಾಸೊ' ಎಂಬ ಗೀತೆಯೊಂದಿದೆ. ಇದರ ಕಾಲವೂ ಅನಿರ್ದಿಷ್ಟ; ೧೩ ನೆಯ ಶತಮಾನದ್ದಿರಬಹುದು. ಸ್ಪಷ್ಟವಾಗಿ ೧೧೯೧ ರಲ್ಲಿ ರಚಿತವಾದ 'ಪೃಥ್ವೀರಾಜ ರಾಸೋ'ವಿನಲ್ಲಿ ಕೂಡ ಶುದ್ಧ ಅಪಭ್ರಂಶವಾದ ಶೌರಸೇನಿ ಪ್ರಾಕೃತ ಶಬ್ದಗಳ ಬಾಹುಳ್ಯವಿರುವುದೆಂದು ಕಂಡುಬರುತ್ತದೆ. ಆದುದರಿಂದ ಈ ಪ್ರಾಚೀನ ಗ್ರಂಥಗಳ ಪೂರ್ಣಾಭ್ಯಾಸವಾಗುವವರೆಗೆ, ಅವುಗಳ ಕಾಲನಿಷ್ಕರ್ಷೆ ಯಾಗುವವರೆಗೆ, ಹಿಂದೀ ಭಾಷೆಯ ಉಗಮ ಯಾವಾಗ ಆಯಿತೆಂದು ಹೇಳುವುದು ಕಷ್ಟ. ಸುಮಾರು ೧೨ ನೆಯ ಶತಮಾನದ ಪ್ರಾರಂಭಕಾಲಕ್ಕಿಂತ ಹಿಂದೆಯಿರಲಾರ ದೆಂದು ಮಾತ್ರ ಹೇಳಬಹುದು.

೧೧೫೯ ರಲ್ಲಿ ಜನಿಸಿ ೧೧೯೨ ರಲ್ಲಿ ಸ್ವರ್ಗಸ್ಥನಾದ ಅಜ್ಮೀರ್ ಮತ್ತು ದೆಹಲಿಯ ಅರಸನಾದ ಪೃಥ್ವಿರಾಜನು ಉದ್ದಾಮ ಕವಿಜನಾಶ್ರಯನಾಗಿದ್ದನು. ಅನನ್ಯದಾಸ್ ಚಂದ್ ಬರ್ದಾಯಿ ಮೊದಲಾದವರು ಅವನ ಆಸ್ಥಾನಕವಿಗಳಾಗಿದ್ದರು. ಚಂದ್ ಬರ್ದಾಯಿ ಪ್ರಸಿದ್ಧ ವಂಶಸ್ಥ; ಮುಂದೆ ಬಂದ ಸೂರ್‌ದಾಸನು ಇವನ ವಂಶಸ್ಥನೆಂದು ಕೆಲವರ ಮತ. ಪೃಥ್ವೀರಾಜನ ಆಸ್ಥಾನದಲ್ಲಿ ಆಸ್ಥಾನಕವಿಯೂ ಮಂತ್ರಿಯೂ ಆಗಿದ್ದನು. ರಾಜ ಮತ್ತು ಕವಿಗಳಿಬ್ಬರೂ ಒಂದೇ ದಿನ ಒಂದೇ ತಿಥಿ ವಾರ ನಕ್ಷತ್ರದಲ್ಲಿ ಹುಟ್ಟಿ ಅತ್ಯಂತ ಸ್ನೇಹಿತರಾಗಿ ಬಾಳಿ ಒಟ್ಟಿಗೇ ಮಡಿದವರು. ೧೬ ನೆಯ ಶತಮಾನ ದಲ್ಲಿ ಆತನ ಕವನಗಳೆಲ್ಲ ಮೇವಾರಿನ ಅಮರಸಿಂಹನಿಂದ ಸಂಕಲಿತವಾಗಿದೆ. ಚಂದ್ ಬರ್ದಾಯಿಯ ಪ್ರಧಾನ ಗ್ರಂಥ 'ಪೃಥ್ವೀರಾಜ ರಾಸೊ.' ೬೯ ಭಾಗವುಳ್ಳ ಈ ಗ್ರಂಥ

ದಲ್ಲಿ ಒಂದು ಲಕ್ಷ ಪದ್ಯಗಳಿವೆ. ಇದರಲ್ಲಿ ಕವಿ ತನ್ನ ಆಶ್ರಯದಾತನ ಶೌರ್ಯವನ್ನೂ ತನ್ನ ಕಾಲದ ಪರಿಸ್ಥಿತಿಯನ್ನೂ ಬಹು ಹೃದಯಂಗಮವಾಗಿ ವರ್ಣಿಸಿದ್ದಾನೆ. ಈ ಗ್ರಂಥದಲ್ಲಿ—ಸಾಮಾನ್ಯವಾಗಿ ಎಲ್ಲ ರಾಸೊಗಳಲ್ಲಿಯೂ ಇರುವಂತೆಯೇ—ಐತಿಹಾಸಿಕ ವಿಷಯಗಳೊಂದಿಗೆ ಕಲ್ಪಿತ ಸಂಗತಿಗಳೂ ಉತ್ಪ್ರೇಕ್ಷೆಗಳೂ ತುಂಬಿರುವುದರಿಂದ ಇದನ್ನು ಶುದ್ಧ ಐತಿಹಾಸಿಕ ಗ್ರಂಥವಾಗಿ ಗ್ರಹಿಸಲಾಗುವುದಿಲ್ಲ. ಆದರೂ ಹಿಂದೀ ಸಾಹಿತ್ಯದಲ್ಲಿ ಇದು ಮೊತ್ತಮೊದಲನೆಯ ಕಾಲಕ್ಕೆ ಸಂಬಂಧಪಟ್ಟುದುದರಿಂದ ಇದಕ್ಕೆ ಪ್ರತ್ಯೇಕ ಸ್ಥಾನವಿದೆ. ಇದರ ಭಾಷೆ ಕ್ಲಿಷ್ಟವಾಗಿರುವುದರಿಂದ ಸಾರ್ವಜನಿಕವಾಗಿ ಅರ್ಥವಾಗುವುದಿಲ್ಲ. ಅರ್ಥಮಾಡಿಕೊಂಡವರು ಅದರ ವಿಷಯದಲ್ಲಿ ಒಳ್ಳೆಯ ಅಭಿಪ್ರಾಯವುಳ್ಳವರಾಗಿದ್ದಾರೆ. ಭಾಷಾಶಾಸ್ತ್ರ ದೃಷ್ಟಿಯಿಂದ ಇದಕ್ಕೆ ವಿಶೇಷ ಬೆಲೆಯಿದೆ. ಚಂದ್ ಬರ್ದಾಯಿಯ ಮಗನಾದ ಜಲ್ಹಣನೂ ಕವಿಯೆಂದೂ ಈ ರಾಸೋವಿನ ಕೆಲವು ಭಾಗವೂ ಅವನಿಂದ ರಚಿತವಾಗಿರಬೇಕೆಂದೂ ಊಹೆ.

ಪೃಥ್ವೀರಾಜನ ವಿರೋಧಿಯಾಗಿದ್ದ ಪರಮಾರ್ಡಿ ಆಸ್ಥಾನದಲ್ಲಿ ಚಂದ್ ಬರ್ದಾಯಿಯ ಸಮಕಾಲೀನನಾಗಿದ್ದವನು ಜಗನಾಯಕ, ಆತನ ಗ್ರಂಥಗಳಾವುವೂ ಸಿಕ್ಕಿಲ್ಲ. ಅಲ್ಹಖಂಡದಲ್ಲಿ ಆತನಿಂದ ರಚಿತವಾದ ಒಂದು ಕವನ ಮಾತ್ರ ಸಿಕ್ಕುತ್ತದೆ. ಇದು ಭಿನ್ನ ಭಿನ್ನ ಪಾಠಾಂತರಗಳಿಂದ ಕೂಡಿ ಈಗಲೂ ಅನೇಕರಿಂದ ಹಾಡಲ್ಪತ್ತಿದೆ. ಆದರೆ ಹಾಡುವವರ ಅನುಕೂಲಕ್ಕೆ ತಕ್ಕಂತೆ ಆಗಾಗ ನವೀಕೃತವಾಗುತ್ತಿದೆ. ಇದರ ನಾಯಕರು ಅಲ್ಹಾ ಮತ್ತು ಊದಲ್ ; ಇವರು ಮಹೋಬೆಯ ವೀರರು.

ಹದಿನಾಲ್ಕನೆಯ ಶತಮಾನದಲ್ಲಿದ್ದ ಶಾರ್ಙ್ಗಧರನೆಂಬ ಕವಿಯು ಚಂದ್ ಬರ್ದಾಯಿಯ ವಂಶಸ್ಥನೆಂದು ಪ್ರತೀತಿ. 'ಹಮ್ಮಿರಕಾವ್ಯ', 'ಹಮ್ಮೀರ ರಾಸೋ' ಎಂಬ ಎರಡು ಗ್ರಂಥಗಳ ಕರ್ತೃವೀತ. ಇವು ರಣಥಂಬೋರಿನ ಚರಿತ್ರೆ. ಸಂಸ್ಕೃತ ದಲ್ಲಿರುವ 'ಶಾರ್ಙ್ಗಧರ ಚರಿತ್ರೆ'ಯವನ್ನು ರಚಿಸಿದವನೂ ಇವನೇ. ಚಾರಣ ಸಂಪ್ರದಾಯ ಬಹು ಕಾಲದವರೆಗೆ ಬೆಳೆದುಬಂದಿದೆ. ಸಾಹಿತ್ಯದೃಷ್ಟಿಯಿಂದಲೂ ಇತಿಹಾಸ ದೃಷ್ಟಿಯಿಂದಲೂ ಬಹು ಮುಖ್ಯವಾದವು. ಹಿಂದೆಯೇ ತಿಳಿಸಿರುವಂತೆ ಶುದ್ಧ ಇತಿಹಾಸವೆಂದು ಗ್ರಾಹ್ಯವಲ್ಲದಿದ್ದರೂ ಆ ಕಾಲದ ಸ್ಥಿತಿಗತಿಗಳ ಅರಿವಿಗೆ ವಿಶೇಷ ಸಹಕಾರಿಯಾಗುತ್ತವೆ. ಸುಮಾರು ಇದೇಕಾಲದಲ್ಲಿದ್ದವರು ಭೂಪತಿನಲ್ಲ, ಮುಲ್ಲಾ ದಾವುದ್, ಅಮಿರ್ ಖುಸ್ರು. ಈ ಯುಗವನ್ನು ವೀರಗಾಥಾಯುಗವೆಂದು ಕರೆಯುತ್ತಾರೆ. ಸಾಮಾನ್ಯವಾಗಿ ಈ ಯುಗದಲ್ಲಿ ವೀರರಸ ಪ್ರಧಾನವಾದ ಕಾವ್ಯಗಳೇ ರಚಿತವಾಗುತ್ತಿದ್ದರೂ ಮೈಥಿಲ ಕೊಕಿಲನೆಂದು ಪ್ರಸಿದ್ಧನಾದ ವಿದ್ಯಾಪತಿಯ ಪ್ರೇಮ ಗೀತಗಳು ಜೈನ ಬೌದ್ಧರ ಧಾರ್ಮಿಕ ಮತ್ತು ನೈತಿಕ ಸೂಕ್ತಿಗಳೂ ಖುಸ್ರೋ

ಅಂತಹ ಕವಿಗಳ ಚಮತ್ಕಾರಪೂರ್ವಕವಾದ ಮನರಂಜಕ ಒಗಟೆಗಳೂ ಹಿಂದೀ ಸಾಹಿತ್ಯಪ್ರಪಂಚವನ್ನು ಪುಷ್ಟವನ್ನಾಗಿ ಮಾಡಿವೆ.

ಸುಮಾರು ಹದಿನೈದು ಶತಮಾನದ ವೇಳೆಗೆ ಮುಸಲ್ಮಾನರು ಭಾರತದಲ್ಲಿ ಸುಪ್ರತಿಷ್ಠಿತರಾಗಿದ್ದರು. ಎಷ್ಟು ಪ್ರಯತ್ನಪಟ್ಟರೂ ಹಿಂದುಗಳು ಅವರನ್ನು ಗೆಲ್ಲಲು ಸಾಧ್ಯವಾಗಲಿಲ್ಲ. ಅವರ ಶಕ್ತಿ ಕುಗ್ಗಿದುದಲ್ಲದೆ ಅವರ ಧರ್ಮಕ್ಕೆ ಧಕ್ಕೆಯುಂಟಾಗಿತ್ತು. ಹಿಂದೂ ಮುಸಲ್ಮಾನರಿಬ್ಬರಿಗೂ ಯುದ್ಧವು ಸಾಕಾಗಿತ್ತು. ಶಾಂತಿ ಸ್ಥಾಪನೆ ಮಾಡಿ ಆದಷ್ಟು ಸೌಹಾರ್ದದಿಂದ ಬಾಳುವ ಆವಶ್ಯಕತೆ ತಲೆದೋರಿತು. ಇಬ್ಬರಲ್ಲಿಯೂ ದ್ವೇಷಾಸೂಯೆಗಳನ್ನು ತೊಲಗಿಸಿ ಸ್ನೇಹವನ್ನು ಮೂಡಿಸುವ ಕಾರ್ಯದಲ್ಲಿ ಕವಿಗಳೂ ವೈಷ್ಣವ ಸಾಧುಸಂತರೂ ಬಹು ಶ್ರಮಿಸಿ ಕೃತಾರ್ಥರಾದರು. ಅಕ್ಬರನಂತಹ ವಿವೇಕಿಯಾದ ಚಕ್ರವರ್ತಿಯ ಕೈಯ್ಯಲ್ಲಿ ಸಾಗದಿದ್ದ ಕಾರ್ಯವು ವೈಷ್ಣವ ಆಚಾರ್ಯರಿಂದ ಸಾಧ್ಯವಾಯಿತು. ನಶಿಸಿಹೋಗಿದ್ದ ನಿರ್ಜೀವವಾಗಿದ್ದ ಹಿಂದೂ ಧರ್ಮಕ್ಕೆ ಜೀವಕಳೆಯನ್ನು ತುಂಬಿದರು. ಜನಗಳಿಗೆ ಶಾಂತಿ ಸಮಾಧಾನಗಳನ್ನು ಒದಗಿಸಿದರು. ಈ ಕಾರ್ಯದಲ್ಲಿ ಹಿಂದೂ ಮುಸ್ಲಿಮರಿಬ್ಬರೂ ದುಡಿದಿದ್ದಾರೆ. ಇವರಲ್ಲಿ ಕೆಲವರು ಸಗುಣ ಬ್ರಹ್ಮಾರಾಧಕರು ಮತ್ತೆ ಕೆಲವರು ನಿರ್ಗುಣಬ್ರಹ್ಮಾರಾಧಕರು. ಒಬ್ಬೊಬ್ಬರೂ ತಮ್ಮದೇ ಆದ ಪಂಥವನ್ನು ಸ್ಥಾಪಿಸಿ ಜನರನ್ನು ಸನ್ಮಾರ್ಗದಲ್ಲಿ ಕೊಂಡೊಯ್ದರು. ಇವರೆಲ್ಲರಲ್ಲಿಯೂ ವೇದಾಂತ ತತ್ವಗಳು, ದೇಹದ ಅನಿತ್ಯತೆ, ಆರಾಧ್ಯ ದೈವೋಪಾಸನೆ, ಭಕ್ತಿಯ ಪ್ರಾಮುಖ್ಯತೆ, ಮಾಯಾಪ್ರಾಬಲ್ಯ, ಹೃದಯ ಶುದ್ಧಿಯ ಆವಶ್ಯಕತೆ, ಪ್ರೇಮಸಾಧನೆಯ ಕಠಿಣತೆ ಮೊದಲಾದುವು ಸರ್ವಗ್ರಾಹ್ಯವಾದ ವಿಷಯ. ಆ ಭಕ್ತರಲ್ಲಿ ಕೆಲವರು ರಾಮಪಂಥೀಯರು, ಮತ್ತು ಕೆಲವರು ಕೃಷ್ಣಪಂಥೀಯರು; ಕೆಲವರು ಮೂರ್ತಿಪೂಜಕರು ಕೆಲವರು ಅಮೂರ್ತಿಪೂಜಕರು; ಎಲ್ಲವೂ ಭಕ್ತಿಪ್ರಧಾನವಾದುವು. ಅಲ್ಲದೆ ಜನಸಾಮಾನ್ಯರಲ್ಲಿ ಬೆಳೆದುಬಂದುವು. ಆದುದರಿಂದ ಜನಪ್ರಿಯವಾದ ಮತ್ತು ಸರ್ವಜನೋಪಯೋಗವಾದ ಭಾಷಾಸಾಹಿತ್ಯಗಳ ಅಭಿವೃದ್ಧಿಗೆ ಸಹಾಯವಾದುವು.

ಈ ಕಾಲದಲ್ಲಿ ಉತ್ತರ ಭಾರತದಲ್ಲಿ ಧಾರ್ಮಿಕ ಪುನರುದ್ಧಾರಕ್ಕೆ ವಿಶೇಷ ಪ್ರೇರಣೆಯನ್ನುಂಟುಮಾಡಿದವರು ರಮಾನಂದರೆಂಬುದು ನಿರ್ವಿವಾದವಾದ ವಿಷಯ. ಆದರೂ ಅವರ ಹಿಂದೆ ಈ ಕಾರ್ಯವನ್ನು ಮಾಡಿದವರಿಲ್ಲದಿಲ್ಲ. ಸು. ೧೬೦೪ ರಲ್ಲಿ ಸಂಕಲಿತವಾದ 'ಆದಿ ಗ್ರಂಥ'ದಲ್ಲಿ ರಮಾನಂದರಿಗಿಂತ ಹಿಂದಿನ ಕಾಲದ ಭಕ್ತಿ ಗೀತೆಗಳು ಉಪಲಬ್ಧವಾಗುತ್ತವೆ. ಈ ಆದಿ ಭಾಗವತರಲ್ಲಿ ಸದನಾ ಮತ್ತು ನಾಮದೇವರು ಗಣ್ಯರು. ಒಬ್ಬ ಜಯದೇವನ ಉಕ್ತಿಗಳೂ ಅಲ್ಲಿ ಇವೆ. ಈತ ಪ್ರಸಿದ್ಧ 'ಗೀತಗೋವಿಂದ'ದ ಜಯದೇವನೇ ಹೌದೋ ಅಲ್ಲವೋ ಹೇಳಲಾಗುವುದಿಲ್ಲ.

ಸುಮಾರು ೧೫ ನೆಯ ಶತಮಾನದವನಿರಬಹುದಾದ ಸದನನು ಕಟುಕರ ಜಾತಿಯವನಾಗಿದ್ದು ತನ್ನ ವೃತ್ತಿಯನ್ನು ಬಿಟ್ಟು ಭಕ್ತನಾದನೆಂದು ಪ್ರತೀತಿ. ಆತನ ಒಂದೆರಡು ಗೀತೆಗಳು ಮಾತ್ರ 'ಗ್ರಂಥ'ದಲ್ಲಿ ಸಿಕ್ಕುತ್ತವೆ.

ನಾಮದೇವನು ಮರಾಠೀ ದೇಶದವನು. ಫಂಡರಾಪುರದ ವಿಠೋಬನ ಭಕ್ತ. ಸುಮಾರು ೧೫ ನೆಯ ಶತಮಾನದ ಆದಿಭಾಗದಲ್ಲಿದ್ದವನು. ಆತನು ಜನ್ಮತಃ ಚಿಪ್ಪಿಗರವನು. ಪ್ರಚಲಿತವಾದ ಕತೆಯ ಪ್ರಕಾರ ಬಾಲ್ಯದಲ್ಲಿ ಆತನು ಬಹು ಭಕ್ತನಾಗಿದ್ದು ಕೆಲವು ಕಾಲ ದಂಗೆಕೋರರ ಜೊತೆಯಲ್ಲಿ ಸೇರಿ ಹೀನಕೃತ್ಯಗಳನ್ನು ನಡೆಸಿ ಕೊನೆಗೆ ಪಶ್ಚಾತ್ತಾಪಪಟ್ಟು ಉಚ್ಚವರ್ಗದ ಭಕ್ತನಾದನು. ಈತನು ಮರಾಠಿಯಲ್ಲಿ ಅನೇಕ ಗೀತೆಗಳನ್ನು ರಚಿಸಿರುವುದಲ್ಲದೆ ಹಿಂದಿಯಲ್ಲಿಯೂ ಅನೇಕ ಕವನಗಳನ್ನು ಹಾಡಿದ್ದಾನೆ. ಆತನ ಸ್ತೋತ್ರಗಳು ಅನೇಕ 'ಗ್ರಂಥ'ದಲ್ಲಿ ಸಿಕ್ಕುತ್ತವೆ. ಉತ್ತರ ದೇಶದ ಧಾರ್ಮಿಕ ಚಳುವಳಿಯಲ್ಲಿ ನಾಮದೇವನ ಪಾತ್ರ ಗಣ್ಯವಾದುದು.

ರಮಾನಂದರು ಸುಮಾರು ೧೪೭೦ ರಲ್ಲಿದ್ದವರು. ಅವರಿಗೆ ರಾಮನೇ ಪರಮಾರಾಧ್ಯ ವಸ್ತು. ಜನನಮರಣಾದಿ ಸರ್ವದುಃಖಗಳ ನಿವಾರಕ. ಆತನ ನಾಮೋಚ್ಚಾರಣೆಯೂ ಅನನ್ಯ ಭಕ್ತಿಯೂ ಮೋಕ್ಷಸಾಧನ. ಹಿಂದಿನ ಸಾಧುಸಂತರ ಉಪದೇಶ ಈ ಪಂಥವನ್ನು ಬಹುಮಟ್ಟಿಗೆ ಬೆಳಸಿದ್ದುದರಿಂದ ರಮಾನಂದರ ಉಪದೇಶ ಜನರಲ್ಲಿ ಬಹುಬೇಗ ಬೇರೂರಿತು. ಕಾಶಿಯನ್ನೇ ಅವರು ತಮ್ಮ ಕಾರ್ಯಕ್ಷೇತ್ರವನ್ನಾಗಿ ಆರಿಸಿಕೊಂಡು ತಮ್ಮ ಕಾರ್ಯವನ್ನು ವಿಸ್ತರಿಸಿದರು. ಮುಂದೆ ಬಂದ ಉತ್ತರದೇಶದ ಎಲ್ಲ ಧಾರ್ಮಿಕ ಪಂಥಗಳೂ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ರಮಾನಂದರಿಗೆ ಋಣಿ. ಕಾವ್ಯಪ್ರಪಂಚದಲ್ಲಿ ಅವರಿಗೆ ವಿಶೇಷ ಸ್ಥಾನವಿಲ್ಲ. ಅವರಿಂದ ರಚಿತವಾಗಿರುವ ಕೆಲವು ಗೀತೆಗಳು ಮಾತ್ರ ಸಿಕ್ಕಿವೆ. 'ಗ್ರಂಥದಲ್ಲಿಯೂ' ಒಂದು ಕವನವಿದೆ. ಅದರಲ್ಲಿ ಅವರು ಭಗವಂತನು ಸರ್ವಾಂತರ್ಯಾಮಿಯಾಗಿರುವುದರಿಂದ ದೇವಾಲಯಕ್ಕೆ ಹೋಗಿ ಪೂಜಿಸಬೇಕಾಗಿಲ್ಲ ಎಂದು ನುಡಿದಿದ್ದಾರೆ. ಎಂದಮಾತ್ರಕ್ಕೆ ರಮಾನಂದರೇ ಮೂರ್ತಿಪೂಜೆಯನ್ನು ಖಂಡಿಸಿದರೆಂದು ಭಾವಿಸಬೇಕಾಗಿಲ್ಲ. ಅಗೋಚರನೂ ಆದರೂ ಅನುಭಾವ್ಯನೂ ಸತ್ಯನೂ ಆದ ಏಕೈಕ ಆರಾಧ್ಯ ದೈವಭಕ್ತಿಯನ್ನು ಅವರು ಉಪದೇಶಿಸಿದರು. ರಮಾನಂದರು ಹಿಂದೂ ಸಂಪ್ರದಾಯಗಳಿಗೂ ಪುರಾಣಗಳಿಗೂ ವರ್ಣಾಶ್ರಮಧರ್ಮಕ್ಕೂ ಗೌರವವಿತ್ತರು. ಇತರ ಭಕ್ತಕವಿಗಳಹಾಗೆಯೇ ಇವರೂ ಮೋಕ್ಷವು ಜಾತಿಮತ ಭೇದವಿಲ್ಲದೆ ಸರ್ವರಿಗೂ ಲಭ್ಯವೆಂದು ಉಪದೇಶಿಸಿದರು. ಅವರ ಶಿಷ್ಯವರ್ಗದಲ್ಲಿ ಶೂದ್ರ, ಚಂಡಾಲ, ಮಹಮ್ಮದೀಯ, ಸ್ತ್ರೀ ವರ್ಗದವರೆಲ್ಲ ಇದ್ದಾರೆ. ಭಾಷಾ ದೃಷ್ಟಿಯಿಂದ ರಮಾನಂದೀಯ ಸಾಹಿತ್ಯವೆಲ್ಲ ಹಿಂದಿ

ಯಲ್ಲಿರುವುದು ವೈಶಿಷ್ಟ್ಯ. ರಮಾನಂದರ ಶಿಷ್ಯರೂ ಅನುಯಾಯಿಗಳೂ ಅವರಿಂದ ಮುಂದೆ ಬಂದವರೂ ತಮ್ಮ ಪ್ರಚಾರ ಕಾರ್ಯದಲ್ಲಿ ಸಂಸ್ಕೃತವನ್ನು ಪೂರ್ಣವಾಗಿ ಬಿಟ್ಟು ಭಾಷಾ ಸಾಹಿತ್ಯವನ್ನೇ ಬೆಳಸಿಕೊಂಡು ಬಂದದ್ದರಿಂದ ಹಿಂದೀಭಾಷೆಯ ಬೆಳವಣಿಗೆಗೆ ಬಹುಮಟ್ಟಿಗೆ ಉಪಕಾರವಾಯಿತು.

ರಮಾನಂದರ ಪ್ರತ್ಯಕ್ಷ ಶಿಷ್ಯರು ಹನ್ನೆರಡು ಜನರೆಂದು ಪ್ರತೀತಿ. ಇವರಲ್ಲಿ ಕೆಲವರಿಂದ ರಚಿತವಾದ ಹಿಂದೀ ಕೃತಿಗಳು ಉಪಲಬ್ಧವಾಗಿವೆ. ರಾಜನಾದ ಪೀಪಾ, ಜಾಟನಾದ ಧಾನಾ, ನಾಪಿತನಾದ ಸೇನ್ ಇವರು ರಮಾನಂದರ ಶಿಷ್ಯರು. ಇವರ ಕೆಲವು ಕೃತಿಗಳು 'ಗ್ರಂಥ' ದಲ್ಲಿ ಸಿಕ್ಕುತ್ತವೆ. ಮತ್ತೊಬ್ಬ ಶಿಷ್ಯನಾದ ಭವಾನಂದನು ವೇದಾಂತ ವಿಷಯಕವಾದ 'ಅಮೃತಧಾರ್' ಎಂಬ ೧೪ ಅಧ್ಯಾಯಗಳ ಗ್ರಂಥವನ್ನು ರಚಿಸಿದ್ದಾನೆ. ಚಮ್ಮಾರ ಜಾತಿಯವನಾದ ದಾಸ್ ಎಂಬುವನು ಭಕ್ತಶ್ರೇಷ್ಠನಾಗಿ ಅನೇಕ ಗೀತೆಗಳನ್ನು ಬರೆದಿದ್ದಾನೆ. 'ಆದಿಗ್ರಂಥ'ದಲ್ಲಿ ಮೂವತ್ತಕ್ಕಿಂತ ಹೆಚ್ಚಿನ ಆತನ ಗೀತೆಗಳು ಸಿಕ್ಕುವುವು. ಕೆಲವಂತೂ ಬಹು ಆಕರ್ಷಕವಾಗಿವೆ.

ರಮಾನಂದರ ಶಿಷ್ಯರಲ್ಲಿ ಸಾಹಿತ್ಯದೃಷ್ಟಿಯಿಂದಲೂ ಧಾರ್ಮಿಕದೃಷ್ಟಿಯಿಂದಲೂ ಪರಮಗಣ್ಯರಾದ ವ್ಯಕ್ತಿ ಕಬೀರದಾಸ್. ಇವರು ಜಾತಿಯಲ್ಲಿ ಮಹಮ್ಮದೀಯರು; ವೃತ್ತಿಯಲ್ಲಿ ನೆಯ್ಗೆಯವರು. ಇವರು ಒಬ್ಬ ಬ್ರಾಹ್ಮಣ ವಿಧವೆಯ ಕುಮಾರರೆಂದೂ ತಾಯಿಯು ತನ್ನ ಮಾನಸಂರಕ್ಷಣೆಗಾಗಿ ಮಗುವನ್ನು ಜನನವಾದ ತಕ್ಷಣ ಕಾಶಿಯ ಹತ್ತಿರವಿರುವ ಲಹರ್ ಸರೋವರದಲ್ಲಿ ಬಿಟ್ಟಳೆಂದೂ ಹತ್ತಿರದಲ್ಲಿಯೇ ಇದ್ದ ಮಹಮ್ಮದೀಯ ನೆಯ್ಗೆಯವನಾದ ನೀರೂ ಎಂಬುವನೂ ಅವನ ಹೆಂಡತಿಯಾದ ನೀಮಾ ಎಂಬುವಳೂ ಆ ಶಿಶುವನ್ನು ಸ್ವಂತ ಮಗುವಿನಂತೆ ಸಾಕಿದರೆಂದೂ ಒಂದು ಸಂಪ್ರದಾಯದ ಕತೆ ಹೇಳುತ್ತದೆ. ಮತ್ತೊಂದು ಸಂಪ್ರದಾಯವು ಅತ್ಯಂತ ರೋಮಾಂಚಕಾರಿಯಾದ ಬೇರೊಂದು ಕತೆಯನ್ನು ನಿರೂಪಿಸುತ್ತದೆ. ಬಾಲ್ಯದಿಂದಲೂ ಕಬೀರ್ ಹಿಂದೂ ಮಹಮ್ಮದೀಯರಿಬ್ಬರಿಗೂ ಅಪಚಾರವನ್ನೆಸಗಿದ್ದನು. ನೀಚ ಜಾತಿಯಲ್ಲಿ ಹುಟ್ಟಿ ಯಜ್ಞೋಪವೀತವನ್ನು ಧರಿಸಿದ್ದುದರಿಂದ ಹಿಂದುಗಳಿಗೆ ಕೋಪ ಬಂದಿತ್ತು. ಮಹಮ್ಮದೀಯ ದೇವರುಗಳಿಗೆ ಹಿಂದೂ ಹೆಸರನ್ನಳವಡಿಸಿದುದರಿಂದ ಮಹಮ್ಮದೀಯರು ಆಗ್ರಹಗೊಂಡಿದ್ದರು. ಅಲ್ಲದೆ ಎಲ್ಲರೂ ಬಾಲಕ ಕಬೀರನನ್ನು 'ನಿಗುರು' (ಗುರುವಿಲ್ಲದವನು) ಎಂದು ಹಾಸ್ಯಮಾಡುತ್ತಿದ್ದರು. ಈ ಅಪವಾದವನ್ನು ನೀಗಿಕೊಳ್ಳುವುದಕ್ಕಾಗಿ ಆತನು ರಮಾನಂದರ ಶಿಷ್ಯನಾಗಬೇಕೆಂದು ಇಚ್ಛಿಸಿ ಒಂದು ಉಪಾಯವನ್ನು ಹುಡುಕಿದನು. ರಮಾನಂದರು ಪ್ರತಿದಿನವೂ ಸ್ನಾನಮಾಡುತ್ತಿದ್ದ ಸ್ನಾನಘಟ್ಟಕ್ಕೆ ಹೋಗಿ ದಾರಿಗೆ ಅಡ್ಡಲಾಗಿ ಮಲಗಿದರೆ ಕತ್ತಲೆಯಲ್ಲಿ ಅವರು

ಇವನನ್ನು ಎಡವಿ ತಮಗೆ ಸಹಜವಾದ ರಾಮತಾರಕ ಮಂತ್ರವನ್ನು ಉಚ್ಚಾರ ಮಾಡುವರೆಂದೂ ಅದರಿಂದ ತಾನು ಅವರ ಶಿಷ್ಯನಾಗಬಹುದೆಂದೂ ಯೋಚಿಸಿ ಅಲ್ಲಿ ಹೋಗಿ ಮಲಗಿದನು. ಯೋಚಿಸಿದಂತೆಯೇ ಆಯಿತು. ಕಬೀರರು ರಮಾನಂದರ ಶಿಷ್ಯರಾದರು. ಆಮೇಲೆ ಶಿಷ್ಯರು ಗುರುವನ್ನು ಪ್ರತಿದಿನವೂ ಸಂದರ್ಶಿಸಿ ಅವರ ಕೃಪೆಗೆ ಪಾತ್ರರಾದರು. ಆದರೆ ಉಪದೇಶದಲ್ಲಿ ಮಾತ್ರ ಗುರುವನ್ನು ಮೀರಿ ಮುಂದು ವರಿದರು. ಕಬೀರರು ಬಾಲ್ಯದಲ್ಲಿ ಮಹಮ್ಮದೀಯರಿರಲಿ ಇಲ್ಲದಿರಲಿ ಅವರಿಗೆ ಮಹಮ್ಮದೀಯ ಪ್ರಭಾವ ಇತ್ತೆಂಬುದರಲ್ಲಿ ಸಂದೇಹವಿಲ್ಲ. ಉತ್ತರ ಭಾರತದಲ್ಲಿ ನಿರ್ಗುಣ ಬ್ರಹ್ಮೋಪಾಸನೆಗೆ ಅವರೇ ಮೂಲಕಾರಣವೆಂದು ಹೇಳಬಹುದು. ಅವರ ದೃಷ್ಟಿಯಲ್ಲಿ ರಾಮರಹೀಮರೆಲ್ಲ ಒಂದೇ. 'ದೇವ ಒಬ್ಬ ನಾಮ ಹಲವು.' ಅವರು ವೇದಾಂತ ತತ್ತ್ವಗಳನ್ನು ಅಂಗೀಕರಿಸಿದ್ದರೂ ಅವತಾರ ತತ್ತ್ವಗಳನ್ನು ತ್ಯಾಗಮಾಡಿದ್ದಲ್ಲದೆ ಎಲ್ಲ ವಿಧವಾದ ಮೂರ್ತಿಪೂಜೆಯನ್ನೂ ಕರ್ಮಾಚರಣೆಯನ್ನೂ ನಿರ್ದಾಕ್ಷಿಣ್ಯವಾಗಿ ಖಂಡಿಸಿದರು. ಮುಂದೆ ಬಂದವರ ಮೇಲೆ ಕಬೀರರ ಪ್ರಭಾವ ಬಲು ಹಿರಿದು. ಕಬೀರ ಪಂಥೀಯರೇ ಅಲ್ಲದೆ ಮುಂದಿನ ಅನೇಕ ಧಾರ್ಮಿಕ ಪಂಥಗಳಿಗೆ ಕಬೀರರ ಪ್ರತ್ಯಕ್ಷ ಪರೋಕ್ಷ ಸಂಬಂಧಗಳಿವೆ. ಕಬೀರರ ಜೀವನದ ವಿಷಯವಾಗಿ ಹೆಚ್ಚೇನೂ ತಿಳಿಯದು. ಅವರು ಹಿಂದೂ ಮಹಮ್ಮದೀಯರಿಬ್ಬರನ್ನೂ ಖಂಡಿಸಿದುದರಿಂದ ಅವರಿಗೆ ಇಬ್ಬರೂ ಪ್ರತಿಕಕ್ಷಿಗಳಾದರು. ಇಬ್ಬರೂ ಅವರ ಮೇಲೆ ದೂರುಮಾಡಿದುದರಿಂದ ಚಕ್ರವರ್ತಿಯಾದ ಸಿಕಂದರ್ ಲೂದಿಯು ಅವರನ್ನು ದೇಶಭ್ರಷ್ಟರನ್ನಾಗಿ ಮಾಡಿಸಲು ಅವರು ಘೋರಕ್‌ಪುರ ಜಿಲ್ಲೆಯ ಮಘರ್ ಎಂಬಲ್ಲಿಗೆ ಹೋಗಿ ಅಲ್ಲಿಯೇ ಅವರ ಕೊನೆಯ ದಿನಗಳನ್ನು ಕಳೆದರು.

ಕಬೀರರಿಂದ ರಚಿತವಾದ ಕೃತಿಗಳನೇಕವಿವೆ. ಅವೆಲ್ಲ ಅವರ ಕಾಲದಲ್ಲಿ ಗ್ರಂಥಸ್ಥವಾಗದೆ ಮುಖಸ್ಥವಾಗಿದ್ದು ಅವರು ತೀರಿಹೋದಮೇಲೆ ಅವರ ಶಿಷ್ಯರಿಂದ ಸಂಕಲಿತವಾಗಿರಬೇಕು. ಕಬೀರರ ಕೃತಿಗಳೆಂದು ಅನೇಕ ಸಂಕಲನಗಳು ದೊರೆತಿವೆ. ಆದರೆ ಅವುಗಳಲ್ಲಿ ಅನೇಕವು ವಾಸ್ತವವಾಗಿ ಅವರದಿರಲಾರವು. ಸಿಕ್ಕರ 'ಆದಿಗ್ರಂಥ'ದಲ್ಲಿ ಒಂದು ಸಂಕಲನವೂ 'ಬೀಜಕ'ದಲ್ಲಿ ಒಂದು ಸಂಕಲನವೂ ಉಪಲಬ್ಧವಾಗಿವೆ. 'ಬೀಜಕ್' ಎಂಬುದು ಸುಮಾರು ೧೫೭೦ ರಲ್ಲಿ ಕಬೀರರ ಪಟ್ಟಶಿಷ್ಯರಾದ ಭಾಗೋದಾಸ್ ಎನ್ನುವವರಿಂದ ನಿತ್ಯಾನುಸಂಧಾನಕ್ಕಾಗಿ ಸಂಕಲಿತವಾಗಿರಬೇಕೆಂದು ಊಹೆ. 'ಬೀಜಕ್' ಎಂಬುದು ವಿವಿಧ ಛಂದಸ್ಸಿನಲ್ಲಿ ರಚಿತವಾದ ಗೀತಾ ಸಂಗ್ರಹ. ರಮೇಯಿಸಿ, ಶಬ್ದ, ಚೌಂತೀಸ, ವಿಪ್ರಮತೀಸ್, ಕಹರಾ, ವಸಂತಾ, ಬೇಲಿ, ಚಾಂಚರಿ, ಬಿರ್‌ಹೂಲಿ ಹಿಂದೋಲ ಮೊದಲಾದುವು ಅದರ ವಿವಿಧ ರೀತಿಯ

ಛಂದಸ್ಸುಗಳು. ಸಂಕಲನವು ನಾಲ್ಕು ನೂರು ಶಾಖೆಗಳಿಂದ ಪೂರ್ಣವಾಗುತ್ತದೆ. ಆದಿಗ್ರಂಥದ ಪದ್ಯಗಳನ್ನಾಗಲಿ 'ಬೀಜಕ'ದ ಪದ್ಯಗಳನ್ನಾಗಲಿ ಪೂರ್ಣವಾಗಿ ಕಬೀರ ಕೃತವೆಂದು ಅಂಗೀಕಾರಮಾಡಲಾಗುವುದಿಲ್ಲ. ಇವೇ ಅಲ್ಲದೆ ಭಾರತದ ಬೇರೆ ಬೇರೆ ಭಾಗಗಳಿಂದ ಕಬೀರ ಕೃತವೆಂಬ ೫,೦೦೦ ಕ್ಕೆ ಮೀರಿದ ಶಾಖೆಗಳು ಸಂಕಲಿತವಾಗಿವೆ. ಕಾಶಿಯಲ್ಲಿ ಕಬೀರ ಪಂಥೀಯರ ಪ್ರಧಾನ ಕೇಂದ್ರವಾದ ಕಬೀರಚೌರದಲ್ಲಿ 'ಖಾಸ್‌ಗ್ರಂಥ'ವೆಂಬ ಹೆಸರಿನಲ್ಲಿ ಕಬೀರರ ೨೪ ಗ್ರಂಥಗಳನ್ನೊಳಗೊಂಡ ಒಂದು ಸಂಕಲನವಿದೆಯಂತೆ. ಇವು ಕಬೀರ ಶಿಷ್ಯರಿಂದ ರಚಿತವಾಗಿರಬಹುದು. ಅವುಗಳಲ್ಲಿ ಕೆಲವು ಮಾತ್ರ ಪ್ರಕಟವಾಗಿವೆ. 'ಬೀಜಕ'ದಲ್ಲಿ ಬರುವ ಪದ್ಯಗಳೆಲ್ಲ ಅವಧೀ ಮಾರ್ಗಕ್ಕೆ ಸೇರಿದ ಹಿಂದೀ ಭಾಷೆಯಲ್ಲಿ ರಚಿತವಾಗಿದೆ. ಕಬೀರರ ಕೃತಿಗಳು ಅಷ್ಟೇನೂ ಕಲಾಮಯವಾಗಿಲ್ಲ. ಒರಟು; ಶೈಲಿ ಕಠಿಣ, ಶಬ್ದಸೌಷ್ಟವವಿಲ್ಲ. ಬಂಧದಲ್ಲಿಯೂ ಸಡಿಲ; ಅನೇಕೆಡೆಯಲ್ಲಿ ವ್ಯಾಕರಣ ಮರ್ಯಾದೆಯನ್ನೂ ಮೀರಿವೆ. ವಾಕ್ಯಗಳು ಅಪೂರ್ಣ. ಗ್ರಾಮ್ಯ ಪ್ರಯೋಗಗಳಿಲ್ಲದೇ ಇಲ್ಲ. ಶಬ್ದಚಿತ್ರಗಳೂ ಪರಿಚಿತವಲ್ಲದ ಉಪಮಾರೂಪಕಗಳೂ ಮತ್ತಷ್ಟು ತೊಡಕನ್ನುಂಟುಮಾಡುತ್ತವೆ. ಇಷ್ಟಾದರೂ ಹಿಂದಿ ಸಾಹಿತ್ಯದಲ್ಲಿ ಕಬೀರರಿಗೆ ಉಚ್ಚಸ್ಥಾನವಿದೆ. ಸಮಕಾಲೀನರ ದುರಾಚಾರಗಳನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿ ಅನನ್ಯ ಶುದ್ಧಭಕ್ತಿಯನ್ನು ಜನಗಳಲ್ಲಿ ಮೂಡಿಸಿದುದು ಅವರ ಕೀರ್ತಿಯ ಮುಕುಟಕ್ಕೆ ಕಾರಣ. ಅದೂ ಅಲ್ಲದೆ ಅವರಿಗಿದ್ದ ಅದ್ಭುತವಾದ ವಿಡಂಬನ ಶಕ್ತಿ, ಸೂತ್ರಪ್ರಾಯವಾದ ಉಕ್ತಿಚಾತುರ್ಯ, ಆಕರ್ಷಕವಾದ ಛಂದೋಗತಿ ಇವರ ಕಾವ್ಯಕ್ಕೆ ಅದ್ಭುತ ಶಕ್ತಿಯನ್ನುಂಟುಮಾಡಿವೆ. ಅನೇಕರು ಅವರನ್ನು ಹಿಂದೀ ಸಾಹಿತ್ಯದ ಸೃಷ್ಟಿಕರ್ತರೆಂದೂ ಹಿಂದೀ ಸ್ತೋತ್ರಗಳ ಜನಕರೆಂದೂ ಕರೆದಿದ್ದಾರೆ. ಈ ಮಾತು ಸ್ವಲ್ಪ ಅತಿಶಯೋಕ್ತಿಯಾದರೂ ಹಿಂದೀ ಧಾರ್ಮಿಕ ಸಾಹಿತ್ಯವನ್ನು ಜನಪ್ರಿಯವನ್ನಾಗಿಸಿ ಮುಂದಿನ ಸಾಹಿತ್ಯ ಮತ್ತು ಜನಾಂಗದ ಮೇಲೆ ಅಪರಿಮಿತ ಪ್ರಭಾವವನ್ನು ಬೀರಿದವರೆಂಬುದರಲ್ಲಿ ಸಂದೇಹವಿಲ್ಲ. ಕಬೀರರ ಮಗನಾದ ಕಮಾಲ್ ಕೂಡ ಕವಿಯಾಗಿದ್ದಾನೆಂದೂ ಪ್ರತೀತಿ. ಆದರೆ ಆತನ ಪದ್ಯಗಳೆಲ್ಲ ತಂದೆಯ ಉಪದೇಶಕ್ಕೆ ನೇರ ವಿರೋಧವಾದುವು. ಆದುದರಿಂದಲೇ 'ಕಮಾಲ್ ಮಗನಾಗಿ ಹುಟ್ಟಿದ ಕಬೀರ್ ಮನೆತನ ದೌರ್ಭಾಗ್ಯಶಾಲಿಯಾದುದು' ಎಂಬ ಲೋಕೋಕ್ತಿ ಹುಟ್ಟಿಕೊಂಡಿದೆ.

ಕಬೀರರ ಉಪದೇಶದ ಪ್ರಭಾವ ಮುಂದೆ ಅನೇಕರ ಮೇಲೆ ಆಗಿ ಆ ಶಾಖೆಯಲ್ಲಿ ಅನೇಕ ಪಂಥಗಳು ಸ್ಥಾಪಿತವಾದುವು. ಅವರೆಲ್ಲರೂ ಧರ್ಮಪ್ರಚಾರಕ್ಕೆ ಹಿಂದೀ ಭಾಷೆಯನ್ನೇ ಸಾಧನವನ್ನಾಗಿ ಆರಿಸಿಕೊಂಡು ಆ ಭಾಷೆಯಲ್ಲಿ ಅನೇಕ ಗ್ರಂಥ

ಗಳನ್ನು ರಚಿಸಿದ್ದಾರೆ. ಕಾಶಿಯಲ್ಲಿಯೂ ಛತ್ತೀಸ ಘಡದಲ್ಲಿಯೂ ಕಬೀರ ಪಂಥೀಯರ ಒಂದೊಂದು ಮಠಗಳಿವೆ. ಆ ಮಠಕ್ಕೆ ಒಬ್ಬೊಬ್ಬ ಮಹಂತುವಿದ್ದಾನೆ. ಪ್ರಾರಂಭದಲ್ಲಿ ಕಬೀರರಿಂದ ಮೂರ್ತಿಪೂಜೆ, ಅವತಾರ ತತ್ವ ಮೊದಲಾದುವು ನಿಷೇಧಿಸಲ್ಪಟ್ಟಿದ್ದರೂ ಕಾಲಾನುಕಾಲದಲ್ಲಿ ಆ ಪಂಥದವರಲ್ಲಿ ಅವುಗಳೆಲ್ಲ ಪುನಃ ಬಳಕೆಯಲ್ಲಿ ಬಂದು ಕಬೀರ ರನ್ನೇ ಅವತಾರಪುರುಷರೆಂದು ಪೂಜಿಸುವುದಕ್ಕೆ ಆರಂಭಿಸಿದರು. 'ಬೀಜಕ' ಎಂಬ ಕವನ ಸಂಗ್ರಹ ಅವರು ತೀರಿಹೋದ ೫೦ ವರ್ಷಗಳಾದ ಮೇಲೆ ಸಂಕಲಿತವಾದುದು. 'ಸುಖನಿಧಾನ,' 'ಅಮರಮೂಲ' ಎಂಬುವು ಆ ಪಂಥದ ಇನ್ನೆರಡು ಗ್ರಂಥಗಳು.

ಕಬೀರರ ಉಪದೇಶದಿಂದ ಪ್ರೇರಿತವಾದ ಮುಂದಿನ ಪಂಥಗಳಲ್ಲಿ ಪಂಜಾಬಿನಲ್ಲಿ ಗುರುನಾನಕರಿಂದ ಸ್ಥಾಪಿತವಾದ ಸಿಖ್ ಮತ ಪ್ರಧಾನವಾದುದು. ನಾನಕರು ತಮ್ಮ ೨೭ ನೆಯ ವಯಸ್ಸಿನಲ್ಲಿ ಕಬೀರರನ್ನು ಸಂದರ್ಶಿಸಿದರೆಂದೂ ಅಂದಿನಿಂದ ಅವರ ಪರಸ್ಪರ ಪ್ರಭಾವ ಹೆಚ್ಚಿತೆಂದೂ ಊಹಿಸಬಹುದು. ಈ ಅಂಶವನ್ನು ಅವರಿಬ್ಬರ ಗ್ರಂಥ ಗಳಲ್ಲಿಯೂ ಕಾಣಬಹುದು. ನಾನಕರಿಗೆ ಕಬೀರರಿಗಿಂತ ಹೆಚ್ಚಾಗಿ ಹಿಂದೂಮತದ ಕಡೆ ಒಲವು. ನಾನಕರು ತಮ್ಮ ಶಿಷ್ಯನಾದ ಮರ್ದನನೊಡನೆ ಎಲ್ಲ ಕಡೆಯಲ್ಲಿಯೂ ಸಂಚಾರಮಾಡಿ ತಮ್ಮ ಗೀತೆಗಳನ್ನು ಹಾಡಿದರು. ಅವರು ಹಾಡುತ್ತಿದ್ದಾಗಲೆಲ್ಲ ಶಿಷ್ಯನು ಶ್ರುತಿಯನ್ನು ಬಾಜಿಸುತ್ತಿದ್ದನು. ನಾನಕರ ಭಾಷೆ ಪಂಜಾಬಿ ಮಿಶ್ರವಾದ ಹಿಂದೀ ಭಾಷೆ. ಕಬೀರರಷ್ಟು ಸುಪ್ರಸಿದ್ಧ ಕವಿಗಳಲ್ಲದಿದ್ದರೂ ನಾನಕರ ಗೀತಗಳು ಸರಳವಾಗಿಯೂ ಕಲಾಮಯವಾಗಿಯೂ ಇವೆ. ಅವರ ಕೃತಿಗಳಲ್ಲಿ ನಿತ್ಯಾನುಸಂಧಾನ ಕ್ಕಾಗಿ ಶೇಖರಿಸಿದ 'ಜಪ್‌ಜಿ' ಎಂಬುದೇ ಮುಖ್ಯವಾದುದು. ಅವರ ಇತರ ಗ್ರಂಥ ಗಳೆಲ್ಲ 'ಆದಿಗ್ರಂಥ' ದಲ್ಲಿ ಅಡಕವಾಗಿವೆ. ಆದಿಗ್ರಂಥಕ್ಕೆ 'ಗ್ರಂಥಸಾಹೆಬ್' ಎಂಬ ಮತ್ತೊಂದು ಹೆಸರೂ ಉಂಟು. ನಾನಕರ ಪರಂಪರೆಯಲ್ಲಿ ಒಂಬತ್ತು ಗುರುಗಳಿ ದ್ದಾರೆ. ಇವರೆಲ್ಲರೂ ನಾನಕ್ ಎಂಬ ಸಂಕೇತವನ್ನು ತಮ್ಮ ಹೆಸರೊಡನೆ ಸೇರಿಸಿ ಕೊಂಡಿದ್ದಾರೆ. ಆದಿಗ್ರಂಥದಲ್ಲಿ ಗುರುಗಳಾದ ನಾನಕ್, ಅಂಗದ್, ಅಮರದಾಸ್, ರಾಮದಾಸ್, ಅರ್ಜುನ್, ತೇಜ ಬಹದ್ದೂರ್, ಗೋವಿಂದಸಿಂಗ್ ಮೊದಲಾದವರ ಕೃತಿಗಳೆಲ್ಲವೂ ಇವೆ. ಅಲ್ಲದೆ ಈ ಗುರುಗಳಿಗೆ ಸಂಬಂಧಪಟ್ಟ ಸ್ತೋತ್ರಮಾಲಿಕೆಗಳೂ ನಾಮದೇವ್, ಕಬೀರ್ ಮುಂತಾದವರ ಗೀತಗಳೂ ಇವೆ. ಇಲ್ಲಿರುವ ವಿಷಯಗಳು ಕೃತಿಕಾರರ ಕ್ರಮದಲ್ಲಿ ಸಂಕಲಿತವಾಗದೆ ಅವರಲ್ಲಿ ಪ್ರಸಿದ್ಧವಾಗಿದ್ದ ೩೧ ರಾಗ ಗಳನ್ನನುಸರಿಸಿ ಸಂಗ್ರಹಿತವಾಗಿವೆ. ಗ್ರಂಥದ ಪ್ರಾರಂಭದಲ್ಲಿ 'ಜಪ್‌ಜಿ'ಯು ಮುಂದೆ ಸೋ-ದರು, ಸೋ-ಫರ್ಖು, ಸೋ-ಹಿಲ ಎಂಬ ಭಾಗಗಳು ಉಕ್ತವಾಗಿವೆ. ರಾಗಗಳು ಮುಗಿದ ಮೇಲೆ ಭೋಗಗಳೆಂಬ ಮುಕ್ತಾಯಭಾಗಗಳಿವೆ. ಈ ಬೃಹದ್ಗ್ರಂಥ

ಗಳಲ್ಲಿ ಅನೇಕ ಪುನರುಕ್ತವಾಗಿವೆ. ಸಿಕ್ಕರಿಗೆ ಇದು ಧರ್ಮಗ್ರಂಥವೂ ನಿಬಂಧ ಗ್ರಂಥವೂ ಆಗಿದೆ. ಇದರ ಭಾಷೆ ಭಿನ್ನಭಿನ್ನವಾಗಿದೆ.

ಈ ಪಂಥದಲ್ಲಿ ಹತ್ತನೆಯ ಗುರುವಾದ ಗುರುಗೋವಿಂದ ಸಿಂಗನು ಸಿಖ್ಖರನ್ನು ಉತ್ತೇಜನಗೊಳಿಸಿ ಅವರಲ್ಲಿ 'ಖಾಲ್ಸಾ' ಎಂಬ ವೀರಪಕ್ಷವನ್ನು ಸ್ಥಾಪಿಸಿ ಮಹಮ್ಮದೀಯರನ್ನು ಪ್ರತಿಭಟಿಸುವ ಹಾಗೆ ಮಾಡಿದನು. ಗೋವಿಂದಸಿಂಗನು ವಿಶೇಷವಾಗಿ ವ್ರಜ ಬಾಷೆಯಲ್ಲಿಯೂ ಪಾರ್ಸಿ ಮತ್ತು ಪಂಜಾಬಿ ಭಾಷೆಯಲ್ಲಿಯೂ ಗ್ರಂಥಗಳನ್ನು ರಚಿಸಿದನು. ಅವನನಂತರ ಅವೆಲ್ಲವೂ 'ಗ್ರಂಥ' ವೆಂಬ ಹೆಸರಿನಿಂದಲೇ ಸಂಕಲಿತವಾದುವು. ಇವು ಬಹು ವೀರ್ಯವತ್ತಾಗಿ ಉತ್ತೇಜಕವಾಗಿದ್ದರೂ ಇದಕ್ಕೆ ಆದಿಗ್ರಂಥದಷ್ಟು ಪುರಸ್ಕಾರವಿಲ್ಲ. ಇದರಲ್ಲಿ ಸ್ತೋತ್ರರೂಪವಾದ 'ಜಪ್‌ಜಿ' ಯೇ ಅಲ್ಲದೆ ಗೋವಿಂದಸಿಂಗನ ಅದ್ಭುತ ಜೀವನವನ್ನೂ ಕಾರ್ಯಕ್ಷೇತ್ರಗಳನ್ನೂ ವರ್ಣಿಸುವ ವೀರರಸಪ್ರಚೋದಕವಾದ ಭಾಗಗಳೂ ಇವೆ.

ಕಬೀರಪಂಥದ ಆಧಾರದ ಮೇಲೆ ದಾದುಪಂಥ, ಲಾಲ್‌ದಾಸೀ, ಸಾಧು, ಧರಣಿದಾಸಿ, ಚರಣದಾಸಿ, ಶಿವನಾರಾಯಣಿ, ಗರೀಬ್‌ದಾಸಿ, ರಾಮಸನೇಹಿ, ಸತ್‌ನಾಮಿ, ಪ್ರಾಣನಾಥಿ ಮೊದಲಾದ ಅನೇಕ ಪಂಥಗಳು ಹುಟ್ಟಿಕೊಂಡು ಒಂದೊಂದರಲ್ಲೂ ವಿಶೇಷವಾದ ಭಾಷಾಸಾಹಿತ್ಯ ರಚನೆಯಾಗಿದೆ. ಎಲ್ಲವೂ ಶಾಂತ ರಸಪ್ರಧಾನವಾದುವು. ಅನೇಕವು ಕಲಾಮಯವಾಗಿವೆ. ಉದ್ದೇಶ ಮಾತ್ರ ಧಾರ್ಮಿಕ; ಸಾಹಿತ್ಯವಲ್ಲ. ಕಾವ್ಯದೃಷ್ಟಿಯಿಂದ ಉತ್ತಮವಾದುವು ಬಹಳವಿಲ್ಲ. ನಾಮ, ಶಬ್ದ, ಭಕ್ತಿ, ಗುರು, ಮಾಯೆ, ಸಂತಜೀವನ ಇವೇ ವರ್ಣ್ಯವಿಷಯಗಳು. ರಾಜಕೀಯ ಆಘಾತದಿಂದ ಕ್ಷುಬ್ಧವಾಗಿದ್ದ ಜನಜೀವನವನ್ನು ಶಾಂತವನ್ನಾಗಿಸಲು ಇವು ಬಹು ಪ್ರಯೋಜನಕಾರಿಯಾದುವು.

ರಮಾನಂದ್, ಕಬೀರ್‌ದಾಸ್, ನಾನಕ್ ಮೊದಲಾದವರು (ಉಪಾಸನಾ ಮಾರ್ಗ ಭಿನ್ನವಾಗಿದ್ದರೂ) ರಾಮನನ್ನು ಉಪಾಸ್ಯ ದೇವನನ್ನಾಗಿ ಅಂಗೀಕರಿಸಿ ಧರ್ಮಪ್ರಚಾರ ಮಾಡುತ್ತಿದ್ದ ಕಾಲದಲ್ಲಿಯೇ ಕೃಷ್ಣೋಪಾಸನೆಯೂ ಜೊತೆ ಯಲ್ಲಿಯೇ ಕ್ರಮ ಕ್ರಮವಾಗಿ ಬೆಳೆದುಬರುತ್ತಿತ್ತು. ಆದಿಕಾಲದಲ್ಲಿ ಶಿಶುಕೃಷ್ಣನು ಉಪಾಸ್ಯದೇವನಾಗಿದ್ದು ಬರಬರುತ್ತಾ ರಾಧಾಕೃಷ್ಣರು ಆ ಸ್ಥಾನವನ್ನು ಆಕ್ರಮಿಸಿ ಅವರ ಪ್ರೇಮಜೀವನವೇ ವರ್ಣ್ಯವಿಷಯವಾಗಿ ಪರಿಣಾಮಗೊಂಡಿತು.

ರಾಧಾಕೃಷ್ಣೋಪಾಸನೆ ಜಯದೇವನ 'ಗೀತಗೋವಿಂದ'ದ ಕಾಲದಿಂದಲೂ ಬೆಳೆದುಬಂದಿದೆ. ೧೪ನೆಯ ಶತಮಾನದ ಆರಂಭದಲ್ಲಿಯೇ ಬಂಗಾಳಿ ಭಾಷೆಯಲ್ಲಿ ಕೃಷ್ಣಗೀತೆಗಳು ರಚಿತವಾದುವು. ೧೫ನೆಯ ಶತಮಾನದ ಉತ್ತರಾರ್ಧದಲ್ಲಿ ನರಸಿಂಹ

ಮೆಹ್ತ ಎಂಬುವನು ಗುಜರಾತಿಯಲ್ಲಿ ರಾಧಾಕೃಷ್ಣ ಗೀತೆಗಳನ್ನು ರಚಿಸಿದ್ದಾನೆ. ಅವನೇ ಹಿಂದಿಯಲ್ಲಿಯೂ ಅದೇ ವಿಷಯಕವಾದ ಕೃತಿಗಳನ್ನು ರಚಿಸಿದ್ದಾನೆಂದು ಪ್ರತೀತಿ.

೧೫ ನೆಯ ಶತಮಾನದ ಮಧ್ಯಕಾಲದಲ್ಲಿ ದರ್ಭಾಂಗ ಜಿಲ್ಲೆಯ ವಿಸಪಿ ಎಂಬ ಊರಿನಲ್ಲಿ ಜನಿಸಿದ ವಿದ್ಯಾಪತಿ ಥಾಕೂರ್ ಕೃಷ್ಣೋಪಾಸಕರಲ್ಲಿ ಪ್ರಸಿದ್ಧನಾದವನು. ಆತನ ಜೀವನ ಚರಿತ್ರೆಯ ವಿಷಯವಾಗಿ ಹೆಚ್ಚಾಗಿ ಏನೂ ತಿಳಿಯದು. ಈತನು ಅನೇಕ ಸಂಸ್ಕೃತ ಗ್ರಂಥಗಳ ಕರ್ತೃ. ಮೈಥಿಲೀ ಭಾಷೆಯಲ್ಲಿ ಅನೇಕ ಅಷ್ಟಪದಿಗಳನ್ನು ರಚಿಸಿದ್ದಾನೆ. ತನ್ನ ಕೃತಿಗಳಲ್ಲೆಲ್ಲಾ ರಾಧಾಕೃಷ್ಣ ಪ್ರೇಮವನ್ನು ಸಾಂಕೇತಿಕವಾಗಿ ಚಿತ್ರಿಸಿದ್ದಾನೆ. ಜೀವಾತ್ಮ ಪರಮಾತ್ಮ ಸಂಯೋಗ ಇದರಲ್ಲಿ ಧ್ವನಿತವಾಗಿದೆ. ಇಂತಹ ಅನೇಕವು ಮುಂದೆ ಬಂಗಾಳಿ ಭಾಷೆಗೆ ಚೈತನ್ಯರಿಂದ ಅಳವಡಿಸಲ್ಪಟ್ಟು ಬಹು ಜನಪ್ರಿಯವಾದವು. ವಿದ್ಯಾಪತಿಯ ಮಾರ್ಗದಲ್ಲಿ ಕೆಲಸ ಮಾಡಿದವರನೇಕರಿದ್ದಾರೆ. ಆತನ ಕೃತಿಗಳಲ್ಲಿ ಉತ್ತಮಕಾವ್ಯ ಗುಣಗಳಿವೆ. ಪೂರ್ವಭಾರತದ ಸಾಹಿತ್ಯ ಪ್ರಪಂಚದಲ್ಲಿ ಈತನ ಪ್ರಭಾವಮುದ್ರೆ ಹಿರಿದಾಗಿದೆ. ಈತನ ಸಮಕಾಲೀನನಾದ ಉಮಾಪತಿಯೂ ಕೃಷ್ಣವಿಷಯಿಕವಾದ ಅನೇಕ ಗೀತೆಗಳನ್ನು ಮೈಥಿಲಿಯಲ್ಲಿಯೂ ಬಂಗಾಳಿಯಲ್ಲಿಯೂ ರಚಿಸಿದ್ದಾನೆ.

ಸುಮಾರು ಇದೇ ಕಾಲದಲ್ಲಿ ಪಶ್ಚಿಮ ಭಾರತದಲ್ಲಿ ಕೃಷ್ಣೋಪಾಸನೆಯನ್ನು ಅಭಿವೃದ್ಧಿಪಡಿಸಿದವಳು ಹಿಂದೀ ಭಕ್ತಕವಯಿತ್ರಿಯಾದ ಮೀರಾಬಾಯಿ. ಈಕೆಯ ಕಾಲದೇಶಗಳ ವಿಷಯದಲ್ಲಿ ಅನೇಕ ಭಿನ್ನಾಭಿಪ್ರಾಯಗಳಿವೆ. ಈಕೆಯು ಮೇವಾಡದ ಕುಂಭರಾಣಾವಿನ ಉತ್ತರಾಧಿಕಾರಿಯಾಗಿದ್ದ ಭೋಜರಾಜನಿಗೆ ಮಹಿಷಿಯಾಗಿದ್ದವಳು. ಅಧಿಕಾರ ಸ್ವೀಕಾರಕ್ಕೆ ಮೊದಲೇ ಪತಿಯು ಸ್ವರ್ಗಸ್ಥನಾದನು. ಮೀರಾಬಾಯಿ ಬಾಲ್ಯದಿಂದಲೂ ಕೃಷ್ಣೋಪಾಸಕಳಾಗಿದ್ದು ಸಾಧುಸಂತರ ಸೇವೆಗೆ ಉದಾರವಾಗಿ ಧನವ್ಯಯ ಮಾಡುತ್ತಿದ್ದಳು. ಆಕೆಯ ಮೈದುನನಾದ ಊಡನೆಂಬುವನು ತಂದೆಯನ್ನು ಕೊಂದು ಸಿಂಹಾಸನಸ್ಥನಾದ ಮೇಲೆ ಮೀರಾಬಾಯಿಗೆ ಚಿತ್ರಹಿಂಸೆ ಕೊಟ್ಟನು. ಮೀರಾಬಾಯಿಯು ಚಿತ್ತೂರನ್ನು ಬಿಟ್ಟು ರಮಾನಂದರ ಚಮ್ಮಾರ ಶಿಷ್ಯನಾದ ರೈದಾಸನನ್ನು ಆಶ್ರಯಿಸಿ ತನ್ನ ಉಪಾಸ್ಯದೇವತೆಯನ್ನು ಆರಾಧಿಸುತ್ತಿದ್ದು ಹಾಗೆಯೇ ಮೂರ್ತಿಯಲ್ಲಿ ಅಂತರ್ಧಾನಳಾದಳೆಂದು ಪ್ರತೀತಿ. ರೈದಾಸನು ರಾಮೋಪಾಸಕನಾಗಿರುವಾಗ ಮೀರಾಬಾಯಿ ಕೃಷ್ಣೋಪಾಸಕಳಾಗಿಯೇ ನಿಂತುದು ಹೇಗೆ ಎಂಬುದು ಅರ್ಥವಾಗದ ವಿಷಯ. ಮೀರಾಬಾಯಿಯ ಕೃತಿಗಳಲ್ಲಿ ಅನನ್ಯ ಕೃಷ್ಣಭಕ್ತಿ ಪ್ರದರ್ಶಿತವಾಗಿದೆ. ಅವೆಲ್ಲ ವ್ರಜಭಾಷೆಯಲ್ಲಿವೆ. ಸುಂದರವಾಗಿವೆ. ನಾದಮಾಧುರ್ಯದಿಂದ ಕೂಡಿವೆ. ಇವುಗಳ ಹಾಗೆಯೇ ಗುಜರಾತಿ ಭಾಷೆಯಲ್ಲಿಯೂ

ಕೆಲವಿವೆ. ಅವೂ ಏತತ್ಕೃತವೆಂದು ಪ್ರತೀತಿ. 'ನರಸೀಜೀಕಾ ಮಾಯರಾ' 'ಗೀತ ಗೋವಿಂದ' 'ರಾಗ ಗೋವಿಂದ' 'ರಾಗ ಸೊರಠಕೇ ಪದ' ಎಂಬುವು ಮೀರಾ ಬಾಯಿಯ ಗ್ರಂಥಗಳು. ಮಾಧುರ್ಯ ಮಾರ್ಗ ಈಕೆಯದು.

ಮುಂದೆ ಕೃಷ್ಣೋಪಾಸನೆಯನ್ನು ಉತ್ತರ ದೇಶದಲ್ಲೆಲ್ಲಾ ವಿಶೇಷ ಪ್ರಚಾರ ಮಾಡಿದವರು ವಲ್ಲಭಾಚಾರ್ಯರು. ಇವರು ದಾಕ್ಷಿಣಾತ್ಯ ಬ್ರಾಹ್ಮಣರು. ವ್ರಜದೇಶದ ಮಧ್ಯದಲ್ಲಿರುವ ಬೃಂದಾವನದಲ್ಲಿ ಕೃಷ್ಣವಿಗ್ರಹವನ್ನು ಪ್ರತಿಷ್ಠೆಮಾಡಿ ಅದನ್ನೇ ಕೇಂದ್ರವನ್ನಾಗಿ ಮಾಡಿಕೊಂಡು ದೇಶದಲ್ಲೆಲ್ಲ ತಮ್ಮ ತತ್ವಪ್ರಚಾರ ಮಾಡಿದರು. ಅನೇಕ ಸಂಸ್ಕೃತ ಗ್ರಂಥಗಳನ್ನು ರಚಿಸಿದ್ದಾರೆ. ಯಾವ ಹಿಂದೀ ಕೃತಿಯನ್ನೂ ರಚಿಸಿಲ್ಲ. ಆದರೆ ಅವರ ಶಿಷ್ಯರನೇಕರು ಹಿಂದಿಯಲ್ಲಿ ಕೃತಿರಚನೆ ಮಾಡಿದ್ದಾರೆ. ಇವರು ೧೫೩೧ ರಲ್ಲಿ ಪರಂಧಾಮವನ್ನೈದಲು ಇವರ ಮಕ್ಕಳಾದ ವಿಠಲನಾಥರು ಆ ಪಂಥಕ್ಕೆ ನಾಯಕರಾದರು. ಇವರು ಕೆಲವು ಹಿಂದೀ ಪದ್ಯಗಳನ್ನೂ 'ಮಂಡನ'ವೆಂಬ ರಾಧಾಕೃಷ್ಣಾತ್ಮಕವಾದ ಗದ್ಯವನ್ನು ರಚಿಸಿದರು—ಇದೇ ಹಿಂದೀ ಭಾಷೆಯ ಮೊದಲ ಗದ್ಯವೆಂದು ಹೇಳಬಹುದು. ವಲ್ಲಭಾಚಾರ್ಯರ ನಾಲ್ವರು ಶಿಷ್ಯರೂ ವಿಠಲನಾಥರ ನಾಲ್ವರು ಶಿಷ್ಯರೂ ಸೇರಿ 'ಅಷ್ಟಛಾಪ'ವೆಂದು ಪ್ರಸಿದ್ಧರಾಗಿದ್ದಾರೆ. ಇವರು ವ್ರಜಭಾಷೆಯಲ್ಲಿ ಗ್ರಂಥರಚನೆಮಾಡಿದ್ದಾರೆ. ಮುಂದಿನ ಕೃಷ್ಣಪಂಥೀಯರಿಗೆಲ್ಲ ಇವರೇ ಮಾದರಿ, ಸೂರ್‌ದಾಸ್, ಕೃಷ್ಣದಾಸ್ ಪಯಾಹಾರಿ, ಪರಮಾನಂದದಾಸ್, ಕುಂಭನ್ ದಾಸ್, ಚತುರ್ಭೂದಾಸ್, ಚೀತ್‌ಸ್ವಾಮಿ, ನಂದದಾಸ್ ಗೋವಿಂದದಾಸ್ ಎಂಬುವರೇ ಅಷ್ಟಛಾಪಗಳು.

ಕವಿತಾ ದೃಷ್ಟಿಯಿಂದ ಕೃಷ್ಣದಾಸನು ಸೂರದಾಸನಿಗೆ ಹೊಯ್‌ಕೈಯೆಂದು ಅಂಗೀಕೃತವಾಗಿದೆ. ಆತನ ಗ್ರಂಥ 'ಪ್ರೇಮಸತ್ವ ನಿರೂಪ'. ಈತನ ಶಿಷ್ಯರಲ್ಲಿ 'ಭಕ್ತಮಾಲಾ' ಕರ್ತೃವೂ ನಾಭದಾಸನ ಗುರುವೂ ಆದ ಅಗ್ರದಾಸನು ಒಬ್ಬನೆಂದು ಹೇಳುತ್ತಾರೆ.

ಅಷ್ಟಛಾಪರಲ್ಲಿ ನಂದದಾಸ್ ಸೂರದಾಸನಿಗೆ ಮಾತ್ರ ದ್ವಿತೀಯ. ಶ್ರೇಷ್ಠನಾದ ಕವಿ. ಕೆಲವರು ಈತ ತುಲಸೀದಾಸರ ಸಹೋದರನೆಂದು ಹೇಳುತ್ತಾರೆ. ಈತನ ಶ್ರೇಷ್ಠತ್ವವನ್ನು ಪ್ರದರ್ಶಿಸುವ 'ಔರ್‌ಸ ಗಢೀಯಾ ನಂದದಾಸ್ ಜಡಿಯಾ' (ಇತರರೆಲ್ಲಾ ಕುಶಲರೂ ಮಾತ್ರವಾಗಿದ್ದರೆ ನಂದದಾಸನು ಕುಶಲತಮ) ಎಂಬ ಲೊಕೋಕ್ತಿಯೂ ಉಂಟು. ಈತನು ಅನೇಕ ಗ್ರಂಥಗಳನ್ನು ರಚಿಸಿದ್ದಾನೆ. 'ಗೀತ ಗೋವಿಂದ'ದ ಮಾದರಿಯಲ್ಲಿರುವ 'ಪಂಚಾಧ್ಯಾಯಿ' ಈತನ ಉತ್ತಮ ಗ್ರಂಥ. ವಲ್ಲಭಾಚಾರ್ಯರ ಶಿಷ್ಯವರ್ಗದಲ್ಲಿ ಸುಪ್ರಸಿದ್ಧನಾದವನು ಸೂರದಾಸ. ಈತನ ಜೀವನ

ವಿವರಗಳು ವಿಶೇಷವಾಗಿ ತಿಳಿಯದು. ಅಕ್ಬರನ ಆಸ್ಥಾನದಲ್ಲಿ ಸಂಗೀತ ವಿದ್ವಾಂಸನಾಗಿದ್ದ ಬಾಬಾ ರಾಮದಾಸನ ಮಗನೆಂದು ಹೇಳುತ್ತಾರೆ. ಎಂಟು ವರ್ಷವಾಗಿದ್ದಾಗಲೇ ಭಕ್ತಿಮುಗ್ಧನಾಗಿ ಮಧುರೆಗೆ ಹೋಗಿ ಸಂತರೊಬ್ಬರ ಶಿಷ್ಯನಾಗಿ ಕೆಲವು ಕಾಲದಮೇಲೆ ವಲ್ಲಭಾಚಾರ್ಯರ ಶಿಷ್ಯನಾದನು. ತಾನು ಚಂದ್ ಬರ್ದಾಯಿ ವಂಶಸ್ಥನೆಂದು ಹೇಳಿಕೊಂಡಿದ್ದಾನೆ. ಈತ ಕುರುಡ. ಸಂಪ್ರದಾಯದ ಪ್ರಕಾರ ಈತ ೧೪೮೩ ರಲ್ಲಿ ಹುಟ್ಟಿ ೧೫೬೩ ರಲ್ಲಿ ಸ್ವರ್ಗಸ್ಥನಾದ. ಇದು ನಂಬಲರ್ಹವಲ್ಲ. ಅನೇಕ ಗ್ರಂಥಗಳನ್ನೂ ಗೀತೆಗಳನ್ನೂ ರಚಿಸಿದ್ದಾನೆ; ಉದ್ದಾಮ ಕವಿ. ಈತನ ಕವಿತಾ ಸಾಮರ್ಥ್ಯ ಅದ್ವಿತೀಯವಾದುದು. ಈತನ ರಾಧಾಕೃಷ್ಣ ವಿಷಯಕವಾದ ಗೀತೆಗಳು ಬಹು ಮನಮೋಹಕವಾಗಿವೆ. ಈತನ ಗ್ರಂಥಗಳೆಲ್ಲ 'ಸೂರಸಾಗರ' 'ಸೂರಾವಳಿ' ಎಂಬ ಸಂಗ್ರಹಗಳಲ್ಲಿ ಅಡಕವಾಗಿವೆ. 'ಸಾಹಿತ್ಯಲಹರಿ' ಎಂಬ ಸಟೀಕಾ ಗ್ರಂಥವೂ ಏತತ್ಕೃತವಾದುದು. 'ನಲದಮಯಂತಿ' ಎಂಬುದು ಈತನ ಮತ್ತೊಂದು ಕಾವ್ಯ. ಈತನು ಸುಮಾರು ೭೫,೦೦೦ ಶ್ಲೋಕಗಳನ್ನು ರಚಿಸಿರುವಂತೆ ಪ್ರತೀತಿ. ಕೆಲವರು ಈತನಿಗೆ ಹಿಂದೀ ಕಾವ್ಯಪ್ರಪಂಚದಲ್ಲಿ ಅಗ್ರಸ್ಥಾನವನ್ನು ಕೊಡುತ್ತಾರೆ. ಅನೇಕರು ಆ ಸ್ಥಾನವನ್ನು ತುಳಸೀದಾಸರಿಗೆ ಮೀಸಲಾಗಿಸಿದಾರೆ. 'ಸೂರಸೂರ ತುಳಸೀ ಶಶಿ; ಉಡುಗಣ ಕೇಶವದಾಸ್, ಅನ್ಯಕವಿ ಖದ್ಯೋತಸಮ' ಎಂಬ ಹಿಂದೀ ಲೋಕೋಕ್ತಿಯೊಂದುಂಟು. ಏನಾಗಲಿ ಸೂರ್‌ದಾಸ್ ಶೈಲಿ ದೃಷ್ಟಿಯಿಂದಲೂ ಉಪಮೋತ್ಪ್ರೇಕ್ಷೆಗಳ ಪ್ರಯೋಗದೃಷ್ಟಿಯಿಂದಲೂ ಅಗ್ರೇಸರನೆನ್ನುವುದರಲ್ಲಿ ಸಂದೇಹವಿಲ್ಲ. 'ಗಂಗನು ಗೀತಾರಚನೆಯಲ್ಲಿಯೂ ಬೀರಬಲ್ ಕವಿತ್ತ ಛಂದಸ್ಸಿನಲ್ಲಿಯೂ ಕೇಶವದಾಸನು ಅರ್ಥ ಗೌರವದಲ್ಲಿಯೂ ಪ್ರಸಿದ್ಧರಾದವರು; ಸೂರದಾಸನು ಎಲ್ಲದರಲ್ಲಿಯೂ ಅಗ್ರಗಣ್ಯ' ಎಂದೆಂಬ ಮತ್ತೊಂದು ಜನೋಕ್ತಿಯೂ ಉಂಟು.

ಈ ಪಂಥದಲ್ಲಿ ಮುಂದೆ ಅನೇಕ ಕವಿಗಳು ಹಿಂದಿಯಲ್ಲಿ ಕಾವ್ಯರಚನೆ ಮಾಡಿದ್ದಾರೆ. ಅವರಲ್ಲಿ ಭಗವಾನ್, ಹಿತಹರಿದಾಸ್, ವಿಠಲವಿಪುಲ್ ಮತ್ತು ಬಿಹಾರೀದಾಸ್ ಗದಾಧರಭಟ್ಟ, ಭೀಷ್ಮ, ಭಕ್ಷಿಹಂಸರಾಜ್, ಮಾನ್ ಮೊದಲಾದ ಕವಿಗಳನ್ನೂ ತಾಜ್, ಸುಂದರೀ ಕುನ್ವಾರೀಬಾಯ್, ಬೀಬೀರತನ್ ಮೊದಲಾದ ಕವಿಯತ್ರಿಯರನ್ನೂ ಹೆಸರಿಸಬಹುದು.

ಮೇಲೆ ಹೇಳಿದ ಕೃಷ್ಣೋಪಾಸಕ ವೃಂದವು ಕೀರ್ತನಶೈಲಿಯಲ್ಲಿ ಕಾವ್ಯರಚನೆ ಮಾಡಿದರೆ ರಸಖಾನನೆಂಬ ಕವಿಯು ಕವಿತ್ತ ಶೈಲಿಯಲ್ಲಿ ಶ್ರೀಕೃಷ್ಣನ ನಾಮರೂಪ ಲೀಲಾಧಾಮಗಳನ್ನು ಸರಸವಾಗಿ ವರ್ಣನೆಮಾಡಿದ್ದಾನೆ. ಈತನ ರಸಖಾನ್ ಎಂಬ ಹೆಸರು ಅನ್ವರ್ಥವಾಗಿದೆ.

ಸುಮಾರು ಇದೇ ಕಾಲದಲ್ಲಿ ಕೆಲವು ಮುಸಲ್ಮಾನ ಕವಿಗಳು ಹಿಂದೂ ಮುಸಲ್ಮಾನ ಐಕಮತ್ಯಕ್ಕೆ ವಿಶೇಷ ಸಹಾಯಮಾಡಿದರು. ಇಸ್ಲಾಂ ಮತದಲ್ಲಿ ಶ್ರದ್ಧೆಯುಳ್ಳವರಾದರೂ ಅಂಧ ಶ್ರದ್ಧೆಯನ್ನು ಬದಿಗೊತ್ತಿ ಪ್ರೇಮಸಾಧನೆಯಿಂದ ಈಶ್ವರ ಸಾಕ್ಷಾತ್ಕಾರ ಮಾಡಿಕೊಳ್ಳುವ ಮಾರ್ಗವನ್ನು ಪ್ರಚಲಿತವಾಗಿರುವ ಕತೆಗಳ ಮೂಲಕ ಪ್ರಚಾರಮಾಡಿದರು. ಇವರುಗಳನ್ನು ಸೂಫಿ ಕವಿಗಳೆನ್ನುತ್ತಾರೆ. ಇವರು ಸಾಮಾನ್ಯವಾಗಿ ಪಾರ್ಸಿ ಭಾಷೆಯಲ್ಲಿ ಪ್ರಸಿದ್ಧವಾಗಿರುವ ಮಸನವೀ ಎಂಬ ಪ್ರಬಂಧ ಶೈಲಿಯಲ್ಲಿ ದೋಹ ಮತ್ತು ಚೌಪಾಯಿ ಛಂದಸ್ಸುಗಳಲ್ಲಿ ಕಾವ್ಯವನ್ನು ರಚಿಸಿದ್ದಾರೆ. ಇವರ ಭಾಷೆ ಅವಧಿ.

ಸುಮಾರು ೧೫೪೦ ರಲ್ಲಿದ್ದಿರಬಹುದಾದ ಮಲ್ಲಿಕ್‌ಮಹಮ್ಮದ್ ಜಾಯಸಿ ಸೂಫಿ ಕವಿಗಳಲ್ಲಿ ಪ್ರಸಿದ್ಧನಾದವನು. ಈತನು ಕುರೂಪಿಯಂತೆ. ಈತನನ್ನು ನೋಡಿ ದೊರೆ ಯಾದ ಶೇರ್‌ಶಾಹನು ನಕ್ಕ ಹಾಗೂ ಅದಕ್ಕೆ ಕವಿಯು ನನ್ನನ್ನು ನೋಡಿ ಆ ಮೂಲಕ ಸೃಷ್ಟಿಕರ್ತನನ್ನೇ ನೋಡಿ ನಕ್ಕು ಹಾಸ್ಯ ಮಾಡುತ್ತೀಯಾ ಎಂದು ಆಕ್ಷೇ ಪಿಸಿದ ಹಾಗೂ ದೊರೆಯು ಅದರಿಂದ ನಾಚಿಕೊಂಡ ಹಾಗೂ ಪದ್ಮಾವತ್ ಎಂಬ ಗ್ರಂಥ ದಲ್ಲಿ ಉಲ್ಲೇಖವಾಗಿದೆ. ಜಾಯಸಿಯು ಮಹಮ್ಮದೀಯನಾದರೂ ಹಿಂದೂಧರ್ಮ ಸಂಸ್ಕೃತಿಗಳನ್ನರಿತು ಕಬೀರರ ವಿಶೇಷ ಪ್ರಭಾವಕ್ಕೆ ಒಳಗಾದವನು. ಈತನು ಅಮೆಥಿ ರಾಜನಿಂದ ಸನ್ಮಾನಿತನಾದವನು. ರಾಜನಿಗೆ ಪುತ್ರಪ್ರಾಪ್ತಿಯಾದುದು ಈ ಸಂತನ ಪ್ರಭಾವದಿಂದೆಂಬ ನಂಬಿಕೆಯೂ ಉಂಟು. ಈತನು 'ಪದ್ಮಾವತ್' 'ಅಖರಾವಟ್' ಮತ್ತು 'ಆಖಿರೀ ಕಲಾಂ' ಎಂಬ ಮೂರು ಗ್ರಂಥಗಳನ್ನು ರಚಿಸಿದ್ದಾನೆ. ಇವುಗಳಲ್ಲಿ ಕಾವ್ಯದೃಷ್ಟಿಯಿಂದ 'ಪದ್ಮಾವತ್' ಸರ್ವೋತ್ಕೃಷ್ಟವಾಗಿದೆ. ಇದರ ಕತೆ ಸ್ವಾರಸ್ಯವಾ ಗಿದೆ. ರತನ್‌ಸೇನ್ ಎಂಬ ದೊರೆಯು ಗಿಳಿಯೊಂದರಿಂದ ಪದ್ಮಿನಿಯ ಸೌಂದರ್ಯ ವಿಷಯವನ್ನು ತಿಳಿಯುತ್ತಾನೆ. ಸಂನ್ಯಾಸಿಯ ಹಾಗೆ ಸಿಂಹಳಕ್ಕೆ ಹೋಗಿ ಪದ್ಮಿನಿಯನ್ನು ಕಂಡು ಅವಳನ್ನು ವರಿಸಿ ಅವಳೊಂದಿಗೆ ಚಿತ್ತೂರಿಗೆ ಹಿಂದಿರುಗುತ್ತಾನೆ. ಡೆಲ್ಲಿಯ ಬಾದಷಹನಾದ ಅಲ್ಲಾವುದ್ದೀನನೂ ಪದ್ಮಿನಿಯ ಸೌಂದರ್ಯದಿಂದ ಆಕರ್ಷಿತನಾಗಿ ಅವಳನ್ನು ಪಡೆಯುವುದಕ್ಕಾಗಿ ಚಿತ್ತೂರಿಗೆ ಮುತ್ತಿಗೆ ಹಾಕುವನು. ಆದರೆ ಅವನ ಇಷ್ಟಾರ್ಥ ಸಿದ್ಧಿಯಾಗುವುದಿಲ್ಲ. ರತನ್‌ಸೇನ್ ಸೋತು ಸೆರೆಯೊಳಗಿದ್ದು ಕೆಲವು ಕಾಲಾನಂತರ ವೀರರಿಬ್ಬರ ಪರಾಕ್ರಮದ ಫಲವಾಗಿ ಬಿಡುಗಡೆ ಹೊಂದುತ್ತಾನೆ. ಸೆರೆಯಿಂದ ಬಂದಮೇಲೆ ರತನ್‌ಸೇನನು ತಾನು ಸೆರೆಯಲ್ಲಿದ್ದಾಗ ಪದ್ಮಿನಿಯ ವಿಷಯ ದಲ್ಲಿ ಅಪಚಾರವನ್ನೆಸಗಲು ಪ್ರಯತ್ನಿಸಿದ ದೇವಪಾಲನ ಮೇಲೆ ದಂಡೆತ್ತಿ ಹೋಗಿ ಅವನನ್ನು ಕೊಂದು ತಾನೂ ವಿಶೇಷ ಗಾಯಗೊಂಡವನಾಗಿ ಚಿತ್ತೂರಿಗೆ ಬಂದು ಮೃತಿ

ಹೊಂದುತ್ತಾನೆ. ಆತನ ಇಬ್ಬರು ಹೆಂಡರೂ ಸತಿಯನ್ನಾಚರಿಸುತ್ತಾರೆ. ಆ ಸಮಯಕ್ಕೆ ಸರಿಯಾಗಿ ಅಲ್ಲಾವುದ್ದೀನನು ಚಿತ್ತೂರನ್ನು ಮುತ್ತಿ ಬಹುಭದ್ರವಾಗಿ ರಕ್ಷಿತವಾಗಿದ್ದರೂ ಅದನ್ನು ವಶಮಾಡಿಕೊಳ್ಳುತ್ತಾನೆ. ಗ್ರಂಥಾಂತ್ಯದಲ್ಲಿ ಜಾಯಸಿಯು ಇದೆಲ್ಲ ಸಾಂಕೇತಿಕವೆಂದು ವಿಶದಪಡಿಸಿದ್ದಾನೆ. ಚಿತ್ತೂರ್ ಮನುಷ್ಯದೇಹ, ರತನ್‌ಸೇನ್ ಆತ್ಮ, ಪದ್ಮಿನಿ ಬ್ರಹ್ಮಜ್ಞಾನ, ಪ್ರೇಮ ಸಾಧನೆಯ ಮಾರ್ಗ, ದಾರಿಯಲ್ಲಿ ಬರುವ ಅಡ್ಡಿ ಆತಂಕಗಳು ಸಾಧನಾಪಥದಲ್ಲಿ ಬರುವ ವಿಘ್ನ ಪರಂಪರೆಗಳು, ಮೊದಲನೆಯ ಹೆಂಡತಿ ಐಹಿಕ ಸುಖಸಂಪತ್ತಿನ ಪ್ರತೀಕ, ಅಲ್ಲಾವುದ್ದೀನ್ ಮಾಯೆ, ಗಿಳಿಯೇ ಆಚಾರ್ಯ ಇತ್ಯಾದಿಯಾಗಿ ಇದಕ್ಕೆ ಒಂದು ಧಾರ್ಮಿಕರೂಪ ದೊರೆತಿದೆ.

ಈ ಕತೆಯು ೧೩೦೩ ರಲ್ಲಿ ನಡೆದ ಚಿತ್ತೂರಿಗೆ ಸಂಬಂಧವಾದ ಐತಿಹಾಸಿಕ ಘಟನೆಯನ್ನು ಕುರಿತುದು. ಕವಿಯು ಅಲ್ಲಲ್ಲೇ ಅದನ್ನು ಮಾರ್ಪಡಿಸಿಕೊಂಡು ಬೇರೆ ಕತೆಗಳಿಂದಲೂ ವಿಷಯ ಸಂಗ್ರಹಮಾಡಿ ಬಹು ಆಕರ್ಷಕವಾಗಿ ರಚಿಸಿದ್ದಾನೆ. ಈ ಕಾವ್ಯವು ಕೆಲವು ಪಾರ್ಸಿ ಶಬ್ದ ಮತ್ತು ಧೋರಣೆಗಳಿಂದ ಕೂಡಿದೆ. ಮೊದಲು ಇದು ಪಾರ್ಸಿ ಲಿಪಿಯಲ್ಲಿಯೇ ಬರೆದಿತ್ತು. ಇದು ಕವಿಯ ಅದ್ಭುತವಾದ ಮೇಧಾಶಕ್ತಿಯನ್ನೂ ಕಾವ್ಯರಚನಾ ಕೌಶಲ್ಯವನ್ನೂ ಪ್ರದರ್ಶಿಸುವುದರಿಂದ ಇದನ್ನು ಹಿಂದೀ ಸಾಹಿತ್ಯದಲ್ಲಿಯ ಒಂದು ಕೃತಿರತ್ನವೆಂದು ಕರೆಯಬಹುದು.

ಪ್ರೇಮಾಖ್ಯಾನ ಕಾವ್ಯಗಳು ಹಿಂದೀ ಭಾಷೆಯಲ್ಲಿ ಇನ್ನೂ ಕೆಲವಿವೆ. ಜಾಯಸಿಗಿಂತ ಹಿಂದೆ ಕುತಬನ್, ಮಂಝನ್ ಎಂಬುವರೂ ಜಾಯಸಿಯಾದ ಮೇಲೆ ಉಸಮಾನ್, ಶೇಖನಬೀ, ಕಾಸಿಮ ಶಾಹ, ನೂರ್‌ಮಹಮ್ಮದ್ ಮುಂತಾದವರು ಕ್ರಮವಾಗಿ 'ಮೃಗಾವತಿ,' 'ಮಧುಮಾಲತಿ,' 'ಚಿತ್ರಾವಲಿ,' 'ಜ್ಞಾನದೀಪ,' 'ಹಂಸಜವಾಹಿರ,' 'ಇಂದ್ರಾವತಿ,' ಎಂಬ ಕಾವ್ಯಗಳನ್ನು ರಚಿಸಿದ್ದಾರೆ. ಇಲ್ಲಿ ಪ್ರದರ್ಶಿಸಿರುವ ಭಕ್ತಿಮಾರ್ಗ ಮಾಧುರ್ಯಮಾರ್ಗ. ಆದರೂ ಭಾರತೀಯ ಕೃಷ್ಣಪಂಥೀಯರ ಮಾಧುರ್ಯಮಾರ್ಗಕ್ಕೂ ಇದಕ್ಕೂ ವ್ಯತ್ಯಾಸವುಂಟು. ಕೃಷ್ಣಪಂಥೀಯರಲ್ಲಿ ಈಶ್ವರ ಪತಿ ; ಆತ್ಮ ಅಥವಾ ಜೀವ ಅಥವಾ ಭಕ್ತ ಪತ್ನಿ. ಸೂಫಿಗಳಲ್ಲಿ ಸಾಧ್ಯ ಈಶ್ವರ ಸ್ತ್ರೀ. ಸಾಧಕ ಜೀವ ಪುರುಷ. ಈ ಪಂಥದ ಪ್ರಭಾವ ಹಿಂದೂಗಳ ಮೇಲೆ ವಿಶೇಷವಾಗಿ ಅವರಿಗೆ ಉಪಕಾರ ಅಪಕಾರಗಳೆರಡನ್ನೂ ಮಾಡಿದುವು. ಹಿಂದೂ ಮಹಮ್ಮದೀಯರಲ್ಲಿ ಐಕಮತ್ಯವನ್ನು ಸಾಧಿಸುವುದರ ಮೂಲಕ ಉಪಕಾರವಾಯಿತು. ಸ್ವಮತಶ್ರದ್ಧೆಯನ್ನು ಅಳಿಸಿ ಆಚಾರವನ್ನು ಶಿಥಿಲವಾಗಿಸಿ ಧರ್ಮೋತ್ಸಾಹವನ್ನು ಕುಗ್ಗಿಸಿದುದರಿಂದ ಅಪಕಾರವಾಯಿತು.

ಹಿಂದೀ ಸಾಹಿತ್ಯದಲ್ಲಿ ೧೪ ನೆಯ ಶತಮಾನದಿಂದ ೧೭ ನೆಯ ಶತಮಾನದ

ಮಧ್ಯಭಾಗದವರೆಗಿನ ಕಾಲವನ್ನು ಭಕ್ತಿಯುಗ ಎಂದು ಕರೆಯಬಹುದು. ಈ ಯುಗದ ಸಾಹಿತ್ಯವೆಲ್ಲ ಸಾಧುಸಂತರ ಉಪದೇಶವಾಣಿಗಳಿಂದಲೂ ಭಕ್ತಿಗೀತೆಗಳಿಂದಲೂ ಪರಿಪುಷ್ಟವಾಗಿ ಜನಸಾಮಾನ್ಯರ ಮಧ್ಯೆ ಜನಸಾಮಾನ್ಯರಿಗಾಗಿಯೇ ಅವರ ಭಾಷೆಯಲ್ಲಿಯೇ ರಚಿತವಾದುವು. ಆದರೆ ೧೬ ನೆಯ ಶತಮಾನದ ಮಧ್ಯಭಾಗದಲ್ಲಿ ಮೊಗಲ್ ಸಾಮ್ರಾಜ್ಯವು ಭಾರತದಲ್ಲಿ ಸುಪ್ರತಿಷ್ಠಿತವಾದ ಮೇಲೆ ಬಾದಷಹರ ಉದಾರಾಶ್ರಯದಿಂದಲೂ ಅವರ ಭಾಷೆಯಾಗಿದ್ದ ಅರಬ್ಬೀ ಪಾರ್ಸಿ ಭಾಷೆಗಳ ಸಂಬಂಧದಿಂದಲೂ ಹಿಂದೀ ಭಾಷೆಯು ಪ್ರಭಾವಿತವಾಗಿ ಬಹು ಕಲಾಮಯವಾಯಿತು. ಶೃಂಗಾರಮಯವಾಯಿತು. ಹೊಸ ರೂಪವನ್ನು ತಾಳಿತು.

ಮಹಮ್ಮದೀಯರ ಧಾರ್ಮಿಕ ಗ್ರಂಥಗಳ ಭಾಷೆ ಅರಬ್ಬೀ ಭಾಷೆಯಾದರೂ ಅವರು ಇಂಡಿಯಾ ದೇಶದಲ್ಲಿ ಉಪಯೋಗಿಸುತ್ತಿದ್ದ ಸಾಹಿತ್ಯ ಮತ್ತು ವ್ಯವಹಾರ ಭಾಷೆ ಪಾರ್ಸಿ ಭಾಷೆ. ಈ ಭಾಷೆಯು ಮೊದಲಿಂದಲೂ ಸುಸಂಸ್ಕೃತವಾಗಿ ಉಚ್ಚ ಸಾಹಿತ್ಯವನ್ನು ಪಡೆದಿತ್ತು. ರಾಜಾಸ್ಥಾನಕ್ಕೆ ಸಂಬಂಧಪಟ್ಟ ಅನೇಕ ಹಿಂದುಗಳು ಇದರ ಪ್ರಭಾವಕ್ಕೆ ಒಳಗಾಗಿ ಅಲ್ಲಿಯ ಮಾದರಿಯನ್ನು ತಮ್ಮ ಸಾಹಿತ್ಯದಲ್ಲಿಯೂ ಅನುಸರಿಸಲು ಮೊದಲುಮಾಡಿದರು. ಪಾರ್ಸಿ ಭಾಷೆಯ ಸೌಂದರ್ಯಯುತ ಶೈಲಿ ಹಿಂದೀ ಸಾಹಿತ್ಯವನ್ನು ಆಕರ್ಷಿಸಿತು.

ಆದಿಕಾಲದ ಮಹಮ್ಮದೀಯ ದೊರೆಗಳು ಭಾರತದಲ್ಲಿ ಸಾಹಿತ್ಯ ಪೋಷಕರಾಗಿದ್ದರೂ ಹಿಂದೀಭಾಷಾಕೃತಿಗಳಿಗೆ ನೇರವಾಗಿ ಪ್ರೋತ್ಸಾಹವಿತ್ತವನು ಸಾಮ್ರಾಟನಾದ ಅಕ್ಬರ್. ಆತನು ಮೇಧಾವಿಯಾದ ರಾಜಕಾರಣಪಟುವಾಗಿದ್ದಂತೆಯೇ ಉದಾರಿಯಾದ ಕಾವ್ಯಕಲಾಶ್ರಯದಾತನೂ ಆಗಿದ್ದನು. ಸಂಗೀತ ಸಾಹಿತ್ಯಕಲೆಗಳೆಲ್ಲವೂ ಅವನಿಂದ ಪರಿಪೋಷಿತವಾದುವು. ಆತನು ಎಲ್ಲ ಭಾಷಾ ಗ್ರಂಥಗಳನ್ನೊಳಗೊಂಡ ಒಂದು ಉತ್ತಮ ಪುಸ್ತಕ ಭಂಡಾರವನ್ನು ನಿರ್ಮಿಸಿ ಕವಿಗಳಿಗೆ ಕೊಡುಗೈಯಿಂದ ದಾನಮಾಡಿದನು. ಹಿಂದೂ ಸಾಹಿತ್ಯ ಸಂಸ್ಕೃತಿಗಳ ಪ್ರೇರಕನೂ ಪೋಷಕನೂ ಪ್ರಚಾರಕನೂ ಆದನು. ಆತನ ಔದಾರ್ಯವನ್ನು ಆತನ ಅಧಿಕಾರಿಗಳೂ ಸಾಮಂತರೂ ಅನುಕರಣಮಾಡಿದರು. ದೇಶದ ಮೂಲೆ ಮೂಲೆಯಲ್ಲಿದ್ದ ಪಂಡಿತಶ್ರೇಷ್ಠರು ಆತನ ಪ್ರತ್ಯಕ್ಷ ಪರೋಕ್ಷ ಆಶ್ರಯಕ್ಕೆ ಒಳಗಾಗಿ ಶಾಂತ ವಾತಾವರಣದಲ್ಲಿ ಉಧ್ಧಕೃತಿಗಳನ್ನು ನಿರ್ಮಿಸಿದರು. ಸಾಹಿತ್ಯ ಸುಸಂಸ್ಕೃತವಾಯಿತು, ಸೃಷ್ಟಿ ವಿಪುಲವಾಯಿತು; ಸುವರ್ಣಯುಗವೇ ಸ್ಥಾಪಿತವಾಯಿತು. ಅದರ ಪ್ರಭಾವವನ್ನು ಹಿಂದೀ ಸಾಹಿತ್ಯ ಚರಿತ್ರೆಯಲ್ಲಿ ಸ್ಪಷ್ಟವಾಗಿ ಕಾಣಬಹುದು.

ಅಕ್ಬರನು ಸ್ವತಃ ಕೆಲವು ಬಿಡಿ ಪದ್ಯಗಳನ್ನು ಹಿಂದೀ ಭಾಷೆಯಲ್ಲಿ ರಚಿಸಿರುವಂತೆ

ಪ್ರತೀತಿ. ಅದರಲ್ಲಿ ಅವನು ಅಕ್ಬರ್‌ರಾಯ್ ಎಂದು ಸಂಬೋಧಿತನಾಗಿದ್ದಾನೆ. ಬಹುಶಃ ಇವು ಅವನ ಆಸ್ಥಾನ ಸಂಗೀತ ವಿದ್ವಾಂಸನಾದ ತಾನ್‌ಸೇನನಿಂದ ರಚಿತವಾಗಿರಬೇಕು. ಅಕ್ಬರನ ಕೆಲವು ಮಂತ್ರಿಗಳೂ ಕೃತಿಕರ್ತರಾಗಿದ್ದರು. ರಾಜಾ ತೋದರಮಲ್ಲನು ಹಿಂದುಗಳನೇಕರನ್ನು ಪಾರ್ಸಿ ಭಾಷೆಯನ್ನು ಅಭ್ಯಾಸಮಾಡುವಂತೆ ಪ್ರೋತ್ಸಾಹಿಸಿದುದರಿಂದ ಉರ್ದು ಬೆಳೆದು ಪ್ರತ್ಯೇಕ ಭಾಷೆಯಾಗಿ ಪರಿಣಮಿಸಿತು. ತೋದರಮಲ್ಲನು ಸ್ವತಃ ಭಾಗವತ ಪುರಾಣವನ್ನು ಪಾರ್ಸಿ ಭಾಷೆಗೆ ಪರಿವರ್ತಿಸಿರುವುದಲ್ಲದೆ ಕೆಲವು ನೀತಿಪದ್ಯಗಳನ್ನೂ ರಚಿಸಿದ್ದಾನೆ. ಬ್ರಾಹ್ಮಣನಾದ ರಾಜಾ ಬೀರಬಲ್ಲನು ಮೊದಲು ಜಯಪುರದ ಆಸ್ಥಾನದಲ್ಲಿದ್ದು ಆಮೇಲೆ ಅಕ್ಬರನ ಆಸ್ಥಾನಕ್ಕೆ ಬಂದವನು. ಆತನ ಅದ್ಭುತ ಶಕ್ತಿ ಆತನಿಗೆ ಉನ್ನತಸ್ಥಾನವನ್ನು ದೊರಕಿಸಿತು. ಆತನಿಗೆ ಸಂಗೀತ ಸಾಹಿತ್ಯಗಳೆರಡರಲ್ಲೂ ಪೂರ್ಣ ಪಾಂಡಿತ್ಯವಿತ್ತು. ಅಕ್ಬರನು ಅವನನ್ನು ಆಸ್ಥಾನದ ಕವಿರಾಜನನ್ನಾಗಿ ಮಾಡಿದನು. ಆತನು ಹಾಸ್ಯಭರಿತವಾದ ಲಘುಕವನಗಳನ್ನೂ ರಚಿಸಿದ್ದಾನೆ. ಪೂರ್ಣಗ್ರಂಥಗಳಾವುವೂ ಅವನಿಂದ ರಚಿತವಾಗಿರುವಂತೆ ಕಾಣುವುದಿಲ್ಲ. ಆದರೆ ಅವನಿಂದ ರಚಿತವಾದುದೆಂದು ಪ್ರತೀತಿ ಇರುವ ಅನೇಕ ಪದ್ಯಗಳು ಈಗಲೂ ಜನಪ್ರಿಯವಾಗಿವೆ. ಅವನು ಉನ್ನತಾಧಿಕಾರವನ್ನು ಪಡೆದಂತೆಲ್ಲಾ ಸ್ವತಃ ಕವಿಜನಾಶ್ರಯನಾದನು. ರಾಜಾ ಮನೋಹರದಾಸ್ ಅಕ್ಬರನ ಆಸ್ಥಾನದ ಮತ್ತೊಬ್ಬ ಕವಿ. ಅಕ್ಬರನ ಸೇನಾಧಿಪತಿಯಾದ ಜಯಪುರದ ಮಾನಸಿಂಹನೂ ಉದ್ದಾಮ ಸಾಹಿತ್ಯಪೋಷಕನಾಗಿದ್ದನು. ಇವನು ಶ್ಲೋಕಕ್ಕೆ ಲಕ್ಷ ರೂಪಾಯಿ ಸಂಭಾವನೆ ಮಾಡಿರುವಂತೆ ಪ್ರತೀತಿ. ಅಬುಲ್‌ಫಸಲನ ಸಹೋದರನಾದ ಅಬುಲ್‌ಫೇಯಿಸಿ 'ಅಯ್ನೇ ಅಕ್ಬರಿ'ಯನ್ನು ರಚಿಸಿದನು. ಇವನು ಹಿಂದಿಯಲ್ಲಿ ದ್ವಿಪದಿಗಳನ್ನೂ ರಚಿಸಿದ್ದಾನೆ.

ಅಕ್ಬರನ ಆಸ್ಥಾನದಲ್ಲೆಲ್ಲ ಬಹು ಮೇಧಾವಿಯಾದ ಹಿಂದೀ ಕವಿಯೆಂದರೆ ಅಬುಲ್ ರಹೀಮ್‌ಖಾನ್‌ಖಾನಾ. ಈತನು ಬೈರಾಮಖಾನನ ಮಗ. ಈತನಿಗೆ ಅರಬ್ಬಿ, ಪಾರ್ಸಿ, ಸಂಸ್ಕೃತ, ಹಿಂದೀ ಭಾಷೆಗಳ ಪರಿಚಯವಿತ್ತು. ಸ್ವತಃ ಕವಿಪೋಷಕನೂ ಆಗಿದ್ದನು. ಗಂಗಕವಿ ಆತನ ಆಶ್ರಯದಲ್ಲಿದ್ದವನು. ರಹೀಮ್‌ಖಾನನ ನೀತಿಪದ್ಯಗಳು ಬಹು ಜನಪ್ರಿಯವಾಗಿವೆ. ಆತನು ಉತ್ತಮ ದರ್ಜೆಯ ಕವಿ. ಆತನ ಗ್ರಂಥಗಳಲ್ಲೆಲ್ಲಾ 'ರಹೀಮ್ ಸತ್‌ಸಯಿ' ಬಹು ಮುಖ್ಯವಾದುದು. ಇದರಲ್ಲಿ ಆತನ ಉತ್ತಮ ಕೃತಿಗಳನ್ನು ಕಾಣಬಹುದು.

ಹಿಂದುವಾಗಿದ್ದು ಮುಸ್ಲಿಮ್ ಮತಕ್ಕೆ ಪರವರ್ತಿತನಾದ ಗ್ವಾಲಿಯರಿನ ತಾನಸೇನನು ಆ ಕಾಲದ ಉದ್ದಾಮ ಸಂಗೀತ ವಿದ್ವಾಂಸ. ಅನೇಕ ಆಸ್ಥಾನಗಳಲ್ಲಿದ್ದು

ಕೊನೆಗೆ ಅಕ್ಬರನಿಂದ ಆಹ್ವಾನಿತನಾಗಿ ಅವನಲ್ಲಿ ನಿಂತವನು. ಆತನ ಮೊದಲನೆಯ ಕಛೇರಿಗೆ ಅಕ್ಬರನು ಎರಡು ಲಕ್ಷ ರೂಪಾಯಿ ಬಹುಮಾನ ಕೊಟ್ಟನಂತೆ. ಅವನು ಹಿಂದೀ ಕವಿಯೂ ಆಗಿದ್ದನು. 'ಸಂಗೀತಸಾರ' 'ರಾಗಮಾಲ' ಎಂಬುವು ಈತನ ಕೃತಿಗಳು. ಸೂರದಾಸನ ತಂದೆಯಾದ ರಾಮದಾಸನು ಅಕ್ಬರನ ಆಸ್ಥಾನದ ಮತ್ತೊಬ್ಬ ಘನ ಸಂಗೀತ ವಿದ್ವಾಂಸ. ತಾನಸೇನನಷ್ಟೇ ಪಂಡಿತ. ಕರಣ್ ಮತ್ತು ನರಹರಿ ಎಂಬ ಬೇರಿಬ್ಬರು ಅಕ್ಬರನ ಆಸ್ಥಾನದ ಹಿಂದೀ ಕವಿಗಳು. ನರಹರಿಗೆ ಅಕ್ಬರನು 'ಮಹಾಪಾತ್ರ' ಎಂಬ ಬಿರುದನ್ನಿತ್ತಿದ್ದನಂತೆ. ಇವರೆಲ್ಲರಿಗಿಂತಲೂ ಸುಪ್ರಸಿದ್ಧನಾದ ಕವಿ ಗಂಗಾ ಪ್ರಸಾದ್ ಅಥವಾ ಗಂಗಕವಿ. ಇವನ ವಿಷಯವಾಗಿ ಏನೂ ತಿಳಿಯದು. ಆತನ ೩೦-೩೫ ಪದ್ಯಗಳು ಮಾತ್ರ ಉಪಲಬ್ಧವಾಗಿವೆ. ಒಂದು ಸಲ ಆತನ ಪೋಷಕನಾದ ರಹೀಮ್ ಖಾನ್ ಖಾನನು ಅವನ ಒಂದು ಪದ್ಯಕ್ಕೆ ೩೬ ಲಕ್ಷ ರೂಪಾಯಿ ಬಹುಮಾನ ಮಾಡಿದನಂತೆ. ಯುದ್ಧವರ್ಣನೆಯಲ್ಲಿಯೂ ಹಾಸ್ಯ ಚಿತ್ರಣದಲ್ಲಿಯೂ ಆತನು ಗಟ್ಟಿಗನೆಂದು ಪ್ರಸಿದ್ಧಿ.

ಈ ಕಾಲದಲ್ಲಿ ಲಕ್ಷ್ಯಗ್ರಂಥಗಳಂತೆಯೇ ಲಕ್ಷಣಗ್ರಂಥಗಳೂ ವಿಶೇಷವಾಗಿ ರಚಿತವಾಗಿ ಮುಂದಿನ ಒಂದೆರಡು ಶತಮಾನಗಳ ಕಾಲದ ಕವಿಗಳಿಗೆ ಮಾದರಿಯಾದುವು. ಮುಂದೆ ಬಂದವರೆಲ್ಲ ಒಂದಲ್ಲ ಒಂದು ರೀತಿಯ ಲಕ್ಷಣಗ್ರಂಥಗಳನ್ನು ರಚಿಸಿದ್ದಾರೆ. ಅವುಗಳೆಲ್ಲ ಶೃಂಗಾರಮಯವಾಗಿವೆ. ಆದುದರಿಂದಲೇ ಈ ಕಾಲವನ್ನು ಶೃಂಗಾರಯುಗವೆಂದು ಕರೆಯುತ್ತಾರೆ. ಈ ರೀತಿಯಲ್ಲಿ ಮೊದಲು ಗ್ರಂಥವನ್ನು ರಚಿಸಿದವನು ಕೇಶವದಾಸನನಾಢ್ಯಮಿಶ್ರನೆಂಬ ಘನ ವಿದ್ವಾಂಸ. ಆತನ ಪ್ರಥಮ ಕೃತಿ 'ವಿಜ್ಞಾನಗೀತ.' ಇದನ್ನು ತನ್ನ ಪೋಷಕನಾದ ಮಧುಕರಷಹನಿಗೆ ಅಂಕಿತ ಮಾಡಿದ್ದಾನೆ. ಆತನ ಪ್ರಖ್ಯಾತ ಲಕ್ಷಣಗ್ರಂಥ 'ಕವಿಪ್ರಿಯ.' ಈ ಗ್ರಂಥವು ಆ ಕಾಲದ ಸುಪ್ರಸಿದ್ಧ ಆಸ್ಥಾನ ವೇಶ್ಯೆಯೂ ಕವಿಯತ್ರಿಯೂ ಆದ ಪ್ರವೀಣರಾಯ್ ಪಾತೂರಿ ಎಂಬುವಳಿಗೆ ಅಂಕಿತ ಮಾಡಲ್ಪಟ್ಟಿದೆ. (ಪಾತೂರಿಯೂ ಕೆಲವು ಉತ್ತಮ ಗೀತೆಗಳನ್ನು ರಚಿಸಿದ್ದಾಳೆ.) ಕೇಶವದಾಸನ 'ರಾಮಚಂದ್ರಿಕಾ' ಎಂಬ ಗ್ರಂಥವು ಮಧುಕರಷಹನ ಮಗನಾದ ಇಂದ್ರಕೇತುವಿಗೆ ಅಂಕಿತವಾಗಿದೆ. ಕೇಶವದಾಸನು ಬೀರಬಲ್ಲನ ಮುಖಾಂತರ ಅಕ್ಬರನು ಇಂದ್ರಕೇತುವಿಗೆ ವಿಧಿಸಿದ್ದ ಅಪಾರವಾದ ದಂಡವನ್ನು ತಪ್ಪಿಸಿದನು; ಅದಕ್ಕಾಗಿ ಇಂದ್ರಕೇತುವು ಕೇಶವನನ್ನು ವಿಶೇಷವಾಗಿ ಸನ್ಮಾನಿಸಿದನು. ಕೇಶವದಾಸನು ಸಾಹಿತ್ಯ ಲಕ್ಷಣಗಳನ್ನು ಕುರಿತ 'ರಸಿಕಪ್ರಿಯ' ಎಂಬ ಗ್ರಂಥವನ್ನೂ ಛಂದೋವಿಷಯಕವಾದ 'ರಾಮಾಲಂಕೃತಮಂಜರಿ' ಎಂಬ ಗ್ರಂಥವನ್ನೂ ರಚಿಸಿದನು. ಇವೆರಡೂ ಲಕ್ಷ್ಯಲಕ್ಷಣಗಳನ್ನುಳ್ಳ ಗ್ರಂಥಗಳು. ಲಕ್ಷ್ಯ

ಗಳೆಲ್ಲ ಕವಿಯ ಸ್ವಕರ್ತೃಕವಾದುವು. ಪಂಡಿತನಾದುದರಿಂದ ಆತನ ಗ್ರಂಥಗಳು ಸುಲಭವಾಗಿ ಅರ್ಥವಾಗುವುದಿಲ್ಲ. ಅವುಗಳಿಗೆ ಅನೇಕ ವ್ಯಾಖ್ಯಾನಗಳಿವೆ. ಮುಂದಿನವರನೇಕರು ಅವನನ್ನು ಅನುಕರಣಮಾಡಿದ್ದಾರೆ.

ಕೇಶವದಾಸನ ಸಹೋದರನಾದ ಬಲಭದ್ರಸನಾಢ್ಯಮಿಶ್ರನು 'ಭಾಗವತ ಪುರಾಣ ವ್ಯಾಖ್ಯಾನ'ವೇ ಮೊದಲಾದ ಅನೇಕ ಗ್ರಂಥಗಳನ್ನು ರಚಿಸಿದ್ದಾನೆ. ಆತನ ಪ್ರಸಿದ್ಧ ಗ್ರಂಥ ನಖಶಿಖ. ಇಂತಹ ಕಾವ್ಯಗಳು ಹಿಂದಿಯಲ್ಲಿ ಬಹಳ ಹೆಚ್ಚು. ಇವು ಲಕ್ಷಣಗ್ರಂಥಗಳಿಗೆ ಬಹು ಸಮೀಪವಾದುವು. ಇವುಗಳಲ್ಲಿ ನಾಯಕ ನಾಯಿಕೆಯರ ಆಪಾದಮಸ್ತಕವರ್ಣನೆಯಿರುತ್ತದೆ. ಬಹು ಸಂಪ್ರದಾಯಬದ್ಧವೂ ಕೃತಕವೂ ನೀರಸವೂ ಆಗಿರುತ್ತವೆ. 'ನಾಯಕ ನಾಯಿಕಾ ಭೇದ' ವೆಂಬ ಮತ್ತೊಂದು ಗ್ರಂಥವೂ ಏತತ್ಕೃತವಾದುದು.

ಈ ಕಾಲದ ಮತ್ತಿಬ್ಬರು ಲಾಕ್ಷಣಿಕರು ಬಾಲಕೃಷ್ಣ ತ್ರಿಪಾಠಿ ಮತ್ತು ಕಾಶೀ ನಾಥ. ಮೊದಲನೆಯವನು 'ರಸಚಂದ್ರಿಕಾ' ಎಂಬ ಉತ್ತಮ ಛಂದೋಗ್ರಂಥವನ್ನು ರಚಿಸಿದ್ದಾನೆ.

ಮೊಗಲ್ ಚಕ್ರವರ್ತಿಗಳಲ್ಲಿ ಅಕ್ಬರನಿಂದ ಅವರಿಂಗಜೇಬನವರೆಗೂ ಎಲ್ಲರೂ ಕವಿಜನಾಶ್ರಯರಾಗಿದ್ದರು. ಸುಂದರ್ ಎಂಬುವನು ಷಹಜಹಾನನ ಆಸ್ಥಾನದ ಕವಿರಾಜ. ಈತನು 'ಸುಂದರ್ ಶೃಂಗಾರ್' ಎಂಬ ಗ್ರಂಥವನ್ನೂ ಬ್ರಜಭಾಷೆಯ 'ಸಿಂಹಾಸನ ಬತ್ತೀಸೀ' ಎಂಬ ಕಥಾಗುಚ್ಛವನ್ನೂ ರಚಿಸಿದನು. ದ್ವಿತೀಯ ಗ್ರಂಥವು ಕೆಲವು ಕಾಲದಮೇಲೆ ಲಲ್ಲೂಜಿಲಾಲನಿಂದ ಉರ್ದು ಭಾಷೆಗೆ ಪರಿವರ್ತಿತವಾಯಿತು.

ಸೇನಾಪತಿಯೆಂಬ ಕನೂಜಿನ ಬ್ರಾಹ್ಮಣನು ೧೫೮೯ ರಿಂದ ೧೬೪೯ ರ ವರೆಗಿದ್ದು 'ಕವಿತ್ವ ರತ್ನಾಕರ' ಎಂಬ ಗ್ರಂಥವನ್ನು ರಚಿಸಿದನು. ಋತುವರ್ಣನೆಯಲ್ಲಿ ಈತನು ಗಟ್ಟಿಗ. 'ಕಾವ್ಯಕಲ್ಪದ್ರುಮ' ವೆಂಬ ಮತ್ತೊಂದು ಗ್ರಂಥವೂ ಈತನಿಂದಲೇ ರಚಿತವಾದುದು.

ಕನೂಜಿನ ಮತ್ತೊಬ್ಬ ಬ್ರಾಹ್ಮಣ ರತ್ನಾಕರತ್ರಿಪಾಠಿ. ಈತನಿಗೆ ನಾಲ್ಕು ಜನ ಮಕ್ಕಳು. ಎಲ್ಲರೂ ಉದ್ದಮ ವಿದ್ವಾಂಸರು. ಹಿಂದೀ ಕವಿಗಳು. ಷಹಜಾಹಾನ್ ಅವರಿಂಗಸೇಬ್ ಇಬ್ಬರಿಂದಲೂ ಪೋಷಿತರಾದವರು. ಅವರು ಕೇಶವದಾಸನ ಕಾರ್ಯವನ್ನು ಮುಂದುವರಿಸಿದರು. ಜ್ಯೇಷ್ಠನಾದ ಚಿಂತಾಮಣಿ ತ್ರಿಪಾಠಿ ಅನೇಕರಿಂದ ಸನ್ಮಾನ್ಯನಾಗಿ ಸಾಹಿತ್ಯಶಾಸ್ತ್ರದಲ್ಲಿ ಅಧಿಕಾರವಾಣಿಯುಳ್ಳವನಾಗಿ 'ಛಂದೋವಿಚಾರ್' 'ಕಾವ್ಯವಿವೇಕ್' 'ಕವಿಕುಲಕಲ್ಪತರು' ಮತ್ತು 'ಕಾವ್ಯಪ್ರಕಾಶ್' ಎಂಬ ಗ್ರಂಥಗಳನ್ನು ರಚಿಸಿದನು. ಕವಿತ್ತ ಮತ್ತು ಇತರ ಛಂದಸ್ಸಿನಲ್ಲಿ 'ರಾಮಾಯಣ'

ವನ್ನೂ ರಚಿಸಿದ್ದಾನೆ. ಭೂಷಣ ಮತ್ತು ಮತಿರಾಮ್ ಎಂಬುವರು ಮತ್ತಿಬ್ಬರು ಸಹೋದರರು. ಇವರು ಉಳಿದವರಿಗಿಂತಲೂ ಶಕ್ತರು.

ಭೂಷಣತ್ರಿಪಾಠಿ ಬಹುಜನಸನ್ಮಾನ್ಯ. ಸತಾರಿನ ಶಿವಾಜಿಯೂ ಪನ್ನಾದ ಛತ್ರಸಾಲನೂ ಆತನ ಸಾಕ್ಷಾತ್ ಪೋಷಕರು. ಒಂದು ಸಂದರ್ಭದಲ್ಲಿ ಛತ್ರಸಾಲನು ಕವಿಯ ಪಲ್ಲಕ್ಕಿಗೆ ತಾನೇ ಹೆಗಲುಕೊಟ್ಟು ಗೌರವಿಸಿದ. ಶಿವಾಜಿಯೂ ಬಹು ಉದಾರವಾದ ಬಹುಮಾನವನ್ನೀಯುತ್ತಿದ್ದನು. ಒಂದುಸಲ ಶಿವಾಜಿಯು ಆತನ ಒಂದು ಪದ್ಯಕ್ಕೆ ಅಯ್ದು ಆನೆಗಳನ್ನೂ ೨೫,೦೦೦ ಹೊನ್ನುಗಳನ್ನೂ ಕೊಟ್ಟನಂತೆ. 'ಶಿವರಾಜ ಭೂಷಣ' ವೆಂಬುದು ಭೂಷಣನ ಉತ್ತಮ ಗ್ರಂಥ. ಇದು ಒಂದು ಲಕ್ಷಣಗ್ರಂಥ. ಒಂದೊಂದು ಲಕ್ಷಣವೂ ಶಿವಾಜಿಗೆ ಸಂಬಂಧಪಟ್ಟ ಲಕ್ಷ್ಯಶ್ಲೋಕ ಗಳಿಂದ ಉದಾಹೃತವಾಗಿದೆ. ಭೂಷಣನಿಗೆ ಶೃಂಗಾರ, ವೀರ, ಕರುಣ, ಅದ್ಭುತ ರಸ ಗಳನ್ನು ಚಿತ್ರಿಸುವ ಬಹು ಆಕರ್ಷಕವಾದ ಶೈಲಿಯಿದೆ. ಈತನು ಹಿಂದೀ ಕವಿಗಳಲ್ಲಿ ಅಗ್ರಸ್ಥಾನವನ್ನು ಪಡೆಯಬಲ್ಲ. ಈತನಿಗೆ ಹಿಂದುಗಳ ಪ್ರಗತಿಯಲ್ಲಿಯೂ ವೈಭವ ದಲ್ಲಿಯೂ ವಿಶೇಷ ಆಸಕ್ತಿ.

ಮತಿರಾಮತ್ರಿಪಾಠಿಯು ಮೊದಲು ಮಹಾರಾಜರಾವ್ ಬಾಪುಸಿಂಗನ ಆಸ್ಥಾನ ದಲ್ಲಿಯೂ ಆಮೇಲೆ ರಾಜಾ ಶಂಬುನಾಥ ಸೋಲಂಕಿಯ ಆಶ್ರಯದಲ್ಲಿಯೂ ಇದ್ದನು. ಮೊದಲನೆಯ ಆಶ್ರಯದಾತನ ಗೌರವಾರ್ಥವಾಗಿ 'ಲಲಿತ ಲಲಾಮ್' ಎಂಬ ಲಕ್ಷಣಗ್ರಂಥವನ್ನು ರಚಿಸಿದನು. ಇದು ಸಾಹಿತ್ಯಶಾಸ್ತ್ರದ ಕೈಗನ್ನಡಿ ಯಂತಿದೆ. 'ಛಂದಸ್ಸಾರಪಿಂಗಲ್' ಎಂಬುದು ಶಂಭುನಾಥನ ಅಂಕಿತದಲ್ಲಿ ರಚಿತ ವಾದುದು. 'ರಸರಾಜ' ಎಂಬುದು ನಾಯಕ ನಾಯಿಕಾ ಭೇದವನ್ನು ತಿಳಿಸುವ ಶೃಂಗಾರಕಾವ್ಯ. 'ಸತ್‌ಸಯಿ ಮತಿರಾಮ್' ಎಂಬುದು ಈತನ ಮತ್ತೊಂದು ಗ್ರಂಥ. ಮತಿರಾಮನು ಭಾಷಾಶುದ್ಧತೆಗೂ ಉಪಮಾ ಪ್ರೌಢಿಮೆಗೂ ಮನುಷ್ಯರ ಭಾವಾನು ಭಾವಗಳ ವರ್ಣನೆಗೂ ಹೆಸರುವಾಸಿಯಾದವನು. ಆತನ ಅನೇಕ ದೋಹಗಳು ಬೀಹಾರಿಲಾಲಿನ ಕೃತಿಗಳಿಗೆ ಸಮಾನವೆಂದು ಪರಿಗಣಿಕವಾಗಿವೆ.

ಸಿತಾರದ ರಾಜಾ ಶಂಭುನಾಥಸಿಂಗನು ಮತಿರಾಮನ ಸ್ನೇಹಿತನೇ ಅಲ್ಲದೆ ಅನೇಕ ಇತರ ಕವಿಗಳ ಪೋಷಕ. ಆತನು 'ನಾಯಿಕಾ ಭೇದ' ಮತ್ತು 'ನಖಶಿಖ' ಎಂಬ ಗ್ರಂಥಗಳ ಕರ್ತೃ. ಇವು ಆ ಜಾತೀಯ ಗ್ರಂಥಗಳಲ್ಲಿ ಉತ್ತಮೋತ್ತಮವೆಂದು ಅಂಗೀಕೃತವಾಗಿವೆ.

ಹಿಂದೀ ಲಕ್ಷಣಗ್ರಂಥಕಾರರಲ್ಲಿ ಅತಿ ಪ್ರಸಿದ್ಧನಾದವನು ಬೀಹಾರಿಲಾಲ್ ಚೌಬೆ. ಈತನು ಗ್ವಾಲಿಯರಿನಲ್ಲಿ ಹುಟ್ಟಿ ಬುಂದೇಲ್‌ಖಂಡದಲ್ಲಿ ಬೆಳೆದು ಮಥುರೆಯಲ್ಲಿ

ನೆಲಸಿ ಅಲ್ಲಿಯ ವ್ರಜಭಾಷೆಯಲ್ಲ ಗ್ರಂಥರಚನೆಮಾಡಿದನು. ಜಯಪುರದ ರಾಜಾ ಜಯಸಿಂಹನು ಆತನ ಪೋಷಕ. ಆತನು ಕವಿಯ ಒಂದೊಂದು ದೋಹಕ್ಕೂ ಒಂದೊಂದು ಸುವರ್ಣವನ್ನು ಕೊಟ್ಟನಂತೆ. ಸುಮಾರು ೭೦೦ ದೋಹ ಮತ್ತು ಸೋರಠಗಳನ್ನುಳ್ಳ 'ಸತ್‌ಸಯಿ' ಆತನ ಉತ್ತಮ ಗ್ರಂಥ. ಇದರ ಒಂದೊಂದು ದ್ವಿಪದಿಯೂ ರಾಧಾಕೃಷ್ಣರ ಪ್ರೇಮಶೃಂಗಾರವನ್ನು ಕುರಿತುದು. ಒಂದೊಂದು ಸ್ವಯಂಪೂರ್ಣವಾಗಿದೆ. ಕಾವ್ಯಲಕ್ಷಣಗಳಿಗೆ ಲಕ್ಷ್ಯವನ್ನು ಒದಗಿಸುವುದೇ ಅದರ ಉದ್ದೇಶ. ಇದರಲ್ಲಿ ಅನುಸ್ಯೂತವಾದ ಕಥಾಸೂತ್ರವಿಲ್ಲದಿರುವುದರಿಂದ ಇವುಗಳ ಕ್ರಮ ವ್ಯತ್ಯಾಸವಾಗಿ ಅನೇಕ ಪಾಠಾಂತರಗಳಾಗಿವೆ. ಇದರಲ್ಲಿ ಅವರಂಗಸೇಬನ ಮಗನಾದ ಆಸಾಮ್‌ಷಹನಿಗಾಗಿ ಸಿದ್ಧಪಡಿಸಿದ ಪಾಠವು ಪ್ರಸಿದ್ಧವಾದುದು. ಇದರಲ್ಲಿ ನಾಯಕ ನಾಯಿಕಾ ಭೇದಗಳು, ರಸವಿವೇಚನೆ, ನಖಶಿಖವರ್ಣನೆ, ಋತು ವರ್ಣನೆ, ನೀತಿವಾಕ್ಯಗಳು, ಭಾವಾನುಭಾವಗಳ ವಿಚಾರ, ನವರಸ ಸ್ವರೂಪ, ಮೊದಲಾದುವು ವರ್ಣಿತವಾಗಿವೆ. ಬೀಹಾರಿಲಾಲನು ಇಂತಹ 'ಸತ್‌ಸಯಿ' ಗಳನ್ನು ಪ್ರಾರಂಭಿಸದಿದ್ದರೂ ಆತನ ಗ್ರಂಥ ಆ ಶಾಖೆಯ ಗ್ರಂಥಗಳಲ್ಲಿ ಅಗ್ರಸ್ಥಾನ ಪಡೆಯಿತು. ಅದಕ್ಕೆ ಸುಮಾರು ಮೂವತ್ತು ವ್ಯಾಖ್ಯಾನಗಳಿವೆ. ಅನೇಕರು ಅದನ್ನು ಅನುಕರಿಸಿದ್ದಾರೆ. ಹರಿಪ್ರಸಾದನೆಂಬುವನು ಈ ಸತ್‌ಸಯಿಯನ್ನು ಸಂಸ್ಕೃತಕ್ಕೆ ಪರಿವರ್ತಿಸಿದನು. ಇದು ಬುದ್ಧಿಪ್ರಧಾನವಾದ ಗ್ರಂಥ. ನಿಸರ್ಗ ಸೌಂದರ್ಯದ ವರ್ಣನೆಯಲ್ಲಿ ಬೀಹಾರಿಲಾಲನಿಗೆ ಅದ್ಭುತ ಶಕ್ತಿಯಿದೆ.

ಅವರಂಗಸೇಬನ ಪ್ರತಿಕಕ್ಷಿಯಾದ ಜೋಥಪುರದ ರಾಜಾಯಶವಂತಸಿಂಹನು ೨೬೧ ದೋಹಗಳಿಂದ ಕೂಡಿದ 'ಭಾಷಾ ಭೂಷಣ'ವೆಂಬ ಒಂದು ಲಕ್ಷಣಗ್ರಂಥ ವನ್ನು ರಚಿಸಿದ್ದಾನೆ. ಇದು ಸಂಸ್ಕೃತ ಗ್ರಂಥವೊಂದರ ಆಧಾರದ ಮೇಲೆ ರಚಿತ ವಾಗಿದೆ. ಈ ಗ್ರಂಥವು ಕೆಲವು ದೃಷ್ಟಿಯಿಂದ ಕೇಶವದಾಸನ ಗ್ರಂಥಕ್ಕಿಂತ ಆಕರ್ಷಕವಾಗಿದೆ. ಯಶವಂತಸಿಂಹನು ವೇದಾಂತಶಾಸ್ತ್ರದ ವಿಷಯವಾಗಿಯೂ ಅನೇಕ ಗ್ರಂಥಗಳನ್ನು ಬರೆದಿದ್ದಾನೆ.

ದೇವಕವಿಯೆಂದು ಪ್ರಸಿದ್ಧನಾದ ದೇವದತ್ತನು ಸನಾಢ್ಯಬ್ರಾಹ್ಮಣ. ರಾಜ ಕುಮಾರ ಆಸಾಮ್‌ಷಹನ ಆಶ್ರಿತ. ಕಡೆಯ ದಿನಗಳಲ್ಲಿ ರಾಜಾ ಭೋಗಿಲಾಲನಲ್ಲಿ ನೆಲಸಿದ. ಈತನು ಸುಮಾರು ೭೨ ಗ್ರಂಥಗಳನ್ನು ರಚಿಸಿರುವನೆಂದು ಪ್ರತೀತಿ. ಮೂವತ್ತು ಮಾತ್ರ ಸಿಕ್ಕಿವೆ. ಅವುಗಳಲ್ಲಿ 'ದೇವಮಾಯಾಪ್ರಪಂಚ' ಎಂಬ ನಾಟಕವೂ ಅನೇಕ ಲಕ್ಷಣಗ್ರಂಥಗಳೂ ಇವೆ. 'ಜಾತಿ ವಿಲಾಸ್' 'ರಸ ವಿಲಾಸ್' ಮತ್ತು 'ಪ್ರೇಮಚಂದ್ರಿಕಾ' ಎಂಬುವು ಮುಖ್ಯವಾದುವು. ಈತನ ಪದ್ಯಗಳಲ್ಲಿ

ಕಾಮಶೃಂಗಾರಮಯವಾಗಿವೆ. ವ್ರಜಭಾಷೆಯಲ್ಲಿವೆ. ಶೈಲಿ ಮತ್ತು ಭಾಷಾದೃಷ್ಟಿಯಿಂದ ಈತನು ಉದ್ದಾಮ ಕವಿ. ಈತನ ಪ್ರಾಸಗಳು, ವಿಶೇಷಣಗಳು, ಉಪಮಾನಗಳು, ಲೋಕೋಕ್ತಿಗಳು, ನಾಯಿಕಾ ವರ್ಣನೆಗಳು ಚಿತ್ತಾಪಹಾರಿಯಾಗಿವೆ.

ಅವರಿಂಗ್‌ಜೇಬನಾದ ಮೇಲೆ ಮೊಗಲ್ ಸಾಮ್ರಾಜ್ಯವು ಅವನತಿಗೆ ಬಂದಂತೆಯೇ ಹಿಂದೀ ಸಾಹಿತ್ಯವೂ ಕ್ಷೀಣಸ್ಥಿತಿಗೆ ಬಂದಿತು. ಅಲ್ಲಲ್ಲಿ ಕೆಲವು ಕೃತಿಕಾರರ ಹೆಸರು ಕೇಳಿಬಂದರೂ ಅವರು ಶ್ರೇಷ್ಠವರ್ಗದವರೇನೂ ಅಲ್ಲ. ಅವರು ರಚಿಸಿದ ಗ್ರಂಥಗಳೆಲ್ಲಾ ಸಾಮಾನ್ಯವಾಗಿ ಲಕ್ಷಣಗ್ರಂಥಗಳೇ. ಕುಲಪತಿಮಿಶ್ರ (ರಸರಹಸ್ಯ) ರಾಮಜಿ (ನಾಯಿಕಾ ಭೇದ) ಮಂಡನ್ (ಸಾಹಿತ್ಯ ಲಕ್ಷಣ) ಸುಖದೇವ ಮಿಶ್ರ (ಅನೇಕ ಛಂದೋಗ್ರಂಥಗಳು) ನೇವಾಜಿ (ಶಾಕುಂತಲ ನಾಟಕ) ಕಾಲಿದಾಸ ತ್ರಿವೇದಿ (ಕಾಲಿದಾಸ ಹಜಾರ ಎಂಬ ಸಂಕಲನ) ಆಲಮ್‌ಷೇಕ್, ರಂಗ್ರೇಜಿನ್, ಶ್ರಿಪತಿ (ಕಾವ್ಯಸರೋಜ್) ಸುರಫಿಮಿಶ್ರ (ವ್ಯಾಖ್ಯಾನಗಳು) ಗಂಜನ್, ಗುರುದತ್ತ ಸಿಂಗ್ (ಸೆತ್‌ಸಯಿ) ತೋಷನಿಧಿ (ಸುಧಾನಿಧಿ, ನಖಶಿಖಾ) ದಲಪತ್‌ರಾಯ್ ಮತ್ತು ಮನ್ಸೀಧರ್ (ಅಲಂಕಾರ ರತ್ನಾಕರ್) ಸೋಮನಾಥ (ಪೀಯೂಷನಿಧಿ) ರಸಲೀನ್ (ಅಂಗದರ್ಪಣ) ಉದಯನಾಥ ತ್ರಿವೇದಿ, ಭೈರಿಸಾಲ್ (ಭಾಷಾಭರಣ್) ಕಿಶೋರ್ (ಕಿಶೋರ್ ಸಂಗ್ರಹ್) ದೇವದತ್ (ಲಲಿತ ಲಲಾಮ್) ರತನ್‌ಕವಿ (ಫತ್ತೇಷಹ ಪ್ರಕಾಶ, ಫತ್ತೇಭೂಷಣ್) ಮಣಿರಾಮ್‌ಮಿಶ್ರ (ಛಂದಚ್ಛಪ್ಪಾಣಿ) ಬೊದಾಫಿರೋಸಾಬಾದಿ (ಇಷ್ಕನಾಮಾ) ಜಾನ್‌ಗೋಪಾಲ್ (ಸಮರಸಾರ್) ದೇವಕೀನಂದನ್ (ಶೃಂಗಾರಚರಿತ್ರ) ಥಾನ್‌ರಾಮ್ (ದಲೇಲ್‌ಪ್ರಕಾಶ) ಭಿಕಾರೀದಾಸ್ (ಹಿಂದೀ ವಿಷ್ಣುಪುರಾಣ) ಗುಮಾನ್‌ಮಿಶ್ರ (ಹಿಂದೀ ಮಹಾಭಾರತ) ಕುಮಾರ ಮಣಿಭಟ್ (ರಸಿಕರಸಾಲ್) ಶಂಭುನಾಥ ಮಿಶ್ರ, 'ಜಗತ್‌ಸಿಂಗ್' ಥಾಕೂರ್ (ಥಾಕೂರ್ ಶತಕ) ಹರಿಚರಣದಾಸ್ (ಕವಿಪ್ರಿಯ ಮತ್ತು ರಸಿಕಪ್ರಿಯ ವ್ಯಾಖ್ಯಾನಗಳು) ಮೊದಲಾದವರು ಈ ಕಾಲದ ಗ್ರಂಥಕಾರರು.

ರಮಾನಂದೀಯ ಪಂಥದಲ್ಲಿ ಸಗುಣಬ್ರಹ್ಮೋಪಾಸಕರಾಗಿ ರಾಮನನ್ನು ಆರಾಧ್ಯದೈವವನ್ನಾಗಿ ಅಂಗೀಕಾರಮಾಡಿ ರಾಮಾಯಣವನ್ನು ರಚಿಸಿರುವವರಲ್ಲಿ ತುಳಸೀದಾಸರು ಅಗ್ರಗಣ್ಯರು. ಇವರು ಹಿಂದೀ ಸಾಹಿತ್ಯದಲ್ಲೇಕೆ ಅಖಂಡ ಭಾರತದಲ್ಲಿಯೇ ಸುಪ್ರಸಿದ್ಧರು. ಕೆಲವು ದಂತಕತೆಗಳು ವಿನಾ ಅವರ ವಿಷಯವಾಗಿ ಮತ್ತೇನೂ ತಿಳಿಯದು. ೧೫೩೨ ರಲ್ಲಿ ಜನಿಸಿದುದಾಗಿಯೂ ಆತ್ಮಾರಾಮ್ ಮತ್ತು ಹುಲಸಿಯವರ ಪುತ್ರರೆಂಬುದಾಗಿಯೂ ಪ್ರತೀತಿ. ಅವರ ಮೊದಲನೆಯ ಹೆಸರು ರಾಮಬೋಲಾ ಎಂದು. ಭಕ್ತರಾದಮೇಲೆ ತುಳಸೀದಾಸರೆಂದು ಕರೆದುಕೊಂಡರು.

ಅವರು ಅವತರಿಸಿದ ಸ್ಥಳ ಖಚಿತವಾಗಿ ತಿಳಿದಿಲ್ಲ. ಕೆಲವರ ಪ್ರಕಾರ ಹಸ್ತಿನಾಪುರ ಮತ್ತೆ ಕೆಲವರ ಪ್ರಕಾರ ಹಾಜೀಪುರ. ಸಂಪ್ರದಾಯ ಪ್ರಕಾರ ಅವರು ಅವತರಿಸಿದುದು ಬಾಂಡಾ ಜಿಲ್ಲೆಯ ರಾಜಪುರದಲ್ಲಿ. ಕನೂಜಿನ ಬ್ರಾಹ್ಮಣರು. ರಮಾನಂದರ ಶಿಷ್ಯಪರಂಪರೆಯಲ್ಲಿ ಆರನೆಯ ತಲೆಮೊರೆಯವರಾದ ನರಹರಿದಾಸರು ಇವರ ಗುರು. ಸೂಕರ್‌ಖೇಟ್ ಅಥವಾ ಸೊರೋನ್‌ನಲ್ಲಿ ವಿದ್ಯಾಭ್ಯಾಸ ಮಾಡಿದುದಾಗಿ ತಮ್ಮ ರಾಮಾಯಣದ ಉಪೋದ್ಘಾತದಲ್ಲಿ ಅವರೇ ಹೇಳಿಕೊಂಡಿದ್ದಾರೆ. ಸಂವತ್ ೧೫೮೩ ರಲ್ಲಿ ಅವರು ರತ್ನಾವಳಿಯೆಂಬ ಕನ್ಯೆಯನ್ನು ವಿವಾಹವಾದರು. ತಾರುಣ್ಯದಲ್ಲಿ ಅವರಿಗೆ ಪ್ರೇಯಸಿಯ ವ್ಯಾಮೋಹವು ಅತಿಯಾಗಿತ್ತೆಂದೂ ಆಕೆಯು ಒಂದು ದಿನ ತವರೂರಿಗೆ ಹೋದಾಗ ಇವರಿಗೆ ವಿರಹ ಅಸಹನೀಯವಾಗಿ ಅವಳನ್ನು ಹುಡುಕಿಕೊಂಡು ಪೂರ್ಣ ಪ್ರವಾಹದಿಂದ ಕೂಡಿದ ನದಿಯನ್ನು ರಾತ್ರಿಯ ಕತ್ತಲೆಯಲ್ಲಿ ದಾಟಿಹೋದರೆಂದೂ ಅವರನ್ನು ಕಂಡ ಹೆಂಡತಿಯು 'ಅಸ್ಥಿ ಚರ್ಮಮಯದೇಹ ಯಹ್ ತಾಮೇ ಜೈಸಿ ಪ್ರೀತಿ, ಹೋತ ಕಹ್ನೂಂ ಶ್ರೀರಾಮಮಹಂ ಹೋತ ನ ಯಹ ಭವಭೀತಿ' ಎಂದು ಜರೆದಳೆಂದೂ ಅದೇ ಕಾರಣವಾಗಿ ತುಳಸೀದಾಸರಿಗೆ ಜ್ಞಾನೋದಯವಾಗಿ ಅರುಣೋದಯದಲ್ಲಿ ಮನೆಯನ್ನು ಬಿಟ್ಟು ಕಾಶಿಗೆ ತೆರಳಿ ರಾಮಭಕ್ತರಾದರೆಂದೂ ಕತೆ. ಅಲ್ಲಿ ಅವರು ದೀರ್ಘಕಾಲ ವಾಸವಾಗಿದ್ದು ಅಯೋಧ್ಯೆ, ಚಿತ್ರಕೂಟ, ಪ್ರಯಾಗ, ಬೃಂದಾವನಗಳಲ್ಲಿ ಯಾತ್ರೆ ಮಾಡಿದರು. ಅವರ ವಿಷಯಕವಾದ ಅನೇಕ ಕತೆಗಳಿದ್ದರೂ ಎಲ್ಲವೂ ವಿಶ್ವಸನೀಯವಲ್ಲ. 'ಭಕ್ತಮಾಲಾ' ಕರ್ತೃವಾದ ನಾಭಾದಾಸರು ಅವರ ಮಿತ್ರರಂತೆ. ಸೂರದಾಸರೂ ಅವರನ್ನು ಸಂದರ್ಶಿಸಿದರಂತೆ. ಅವರು ಯಾವ ಆಸ್ಥಾನದಲ್ಲಿಯೂ ಯಾರ ಆಶ್ರಯದಲ್ಲಿಯೂ ಇರಲಿಲ್ಲ. ಆದರೂ ರಾಜಾ ಮಾನಸಿಂಗ್, ಅಬ್ದುಲ್ ರಹಿಮಾನಖಾನ್ ಇವರಿಬ್ಬರೂ ಅವರ ಮೈತ್ರಿಯನ್ನು ಸಂಪಾದಿಸಿದ್ದರು. ತಮ್ಮ ಕಾಲದ ಕಲಾಮಯ ಸಾಹಿತ್ಯ ಪ್ರಭಾವ ಅವರ ಮೇಲೆ ವಿಶೇಷವಾಗಿತ್ತು. ೧೬೨೩ ರಲ್ಲಿ ತುಲಸೀದಾಸರು ತಮ್ಮ ಇಳಿವಯಸ್ಸಿನಲ್ಲಿ ಪರಂಧಾಮವನ್ನೈದಿದರು.

ಅವರ ಕೃತಿರತ್ನ 'ತುಳಸೀ ರಾಮಾಯಣ'. ಅದನ್ನು 'ರಾಮಚರಿತ ಮಾನಸ' ಎಂದು ಕರೆದಿದ್ದಾರೆ. ಇದು ವಾಲ್ಮೀಕಿ ರಾಮಾಯಣದ ಆಧಾರದ ಮೇಲೆ ರಚಿತವಾಗಿದ್ದರೂ ಅದರ ಭಾಷಾಂತರವಲ್ಲ. ಇವೆರಡಕ್ಕೂ ಸನ್ನಿವೇಶದಲ್ಲಿ, ವಿವರಗಳಲ್ಲಿ, ಉಪಾಖ್ಯಾನಗಳಲ್ಲಿ, ಧಾರ್ಮಿಕ ಮನೋಭಾವದಲ್ಲಿ ಬಹಳ ವ್ಯತ್ಯಾಸವಿದೆ. ವಾಲ್ಮೀಕಿ ರಾಮಾಯಣದಲ್ಲಿ ರಾಮನು ಕೆಲವೆಡೆಗಳಲ್ಲಿ ವಿನಾ ಉಳಿದೆಡೆಗಳಲ್ಲೆಲ್ಲಾ ಸಾಮಾನ್ಯ ಮಾನವ. ಆದರೆ ತುಳಸೀ ರಾಮಾಯಣದಲ್ಲಿ ಅವನು ಮೊದಲಿಂದ ಕೊನೆಯವರೆಗೆ ಅವತಾರ ಪುರುಷ; ದೈವಾಂಶ ಸಂಭೂತ. ಇದೇ ಮನೋಭಾವದ ಇದಕ್ಕೆ ಹಿಂದೆ

ಇದ್ದ 'ಆಧ್ಯಾತ್ಮ ರಾಮಾಯಣ'ದ ಪ್ರಭಾವ ತುಳಸೀ ರಾಮಾಯಣದ ಮೇಲೆ ವಿಶೇಷವಾಗಿರಬೇಕು.

ಭಕ್ತಕವಿಗಳ ಪಂಥಕ್ಕೆ ಅನುಗುಣವಾಗಿ ತುಳಸೀದಾಸರು ರಾಮಾಯಣವನ್ನು ಸಾಮಾನ್ಯಜನಗಳ ಸಾರ್ವತ್ರಿಕ ಉಪಯೋಗಕ್ಕಾಗಿ ಹಿಂದೀ ಭಾಷೆಯಲ್ಲಿಯೇ ರಚಿಸಿದರು. ಸಾಂಪ್ರದಾಯಿಕರ ಆಕ್ಷೇಪಣೆ ಬರಬಹುದೆಂಬ ಉದ್ದೇಶದಿಂದಲೇ ಅವರು ತಮ್ಮ ಗ್ರಂಥಾರಂಭದಲ್ಲಿ ಆ ವಿಷಯವಾಗಿ ದೀರ್ಘವಾಗಿ ಪ್ರಸ್ತಾಪಿಸಿ ತಾವು ಸರಳವಾದ ಭಾಷಾಶೈಲಿಯಲ್ಲಿ ರಚಿಸಿದುದಕ್ಕೆ ಸಮಾಧಾನವನ್ನು ಹೇಳಿದ್ದಾರೆ. ಅವರ ರಾಮಾಯಣವು ಉತ್ತರ ಭಾರತದಲ್ಲಿ ಎಲ್ಲ ವರ್ಗದ ಜನಗಳಿಂದಲೂ ಅಂಗೀಕೃತವಾಗಿ ಪೂಜನೀಯವಾಗಿದೆ. 'ಇದು ಹಿಂದುಗಳ ವೇದ, ಸಜ್ಜನರಿಗೆ ಪ್ರಾಣಪ್ರಿಯ' ಎಂದು ಚತುರ್ಭಾಷಾ ಪಂಡಿತನೂ ಪ್ರಸಿದ್ಧ ಕವಿಯೂ ಆದ ಅಬ್ದುಲ್ ರಹಿಮಾನ್ ಖಾನನು ಹೊಗಳಿದ್ದಾನೆ. 'ಮಾನಸವು ಅನುಭವಜನ್ಯ ಜ್ಞಾನಭಂಡಾರ' ಎಂಬುದು ಮಹಾತ್ಮಾ ಗಾಂಧೀಜಿಯವರ ಅಭಿಪ್ರಾಯ.

ತುಳಸೀ ರಾಮಾಯಣದ ವೈಶಿಷ್ಟ್ಯವೆಂದರೆ ಅದರಲ್ಲಿ ಉದ್ದಕ್ಕೂ ಪ್ರದರ್ಶಿತವಾಗಿರುವ ಬಹು ಉಚ್ಚವಾದ ನೈತಿಕ ದೃಷ್ಟಿ. ಅವರೇ ಒಂದೆಡೆಯಲ್ಲಿ 'ನೀತಿಬಾಹಿರರಾದ ಕಾಗೆಗಳಿಗೂ ಕೊಕ್ಕರೆಗಳಿಗೂ ಈ ಮಾನಸ ಸರೋವರದಲ್ಲಿ ಯಾವ ಕ್ರಿಮಿಕೀಟಗಳಾಗಲಿ ಕಪ್ಪೆಗಳಾಗಲಿ ಸಿಕ್ಕುವುದಿಲ್ಲ'ವೆಂದಿದ್ದಾರೆ.

'ರಾಮಚರಿತಮಾನಸ'ದ ಭಾಷೆ ಪೂರ್ವಹಿಂದಿಯ ಒಂದು ರೂಪವಾದ ಬೈಸ್‌ವಾರಿ ಅಥವಾ ಅವಧಿ. ಇಲ್ಲಿಂದ ಮುಂದೆ ಬಂದ ರಾಮಪಂಥೀಯರೆಲ್ಲ ಇದೇ ಭಾಷೆಯಲ್ಲಿಯೇ ತಮ್ಮ ಗ್ರಂಥಗಳನ್ನು ರಚಿಸಿದ್ದಾರೆ. ವ್ರಜ ಭಾಷೆಯ ಶಬ್ದಗಳೂ ಮಧ್ಯೆ ಮಧ್ಯೆ ಉಪಯುಕ್ತವಾಗಿವೆ. ಅನೇಕೆಡೆಗಳಲ್ಲಿ ವ್ಯಾವಹಾರಿಕ ಪ್ರಯೋಗಗಳೂ ಅಪೂರ್ವ ಪ್ರಯೋಗಗಳೂ ಉಂಟು. ಸಾಂಪ್ರದಾಯಿಕವಾದ ಅಲಂಕಾರಗಳೂ ಕವಿಸಮಯಗಳೂ ಹೇರಳವಾಗಿದ್ದರೂ ಅನೇಕ ಸ್ಫೂರ್ತಿದಾಯಕ ಪ್ರಕೃತಿಚಿತ್ರಗಳ ವರ್ಣನೆಯಿವೆ. ಇದರ ಏಳುಕಾಂಡದಲ್ಲಿ ಅಯೋಧ್ಯಾಕಾಂಡವೇ ಸರ್ವಶ್ರೇಷ್ಠವೆಂದು ಪರಿಗಣಿತವಾಗಿದೆ. ಇಲ್ಲಿ ವರ್ಣಿತವಾಗಿರುವ ದಶರಥನ ಪುತ್ರಶೋಕ, ರಾಮನ ಔದಾರ್ಯ, ಸೀತಾದೇವಿಯ ಪಾತಿವ್ರತ್ಯ, ಲಕ್ಷ್ಮಣನ ಉತ್ಸಾಹಪೂರಿತವಾದ ಸೇವಾ ಮನೋಭಾವ, ಭರತನ ನಿಸ್ವಾರ್ಥ ತ್ಯಾಗ—ಇವೆಲ್ಲವೂ ವಾಚಕರನ್ನು ಮುಗ್ಧರನ್ನಾಗಿ ಮಾಡುತ್ತವೆ.

ತುಳಸೀದಾಸರ ಕೃತಿಯಲ್ಲಿ ಕಥಾಭಾಗಕ್ಕಿಂತ ಅನುಭಾವ್ಯತೆಗೆ ಹೆಚ್ಚು ಪ್ರಾಶಸ್ತ್ಯ. ಅವತಾರಪುರುಷನೂ ಆರಾಧ್ಯದೈವನೂ ಆದ ಶ್ರೀರಾಮಚಂದ್ರನ

ಭಕ್ತಿಯಲ್ಲಿ ಎಲ್ಲರೂ ನಿರಂತರವಾಗಿ ನಿರತರಾಗಬೇಕೆಂಬುದು ಅವರ ಸಂತತವಾದ ಉಪದೇಶ. ಇಲ್ಲಿ ವರ್ಣಿತವಾಗಿರುವ ಧಾರ್ಮಿಕ ಮನೋಭಾವನೆ ಸಾರ್ವತ್ರಿಕವಾಗಿ ಅಂಗೀಕಾರ ಯೋಗ್ಯವಾಗಿರಲಿ ಇಲ್ಲದಿರಲಿ ಅವರ ಕವಿತಾಶಕ್ತಿ ಅನ್ಯಾದೃಶವಾದುದು. ಅದು ಪ್ರಪಂಚದ ಶ್ರೇಷ್ಠ ಕೃತಿಗಳಲ್ಲಿ ಒಂದೆಂದು ನಿರ್ದಾಕ್ಷಿಣ್ಯವಾಗಿ ಹೇಳಬಹುದು. ಇದಕ್ಕಿಂತಲೂ ನಯದಲ್ಲಿಯೂ ಕಲಾಭಿಜ್ಞತೆಯಲ್ಲಿಯೂ ಛಂದೋವೈವಿಧ್ಯದಲ್ಲಿಯೂ ನಾದ ಮಾಧುರ್ಯದಲ್ಲಿಯೂ ಮೀರಿಸಿದ ಗ್ರಂಥ ಇನ್ನೊಂದಿಲ್ಲವೆಂದಲ್ಲ. ಆದರೂ ಇದು ಪ್ರತಿಭಾಶಾಲಿಯ ಉದ್ಘ-ಕೃತಿಯೆನ್ನುವುದರಲ್ಲಿ ಸಂದೇಹವಿಲ್ಲ. ಹಾಗೆಯೇ ತುಳಸೀ ದಾಸರು ವೈಷ್ಣವ ಪಂಥದಲ್ಲಿ ಯಾವ ಒಂದು ಹೊಸ ಶಾಖೆಯನ್ನೂ ಸ್ಥಾಪಿಸಿಲ್ಲ. ಆದರೂ ಆ ಶಾಖೆಯವರ ಮೇಲೆ ಅವರಿಂದಾಗಿರುವ ಪ್ರಭಾವ ಅತ್ಯಮೋಘವಾದುದು.

ರಾಮೋಪಾಸನೆಗೆ ಸಂಬಂಧಪಟ್ಟ ಹಾಗೆಯೇ ತುಳಸೀದಾಸರು 'ರಾಮಗೀತಾ ವಳಿ' 'ದೋಹಾ ರಾಮಾಯಣ್' 'ಕವಿತ್ತಾವಳಿ' ಅಥವಾ 'ಕವಿತ್ತಸಂಬಂಧ' 'ಸತ್‌ಸಯಿ' 'ರಾಮಲಲಾನಹಛೂ' 'ಜಾನಕೀಮಂಗಲ್' 'ಪಾರ್ವತೀಮಂಗಲ್' ಮುಂತಾಗಿ ಹನ್ನೆರಡು ಗ್ರಂಥಗಳನ್ನು ರಚಿಸಿದ್ದಾರೆಂದು ಪ್ರತೀತಿ. ಇವೆಲ್ಲವೂ ಅವ ರಿಂದಲೇ ರಚಿತವಾಗಿರುವುದೆಂದು ಸಾಧಿಸುವುದು ಸ್ವಲ್ಪ ಕಷ್ಟವಾಗುತ್ತದೆ. ಅವರ ಗ್ರಂಥಗಳಲ್ಲೆಲ್ಲ ಅವರ ಕವಿತಾಮುದ್ರೆ ಸ್ಪಷ್ಟವಾಗಿ ಎದ್ದು ಕಾಣುವುದು.

ರಮಾನಂದೀಯರಲ್ಲಿ ತುಳಸೀದಾಸರ ವಿಶೇಷ ಪ್ರಭಾವಕ್ಕೊಳಗಾದವರಲ್ಲಿ 'ಭಕ್ತ ಮಾಲಾ'ಕಾರನಾದ ನಾಭಾದಾಸನೂ ಒಬ್ಬ. ಈತನು ಅಗ್ರದಾಸನ ಶಿಷ್ಯ. ವಲ್ಲಭಪಂಥದ ನಾಯಕನೆಂದು ಕೆಲವರ ಮತ. ನಾಭಾದಾಸನ ಬಾಲ್ಯದಲ್ಲಿ ಒಂದು ಕ್ಷಾಮಬರಲು ಆತನ ತಾಯಿತಂದೆಗಳು ಅವನನ್ನು ಕಾಡಿನಲ್ಲಿ ತೊರೆದರೆಂದೂ ಅಗ್ರ ದಾಸನು ಆತನನ್ನು ಸಾಕಿಸಲಹಿ ವಿದ್ಯಾವಂತನನ್ನಾಗಿ ಮಾಡಿದನೆಂದೂ ಆತನ ಅಪ್ಪಣೆಯ ಮೇಲೆ ನಾಭಾದಾಸನು 'ಭಕ್ತಮಾಲಾ' ಗ್ರಂಥವನ್ನು ರಚಿಸಿದನೆಂದೂ ಪ್ರತೀತಿ. ಈ ಕೃತಿಯು ಪ್ರಾಚೀನ ಪಶ್ಚಿಮ ಹಿಂದಿಯಲ್ಲಿ ಛಪ್ಪಾಯಿ ಛಂದಸ್ಸಿನಲ್ಲಿ ರಚಿತವಾಗಿದೆ. ಪ್ರಾಚೀನರಾದ ರಾಮ ಮತ್ತು ಕೃಷ್ಣಭಕ್ತೀಯರ ಚರಿತ್ರೆ ಇದರಲ್ಲಿ ಉಕ್ತವಾಗಿದೆ. ಒಬ್ಬೊಬ್ಬ ಭಕ್ತನಿಗೆ ಒಂದೊಂದು ಪದ್ಯಮೂಲ ಮಾತ್ರ ಮೀಸ ಲಾಗಿದೆ. ಆದರೂ ಆತನ ವೈಶಿಷ್ಟ್ಯ, ಪೌರಾಣಿಕ ಹಿನ್ನಲೆ, ಉಪದೇಶ ಮಾರ್ಗ ಮೊದ ಲಾದವು ಸಂಗ್ರಹವಾಗಿ ವರ್ಣಿತವಾಗಿವೆ. ಇದರಲ್ಲಿ ಅನೇಕ ಭಕ್ತರ ವರ್ಣನೆಯಿರುವುದ ರಿಂದ ಭಾರತೀಯ ಧಾರ್ಮಿಕ ಚರಿತ್ರೆಯಲ್ಲಿ 'ಭಕ್ತಮಾಲೆ'ಗೆ ವಿಶೇಷ ಸ್ಥಾನವಿದೆ. ಇದು ಬಹು ಕಠಿಣ. ವ್ಯಾಖ್ಯಾನವಿಲ್ಲದಿದ್ದರೆ ಅರ್ಥವೇ ಆಗುವುದಿಲ್ಲ; ಇದು ಉತ್ತರ ದೇಶದ ಅನೇಕ ಭಾಷೆಗಳಿಗೆ ಪರಿವರ್ತಿತವಾಗಿದೆ.

ರಮಾನಂದೀಯ ಪಂಥಕ್ಕೆ ಬಹು ನಿಕಟವಾಗಿ ಸಂಬಂಧಿಸಿರುವ ಮತ್ತೊಂದು ಪಂಥದ ನಾಯಕ ಮಲುಕ್‌ದಾಸ್. ಈ ಪಂಥದವರು ಸಂತ ಅಥವಾ ಸಂನ್ಯಾಸಿಗಳಲ್ಲ. ಮಲುಕ್ ಅಲಹಾಬಾದ್ ಜಿಲ್ಲೆಯ ಕರಾ ಎಂಬಲ್ಲಿ ಜನಿಸಿ, 'ದಾಸರತ್ನ,' 'ಭಕ್ತ ವತ್ಸಲ್' 'ರತ್ನ ಖಾನಾ' ಎಂಬ ಗ್ರಂಥಗಳನ್ನೂ ಕೆಲವು ಬಿಡಿಪದ್ಯಗಳನ್ನೂ ಮುಕ್ತಕ ಗಳನ್ನೂ ರಚಿಸಿದ್ದಾನೆ.

ತುಳಸೀದಾಸರಾದಮೇಲೆ ರಮಾನಂದೀಯ ಪಂಥದಲ್ಲಿ ಅನೇಕ ರಾಮಾಯಣ ಗಳು ರಚಿತವಾಗಿವೆ. ಅವುಗಳಲ್ಲಿ ಮಾನದಾಸನ 'ರಾಮಚರಿತ್ರ' ಈಶ್ವರೀ ಪ್ರಸಾದ್ ತ್ರಿಪಾಠಿಯ 'ರಾಮವಿಲಾಸ ರಾಮಾಯಣ್' ಬಾಲ್ ಅಲಿಯ 'ನೇಹಪ್ರಕಾಶ' ಮತ್ತು 'ಸೀತಾಧ್ಯಾನ ಮಂಜರಿ' ಜಾಂಕ್ ರಸಿಕೀ ಶರಣನ 'ಅವದ್‌ಸಾಗರ್' ಭಗವಂತರಾಯನ 'ರಾಮಾಯಣ್' ಶಂಭುನಾಥನ 'ರಾಮವಿಲಾಸ್' ತುಳುಸೀ ಸಾಹೇಬನ 'ಘಟ ರಾಮಾಯಣ್' ಮಧುಸೂಧನನ 'ರಾಮಾಶ್ವಮೇಧ' ಮನಿ ಯಾರ್ ಸಿಂಗನ 'ಸೌಂದರ್ಯಲಹರಿ' 'ಸುಂದರ ಕಾಂಡ್' 'ಹನುಮಾನ್ ಛಬ್ಬೀಸ್' ಗಣೇಶನ 'ರಾಮಾಯಣ' ಮೊದಲಾದುವು ಮುಖ್ಯವಾದುವು.

ಸಂತಸಾಹಿತ್ಯದ ಜೊತೆಯಲ್ಲಿಯೇ ಅನೇಕ ದೇಶಿಯ ಸಂಸ್ಥಾನಗಳಲ್ಲಿ ಚಾರಣ ಸಾಹಿತ್ಯವೂ ಬೆಳೆಯುತ್ತಾ ಇತ್ತು. ಮೇವಾಡ ಸಂಸ್ಥಾನವೊಂದರಲ್ಲಿಯೇ 'ಜಗತ್ ವಿಲಾಸ್' 'ರಾಜಪ್ರಕಾಶ್' 'ರಾಜದೇವ ವಿಲಾಸ್' 'ರಾಜರತ್ನಾಕರ್' 'ಜಯದೇವ ವಿಲಾಸ್' ಎಂಬ ಅನೇಕ ರಾಜಚರಿತ್ರೆಗಳು ರಚಿತವಾದುವು. ಮಾರ್ವಾಡದಲ್ಲಿ ಮಹಾರಾಜ ಸೂರ್‌ಸಿಂಗನು ಆರು ಮಂದಿ ಕವಿಗಳಿಗೆ ಒಂದೇ ದಿನ ಆರು ಲಕ್ಷ ರೂಪಾಯಿ ಬಹುಮಾನಮಾಡಿದನಂತೆ. ಆತನ ಮತ್ತು ಆತನ ವಂಶೀಕರ ಆಶ್ರಯ ದಲ್ಲಿ ಲಾಲ್ ಮತ್ತು ರಘುನಾಥ ರಾಯ್, ಎಂಬುವರು ತಮ್ಮ ಆಶ್ರಯದಾತರನ್ನು ಕುರಿತ ಕಾವ್ಯಗಳನ್ನು ರಚಿಸಿದ್ದಾರೆ. ಜೋಧ್‌ಪುರದ ಅಜಿತ್‌ಸಿಂಗನು 'ರಾಜರೂಪ ಕಾಖ್ಯಾಯಕ್' ಎಂಬ ಕಾವ್ಯರಚನೆಗೆ ಕಾರಣಕರ್ತೃ. ಆತನ ಮಗನಾದ ಅಭಯ ಸಿಂಗನ ಆಶ್ರಯದಲ್ಲಿ ಕರಣ್ ಎಂಬ ಕವಿಯು ತಾತ್ಕಾಲಿಕ ಚರಿತ್ರಾತ್ಮಕವಾದ 'ಸೂರ್ಯಪ್ರಕಾಶ್' ಎಂಬ ಗ್ರಂಥವನ್ನು ರಚಿಸಿದನು. ೧೭೫೨ ರಿಂದ ೧೭೮೪ರ ವರೆಗೆ ಆಳಿದ ವಿಜಯಸಿಂಗನು ಸ್ವಶೌರ್ಯ ಪ್ರತಿಪಾದಕ ರೂಪವಾಗಿರುವ 'ವಿಜಯವಿಲಾಸ್' ಎಂಬ ಕಾವ್ಯವನ್ನು ಬರೆದನು.

ಇತರ ಸಂಸ್ಥಾನಗಳಲ್ಲಿಯೂ ಸಾಹಿತ್ಯರಚನೆ ವಿಪುಲವಾಗಿ ನಡೆದಿದೆ. ಗಂಭೀರ್ ರಾಯ್ ಎಂಬುವನು ಜಗತ್ಸಿಂಹನಿಗೂ ಷಹಜಹಾನನಿಗೂ ನಡೆದ ಯುದ್ಧವನ್ನು ಕುರಿತು ಗ್ರಂಥವನ್ನು ರಚಿಸಿದ್ದಾನೆ. ಉದಯಸಿಂಹನ ಪ್ರಪೌತ್ರನಾದ ರಾವ್‌ರತನನ ವಿಷಯ

ವಾಗಿ 'ರಾವ್ ರತನ ರಾಯಸಾ' ಎಂಬ ಗ್ರಂಥವಿದೆ. ಜಯಪುರದ ಜಯಸಿಂಗನು 'ಜಯಸಿಂಗ ಕಲ್ಪದ್ರುಮ' ಎಂಬ ಆತ್ಮಕತೆಯನ್ನು ಬರೆದನು. ಛತ್ರಸಾಲಿನ ದೊರೆಯ ಆಶ್ರಯದಲ್ಲಿಯೇ ವಿರ್‍ಯವತ್ತಾದ ಶೈಲಿಯಿಂದ ಕೂಡಿದ ಹರಿಕೇಶ್ ಇದ್ದುದು. ಭರತಪುರದ ಮಹಾರಾಜನಾದ ಸುರಾಜಮಲ್‌ನ ಅಂಕಿತವಾಗಿ ಸೂದನನೆಂಬುವನು 'ಸುಜಾನ ಚರಿತ್ರೆ'ಯನ್ನು ರಚಿಸಿದ್ದಾನೆ. ಮೈಥಿಲೀ ಕವಿಗಳಲ್ಲಿ ಅಗ್ರೇಸರನಾದವನು ಲಾಲ್‌ಝೂ. ಆತನು 'ಕನರ್ಫೀಘಾಟ್ ಲಡಾಯಿ' ಎಂಬ ಯುದ್ಧಗೀತೆಯನ್ನು ತನ್ನ ಪೋಷಕನಾದ ದರ್ಭಾಂಗದ ನರೇಂದ್ರಸಿಂಗನಿಗಾಗಿ ರಚಿಸಿದನು.

ಪನ್ನ ಸಂಸ್ಥಾನದ ಛತ್ರಸಾಲನು ಕವಿಜನಾಶ್ರಯನೂ ಸ್ವಯಂಕವಿಯೂ ಆಗಿದ್ದನು. ಆತನ ಆಸ್ಥಾನ ಕವಿಗಳಲ್ಲಿ ಪ್ರಸಿದ್ಧನಾದವನು ಲಾಲ್ ಕವಿ. ಘೋರೇಲಾಲ್ ಪುರೋಹಿತ್ ಎಂಬುದು ಆತನ ಪೂರ್ಣ ನಾಮಧೇಯ. ಆತನು ಪ್ರಿಯಪ್ರೇಯಸಿಯರ ವಿಷಯಕವಾದ 'ಛತ್ರಪ್ರಕಾಶ್'ವೆಂಬ ಗ್ರಂಥವನ್ನು ರಚಿಸಿದ್ದಾನೆ. ಇದು ಬುಂದೇಲ್ ಖಂಡದ ರಾಜರ ಚರಿತ್ರೆ. ಯುದ್ಧವರ್ಣನೆಗೂ ವೀರರಸ ಪ್ರತಿಪಾದನೆಗೂ ಹೆಸರುವಾಸಿಯಾದುದು.

ಈ ಕಾಲದಲ್ಲಿ ವೇದಾಂತ, ಮತ, ನೀತಿ, ನಿಘಂಟು, ವ್ಯವಸಾಯ, ಖಗೋಳ, ಪಶುವೈದ್ಯ, ಶಸ್ತ್ರವೈದ್ಯ ಮೊದಲಾದ ವಿಷಯಕವಾದ ಶಾಸ್ತ್ರಗ್ರಂಥಗಳು ರಚಿತವಾಗಿವೆ. ಸ್ಥಳಾವಕಾಶವಿಲ್ಲವಾಗಿ ಅವುಗಳ ವಿವರಗಳನ್ನು ಕೈಬಿಡಬೇಕಾಗಿದೆ.

೧೯ ನೆಯ ಶತಮಾನದ ಆದಿಭಾಗದಲ್ಲಿ ಪಾಶ್ಚಾತ್ಯರ ಸಂಸರ್ಗವಾದಮೇಲೆ ಹಿಂದೀ ಸಾಹಿತ್ಯದಲ್ಲಿ ಶೃಂಗಾರಯುಗವು ಮುಗಿದು ಆಧುನಿಕಯುಗ ಪ್ರಾರಂಭವಾಯಿತೆನ್ನಬಹುದು. ಆಗ ಹಿಂದೀ ಸಾಹಿತ್ಯದಲ್ಲಿ ಒಂದು ನವಚೈತನ್ಯ ಮೂಡಿತು. ಹಿಂದಿನ ಶತಮಾನದ ಜಡತ್ವ ಮಾಯವಾಯಿತು. ಭಾರತದಲ್ಲಿ ಬ್ರಿಟಿಷ್ ರಾಜ್ಯವು ಭದ್ರವಾಗಿ ಸ್ಥಾಪಿತವಾಗಿ ದೇಶದ ಆಂತರಿಕವಾದ ಶಾಂತಿ ನೆಲೆಗೊಂಡಿತು. ತಮ್ಮ ರಾಜ್ಯವನ್ನು ಸುಪ್ರತಿಷ್ಠಿತವನ್ನಾಗಿ ಮಾಡುವುದಕ್ಕೂ ತಮ್ಮ ಧರ್ಮವನ್ನು ಭಾರತೀಯರಲ್ಲಿ ಅವ್ಯಾಹತವಾಗಿ ಪ್ರಚಾರ ಮಾಡುವುದಕ್ಕೂ ಆಳರಸರು ಭಾರತೀಯರಿಗೆ ತಮ್ಮ ಇಂಗ್ಲೀಷ್ ಭಾಷೆಯನ್ನು ತಿಳಿಯಪಡಿಸಿದುದಲ್ಲದೆ ದೇಶಭಾಷೆಯಲ್ಲಿಯೇ ಅನೇಕ ಗ್ರಂಥಗಳನ್ನು ಬರೆಸಿದರು. ಮುದ್ರಣಯಂತ್ರವು ಸ್ಥಾಪಿತವಾಗಿ ಹೊಸ ಜ್ಞಾನ ಪ್ರವಾಹವು ಸಾರ್ವಜನಿಕರಲ್ಲಿ ಪ್ರಸರಿಸಲು ಪ್ರಾರಂಭವಾಯಿತು. ಜನರ ಅಂಧಶ್ರದ್ಧೆ ಮಾಯವಾಗಿ ಪಾಶ್ಚಾತ್ಯರ ವಿಚಾರಸರಣಿ ದೇಶೀಯರಲ್ಲಿಯೂ ಅಂಕುರಿಸಿತು. ಇದರ ಫಲವಾಗಿ ದೇಶ ಭಾಷಾಸಾಹಿತ್ಯ ಇತೋಽಪ್ಯತಿಶಯವಾಗಿ ವೃದ್ಧಿಯಾಯಿತು.

ಈ ಕಾರ್ಯದಲ್ಲಿ ಫೋರ್ಟ್ ವಿಲಿಯಂ ಕಾಲೇಜಿನ ಡಾ|| ಜಾನ್ ಗಿಲ್ ಕ್ರೈಸ್ಟನ

ಹೆಸರನ್ನು ಮೊದಲು ನೆನೆಯಬೇಕು. ಆತನು ಆ ಶಾಲೆಯ ಇತರ ಪಂಡಿತರ ಸಹಾಯದಿಂದ ಸರ್ಕಾರಿ ಅಧಿಕಾರಿಗಳ ಉಪಯೋಗಕ್ಕಾಗಿ ಅನೇಕ ಶಾಲಾ ಪುಸ್ತಕಗಳನ್ನೂ ಭಾಷಾಂತರಗಳನ್ನೂ ಸಿದ್ಧಪಡಿಸಿದನು. ಲಲ್ಲೂಜಿಲಾಲ್ ಮತ್ತು ಸದಳಮಿಶ್ರ ಎಂಬುವರಿಂದ ಹೊಸದಾಗಿ ಡೆಲ್ಲಿ ಮತ್ತು ಮೀರತ್ ಪ್ರದೇಶದಲ್ಲಿದ್ದ ಭಾಷೆಯ ಆಧಾರದ ಮೇಲೆ ಉಚ್ಚ ಹಿಂದೀ, ಅಥವಾ ಕಡೀಬೋಲೀ ಎಂಬ ಹೊಸ ಭಾಷಾರೂಪವನ್ನು ಸಿದ್ಧಪಡಿಸಿ ಅದನ್ನೇ ಮುಂದಿನ ಕಾವ್ಯರೂಪವನ್ನಾಗಿ ಅಂಗೀಕರಿಸಿದನು. ಕಾವ್ಯಗಳು ಇನ್ನೂ ವ್ರಜಭಾಷೆಯಲ್ಲಿಯೇ ರಚಿತವಾಗುತ್ತಿದ್ದರೂ ಉಚ್ಚ ಹಿಂದಿಯೂ ಹೊಸ ಗದ್ಯಸಾಹಿತ್ಯದ ಮಾಧ್ಯಮವಾಯಿತು. ಲಲ್ಲೂಜಿ ಲಾಲ್ ಕೃತ 'ಪ್ರೇಮಸಾಗರ' ಎಂಬುದು ಹೊಸಭಾಷೆಯಲ್ಲಿ ರಚಿತವಾದ ಬಹುಜನಪ್ರಿಯವಾದ ಗ್ರಂಥ. ಇದು ಭಾಗವತ ಪುರಾಣದ ಹತ್ತನೆಯಸ್ಕಂಧದ ಹಿಂದೀ ರೂಪಾಂತರ. ವ್ರಜಭಾಷೆಯಲ್ಲಿದ್ದ ಚತುರ್ಭುಜಮಿಶ್ರನ ಗ್ರಂಥದ ಆಧಾರದ ಮೇಲೆ ರಚಿತವಾದುದು. 'ರಾಜನೀತಿ' ಎಂಬುದು ಸಂಸ್ಕೃತದ ಹಿತೋಪದೇಶ ಮತ್ತು ಪಂಚತಂತ್ರಗಳ ಸಮನ್ವಯದಿಂದ ರೂಪಗೊಂಡ ವ್ರಜಭಾಷಾ ಗ್ರಂಥ. 'ಸಿಂಹಾಸನ ಬತ್ತೀಸಿ' ಮತ್ತು 'ಬೈತಾಳ ಪಚೀಸಿ' ಎಂಬುದು ಉರ್ದು ಮತ್ತು ಹಿಂದೀಭಾಷಾ ಮಿಶ್ರವಾದ ಕಥಾಸಂಕಲನ. ಲಲ್ಲೂಜಿಲಾಲನು ಬೀಹಾರಿಲಾಲನ 'ಸತ್‌ಸಯಿಗೆ' 'ಲಾಲ್ ಚಂದ್ರಿಕಾ' ಎಂಬ ವ್ಯಾಖ್ಯಾನವನ್ನು ರಚಿಸಿದ್ದಾನೆ. 'ಸಭಾ ವಿಲಾಸ್' ಎಂಬುದು ಆತನಿಂದಲೇ ಸಂಕಲಿತವಾದ ವ್ರಜಭಾಷಾ ಕಾವ್ಯಗುಚ್ಛ. ಸದಲ ಮಿಶ್ರನು 'ನಾಸಿಕೇತೋಪಾಖ್ಯಾನ'ವೆಂಬ ಉತ್ತಮ ಗದ್ಯಗ್ರಂಥವನ್ನು ರಚಿಸಿದನು. ಇವೆಲ್ಲ ಮುಂದಿನ ಆಧುನಿಕ ಹಿಂದೀಸಾಹಿತ್ಯದ ಮಾರ್ಗದರ್ಶಕಗಳಾದುವು. ಹಾಗೆಯೇ ಸಿರಾಮಪುರದಲ್ಲಿದ್ದ ಕ್ರೈಸ್ತ ಪಾದ್ರಿಗಳ ಕಾರ್ಯವು ಚಿರಸ್ಮರಣೀಯ. ಅಲ್ಲಿದ್ದ ವಿಲಿಯಂ ಕೆರೆ ಮತ್ತು ಅವನ ಅನುಯಾಯಿಗಳು ಕ್ರೈಸ್ತರ ಬೈಬಲ್ಲನ್ನು ಹಿಂದಿಗೆ ಭಾಷಾಂತರ ಮಾಡಿದುದೇ ಅಲ್ಲದೆ ರಾಮಾಯಣವೇ ಮೊದಲಾದ ಪ್ರಾಚೀನ ಗ್ರಂಥಗಳನ್ನು ಆಧುನಿಕ ಗದ್ಯದಲ್ಲಿ ರಚಿಸಿದರು. ಮುದ್ರಣಯಂತ್ರದ ಸಹಾಯದಿಂದ ಇವುಗಳೆಲ್ಲ ಜನಸಾಮಾನ್ಯರಿಗೆ ಬಹು ಸುಲಭವಾಗಿ ದೊರಕಿ ವಿಶೇಷ ಪ್ರಭಾವಯುತವಾದುವು.

ಪ್ರಾರಂಭದಲ್ಲಿ ಉಚ್ಚ ಹಿಂದೀ ಭಾಷೆಯೂ ಕಟುತರವಾದ ವಿಮರ್ಶೆಗೆ ಒಳಗಾಗದಿರಲಿಲ್ಲ. ಪಾರ್ಸಿ ಶಬ್ದಗಳ ಬಾಹುಳ್ಯದಿಂದ ಕೂಡಿದ ಉರ್ದುವಿನಂತೆಯೇ ಸಂಸ್ಕೃತ ಪದ ಭೂಯಿಷ್ಠವಾದ ಉಚ್ಚ ಹಿಂದೀ ಅಥವಾ ಕಡೀಬೋಲಿಯೂ ಸಾರ್ವತ್ರಿಕವಾಗಿ ಸುಬೋಧವಾಗುತ್ತಿರಲಿಲ್ಲ. ಅದಕ್ಕಾಗಿ ಅದರಲ್ಲೂ ಒಂದು ಮಧ್ಯಮಾರ್ಗವನ್ನು ಸಿದ್ಧಪಡಿಸಲು ಹಲವರು ದುಡಿದರು. ಅಂಥವರಲ್ಲಿ ರಾಜಾ ಶಿವಪ್ರಸಾದನೂ ಒಬ್ಬ

ಈತನು ಪ್ರಸಿದ್ಧ ಹಿಂದೀ ಕಬ್ಬಿಗಿತಿಯಾದ ಬೀಬಿರತನ್‌ಕುನ್‌ವಾರಳ ಪೌತ್ರ. ಶಿಕ್ಷಣ ಶಾಲೆಯಲ್ಲಿ ಉನ್ನತಾಧಿಕಾರಿಯಾಗಿದ್ದನು. ಈತನು ಉರ್ದು ಮತ್ತು ಉಚ್ಚ ಹಿಂದೀ ಭಾಷೆಗಳಿಗೆ ಮಧ್ಯಸ್ಥವಾಗಿರುವ ಒಂದು ಜನಪ್ರಿಯವಾದ ಭಾಷೆಯಲ್ಲಿ ಅನೇಕ ಪತ್ಯಪುಸ್ತಕಗಳನ್ನೂ ಭಾಷಾಂತರಗಳನ್ನೂ ಸಿದ್ಧಪಡಿಸಿದ್ದಾನೆ.

ಪಾಶ್ಚಾತ್ಯರ ಸಂಸರ್ಗದಿಂದ ವಿಶೇಷ ಪ್ರಭಾವಿತರಾಗಿ ಆಧುನಿಕ ಸಾಹಿತ್ಯ ಸಾಮ್ರಾಜ್ಯದ ಅಗ್ರಗಾಮಿಗಳಾದವರು ಭಾರತೇಂದು ಹರಿಶ್ಚಂದ್ರರು. ಇವರು ಕಾಶಿಯ ಕ್ವೀನ್ಸ್ ಕಾಲೇಜಿನಲ್ಲಿ ವಿದ್ಯಾಭ್ಯಾಸಮಾಡಿದರು. ತಮ್ಮ ೧೬ನೆಯ ವಯಸ್ಸಿನಲ್ಲಿಯೇ ಸಾಹಿತ್ಯಕ್ಷೇತ್ರದಲ್ಲಿಳಿದು ಸಾಹಿತ್ಯ ಪ್ರಪಂಚದ ನಾನಾ ಮುಖಗಳಲ್ಲಿ ವಿವಿಧ ಶೈಲಿಯಲ್ಲಿ ಭಿನ್ನಭಿನ್ನ ವಿಷಯಿಕವಾಗಿ ಗ್ರಂಥರಚನೆಮಾಡಿದ್ದಾರೆ. ಅವರು ಮಾಡಿರುವ ಕಾರ್ಯವನ್ನು ಒಂದು ಸಂಸ್ಥೆ ಮಾಡಲಾರದು. ಅವರು ಒಟ್ಟು ಸುಮಾರು ೧೭೫ ಗ್ರಂಥಗಳನ್ನು ರಚಿಸಿದ್ದಾರೆ. ಅನೇಕರಿಗೆ ಆಶ್ರಯ ಕೊಟ್ಟು ಗ್ರಂಥರಚನೆ ಮಾಡಿಸಿದ್ದಾರೆ. ಇವರನ್ನು ಆಧುನಿಕ ಹಿಂದೀ ನಾಟಕಗಳ ಜನಕ ಎಂದು ಕರೆಯ ಬಹುದು. ಇಂಗ್ಲೀಷ್, ಬಂಗಾಳಿ ಮತ್ತು ಸಂಸ್ಕೃತಗಳಲ್ಲಿದ್ದ ಉತ್ತಮ ನಾಟಕ ಗಳನ್ನು ಅನುವಾದಮಾಡಿ ರಂಗಭೂಮಿಯ ಮೇಲೆ ಸ್ವತಃ ಅಭಿನಯಿಸಿ ಅವನ್ನು ಜನಪ್ರಿಯವನ್ನಾಗಿ ಮಾಡಿದ್ದಾರೆ. ತಾವೇ ಸ್ವತಃ 'ಸತ್ಯ ಹರಿಶ್ಚಂದ್ರ' 'ನೀಲದೇವಿ' ಮೊದಲಾದ ಸಾಮಾಜಿಕ, ಪೌರಾಣಿಕ, ಕಾಲ್ಪನಿಕ, ವಸ್ತುಗಳಿಂದ ಕೂಡಿದ ಸುಮಾರು ೧೮ ನಾಟಕಗಳನ್ನು ರಚಿಸಿದ್ದಾರೆ. ಇವರ ಗ್ರಂಥಗಳಲ್ಲಿ ಇತಿಹಾಸ, ದೇಶಪ್ರೇಮ, ಧರ್ಮ, ಭಕ್ತಿ, ಶೃಂಗಾರ ವಿಷಯಿಕವಾದ ಗ್ರಂಥಗಳೂ ಹೇರಳವಾಗಿ ಇವರಿಂದ ರಚಿತವಾಗಿವೆ. 'ಕಾಶ್ಮೀರ ಕುಸುಮ' ಎಂಬುದು ಅವರ ಇತಿಹಾಸಗ್ರಂಥ. 'ಚರಿತ್ರಾವಳಿ' ಎಂಬುದು ಪೌರಾಸ್ತ್ಯ ಪಾಶ್ಚಾತ್ಯ ಮಹಾಪುರುಷರ ಜೀವನ ಚರಿತ್ರೆಗಳ ಸಂಗ್ರಹ. ಅವರ ಪ್ರೇಮಗೀತಗಳಂತೂ ಜಗತ್ಪ್ರಸಿದ್ಧವಾಗಿವೆ. ಶಕ್ತಿಯುತವಾದ ಅವರ ಬರವಣಿಗೆಯಲ್ಲಿ ಹಾಸ್ಯಕ್ಕೆ ಪ್ರಧಾನ ಸ್ಥಾನವಿದೆ. ವ್ರಜಭಾಷೆಯಲ್ಲಿಯೇ ವಿಶೇಷವಾಗಿ ಕಾವ್ಯರಚನೆ ಮಾಡಿದ್ದಾರೆ. ಎಲ್ಲದಕ್ಕಿಂತಲೂ ಹಿಂದೀ ಭಾಷಾ ಪ್ರಚಾರಕ್ಕೆ ಅವರು ಮಾಡಿದ ಕಾರ್ಯ ಬಹು ಶ್ಲಾಘನೀಯವಾದುದು. ಅವರು 'ಹರಿಶ್ಚಂದ್ರ ಚಂದ್ರಿಕಾ' ಎಂಬ ಪತ್ರಿಕೆಯನ್ನು ಪ್ರಾರಂಭಿಸಿ ಹಿಂದೀ ಗದ್ಯವಿಕಾಸಕ್ಕೆ ಸಹಾಯಮಾಡಿದ್ದಲ್ಲದೆ ಅದನ್ನು ಜನಪ್ರಿಯವನ್ನಾಗಿಯೂ ಮಾಡಿದರು. ಈ ಪತ್ರಿಕೆಯಲ್ಲಿ ಅನೇಕ ಉತ್ತಮ ಲೇಖಕರ ಬರವಣಿಗೆಗಳು ಪ್ರಚಾರವಾಗಿವೆ. ಅವುಗಳಲ್ಲಿ ಹರಿಶ್ಚಂದ್ರರ 'ಪಾಂಚವೇಂ ಪೈಗಂಬರ್', ಮುಂಷೀ ಜ್ವಾಲಾಪ್ರಸಾದರ 'ಕಲಿರಾಜಕೀ ಸಭಾ' ಬಾಬೂ ತೋತಾರಾಂ ಅವರ 'ಅದ್ಭುತ ಅಪೂರ್ವ ಸ್ವಪ್ನ'ಕಾರ್ತಿಕ ಪ್ರಸಾದರ 'ರೈಲ್‌ಕಾ ವಿಕಟ

ಬೇಲ್' ಮುಂತಾದುವನ್ನು ಹೆಸರಿಸಬಹುದು. ಹರಿಶ್ಚಂದ್ರರು ಪ್ರಾಚೀನ ಗ್ರಂಥಗಳಿಂದ ಸಂಕಲನಗಳನ್ನು ಮಾಡಿದ್ದಾರೆ. ಇವರ 'ಸುಂದರೀತಿಲಕ್' ಎಂಬ ಸಂಕಲನದಲ್ಲಿ ೬೯ ಕವಿಗಳ ಸವೆಯಾಛಂದಸ್ಸಿನ ಪದ್ಯಗಳು ಸಂಗ್ರಹಿತವಾಗಿವೆ. 'ಕವಿಜನ ಸುಧಾ' ಎಂಬುದು ಋತುವರ್ಣನೆಗಳನ್ನು ಕುರಿತ ಸಂಗ್ರಹಗಳು. ಇವರು ಬಹುಕಾಲ ಜೀವಿಸ ಲಿಲ್ಲ. ಆದರೂ ಅವರ ಮತ್ತು ಅವರ ಕಾವ್ಯಗಳ ಪ್ರಭಾವ ಆಧುನಿಕ ಹಿಂದೀ ಸಾಹಿತ್ಯದ ಮೇಲೆ ಅಪಾರವಾಗಿದೆ.

ಹರಿಶ್ಚಂದ್ರಯುಗವೆಂದು ಬಹು ಅನ್ವರ್ಥವಾಗಿ ಕರೆಯಲ್ಪಡುವ ಈ ಯುಗದ ಕಾವ್ಯಗಳಲ್ಲಿ ಕೆಲವು ಸಾಮಾನ್ಯವಾದ ಲಕ್ಷಣಗಳನ್ನು ಕಾಣಬಹುದು. ಮುದ್ರಣಾ ಲಯ ಸ್ಥಾಪನೆ, ಮಧ್ಯಮವರ್ಗದ ಪ್ರಾಶಸ್ತ್ಯ ಮತ್ತು ಅಭಿವೃದ್ಧಿ ಮತ್ತು ಪಾಶ್ಚಾತ್ಯ ಸಂಸ್ಕೃತಿ ವಿಜ್ಞಾನಗಳ ಪರಿಚಯ ಮೊದಲಾದುವುಗಳ ಫಲವಾಗಿ ಹಿಂದೀ ಸಾಹಿತ್ಯ ದಲ್ಲಿ ಸ್ಪಷ್ಟವಾದ ಕೆಲವು ಮಾರ್ಪಾಟುಗಳನ್ನು ಗುರುತಿಸಬಹುದು. ಮೊದಲನೆಯದು ಗದ್ಯದ ಉಗಮ ಮತ್ತು ಅಭಿವೃದ್ಧಿ ; ಅದರ ಶಾಖೆಯಾಗಿಯೇ ಅದರ ವಿವಿಧ ಪ್ರಕಾರ ಗಳಾದ ಪ್ರಬಂಧ, ಕಾದಂಬರಿ ಮತ್ತು ಸಣ್ಣ ಕತೆಗಳ ಬೆಳವಣಿಗೆ. ಸಾಮಾಜಿಕ ಮತ್ತು ಮಾನಸಿಕ ವಿಷಯಗಳನ್ನು ಕಾವ್ಯವಸ್ತುಗಳನ್ನಾಗಿ ಆರಿಸಿಕೊಳ್ಳುವುದು ಎರಡನೆಯದು. ಕವಿಯ ವ್ಯಕ್ತಿತ್ವ ನಿರೂಪಣೆ ಮತ್ತು ಭಾವನಾಮಯವಾದ ಕೃತಿಗಳ ರಚನೆ ಮೂರನೆಯದು. ಸಂಪ್ರದಾಯಮಾರ್ಗವನ್ನು ತ್ಯಜಿಸಿ ಸ್ವಾತಂತ್ರ್ಯ ಮಾರ್ಗವನ್ನು ಆಶ್ರಯಿಸುವುದು ನಾಲ್ಕನೆಯ ಲಕ್ಷಣ. ಇವುಗಳು ಹಿಂದೀ ಭಾಷೆಗೆ ವಿಶೇಷವಾದು ದೇನಲ್ಲ. ಆಧುನಿಕ ಭಾಷೆಗಳಾದ ಬಂಗಾಳಿ, ಮರಾಠಿ, ತೆಲುಗು, ಅಸ್ಸಾಮಿ, ಗುಜರಾತಿ ಮೊದಲಾದ ಯಾವ ಭಾಷೆಯಲ್ಲಾದರೂ ಈ ವೈಶಿಷ್ಟ್ಯವನ್ನು ನೋಡ ಬಹುದು. ಆದುದರಿಂದಲೇ ಬಂಗಾಳದ ಮೈಕೇಲ್‌ಮಧುಸೂದನದತ್, ರಾಮ ಮೋಹನ ರಾಯ್, ಮರಾಠಿಯ ಮಹದೇವಗೋವಿಂದ ರಾನಡೆ, ಮತ್ತು ಕಿರ್ಲೋಸ್ಕರ್ ಮೊದಲಾದವರ ಛಾಯೆಯನ್ನು ಹರಿಶ್ಚಂದ್ರರ ಕಾವ್ಯಗಳಲ್ಲಿ ಕಾಣಬಹುದು. ಮಹಾ ವೀರ ಪ್ರಸಾದ ದ್ವಿವೇದಿಯವರ ಗದ್ಯದಲ್ಲಿ ವಿಷ್ಣುಶಾಸ್ತ್ರಿ ಚಿಪ್ಲಂಕರರ ಪ್ರತಿಬಿಂಬವನ್ನು ಕಾಣಬಹುದು. ಪ್ರೇಮಚಂದರ ಕಾದಂಬರಿಗಳಲ್ಲಿ ಒರಿಸ್ಸದ ಫಕೀರಮೋಹನ ಸೇನಾಪತಿಯವರ ಪ್ರಭಾವವನ್ನು ಗುರುತಿಸಬಹುದು. ಅಜ್ಞೇಯರ ಕಾವ್ಯದಲ್ಲಿ ಬುದ್ಧದೇವಬೋಸರ ಪ್ರತಿಧ್ವನಿಯನ್ನು ಕೇಳಬಹುದು. ರವೀಂದ್ರರ ಪ್ರತ್ಯಕ್ಷ ಪ್ರಭಾವಕ್ಕಂತು ಒಳಗಾಗದ ಆಧುನಿಕ ಭಾಷಾ ಸಾಹಿತ್ಯವೇ ಇಲ್ಲವೆಂದು ಹೇಳ ಬಹುದು.

ಆದರೂ ಆಧುನಿಕ ಹಿಂದೀ ಸಾಹಿತ್ಯಕ್ಕೆ ವೈಶಿಷ್ಟ್ಯವಿಲ್ಲದೇ ಇಲ್ಲ. ಇತರ ಸಾಹಿತ್ಯ

ದಂತಲ್ಲದೆ ಆಧುನಿಕ ಹಿಂದೀ ಸಾಹಿತ್ಯವು ಮಧ್ಯಮ ವರ್ಗದವರಿಂದಲೇ ಬೆಳೆದುಬಂದಿದೆ. ಹಿಂದಿನಿಂದ ಅನುಸ್ಯೂತವಾಗಿ ನಡೆದುಬಂದ ಸಂಪ್ರದಾಯಮಾರ್ಗಕ್ಕೆ ಶರಣು ಹೊಡೆದು ಸ್ವಾತಂತ್ರ್ಯಮಾರ್ಗವನ್ನವಲಂಬಿಸಿ ಇಂಗ್ಲೀಷ್ ಸಾಹಿತ್ಯದ ಸ್ವತಂತ್ರ ಮಾರ್ಗಾನುಯಾಯಿಗಳಾದ ವರ್ಡ್ಸ್‌ವರ್ತ್ ಷೆಲ್ಲಿ, ಕೀಟ್ಸ್ ಮೊದಲಾದವರನ್ನೂ ಯೂರೋಪಿನ ಕಾವ್ಯಮೀಮಾಂಸಕರಾದ ಅರಿಸ್ಟಾಟಲ್, ಪ್ಲೇಟೋ, ಡ್ರೈಡನ್, ಎಡಿಸನ್, ಮಾಥ್ಯೂ ಆರ್ನಾಲ್ಡ್, ಆಬರ್‌ಕ್ರಾಂಬೆ, ರಿಚರ್ಡ್ಸ್, ಕ್ರೋಷೆ, ಬ್ರಾಡ್ಲೆ ಫ್ರಾಯ್ಡ್ ಮೊದಲಾದವರನ್ನು ಪರಿಚಯಮಾಡಿಕೊಂಡು ಅದರ ಪರಿಣಾಮವಾಗಿ ಛಾಯಾವಾದ, ರಹಸ್ಯವಾದ, ಸ್ವಚ್ಛಂದವಾದ, ಪ್ರಗತಿವಾದ, ಸಾಮ್ಯವಾದ ಮುಂತಾದ ವಾದವಿಶೇಷಗಳನ್ನೊಳಗೊಂಡಿದೆ. ಜನಸಾಮಾನ್ಯದ ಸಾಹಿತ್ಯವಾದುದ ರಿಂದ ಅವರ ಕಷ್ಟನಷ್ಟಗಳ ವಾಸ್ತವ ಚಿತ್ರಗಳಿಂದ ಕೂಡಿದೆ. ಆದುದರಿಂದಲೇ ಆ ಸಾಹಿತ್ಯವು ಮಹಾತ್ಮಾಗಾಂಧೀಜಿಯವರಿಗೆ ಬಹಳ ಪ್ರಿಯವಾಗಿ ಮುಂದೆ ಸ್ವಾತಂತ್ರ್ಯಸಮರದಲ್ಲಿ ಒಂದು ಪ್ರಬಲಸಾಧನೆಯಾಗಿ ಉಪಯುಕ್ತವಾಯಿತು.

ಭಾರತೇಂದು ಯುಗದ ಆದಿಭಾಗದಲ್ಲಿ ಕೆಲಸಮಾಡಿದವರು ಲಾಲಾ ಶ್ರೀನಿವಾಸ ದಾಸ್, ಪ್ರತಾಪನಾರಾಯಣ ಮಿಶ್ರ, ಬಾಲಕೃಷ್ಣಭಟ್ಟ, ಬದರೀನಾರಾಯಣ ಚೌಧುರಿ ಮೊದಲಾದವರು. ಇವರು ಸಾಹಿತ್ಯಕ್ಷೇತ್ರದಲ್ಲಿ ಸಾಹಸದಿಂದ ಮುನ್ನುಗ್ಗಿ ಹೊಸಮಾರ್ಗಗಳಲ್ಲಿ ಕೆಲಸಮಾಡಿ ಆದರೂ ಹಳೆಯದನ್ನು ಪೂರ್ಣವಾಗಿ ತ್ಯಜಿಸದೆ ಜನಸಾಮಾನ್ಯಕ್ಕೆ ಅರ್ಥವಾಗುವ ಒಂದು ಸ್ವತಂತ್ರವಾದ ಭಾಷಾ ಶೈಲಿಯನ್ನು ಉಪಯೋಗಿಸಿಕೊಂಡು ಸುಧಾರಕ ಮನೋಭಾವವಿದ್ದರೂ ಪ್ರಾಚೀನ ಸಂಪ್ರದಾಯ ಗಳ ವಾಸ್ತವವಾದ ಬೆಲೆಯನ್ನು ಅಲ್ಲಗಳೆಯದೆ ಮಧ್ಯವರ್ತಿಗಳಾಗಿ ಕೆಲಸಮಾಡಿದರು.

ಇಪ್ಪತ್ತನೆಯ ಶತಮಾನದ ಆದಿಭಾಗದ ವೇಳೆಗೆ ಆಧುನಿಕ ಹಿಂದಿಯ ಎರಡನೆಯ ಮೆಟ್ಟಲು ಆರಂಭವಾಯಿತೆನ್ನಬಹುದು. ಈ ಯುಗವು ಮಹಾವೀರ ಪ್ರಸಾದ ದ್ವಿವೇದಿಗಳ ಪ್ರಭಾವಕ್ಕೊಳಗಾದುದರಿಂದ ಈ ಯುಗವನ್ನು ದ್ವಿವೇದೀ ಯುಗವೆಂದು ಕರೆಯಬಹುದು. ಈ ಯುಗದ ಹಿಂದೀ ಸಾಹಿತ್ಯದಲ್ಲಿ ಒಂದು ವಿಚಾರಪರತೆಯನ್ನೂ ಗಾಂಭೀರ್ಯವನ್ನೂ ಉದಾತ್ತತೆಯನ್ನೂ ಕಾಣಬಹುದು. ಉಪಯುಕ್ತತೆ ಸಾಹಿತ್ಯ ರಚನೆಯ ಪ್ರಧಾನ ಧ್ಯೇಯವಾಗಿ ಅಂಗೀಕೃತವಾಯಿತು. ಆದುದರಿಂದಲೇ ಆ ಕಾಲ ದಲ್ಲಿ ಅರ್ಥಶಾಸ್ತ್ರ, ಶಿಕ್ಷಣಶಾಸ್ತ್ರ, ರಾಜ್ಯಶಾಸ್ತ್ರ ಮೊದಲಾದುವು ವಿಶೇಷವಾಗಿ ಬೆಳೆದುವು. ದ್ವಿವೇದಿಗಳು 'ಸರಸ್ವತಿ'ಯೆಂಬ ಮಾಸಪತ್ರಿಕೆಯ ಸಂಪಾದಕರಾಗಿ ಆ ಮೂಲಕ ಆಧುನಿಕ ಹಿಂದೀ ಸಾಹಿತ್ಯದ ಜನಕರೇ ಆದರು. ಅವರ ಪ್ರತ್ಯಕ್ಷ ಅಥವಾ ಪರೋಕ್ಷ ಪ್ರಭಾವದಿಂದ ಮೈಥಿಲೀಶರಣಗುಪ್ತ ಮತ್ತು ಅಯೋಧ್ಯಸಿಂಹ

ಉಪಾಧ್ಯಾಯ (ಹರಿಯೌದ್) ಮೊದಲಾದವರ ಉದ್ಬೋಧಕವಾದ ಕವನರಾಶಿಗಳೂ, ಕಿಶೋರಿಲಾಲ್ ಗೋಸ್ವಾಮಿಯಂತವರ ಅಸಂಖ್ಯಾತವಾದ ಕತೆ ಕಾದಂಬರಿಗಳೂ ಮಿಶ್ರಬಂಧುಗಳ ಸಂಶೋಧನಾತ್ಮಕ ವಿಮರ್ಶೆಗಳೂ ತಲೆದೋರಿದುವು. ಇವಕ್ಕನು ಗುಣವಾಗಿಯೇ ಇವುಗಳಿಗೆ ಹೊಂದಿಕೊಳ್ಳುವ ಒಂದು ಶುದ್ಧ ಹಿಂದೀ ಭಾಷಾ ಸಂಪ್ರದಾಯವೂ ಬೆಳೆಯುತ್ತಾ ಬಂದಿತು. ಆದರೂ ಈ ಕಾಲದ ಗ್ರಂಥಗಳು ಅತ್ಯುಚ್ಚಮಟ್ಟಕ್ಕೇರದೆ ಮಧ್ಯಮ ಮಟ್ಟಕ್ಕೇ ಸೇರಿದುವೆಂದು ಹೇಳಬಹುದು.

ಹಿಂದೀ ಸಾಹಿತ್ಯಕ್ಕೆ ನಿಜವಾದ ಜೀವಕಳೆ ಬಂದುದು ಮಹಾತ್ಮಾ ಗಾಂಧಿಯವರ ಸಂಬಂಧ ಪಡೆದಮೇಲೆ. ಇದು ಆಧುನಿಕ ಹಿಂದೀ ಸಾಹಿತ್ಯದ ಮೂರನೆಯ ಕಾಲ. ಸುಮಾರು ೧೯೨೦ ರಿಂದ ೧೯೩೭ ರ ವರೆಗೆ. ದೇಶಾಭಿಮಾನವೂ ಸ್ವಾತಂತ್ರ್ಯಪ್ರಿಯತೆಯೂ ಹಿಂದೀ ಬರೆಹಗಾರರಲ್ಲಿ ಹೊಸ ಉತ್ಸಾಹವನ್ನೂ ಭಾವನಾಮಯತೆಯನ್ನೂ ವ್ಯಕ್ತಿತ್ವವನ್ನೂ ಉಂಟುಮಾಡಿತು. ಛಾಯಾವಾದಿಗಳೆಂಬ ಒಂದು ಹೊಸ ಪಂಥವೇ ಪ್ರಾರಂಭವಾಯಿತು, ಸುಮಿತ್ರಾನಂದನಪಂತ್, ಜಯಶಂಕರ ಪ್ರಸಾದ್, ಸೂರ್ಯಕಾಂತ ತ್ರಿಪಾಠಿ, ನಿರಾಲ, ಮಹಾದೇವ ವರ್ಮ ಮೊದಲಾದವರು ಈ ಮಾರ್ಗಾನುಯಾಯಿಗಳು. ಇದೇ ಕಾಲದಲ್ಲಿ ಮಾಕನ್ ಲಾಲ್ ಚತುರ್ವೇದಿಗಳ ನೇತೃತ್ವದಲ್ಲಿ ಯುವಕರ ತಂಡವೊಂದು ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಿ ಬಹು ಶಕ್ತಿಯುತವಾದ ಸಾಹಿತ್ಯನಿರ್ಮಾಣಕ್ಕೆ ಕಾರಣವಾಯಿತು. ಸುಭದ್ರಾ ಕುಮಾರಿ ಚೌಹಾನ್, ಬಾಲಕೃಷ್ಣ ಶರ್ಮಾ ನವೀನ್ ಮತ್ತು ದಿನಕರ್ ಮೊದಲಾದವರು ಈ ತಂಡದಲ್ಲಿ ಮುಖ್ಯರಾದವರು.

ಈ ಕಾಲದಲ್ಲಿಯೇ ಉದ್ದಾಮ ಕಾದಂಬರೀಕಾರರಾದ ಪ್ರೇಮಚಂದ್ರರೂ, ಶ್ರೇಷ್ಠ ವಿಮರ್ಶಕರಾದ ರಾಮಚಂದ್ರ ಶುಕ್ಲರೂ, ಸುಪ್ರಸಿದ್ಧ ನಾಟಕಕಾರರಾದ ಜಯಶಂಕರ ಪ್ರಸಾದರೂ ತಮ್ಮ ಕೃತಿಗಳನ್ನು ನಿರ್ಮಾಣಮಾಡಿದುದು. ಈ ಕಾಲದ ಹಿಂದೀ ಸಾಹಿತ್ಯದ ವೈವಿಧ್ಯವೂ ಭಾವನಾಪೂರ್ಣತೆಯೂ ವಾಸ್ತವಿಕತೆಯೂ ಸ್ವಾತಂತ್ರ್ಯಪ್ರಿಯತೆಯೂ ಎಂತಹವರನ್ನೂ ಮುಗ್ಧರನ್ನಾಗಿಸುತ್ತದೆ.

ಹಿಂದೀ ಕಾದಂಬರಿಯು ಪ್ರೇಮಚಂದ್ರರ ಕಯ್ಯಲ್ಲಿ ಬಹು ಶೀಘ್ರವಾಗಿ ಪೂರ್ಣತೆಯನ್ನು ಪಡೆಯಿತು. ಅವರ 'ಗೋದಾನ್' ಪ್ರಪಂಚದ ಉತ್ತಮ ಕಾದಂಬರಿಗಳಲ್ಲೊಂದೆಂದು ಹೇಳಬಹುದು. ಇವರು ಸುಪ್ರಸಿದ್ಧ ಬಂಗಾಳಿ ಕಾದಂಬರೀಕಾರರಾದ ಶರತ್‌ಚಂದ್ರರನ್ನೂ ಒಂದು ಕೈ ಮೀರಿಸಿದ್ದಾರೆಂದು ಹೇಳಬಹುದು. ಶರತ್‌ಚಂದ್ರರು ವ್ಯಕ್ತಿಗತವಾದ ಒಳತೋಟಿಯನ್ನು ಚಿತ್ರಿಸುವುದರಲ್ಲಿ ಶಕ್ತರೆಂಬುದು ಸರ್ವವಿದಿತವಾದ ವಿಷಯ. ಪ್ರೇಮಚಂದ್ರರು ಇನ್ನೂ ಆಳವಾದ

ಹೃದಯವೇದನೆಯನ್ನೂ ಭಾವಗಳ ತುಮುಲಗಳನ್ನೂ ಚಿತ್ರಿಸಲು ಸಮರ್ಥರು. ಇದಕ್ಕೆ ಅವರಿಗೆ ತಾವು ಸೃಷ್ಟಿಸುತ್ತಿದ್ದ ಪಾತ್ರಗಳ ಪ್ರತ್ಯಕ್ಷ ಪರಿಚಯವೂ ಅವರಿಗಿದ್ದ ವಿಭಜನಾತ್ಮಕ ಸರಳ ಶೈಲಿಯೂ ಕಾರಣ. ಅವರ ಕಾದಂಬರಿಗಳಲ್ಲಿ ಒಂದು ಸ್ಪಷ್ಟ ಆದರ್ಶವೂ ವಾಸ್ತವಿಕವಾದ ವರ್ಣನಾ ವೈಭವವೂ ಸಾರ್ವತ್ರಿಕವಾದ ಭಾಷಾ ಸರಳತೆಯೂ ಎದ್ದು ಕಾಣುವುವು. ಅವು ದೇಶಕಾಲಗಳ ಸಾಮಾಜಿಕ ರಾಜಕೀಯ ಜೀವನದ ಪ್ರತಿಬಿಂಬದಂತಿವೆ. ಇದೇ ಮಾರ್ಗದಲ್ಲಿ ಜಯಶಂಕರ್ ಪ್ರಸಾದ್, ಉಪೇಂದ್ರನಾಥ್ ಅಶ್ಕ್, ಬೇಚನ ಶರ್ಮಾ, ಉಗ್ರ ಮೊದಲಾದವರು ಉತ್ತಮ ಸಾಮಾಜಿಕ ಮತ್ತು ಐತಿಹಾಸಿಕ ಕಾದಂಬರಿಗಳನ್ನು ರಚಿಸಿ ಹಿಂದೀ ಸಾಹಿತ್ಯವನ್ನು ಸುಪುಷ್ಟವನ್ನಾಗಿ ಮಾಡಿದ್ದಾರೆ.

ರಾಮಚಂದ್ರ ಶುಕ್ಲರ ಮಾರ್ಗವೇ ಬೇರೆ. ಅವರದು ಪ್ರೌಢವೂ ಅಧಿಕಾರ ಯುತವೂ ಆದ ವಿಮರ್ಶನ ಮಾರ್ಗ. ಇವರು ಹಿಂದೀ ಸಾಹಿತ್ಯವನ್ನು ಕುರಿತ ಅನೇಕ ಪ್ರೌಢ ನಿಬಂಧ ಗ್ರಂಥಗಳನ್ನೂ ವಿಮರ್ಶೆಗಳನ್ನೂ ರಚಿಸಿದ್ದಾರೆ. ಇವರ ಪ್ರೌಢ ಪ್ರಬಂಧಗಳು ಪ್ರಪಂಚದ ಯಾವ ಉತ್ತಮ ಪ್ರಬಂಧದೊಡನೆಯಾದರೂ ಸರಿತೂಗ ಬಲ್ಲವು. ಇವರ ಕಾರ್ಯವನ್ನು ಹಸಾರಿಪ್ರಸಾದದ್ವಿವೇದಿ ಬಹು ಯಶಸ್ವಿಯಾಗಿ ಮುಂದುವರಿಸಿದ್ದಾರೆ. ಇದೇ ಕ್ಷೇತ್ರದಲ್ಲಿ ರಘುವೀರ್, ರಾಮಕುಮಾರವರ್ಮ, ಇಲಾಚಂದ್ರಜೋಷಿ, ಮಹಾದೇವಿವರ್ಮ, ಜವಹರಲಾಲ್‌ನೆಹರೂ, ಮದನ ಮೋಹನಮಾಳವಿಯ, ರಾಜೇಂದ್ರಪ್ರಸಾದ್ ಮುಂತಾದವರ ಭಾವನಾತ್ಮಕ ನಿಬಂಧಗಳೂ ವ್ಯಾಖ್ಯಾನಾತ್ಮಕ ನಿಬಂಧಗಳೂ ಸ್ಮರಣೀಯವಾಗಿವೆ.

ಪ್ರೇಮಚಂದ್ರ ಮತ್ತು ಶುಕ್ಲರಂತೆಯೇ ಜಯಶಂಕರ ಪ್ರಸಾದರು ನಾಟಕ ಕ್ಷೇತ್ರದಲ್ಲಿ ಹೊಸಯುಗವೊಂದನ್ನು ಸ್ಥಾಪಿಸಿದ್ದಾರೆ 'ಸ್ಕಂದಗುಪ್ತ,' 'ಚಂದ್ರಗುಪ್ತ' 'ಅಜಾತಶತ್ರು' ಮುಂತಾದ ನಾಟಕಗಳಲ್ಲಿ ಪೌರಸ್ತ್ಯರ ಪರಿಪಾಕವನ್ನೂ ಪಾಶ್ಚಾತ್ಯರ ವ್ಯಕ್ತಿವೈಶಿಷ್ಟ್ಯ ಮತ್ತು ಒಳತೋಟಿಗಳನ್ನೂ ಕಾಣಬಹುದು. ಇವರು ಹಿಂದೀ ನಾಟಕಪ್ರಪಂಚದಲ್ಲಿ ಉದ್ದಾಮ ವ್ಯಕ್ತಿಗಳು. ಹರಿಶ್ಚಂದ್ರರ ಭಾವನಾ ಮಾರ್ಗವನ್ನು ಮುಂದುವರಿಸಿ ಅದಕ್ಕೆ ಇನ್ನೂ ಆಳವಾದ ಅನುಭಾವತೆಯನ್ನುಂಟುಮಾಡಿದರು. ಇವರ ಮಾರ್ಗದಲ್ಲಿಯೇ ಕೆಲಸಮಾಡಿದವರು ಜೈನೇಂದ್ರಕುಮಾರ್, ಲಕ್ಷ್ಮೀ ನಾರಾಯಣ ಮಿಶ್ರ, ಅಶ್ಕ್ ಮತ್ತು ರಾಮಕುಮಾರವರ್ಮ ಮೊದಲಾದವರು.

ಇತ್ತೀಚೆಗೆ ಹಿಂದೀ ಸಾಹಿತ್ಯದಲ್ಲಿ ಪ್ರಗತಿಶೀಲಪಂಥ, ಪ್ರಯೋಗಶೀಲಪಂಥ ಗಳೇ ಮೊದಲಾದ ಅನೇಕ ಪಂಥಗಳು ಪ್ರಾರಂಭವಾಗಿವೆ. ಈ ಪಂಥಗಳವರು ಬಹು ಮುಖವಾಗಿ ಕೆಲಸಮಾಡಿ ಜನಸಾಮಾನ್ಯದ ಮೇಲೆ ವಿಶೇಷ ಪ್ರಭಾವನ್ನುಂಟುಮಾಡು

ತ್ತಿದ್ದಾರೆ. ಅವರ ಕೃತಿಗಳಲ್ಲಿ ಪ್ರಪಂಚದ ಎಲ್ಲ ಸಾಹಿತ್ಯಗಳ ಪ್ರಭಾವಗಳನ್ನೂ ಕಾಣಬಹುದು. ಯಶಪಾಲ್, ಅಶ್ಕ್, ರಾಹುಲ ಸಾಂಕೃತ್ಯಾಯನ ಮೊದಲಾದವರು ಪ್ರಗತಿಶೀಲ ಪಂಥದ ಪ್ರಧಾನ ವ್ಯಕ್ತಿಗಳೂ 'ಅಜ್ಞೇಯ'ರು ಪ್ರಯೋಗವಾದಿಗಳ ನಾಯಕರೂ ಆಗಿದ್ದಾರೆ. ಇವರೆಲ್ಲರೂ ವಿವಿಧಕ್ಷೇತ್ರಗಳಲ್ಲಿ ಹೊಸ ಪ್ರಯೋಗಗಳನ್ನು ನಡೆಸಿ ಬೆಳಕು ಬಂದ ಕಡೆಗಳಿಂದೆಲ್ಲಾ ವಿಷಯಸಂಗ್ರಹಣ ಮಾಡಿ ಬಹು ಉದ್ಬೋಧಕವಾದ ಕೃತಿಗಳನ್ನು ರಚಿಸಿದ್ದಾರೆ.

ಆಧುನಿಕ ಯುಗದ ಕಾರ್ಯಗಳು ಬಹುಮುಖವಾಗಿವೆ. ಪ್ರೇರಕಶಕ್ತಿಗಳು ವಿವಿಧವಾಗಿವೆ. ಸಹಾಯಕ ಸಾಮಗ್ರಿಗಳು ವಿಪುಲವಾಗಿವೆ. ನಾಗರೀ ಪ್ರಚಾರಿಣೀ ಸಭಾ, ದಕ್ಷಿಣ ಭಾರತ ಹಿಂದೀ ಸಭಾ ಮೊದಲಾದ ಸಂಸ್ಥೆಗಳು ಸ್ಥಾಪಿತವಾಗಿ ಪ್ರೋತ್ಸಾಹಿಸುತ್ತಿವೆ. ಹಿಂದೀ ಭಾಷಾ ಸಾಹಿತ್ಯ ಸಮ್ಮೇಳನಗಳು ವರ್ಷ ವರ್ಷವೂ ನಡೆದು ಕಾರ್ಯರೂಪವನ್ನು ನಿಷ್ಕರ್ಷಿಸುತ್ತಿವೆ. ಹಿಂದೀ ಭಾಷೆಯು ಶಾಲಾ ತರಗತಿಗಳಲ್ಲಿ ಮಾಧ್ಯಮವಾಗಿ ಅಂಗೀಕೃತವಾಗಿರುವುದಲ್ಲದೆ ರಾಷ್ಟ್ರಭಾಷೆಯಾಗಿರಬೇಕೆಂದೂ ತಿರ್ಮಾನವಾಗಿದೆ. ಕತೆ, ಕಾದಂಬರಿ, ಸಣ್ಣಕತೆ, ಪ್ರಬಂಧ, ವಿಮರ್ಶೆ, ಶಾಸ್ತ್ರಸಾಹಿತ್ಯ, ವಿಜ್ಞಾನ, ಪತ್ರಿಕಾ ಪ್ರಪಂಚ ಮೊದಲಾದ ಕ್ಷೇತ್ರಗಳಲ್ಲಿ ಅಮೋಘವಾದ ಕೆಲಸ ನಡೆದಿದೆ, ನಡೆಯುತ್ತಿದೆ. ಆಧುನಿಕ ಭಾರತೀಯ ಭಾಷೆಗಳಲ್ಲಿ ಹಿಂದಿಗೆ ಬಹು ಉಜ್ವಲವಾದ ಭವಿಷ್ಯವಿದೆಯೆನ್ನುವುದರಲ್ಲಿ ಸಂದೇಹವಿಲ್ಲ.

ಎನ್. ಅನಂತರಂಗಾಚಾರ್

ಓಂ ತತ್ಸತ್

ಪ್ರಮಾಣ ಕೋಶಗಳು

History of Hindi Literature—GREAVES, E.

History of Hindi Literature (Heritage of India Series)—KEAY, F. E.

History of Hindi Literature (Banaras)—DWIVEDI, R. A.

Modern Hindi Literature (Lahore 1939)—MADAN, I. N.

Kabir and His Followers (Calcutta, 1931)—KEAY, F. E.

Kabir and the Kabir Panth—BESKAR, J. H.

An Outline of the Religions Literature of India—FARGUHAR, J. N.

Literatures in Modern Indian Languages—Ed. V. K. GOKAK.

Contemporary Indian Literature—SAHITYA AKADEMI, NEW DEHLI.

ನಮ್ಮ ಭಾಷಾಸಾಹಿತ್ಯ—ಭಾರತೀರಮಣಾಚಾರ್, ಎಂ.ಎ.

ವಸ್ತುಕೋಶ*

ಇಂದಿನ ಮಾನವಧರ್ಮ ಸಂಧಿಕಾಲದ ಧರ್ಮವಾಗಿದೆ. ಹತ್ತು-ಹನ್ನೆರಡು ವರ್ಷಗಳ ಹಿಂದೆ ಅಸ್ತಿತ್ವದಲ್ಲಿ ಬಂದ ಅಣುಯುಗ ಇಂದು ಮರೆಯಾಗಿ ಸ್ಪುಟ್‌ನಿಕ್ ಯುಗಕ್ಕೆ ಎಡೆ ಮಾಡಿಕೊಟ್ಟಿದೆ. ವಿಜ್ಞಾನದ ಅದ್ಭುತ ಪ್ರಗತಿಯನ್ನು ನೋಡಿ ಅದರ ತಾಯಿಯಾದ ಮಾನವಬುದ್ಧಿಗೇ ತಾನು ಪ್ರಳಯಕಾರಿಣಿಯಾದೆನೆಂದೆನಿಸತೊಡಗಿದೆ. ವಿಶ್ವಸಾಗರದಲ್ಲಿ ಪಾರ್ಥಿವಸೃಷ್ಟಿಯೊಂದು ತರಂಗ. ಈ ತರಂಗದ ತುದಿಯೇ ಮಾನವ. ಆದರೆ ತರಂಗವು ತುದಿಯಲ್ಲಿಯೇ ಒಡೆದು ವಿನಾಶವನ್ನೈದುವಂತೆ ಮಾನವಬುದ್ಧಿ ವಿನಾಶಕಾಲದ ವಿಪರೀತಬುದ್ಧಿಯಾಗಿ ಪರಿಣಮಿಸಿದೆ. ಮಂಗಳಲೋಕದ ಅಂಗಳಕ್ಕೇರಿದರೂ ಅಷ್ಟೆ. ಚಂದ್ರಲೋಕದಲ್ಲಿ ಇಂದ್ರೋಲಗವನ್ನು ಸೇರಿಸಿದರೂ ಅಷ್ಟೆ. ರಷ್ಯ—ಅಮೇರಿಕೆಗಳಿಗಾಗಲಿ ಇನ್ನಾವ ಪ್ರಬಲರಾಷ್ಟ್ರಗಳ ನಡುವಾಗಲಿ ಕಲಹ ತಪ್ಪಿದ್ದಲ್ಲ. ಶೀಲವನ್ನು ಸಂವರ್ಧಿಸಿಕೊಳ್ಳದೆ ಗೋಲವನ್ನು ಸುತ್ತಿ ಫಲವೇನು? ರವಿಯನ್ನು ಸುತ್ತುವ ಪೃಥ್ವಿ, ಕವಿಮಾತ್ರ ಕಂಡ ಶಸ್ತ್ರಾಸ್ತ್ರಗಳ ಯೋಜನೆ-ಪ್ರತಿಯೋಜನೆಗಳನ್ನು ಅನುಭವಿಸತೊಡಗಿದ್ದಾಳೆ. ಇದೆಲ್ಲ ಏತಕ್ಕಾಗಿ? ಮನುಕುಲದ ಸಂಹಾರಕ್ಕಾಗಿ! ಒಬ್ಬರನ್ನೊಬ್ಬರು ಕೊಂದು ಎಲ್ಲರೂ ಇಲ್ಲದಾಗುವದಕ್ಕಾಗಿ!

ಆದರೆ ವಿಜ್ಞಾನದ ಅದ್ಭುತಗಳಿಗೆ ಬೇರೆ ಗುರಿಯಿದೆ. ಅದನ್ನು ಗುರುತಿಸದೆ ಮಾನವಬುದ್ಧಿ ತನ್ನ ಕೈವಾಡದ ಸಿಡಿಲನ್ನು ತಾನೇ ನುಂಗಿ ಪೇಚಾಡುತ್ತಲಿದೆ. ಬರಲಿರುವ ಕ್ರಾಂತಿ ಇದರಿಂದ ನಮ್ಮೆದುರು ಇನ್ನಿಷ್ಟು ಸ್ಫುಟವಾಗಿ ನಿಂತಿದೆ. ವಿಜ್ಞಾನದ ಮಂಥನದಲ್ಲಿ ಹುಟ್ಟಿದ ಈ ಅದ್ಭುತಗಳನ್ನು ಯೋಜಿಸುವದು ಏತಕ್ಕಾಗಿ? ಮಾನವನ ಐಷಾರಾಮಿಗೋ ಇಲ್ಲವೆ ಅವನ ತಿಳುವಳಿಕೆಯ ವಿಕಾಸಕ್ಕೋ? ಸ್ವಪ್ರತಿಷ್ಠೆಗೋ ಇಲ್ಲವೆ ಜಿಜ್ಞಾಸೆಯ ತೃಪ್ತಿಗಾಗಿಯೋ? ಅಹಂಕಾರದ ಅಹಮಹಮಿಕೆಗಾಗಿಯೋ ಇಲ್ಲವೆ ವಿಶ್ವವನ್ನು ಏಕವ್ಯಾಪಿಯಾಗಿ ತುಂಬಿದ ಓಂಕಾರದ ಪ್ರತಿಪಾದನೆಗಾಗಿಯೋ? ಸ್ವಾರ್ಥವು ಬೆಳೆಯಲೆಂದೋ ಇಲ್ಲವೆ ಪರಮಾರ್ಥವು ಬೆಳಗಲೆಂದೋ? ಈ ಪ್ರಶ್ನೆಗಳಿಗೆ ಉತ್ತರವೀಯದೆ ಮಾನವನು ಒಂದಡಿಯನ್ನೊ ಮುಂದಿಡಲಾರ; ನಿಂತಲ್ಲಿಯೂ ನಿಲ್ಲಲಾರ. ಸ್ವಾರ್ಥವನ್ನು ತೊರೆದು ಅವನು

* ಬಳ್ಳಾರಿಯಲ್ಲಿ ನಡೆದ ನಲವತ್ತನೆಯ ಕನ್ನಡ ಸಾಹಿತ್ಯ ಸಮ್ಮೇಲನದ ಅಧ್ಯಕ್ಷ ಭಾಷಣದಿಂದ ಆಯ್ದ ಮುಖ್ಯಾಂಶಗಳು.

ಸರ್ವಾರ್ಥವನ್ನು ಪಟ್ಟಗಟ್ಟಬೇಕು. ಅಹಂಕಾರವನ್ನು ಮೆಟ್ಟಿ ಆತ್ಮದ ಶ್ರೀಕಾರದತ್ತ ಒಯ್ಯುವ ದಾರಿಯನ್ನು ತುಳಿಯಬೇಕು. ಈ ನಿರ್ಣಯವನ್ನು ಸ್ವೀಕರಿಸದಿದ್ದರೆ ಅವನು ಹಿಂದಡಿಯಿಟ್ಟು ಬರ್ಬರನಾಗಿ ಬಾಳಬೇಕಾದೀತು. ಅನಾಗರಿಕನಾಗಿ ಶಿಲಾ ಯುಗದಲ್ಲಿಯಂತೆ ಗುಂಪುಗಟ್ಟಿಕೊಂಡು ಅಂಡಲೆಯಬೇಕಾದೀತು. ಅಲ್ಲದೆ ಮನು ಕುಲದ ವಿನಾಶವೂ ಖಂಡಿತವಾದೀತು.

ಆದರೆ ಮನುಕುಲವು ನಾಶವಾಗಬಹುದೆಂದೆನಿಸಿದರೂ' ವಿಶ್ವದ ವಿಕಾಸಕ್ರಮಕ್ಕೆ ಚ್ಯುತಿಯಿಲ್ಲ. ಇನ್ನೊಂದು ಕುಲದ ವ್ಯುತ್ಪತ್ತಿಯಾಗಿ ಆ ಕ್ರಮವು ಮುಂದುವರಿಯು ವದು. ಪ್ರಕೃತಿಯ ಪ್ರಯೋಗಗಳು ಅವಿಚ್ಛಿನ್ನವಾಗಿವೆ. ಸೃಷ್ಟಿಯ ಆದಿಯಲ್ಲಿ ಆಕೆ ಹುಟ್ಟಿಸಿದ ಅನೇಕ ಪ್ರಾಣಿವರ್ಗಗಳು ನೈಸರ್ಗಿಕ ವಿಕಾಸದ ಹುಮ್ಮಸ್ಸಿಗೆ ಹೊಂದಿ ಕೊಳ್ಳುವದನ್ನರಿಯದೆ ಪ್ರಾಚ್ಯವಸ್ತುಸಂಗ್ರಹಾಲಯಗಳಲ್ಲಿ ಬರಿ ಪ್ರತೀಕಗಳಾಗುಳಿ ದವು. ಮಾನವನೂ ಇಂತಹ ಪ್ರಾಯೋಗಿಕ ಪದಗಳಲ್ಲೊಂದು. ಹಿಗ್ಗದಿದ್ದರೆ ಅವನು ಕುಗ್ಗಿಹೋಗುವದು ನಿಶ್ಚಿತ. ಅವನಿಗೇನೂ ಕೋಡು ಮೂಡಿಲ್ಲ. ಒಂದು ದೃಷ್ಟಿ ಯಿಂದ ಕೋಡು ಮೂಡಿರದ ವಿಕಾಸಕ್ರಮವೇ ಅವನದು. ಆದರೆ ಕೋಡಿರದೆ ಸಹ ಕೋಡುಳ್ಳ ಕಾಡುಮಿಗದಂತೆ ವರ್ತಿಸಿದರೆ ಅವನ ಕೃತಿಯೇ ಅವನ ಚ್ಯುತಿಯಾಗುವದು. ಅದನ್ನಾರು ತಪ್ಪಿಸಬಹುದು ?

ಹೀಗಿದ್ದರೂ ಮನುಕುಲದ ಕ್ಷಿತಿಜದಮೇಲೆ ಅಭಯವೊಂದು ಮೂಡಿದೆ. ವಿನಾಶವನ್ನು ತಪ್ಪಿಸಲೆಂದು ಕುಲೋದ್ಧಾರಕರನೇಕರು ತಪಸ್ಸುಗೆಯ್ದಿದ್ದಾರೆ. ಇನ್ನೂ ತಪಸ್ಸಿಗೆ ಕುಳಿತಿದ್ದಾರೆ. ಅವರೇ ಇಂದಿನ ಬಾಳಿನ ಧ್ರುವನಕ್ಷತ್ರ. ಬರಲಿರುವ ನವೀನ ಸಂಸ್ಕೃತಿಯ ಉಗಮಪುರುಷರು ; ಶಕಪುರುಷರವರು. ಮಾನವನ ಮರ್ಕಟಚೇಷ್ಟೆ ಗಳೇನೇ ಇರಲಿ, ಈ ಕುಲೋದ್ಧಾರಕರಲ್ಲಿ ಮನುಕುಲವು ತನ್ನ ಕೈಲಾಸ-ಕಾಂಚನ ಗಂಗಾ ಶಿಖರಗಳನ್ನು ಕಂಡಿದೆ. ಅವರ ವಾಣಿಯಿಂದ ನಮ್ಮ ಚಿತ್ತಶುದ್ಧಿಯಾಗುವದಿದೆ. ಅವರ ಕಾಣ್ಕೆಯಿಂದ ನಮ್ಮ ಬುದ್ಧಿ ಪರಾಬುದ್ಧಿಯಾಗಿ ಪರಿವರ್ತನಗೊಳ್ಳಲಿದೆ. ಅವರ ಸನ್ನಿಧಿಯಿಂದ ನಮ್ಮ ಅಹಂಪುರುಷ ಚೈತ್ಯಪುರುಷನಲ್ಲಿ ಲೀನನಾಗುವವನಿದ್ದಾನೆ. ಭೂಮಿ ನವಜನ್ಮಭೂಮಿಯಾಗುವದಿದೆ. ಇದನ್ನುಳಿದ ಬೇರೆ ಯಾವ ಭರವಸೆಯನ್ನೂ ಮಾನವನು ಇಂದಿನ ಜಗತ್ತಿನಲ್ಲಿ ಹಿಡಿಯಲಾರ. ಆದರೆ ಈ ಭರವಸೆ ಮಲ್ಲಿಗೆಗಿಂತ ಕೋಮಲವಾದರೂ ವಜ್ರಾಯುಧಕ್ಕಿಂತ ಭದ್ರವಾಗಿದೆ. ಅದಕ್ಕೆ ಚ್ಯುತಿಯಿಲ್ಲ.

* * * *

ನಮ್ಮಲ್ಲಿ ವಿಮರ್ಶೆ ಸಾಕಷ್ಟು ಬೆಳೆಯುತ್ತಿಲ್ಲವೆಂದು ಒಂದು ಅಭಿಪ್ರಾಯ ಕೇಳಿ ಬರುತ್ತದೆ. 'ಸಾಕಷ್ಟು' ಎಂಬ ಮಾತನ್ನು ಕನ್ನಡ ಸಾಹಿತ್ಯದ ಯಾವ ಶಾಖೆಯು

ವಿಷಯದಲ್ಲೂ ಹೇಳಬಹುದು. ಇಂದಿನ ಕನ್ನಡದಲ್ಲಿ ನಾವು ಅಪೇಕ್ಷಿಸುವ ವಿಮರ್ಶೆ ಏಳು ತರಹದ್ದು. ಈ ಭಾಷಣದಲ್ಲಿ ಅದು ಹೇಗೋ ಏಳರ ಗುಂಪು ಎಲ್ಲೆಡೆಗೆ ಸೇರಿ ಕೊಂಡಿದೆ. ಒಂದೆರಡು ಸಲ ಅದನ್ನು 'ಇಂದ್ರಧನುಸ್ಸು' ಮುಂತಾಗಿ ಕರೆದು ಸುಧಾರಿಸಿಕೊಂಡೆ. ಈಗ ಮತ್ತೆ ಅದು ತಲೆ ಎತ್ತಿತು! ಈ ಸಲ ಏಳರ ಗುಂಪನ್ನು ಅರುಣನ ಸಪ್ತಾಶ್ವಗಳಿಗೆ ಹೋಲಿಸೋಣ. ಏಳು ಬಗೆಯ ಈ ವಿಮರ್ಶೆಯನ್ನು ಹೂಡದೆ ಹೋದರೆ ಕನ್ನಡ ಸಾಹಿತ್ಯ ಹೆಳವನಂತೆ ಸಾಗುವ ಸ್ಥಿತಿ ಬಂದೀತು. ಇಂತಹ ವಿಮರ್ಶೆಯ ಅಭಾವದಿಂದಲೇ ನಡುನಡುವೆ ಕನ್ನಡ ಸಾಹಿತ್ಯ ಕುಂಟುತ್ತ ಸಾಗಿದ್ದುಂಟು. ಇವುಗಳ ಜೋಡಣೆಯಿಂದ ಅರುಣನ ರಥ ಮುಂದೆ ಸಾಗಿದಾಗ ಮಾತ್ರ ಅರುಣೋದಯವು ಸೂರ್ಯೋದಯದಲ್ಲಿ ಲೀನವಾಗುತ್ತದೆ. ವಿಮರ್ಶೆಯ ಆ ಏಳು ತರಹಗಳು ಹೀಗೆ:

(೧) ಇಂದಿನ ವಿಮರ್ಶೆಗೆ ಅಲಂಕಾರಶಾಸ್ತ್ರವೂ ಹಾಗು ಪಡುವಣದ ವಿಮರ್ಶೆಯೂ ಉಗಮಸ್ಥಾನಗಳು. ಸಂಸ್ಕೃತ ವಿಮರ್ಶೆಯ ಇತಿಹಾಸದಂತೆ ಆ ವಿಮರ್ಶಾಗ್ರಂಥಗಳ ಕನ್ನಡ ಅನುವಾದಗಳೂ ನಮ್ಮ ಕೈಸೇರಬೇಕು. ಪಡುವಣದ ವಿಮರ್ಶೆಯ ಬಗ್ಗೆ ಸಹ ಇದೇ ಕೆಲಸವಾಗಬೇಕಾಗಿದೆ. ಅಲಂಕಾರಶಾಸ್ತ್ರದ ಇತಿಹಾಸ ವೈಶಿಷ್ಟ್ಯಪೂರ್ಣವಾಗಿ ಕನ್ನಡದಲ್ಲಿ ಬಂದಿದೆ. ಧ್ವನ್ಯಾಲೋಕವನ್ನು ಇನ್ನೊಬ್ಬ ಮೇಧಾವಿಗಳು ಅನುವಾದಿಸಿದ್ದಾರೆ. ಶೆಲ್ಲಿಯ A Defence of Poetry ಎಂಬ ವಿಮರ್ಶಾಪ್ರಬಂಧವನ್ನು ಮತ್ತೂ ಒಬ್ಬರು ಕನ್ನಡಕ್ಕೆ ಸರಿಯಾಗಿ ತಿರುಗಿಸಿದ್ದಾರೆ. ಈ ಪ್ರಾರಂಭದ ಕಾರ್ಯವನ್ನು ಮುಂದುವರಿಸಿಕೊಂಡು ನೂರಾರು ವಿಮರ್ಶಾಗ್ರಂಥಗಳು ಸಂಸ್ಕೃತದಿಂದ, ಇಂಗ್ಲೀಷಿನಿಂದ, ಇನ್ನಿತರ ಭಾಷೆಗಳಿಂದ ಅನುವಾದಿತವಾಗಬೇಕಾಗಿವೆ.

(೨) ವ್ಯಾಕರಣ, ಅಲಂಕಾರಶಾಸ್ತ್ರ, ಛಂದಸ್ಸು ಮೊದಲಾದ ವಿಷಯಗಳನ್ನು ಕುರಿತು ಕನ್ನಡದಲ್ಲಾದ ಹಿಂದಿನ ಉದ್ಗ್ರಂಥಗಳನ್ನು ಉತ್ತಮವಾದ ಪೀಠಿಕೆ—ಟೀಕೆ-ಟಿಪ್ಪಣೆಗಳೊಡನೆ ಸಂಪಾದಿಸಿ ಪ್ರಸಿದ್ಧಿಸುವದು. ಇವುಗಳ ಅಭ್ಯಾಸದಿಂದ ಅನೇಕ ಮುಖವಾದ ಕನ್ನಡ ಸಾಹಿತ್ಯದ ಇತಿಹಾಸವನ್ನು ಸುಗಮವಾಗಿ ತಿಳಿಯಲು ಸಾಧ್ಯವಾಗುತ್ತದೆ. ವಿಶ್ವವಿದ್ಯಾನಿಲಯಗಳು ಆಗೀಗ ಈ ಕೆಲಸವನ್ನು ಪೂರೈಸುತ್ತಬಂದಿವೆ.

(೩) ಇಂದಿನ ಕನ್ನಡದ ಭಾಷಾಶಾಸ್ತ್ರ, ವ್ಯಾಕರಣ, ಛಂದಸ್ಸು,—ಇವುಗಳ ವಿವರಣೆ ಅತ್ಯಗತ್ಯ. ಇಂದಿನ ನೂರು ಕನ್ನಡಗಳ ಮೇಲೆ ಚರಿತ್ರ ಗ್ರಂಥಗಳು ಬೇಕೆಂದು ಹಿಂದೆ ಹೇಳಿದೆ. ಹೊಸಗನ್ನಡದ ವ್ಯಾಕರಣವನ್ನು ಕುರಿತು ಅಲ್ಲಲ್ಲಿ ಪ್ರಮಾಣಗ್ರಂಥಗಳು ಹುಟ್ಟಿವೆ, ಹುಟ್ಟುತ್ತಿವೆ. ಛಂದೋವಿಕಾಸ ಈ ದಾರಿಯಲ್ಲಿ

ಕವಿಗಳೊಬ್ಬರಿಂದ ಬಂದ ಒಳ್ಳೆಯ ಪ್ರಮಾಣಗ್ರಂಥ. ಇನ್ನಿಷ್ಟು ವಿವರವಾಗಿ, ವೈವಿಧ್ಯಪೂರ್ಣವಾಗಿ ಈ ಕಾರ್ಯ ಮುಂದುವರಿಯಬೇಕು.

(೪) ಕನ್ನಡದ ಸಾಹಿತ್ಯೇತಿಹಾಸ. ಸಾಹಿತ್ಯ ಅಕ್ಯಾಡೆಮಿಯಿಂದ ಮನ್ನಣೆ ಪಡೆದ ಒಂದು ಇತಿಹಾಸಗ್ರಂಥ ಇಲ್ಲಿಯ ಕೊರತೆಯನ್ನು ಬಹುಮಟ್ಟಿಗೆ ನೀಗಿಸಿದೆ. ಇದಕ್ಕೂ ವಿಸ್ತೃತವಾದ ಗ್ರಂಥಗಳು ಬರಲಿವೆ. ಹಲಕೆಲವು ಮಹಾಕವಿಗಳನ್ನು ಕುರಿತು ಈಗಾಗಲೆ ವಿಮರ್ಶಾಗ್ರಂಥಗಳು ಪ್ರಸಿದ್ಧವಾಗಿವೆ. ಹೀಗಿದ್ದರೂ ಆಗ ಬೇಕಾದ ಕೆಲಸ ಇನ್ನೂ ಅಪಾರವಾಗಿದೆ. ಒಂದೊಂದು ವಿಶಿಷ್ಟ ಯುಗದ ಸಾಹಿತ್ಯೇತಿಹಾಸದ ಮೇಲೆ ವಿವರಪೂರ್ಣ ಗ್ರಂಥಗಳು ಬೇಕಾಗಿವೆ. ಒಂದೊಂದು ಮಹಾಕಾವ್ಯದ ರಸಾಸ್ವಾದನ ಕೃತಿಯಾಗಿ ಬರಬೇಕು. ಇದಲ್ಲದೆ ಆಯಾ ಕಾಲದ ರಾಜಕೀಯ—ಸಾಮಾಜಿಕ—ಚಾರಿತ್ರಿಕ ಜೀವನ ಚಿತ್ರದೊಡನೆ ಸಾಹಿತ್ಯೇತಿಹಾಸ ವನ್ನು ಹೆಣೆದು ಆ ಹಿನ್ನೆಲೆಯಲ್ಲಿ ಸಾಹಿತ್ಯೇತಿಹಾಸವನ್ನು ಅರ್ಥಪೂರ್ಣವಾಗಿಸಿ ತೋರಿಸುವ ಗ್ರಂಥಗಳೂ ಬೇಕು. ಭಾಷೆಯ ವಿಕಾಸ, ಶೈಲಿಯಲ್ಲಿಯ ಭಿನ್ನರುಚಿ, ಛಂದಸ್ಸಿನಲ್ಲಿಯ ಮಾರ್ಪಾಟು,—ಇವುಗಳಲ್ಲಾದ ಕ್ರಾಂತಿಗಳನ್ನು ಸಕಾರಣವಾಗಿ ಸಮರ್ಥಿಸಿ ತೋರಿಸುವ ವಿಮರ್ಶಾ ಗ್ರಂಥಗಳು ಬೇಕು.

(೫) ಸಮಕಾಲೀನ ಸಾಹಿತ್ಯವನ್ನು ಕುರಿತು ಪ್ರತಿಭಾವಂತ ವಿಮರ್ಶೆ ಹಾಗು ಸಿಂಹಾವಲೋಕನ ಬೇಕು. ಕೆಲವು ಜನ ಸಾಹಿತಿಗಳನ್ನು ಕುರಿತು ಪ್ರಶಸ್ತಿಗ್ರಂಥಗಳು ಬಂದಿವೆ. ಒಂದು ದೃಷ್ಟಿಯಿಂದ ಸಮಕಾಲೀನ ವಿಮರ್ಶೆ ಅತಿ ಕಠಿಣವಾದ ಕಾರ್ಯ. ಇಲ್ಲಿ ಎರಡು ಮಾತುಗಳನ್ನಾದರೂ ನಾವು ಪಾಲಿಸಬೇಕಾಗುತ್ತದೆ. ಒಂದು, ಮೌಲ್ಯಮಾಪನ ಸಮಕಾಲೀನ ಸಾಹಿತ್ಯದ ವಿಷಯದಲ್ಲಿ ಸುಲಭವಲ್ಲ. ಹಟದಿಂದ ಈ ದಾರಿಯಲ್ಲಿ ಮುನ್ನಡೆದರೆ ತಪ್ಪು ತಿಳುವಳಿಕೆ ಹುಟ್ಟಿ ಸಾಹಿತ್ತಿಕ ವಾತಾವರಣ ಕದಡುತ್ತದೆ. ಬೆಲೆಕಟ್ಟುವ ಹವ್ಯಾಸಕ್ಕಿಂತ ನಮಗೆ ಮೆಚ್ಚಿಗೆಯಾದ ಕೃತಿಗಳ ಬಗ್ಗೆ ಬರೆದು ಅವುಗಳ ಗುಣವಿಶೇಷವನ್ನು ಜನತೆಗೆ ತಿಳಿಸಿಕೊಡುವದು ಹೆಚ್ಚು ಪ್ರಯೋಜನ ಕಾರಿಯೆಂದು ತೋರುತ್ತದೆ. ಹೀಗಿದ್ದರೂ ಬೆಲೆಕಟ್ಟುವದು ಅವಶ್ಯಕವೆಂದೆನಿಸಿದಾಗ ತಿಳುವಳಿಕೆಯನ್ನು ಕುಚೇಷ್ಟೆಗಾಗಿ ಬಳಸದೆ ನಮ್ಮ ಅನಿಸಿಕೆಗಳನ್ನು ಶಾಸ್ತ್ರೀಯ ವಾಗಿ ಸಕಾರಣವಾಗಿ ಮಂಡಿಸುವದು ಒಳಿತೆಂದು ಕಾಣುತ್ತದೆ. ಸಾಹಿತಿಗಳ ನಡುವೆ ಸೌಹಾರ್ದವಿದ್ದಷ್ಟು ಕ್ಷೇಮಕರ. ಸ್ನೇಹದ ವಾತಾವರಣದಲ್ಲಿ ಸಾಹಿತ್ಯವು ಹೆಚ್ಚು ಸುಗಮವಾಗಿ ಬೆಳೆಯಬಲ್ಲದು. ಮುಂದಿನ ಪೀಳಿಗೆಗೂ ಇದೊಂದು ಹಿತಕರ ಪರಂಪರೆಯಾಗುವದು. ಇಂತಹ ಕಟ್ಟುನಿಟ್ಟುಗಳನ್ನು ಸ್ವತಃ ನಾವೇ ಹೊಣೆಯರಿತು ಪಾಲಿಸಬೇಕಲ್ಲದೆ ಯಾರೂ ಅವನ್ನು ನಿರ್ಬಂಧಗಳೆಂದು ನಮ್ಮ ಮೇಲೆ ಹೇರಲಾರರು.

ಸಂಯಮವಿಲ್ಲದೆ ಬರೆದು ನಮ್ಮ ವಾಸನೆಗಳನ್ನು ನಾವು ತೃಪ್ತಿಪಡಿಸಿಕೊಂಡು ಓದುಗರನ್ನು ನಗಿಸುವದು ಸುಲಭ. ಆದರೆ ಅದರಿಂದ ಸಾಹಿತ್ತಿಕ ವಾತಾವರಣಕ್ಕೆ ಆಗುವ ಹಾನಿಯನ್ನು ತಪ್ಪಿಸುವದು ಅಷ್ಟೇ ಕಠಿಣ.

ರಾಘವಾಂಕ—ಕುಮಾರವ್ಯಾಸ—ರತ್ನಾಕರವರ್ಣಿ ಮೊದಲಾದ ಹಳೆಯ ಕವಿಗಳ ವಿಷಯದಲ್ಲೂ ವಿಮರ್ಶೆ ದುಸ್ತರವಾದ ಕಾಲವಿದು. ಹೊಗಳಿಕೆ ಸ್ವಲ್ಪ ಹೆಚ್ಚಾದೊಡನೆ ಅದನ್ನು ಜಾತ್ಯಂಧತೆಯೆಂದು ಕರೆಯುತ್ತೇವೆ. ದೋಷಕಥನ ಹೆಚ್ಚಾಯಿತೆಂದೆನಿಸಿದೊಡನೆ ಅದಕ್ಕೆ ಜಾತಿದ್ವೇಷವೆಂದು ಹೆಸರಿಡುತ್ತೇವೆ. ಈ ಮಾತುಗಳಲ್ಲದೆ ಪ್ರದೇಶಾಂಧತೆ, ವ್ಯಕ್ತಿಯ ಬಗ್ಗೆ ಬೇಸರ ಮೊದಲಾದ ವಿಷಯಗಳೂ ಸಮಕಾಲೀನ ವಿಮರ್ಶೆಯಲ್ಲಿ ಹಣಿಕಿಕ್ಕುತ್ತವೆ. ಒಟ್ಟಾರೆ ಮೇಲೆ ಹೇಳಿದಂತೆ ಪ್ರಶಸ್ತಿಯೆಂಬ ವಿಮರ್ಶಾಂಗವೇ ಇಲ್ಲಿ ಹೆಚ್ಚು ಅನುಕೂಲವಾಗಬಹುದು. ಮೌಲ್ಯಮಾಪನ ಬೇಕೇ ಆಗಿದ್ದಲ್ಲಿ ಅದನ್ನು ಶಾಸ್ತ್ರೀಯವಾಗಿ ನಿರ್ವಿಕಾರವಾಗಿ ಕೊನೆಗಾಣಿಸಬೇಕಾಗುವುದು.

ಇವೆಲ್ಲ ಕಾರಣಗಳ ಮೂಲಕವಾಗಿಯೋ ಏನೋ ಅಲ್ಲಲ್ಲಿ ಬರುವ ಇತ್ತೀಚೆಗಿನ ವಿಮರ್ಶೆ ಬಹ್ವಂಶದಲ್ಲಿ ನೀರಸವಾಗಿರುತ್ತದೆ. ವೃತ್ತಪತ್ರಿಕೆ—ಮಾಸಿಕಗಳಲ್ಲಿ ಬರುವ ವಿಮರ್ಶೆಗಳಲ್ಲಿ ಅನೇಕ ಸಲ ಆಳವಿರುವುದಿಲ್ಲ; ಅಭ್ಯಾಸ ಇಲ್ಲವೆ ಪರಿಶ್ರಮ ಸಹ ಅಲ್ಲಿ ಕಂಡುಬರುವುದಿಲ್ಲ. ಇದು ನಿಷ್ಕಾರಣವಾದುದು. ಮೇಲೆ ಸೂಚಿಸಿದ ಒಂದೆರಡು ತತ್ವಗಳನ್ನು ನಾವು ಪಾಲಿಸಿದಲ್ಲಿ ಸಮಕಾಲೀನ ವಿಮರ್ಶೆಯೂ ಉಜ್ವಲ ಪರಂಪರೆಯನ್ನು ನಿರ್ಮಿಸಿಕೊಳ್ಳಬಲ್ಲದು. ಅಂತಹ ಒಳ್ಳೆಯ ವಿಮರ್ಶೆ ಅಲ್ಲಲ್ಲಿ ಇನ್ನೂ ಕಂಡುಬರುವದು ಒಂದು ಸುಚಿನ್ಹವೆನ್ನಬೇಕು.

(೬) ವಿಮರ್ಶೆಯ ವಿವಿಧ ತಾತ್ವಿಕ ದೃಷ್ಟಿಗಳನ್ನು ಸಮನ್ವಯಿಸುವ ಕಾರ್ಯ. ಮೂಡಣ-ಪಡುವಣಗಳ ದೃಷ್ಟಿಸಮನ್ವಯದ ದಾರಿಯಲ್ಲಾದ ಪ್ರಯತ್ನಗಳನ್ನು ನಮ್ಮ ಇಂದಿನ ಅನೇಕ ಕವಿಗಳಿಂದ ಬಂದ ವಿಮರ್ಶೆಯಲ್ಲಿ ಕಾಣಬಹುದು. ಉದ್ಗ್ರಂಥಗಳ ರೂಪತಾಳಿ ಈ ನವೀನ ವಿಮರ್ಶೆ ಬರಬೇಕಾಗಿದೆ.

(೭) ವಿಮರ್ಶೆಯ ಸ್ವಯಂಪರೀಕ್ಷೆ ಹಾಗು ನಾಳಿನ ಸಾಹಿತ್ಯವಿಕಾಸಕ್ಕಾಗಿ ಅನುಕೂಲವಾದ ಬೌದ್ಧಿಕ ವಾತಾವರಣದ ನಿರ್ಮಾಣ. ವಿಮರ್ಶಾ ತತ್ವಗಳ ಮನನ ಹಾಗು ಪರೀಕ್ಷಣ ಅತ್ಯಗತ್ಯ. ತತ್ವ, ಮನಃಶಾಸ್ತ್ರ, ಸಮಾಜಶಾಸ್ತ್ರ ಮೊದಲಾದ ಜ್ಞಾನವಿಭಾಗಗಳನ್ನು ಅವಲೋಕಿಸಿ ನಾಡಿನ ಪ್ರತಿಭೆಗೆ ಅಡ್ಡಬರುವ ಆತಂಕಗಳನ್ನು ವಿಮರ್ಶಕನು ಕಂಡುಹಿಡಿದು ನಿವಾರಣೋಪಾಯಗಳನ್ನು ಸೂಚಿಸಬೇಕಾಗುತ್ತದೆ. ಆದ ಕಾರ್ಯ, ಆಗಬೇಕಾದ ಕಾರ್ಯಗಳನ್ನು ಅಳೆಯಬೇಕಾಗುತ್ತದೆ. ಯುಗವಿಶೇಷದಿಂದ ಪ್ರಚಲಿತವಾದ ಜೀವನದೃಷ್ಟಿಗಳ ಗುಣಾವಗುಣಗಳನ್ನು

ಬಿಡಿಸಿ ತೋರಿಸಬೇಕಾಗುತ್ತದೆ. ಇಂತಹ ಚರ್ಚೆಯಿಂದ ಉದಯೋನ್ಮುಖ ಸಾಹಿತಿಯ ಪ್ರತಿಭೆ ಉದ್ದೀಪನಗೊಳ್ಳುತ್ತದೆ.

* * *

ಇಂದಿನ ಸೃಷ್ಟಿಯೆ ವಿಕಾಸಕ್ರಮದಲ್ಲಿಯ ಪ್ರಥಮ ಹೆಜ್ಜೆ ಇದು. ಮಾನವನ ಮುಂದಿನ ಹೆಜ್ಜೆ ಅಧಿಮಾನವ. ಸೃಷ್ಟಿಯ ಇತಿಹಾಸದಲ್ಲಿ ಹೊಸ ಯುಗವಿದು ಬರಲಿದೆ. ಮಹೋನ್ನತ ವ್ಯಕ್ತಿಗಳ ವ್ಯಕ್ತಿತ್ವ ಸರ್ವಸಾಮಾನ್ಯರ ಸೊತ್ತಾಗಿ ಮಹೋನ್ನತಿಯ ಸ್ವರೂಪ ಇನ್ನಿಷ್ಟು ಉಜ್ವಲವಾಗುವದಿದೆ. ಆತ್ಮಿಕ ಪ್ರಜ್ಞೆಯ ಆಗರವಾದ ಭಾರತವು ಈ ವಿಕಾಸದಲ್ಲಿ ಮಹತ್ವದ ಭಾಗವನ್ನು ವಹಿಸಲಿದೆ. ಇದನ್ನು ಶ್ರೀ ಅರವಿಂದರು ಅಧಿಕಾರವಾಣಿಯಿಂದ ಸಾರಿದ್ದಾರೆ. ಇಂದು ಮನುಕುಲದೆದುರು ನಿಂತ ಸಮಸ್ಯೆಗಳನ್ನು ನೋಡಿದರೆ ಹೀಗಾಗುವದೇ ಸಹಜವೆಂದು ನಮಗೂ ಎನಿಸದಿರದು. ಇಲ್ಲದಿದ್ದರೆ ಮನುಕುಲದ ವಿನಾಶಕಾಲವೇ ಒದಗೀತು.

ಬರಲಿರುವ ಪೀಳಿಗೆಯಲ್ಲಿ ಮುಖ್ಯವಾಗಿ ಬೇಕಾಗಿದೆ ಇದು—ಈ ಆತ್ಮಶಿಲ್ಪ. ಈ ಶಿಲ್ಪವಿದ್ದ ಹೌದುಗನ್ನಡಿಗ, ಪೋಲೀಸುಗನ್ನಡಿಗ, ಉದರಗನ್ನಡಿಗ, ಮಹಮ್ಮದೀಯ ಕನ್ನಡಿಗ,—ಯಾರೇ ಆಗಲಿ, ಅವರು, ಕನ್ನಡಿಗರಾಗುತ್ತಾರೆ. ಈ ಶಿಲ್ಪವಿದ್ದ ಕನ್ನಡಿಗ ಭಾರತೀಯನಾಗುತ್ತಾನೆ. ಇದಿದ್ದ ಭಾರತೀಯ ವಿಶ್ವಮಾನವನಾಗುತ್ತಾನೆ. ದಿವ್ಯ ಐಕ್ಯ ಇಲ್ಲವೆ ಸಾಮರಸ್ಯದ ಸೂತ್ರ ಇಲ್ಲಿದೆ,—ಈ ಆತ್ಮಶಿಲ್ಪದಲ್ಲಿ. ಇದಿಲ್ಲದ ಸಾಕಲ್ಪ ವೈಕಲ್ಪವಾಗಿ, ಇದಿಲ್ಲದ ಸಂಸ್ಕೃತಿ ವಿಕೃತವಾಗುತ್ತದೆ.

ಸೃಷ್ಟಿ ಈ ಆತ್ಮಶಿಲ್ಪದ ಸೌಧವಾಗಬೇಕಾಗಿದೆ; ಕನ್ನಡ ನಾಡೂ ಆಗಬೇಕಾಗಿದೆ. ಇಂತಹ ವ್ಯಕ್ತಿಗಳು ನಾಡಿನಲ್ಲಿ ರೂಪಗೊಳ್ಳುತ್ತಿದ್ದಾಗ ಇಂದಿಲ್ಲ ನಾಳೆ ಜೀವನದ ಎಲ್ಲ ಕ್ಷೇತ್ರಗಳಲ್ಲೂ ಪ್ರಮುಖ ಪಾತ್ರವನ್ನು ವಹಿಸಿ ಅವರು ಉಳಿದವರನ್ನು ರೂಪಿಸಬಲ್ಲರು. ಇಂತಹ ವ್ಯಕ್ತಿಗಳು ರೂಪಗೊಳ್ಳುವದು ಮೊದಲು ನಮ್ಮ ಮನೆಗಳಲ್ಲಿ, ನಮ್ಮ ವಿದ್ಯಾ ಸಂಸ್ಥೆಗಳಲ್ಲಿ. ಈ ಆತ್ಮಶಿಲ್ಪದ ಅನುಸಂಧಾನದ ಕ್ರಮ ಯಾವುದು?

ಎಲ್ಲ ತತ್ವ-ಸಿದ್ಧಾಂತಗಳ ಜಂಜಾಟವನ್ನು ಬದಿಗೆ ಸರಿಸಿ ಸ್ವಲ್ಪದರಲ್ಲಿ ಹೇಳುವದೆಂದರೆ, ವ್ಯಕ್ತಿಯ ಹೃದಯ ಮೊದಲು ನಿರ್ವ್ಯಾಜತೆಯ ತವರಾಗಿರಬೇಕು, ಶುದ್ಧವಾಗಿರಬೇಕು. ಡೊಂಕು-ಕೊಂಕುಗಳಿಲ್ಲದ ಚಿತ್ತಶುದ್ಧಿ ವ್ಯಕ್ತಿಯ ಅಮೌಲ್ಯ ಆಸ್ತಿ. ಸಹಜ-ರಮ್ಯವಾದ ಹೃದಯದ ನಿರ್ಮಲತೆಯನ್ನು ನೋಡಿ ದೇವತೆಗಳು ಸಂತುಷ್ಟರಾಗುತ್ತಾರೆ. ಒಂದು ಹೂವಿನ ಸರಲ ಸೌಂದರ್ಯ ರಾಕ್ಷಸ ಹೃದಯವನ್ನೂ ಗೆಲ್ಲಬಲ್ಲದು. ಇಂದಿನ ವಂಚಕ, ಯಾಂತ್ರಿಕ ಜಗತ್ತಿನಲ್ಲಿ ಹೃದಯಶುದ್ಧಿ ಒಂದು ದಿವ್ಯಾಂಶವಾಗಿ, ದೈವಿಕ ಶಕ್ತಿಯಾಗಿ ಕಾಣಿಸಿಕೊಂಡರೆ ಆಶ್ಚರ್ಯವಲ್ಲ.

ಎರಡನೆಯದು ಮನಃಶುದ್ಧಿ. ವಿಚಾರಗಳಲ್ಲಿಯೂ ಸ್ಪಷ್ಟತೆ ಇರಬೇಕು, ನೇರತೆ ಬೇಕು, ಧೀರತೆ ಬೇಕು. ಬೂದಿಮುಚ್ಚಿದ ಕೆಂಡ ನೀಚನ ಇಲ್ಲವೆ ಗೋಮುಖ ವ್ಯಾಘ್ರನ ಪ್ರತೀಕವಾದರೆ ಧೂಮ್ರದಲ್ಲಿ ಕಳೆದುಹೋದ ಅಗ್ನಿ ವಿಚಾರಮಾಲಿನ್ಯವನ್ನು ಸೂಚಿಸುತ್ತದೆ. ಗೊಂದಲಗೆಟ್ಟ, ಅಳತೆಗೆಟ್ಟ, ಹೊಣೆಗೆಟ್ಟ ವಿಚಾರಸರಣಿಗೆ ಯಾವ ಗೆಲವೂ ಸಾಧ್ಯವಿರಲಾರದು. ಕ್ಷುಲ್ಲಕ ಭಾವನೆಗಳಿಂದ ರೂಪಗೊಂಡ ವಿಚಾರಗಳು ಹೊಗೆಮೋಡದಂತೆ ಅನಂತತೆಯನ್ನೇ ಆವರಿಸಬಲ್ಲವು. ಸೂರ್ಯಕಿರಣದ ನಿಶಿತ ಪ್ರಭೆ ಬೇಕು,—ಬುದ್ಧಿಯಲ್ಲಿ. ಯಾವ ಪ್ರಶ್ನೆಯೇ ಇರಲಿ, ಅದರ ಬೇರುಗಳನ್ನು ಹಿಡಿದು ಅಲ್ಲಾಡಿಸುವಂತಾಗಬೇಕು. ಸಮರ್ಥ ವಿಚಾರಸರಣಿಯಲ್ಲಿ ಇಂತಹ ತ್ರಿಕಾಲಜ್ಞಾನ ಕ್ಷಮತೆಯಿರುತ್ತದೆ.

ಮೂರನೆಯದು ವಾಕ್‌ಶುದ್ಧಿ. ಭಕ್ತನು ದೇವಾಲಯಕ್ಕೆ ಹೋದಾಗ ಬಾರಿಸಿದ ಗಂಟೆಯಂತೆ, ಮಾತು ತುಂಬಿ ಬಂದಿರಬೇಕು, ತೂರಿ ಬಂದಿರಬೇಕು, ಮಿತವಾಗಿ, ಚದುರ ವಾಗಿ, ಮಧುರವಾಗಿ, ಗಂಭೀರವಾಗಿ ಬಂದಿರಬೇಕು. ನಿಲ್ದಾಣೆಯಲ್ಲಿ ಮಧ್ಯರಾತ್ರಿಯಲ್ಲಿ ಗಾಡಿ ಬರುವ ವೇಳೆಗೋ ವೇಳೆ ತಪ್ಪಿಯೋ ಪೋರ್ಟರ್ ತೂಕಡಿಸುತ್ತ ಗಂಟೆ ಹೊಡೆಯುವಂತಾಗಿರಬಾರದು. ಇಲ್ಲವೆ ತೆರಪಿಲ್ಲದೆ ಗೊಂದಲವೆಬ್ಬಿಸುತ್ತ ನಡೆದ ಅಗ್ನಿ ಶಾಮಕ ಯಂತ್ರದ ಗಂಟೆಯಾಗಿರಬಾರದು. ಮನದೊಳಗನ್ನು ಉಚಿತವಾಗಿ ಸೂಚಿಸುವ ಮಾತೇ ಮಾತು. ಮಾತಿನಿಂದ ಕಿಡಿ ಹಾರಿರಬಾರದು. ಮಿಡಿ ಕಮರಿರ ಬಾರದು. ಇಡೀ ಗಂಟನ್ನೇ ಅದು ಬಿಚ್ಚಿ ತೋರಿಸಿದಂತಾಗಿರಬೇಕು. ಕರುಳಿನ ಬಳ್ಳಿಯೇ ಮಾತಿನಿಂದ ಕೊನರಿರಬೇಕು.

ನಾಲ್ಕನೆಯದು ಚಾರಿತ್ರಶುದ್ಧಿ. ಮಾತಿಗಿಂತ ಕಠಿಣತರವಾದ ಮಾಧ್ಯಮವಾಗಿದೆ ಮಾನವನ ಬಾಳು. ನಾಲಗೆ ಶಬ್ದದಲ್ಲಿ ತೂಕವನ್ನು ಕಾಯಬಹುದು, ಆದರೆ ಜೀವ ತನ್ನ ಗೆಯ್ಮೆಯಲ್ಲಿ ತೂಕ ಹಿಡಿಯುವುದು ದುಸ್ತರವಾದುದು. ಮುಗಿಯದ ಗೆಯ್ಮೆಗಳ ಮಾಲೆಯೇ ಜೀವನ. ಶುದ್ಧವಾದ, ಶುಭ್ರವಾದ ಹೃದಯ-ಬುದ್ಧಿಗಳಿಗೆ ಎತ್ತಿಹಿಡಿದ ದರ್ಪಣವಾಗಿರಬೇಕು ವ್ಯಕ್ತಿಯ ಚಾರಿತ್ರ. ಆಗ ಅದು ಕುಸುಮದಂತೆ ಕೋಮಲವಾಗಿ ವಜ್ರದಂತೆ ಕಠಿಣವೂ ಆಗುತ್ತದೆ.

ಹಾಗೆ ನೋಡಿದರೆ ಈ ಚತುಃಶುದ್ಧಿಗಳೂ ಒಂದೇ ಒಂದು ಮಾತಿನಲ್ಲಿ ಅಡಕ ವಾಗಿವೆ. ಶುದ್ಧನ ಜೀವನವೇ ಸಿದ್ಧನ ಜೀವನ. ಶುದ್ಧನೇ ಒಂದು ದೃಷ್ಟಿಯಲ್ಲಿ ಬುದ್ಧ.

ಆದರೆ ಶುದ್ಧಿಯಷ್ಟೇ ಬುದ್ಧನ ಬದುಕಲ್ಲ. ಪೂರ್ಣ ಶುದ್ಧಿಯೊಡನೆ ಜಾಗೃತ ಅಂತಃಸ್ಫುರಣವೊಂದು ಆತ್ಮಶಿಲ್ಪದ ಅಂಗವಾಗುತ್ತದೆ. ಶುದ್ಧಿಯು ಸ್ಥಾಯೀ ಸ್ಥಿತಿ. ಅದರಲ್ಲಿ ವ್ಯುತ್ಪತ್ತಿಯಿಲ್ಲ. ಜೀವನದಲ್ಲಿ ನವೀನ ಸಮಸ್ಯೆಗಳೆದ್ದಾಗ ಶುದ್ಧ ಹೃದಯ ವಾಗಲಿ ಶುದ್ಧ ಬುದ್ಧಿಯಾಗಲಿ ಆ ಕೂಟ ಪ್ರಶ್ನೆಗಳನ್ನು ಬಿಡಿಸಲಾರವು. ಅಲ್ಲಿ ಬೇಕು

ಅಂತಃಸ್ಫುರಣ, ಮಾನವನ ಸಹ್ಯಾದ್ರಿಶೃಂಗಸಮವಾದ ವ್ಯಕ್ತಿತ್ವದ ಮೇಲೆ ತೂಗಾಡುತ್ತಿರುವ ಸೆಳೆ-ಮಿಂಚು. ತನ್ನ ವ್ಯಕ್ತಿತ್ವದ ಶಿಖರದ ಏಕಾಂತದಲ್ಲಿ, ಅದರ ಆಳದ ನೀರವತೆಯಲ್ಲಿ, ಜಾಗೃತ-ಸ್ವಪ್ನ ಸೃಷ್ಟಿಗಳ ಧ್ಯಾನಮಯತೆಯಲ್ಲಿ ಈ ವಿದ್ಯುತ್ತು ಹೊಳೆಯುತ್ತಿರುತ್ತದೆ. ಅದರ ವಾಣಿಯೇ ಅಧಿಕಾರವಾಣಿ, ಅದರ ನಿರ್ಣಯವೇ ಕೊನೆಯ ನಿರ್ಣಯ. ಅದೇ ಸತ್ಯದ ತಿರುಳು. ಅಂತಃಸ್ಫುರಣವಿಲ್ಲದ ಬಾಳು ಶುದ್ಧವಾದರೂ ಬರಡು ಹಯಸವಿದ್ದಂತೆ, ಗರ್ಭಮಂದಿರದ ಮೂರ್ತಿಯಿಲ್ಲದ ವಿಜಯ ವಿಠಲನ ಗುಡಿಯಂತೆ. ಶುದ್ಧಿಯೊಡನೆ ಅಂತಃಸ್ಫುರಣ ಬೇಕು.

ಆತ್ಮಶಿಲ್ಪದ ಮೂರನೆಯ ಅಂಗವೆಂದರೆ ಸೌಹಾರ್ದ ಇಲ್ಲವೆ ಮೈತ್ರಿ. ಅಂತಃಸ್ಫುರಣ ವ್ಯಕ್ತಿತ್ವವನ್ನು ವಿಕಾಸೋನ್ಮುಖವಾಗಿಸುವಂತೆ ಮೈತ್ರಿಯು ಅದನ್ನು ಪ್ರಗತಿಪರವಾಗಿಸುತ್ತದೆ. ಸ್ಫುರಣವು ಅದಕ್ಕೆ ಆಳವನ್ನು ಕರುಣಿಸಿದರೆ ಮೈತ್ರಿಯು ಅದಕ್ಕೆ ವಿಸ್ತಾರವನ್ನು ದಯಪಾಲಿಸುತ್ತದೆ. ಸ್ಫುರಣವಿದ್ದವನು ತನ್ನನ್ನು ತಾನು ಅರಿಯುತ್ತಾನೆ. ಮೈತ್ರಿಯಿದ್ದವನು ಜಗತ್ತನ್ನೂ ಅರಿಯುತ್ತಾನೆ; ಚೇತನಾಚೇತನದೊಡನೆ ಒಂದಾಗುತ್ತಾನೆ. ಒಂದಕ್ಕೆ ಆತ್ಮದೇವನ ಸಾಕ್ಷಾತ್ಕಾರವಾದರೆ ಇನ್ನೊಂದಕ್ಕೆ ನರ-ನಾರಾಯಣನ ಸಾಕ್ಷಾತ್ಕಾರವಾಗುತ್ತದೆ. ಒಂದಕ್ಕೆ ವ್ಯಷ್ಟಿಯನ್ನು ಕಂಡರಿಸುವ ಶಕ್ತಿಯಿದ್ದರೆ ಇನ್ನೊಂದಕ್ಕೆ ಸಮಷ್ಟಿಯನ್ನೂ ಕಟ್ಟುವ ಸಾಮರ್ಥ್ಯ ಬರುತ್ತದೆ. ಮೈತ್ರಿಯು ಯಾವಾಗಲೂ ತಾರಾಮೈತ್ರಿ. ವ್ಯಕ್ತಿ-ವ್ಯಕ್ತಿಗಳ ಹೃದಯವನ್ನೇ ಅದು ಅದ್ಭುತವಾಗಿ—ಅಕಾರಣವಾಗಿ—ಕರಗಿಸಿ ಒಂದಾಗಿಸುತ್ತದೆ.

ಆತ್ಮಶಿಲ್ಪದ ಕೊನೆಯ ಅಂಗವೆಂದರೆ ಶ್ರದ್ಧೆ. ತನ್ನಲ್ಲಿಯೇ ಶ್ರದ್ಧೆ; ಪರರಲ್ಲಿ ಶ್ರದ್ಧೆ; ತನ್ನನ್ನೂ ಪರರನ್ನೂ ಮೀರಿರುವ ಅನಂತ ಶಕ್ತಿಗಳ ಕಲ್ಯಾಣಪಥದಲ್ಲಿ ಶ್ರದ್ಧೆ. ಈ ಶ್ರದ್ಧೆಯಿದ್ದ ವ್ಯಕ್ತಿ ವಾಮನನಾದರೂ ತ್ರಿವಿಕ್ರಮನಾಗಬಲ್ಲ. ಅಂತಃಸ್ಫುರಣವು ಆಳವನ್ನು ತರುವಂತೆ, ಮೈತ್ರಿಯು ವಿಸ್ತಾರವನ್ನು ತರುವಂತೆ ಶ್ರದ್ಧೆಯು ಮಾನವನ ವ್ಯಕ್ತಿತ್ವಕ್ಕೆ ಎತ್ತರವನ್ನು ತರುತ್ತದೆ. ಅದಿಲ್ಲದೆ ಬಾಳು ಸಂಕುಚಿತವಾಗಿ ಮಾತ್ರ ಬದುಕಬಲ್ಲದು. ವಿಸ್ತಾರವಿದ್ದರೂ ಅದು ಬರಿ ನೆಲದ ವಿಸ್ತಾರ; ಮುಗಿಲಿನದಲ್ಲ. ಆದರೆ ಮುಗಿಲಿಲ್ಲದ ನೆಲ ತನ್ನ ಅರ್ಧ ವೈಭವವನ್ನು ಕಳೆದುಕೊಳ್ಳುತ್ತದೆ. ಅನಂತತೆಯ ಮೇಲ್ಮೆಯೇ ಅದರ ಪಾಲಿಗಿಲ್ಲದಾಗುತ್ತದೆ.

ಹೀಗೆ ವ್ಯಕ್ತಿಯ ಆತ್ಮಶಿಲ್ಪವೆಂದರೆ ಚತುರ್ಮುಖ ಬ್ರಹ್ಮನಿದ್ದಂತೆ. ಶುದ್ಧಿ, ಅಂತಃಸ್ಫುರಣ, ಮೈತ್ರಿ ಹಾಗು ಶ್ರದ್ಧೆಗಳಿಂದ ತನ್ನನ್ನು ಕಟ್ಟಿಕೊಂಡು ವ್ಯಕ್ತಿಯು ನವೀನ ಸಮಾಜವನ್ನೂ ಜಗತ್ತನ್ನೂ ನಿರ್ಮಿಸಬೇಕಾಗಿದೆ, ವ್ಯಕ್ತಿಯು ಆತ್ಮಶಿಲ್ಪಿಯಾದಾಗ ಕನ್ನಡಿಗನು ಕನ್ನಡಿಸಿದ ವಿಶ್ವಮಾನವನಾಗುತ್ತಾನೆ. ಇದೇ ವಿಶ್ವಮಾನವತೆಯ ರಹಸ್ಯ.

ಸಂಪಾದಕೀಯ

ಡಾ॥ ಕೆ. ವಿ. ಪುಟ್ಟಪ್ಪನವರಿಗೆ ಪದ್ಮಭೂಷಣ ಪ್ರಶಸ್ತಿ

ಪ್ರಸಕ್ತ ವರ್ಷದ ಗಣರಾಜ್ಯೋತ್ಸವ ಸಮಾರಂಭದ ಸಂದರ್ಭದಲ್ಲಿ ಭಾರತ ಸರ್ಕಾರವು ಡಾ॥ ಕೆ. ವಿ. ಪುಟ್ಟಪ್ಪನವರಿಗೆ "ಪದ್ಮಭೂಷಣ" ಪ್ರಶಸ್ತಿಯನ್ನು ನೀಡಿ ಸನ್ಮಾನಿಸಿದೆ. ಕವಿಶ್ರೇಷ್ಠರೂ, ದಾರ್ಶನಿಕರೂ ಋಷಿಕಲ್ಪರೂ ಆದ ಶ್ರೀ ಕುವೆಂಪು ಅವರು ನಾಡುನುಡಿಗಳಿಗೆ ಸಲ್ಲಿಸಿರುವ ಸೇವೆಯನ್ನು ಗಮನಿಸಿ ರಾಷ್ಟ್ರಾಧ್ಯಕ್ಷರು ಕೊಟ್ಟಿರುವ ಈ ಪ್ರಶಸ್ತಿಗಾಗಿ ನಾವು ಶ್ರೀ ಕುವೆಂಪು ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ.

'ಯಶೋಲಕ್ಷ್ಮಿ' ಈ ರಸಋಷಿಯನ್ನು ಅಭ್ಯುದಯದ ಒಂದು ಶಿಖರದಿಂದ ಮತ್ತೊಂದಕ್ಕೆ ಕೈ ಹಿಡಿದು ನಡೆಸಿಕೊಂಡು ಹೋಗುತ್ತಿದ್ದಾಳೆ. ಆತ್ಮದ ಪ್ರಸನ್ನತೆಯ ಮುಹೂರ್ತಗಳಲ್ಲಿ ಮೈತಳೆದ ಕಾವ್ಯ ಅವರಿಗೆ "ಮಂತ್ರ." ನಮಗೋ ವರ. ಕನ್ನಡ ಅವರ ಉಸಿರು. ಕನ್ನಡದ ಸೇವೆ ಅವರ ಜೀವನ ವ್ರತ. ಕವಿವರ್ಯರಾಗಿ ಕುವೆಂಪು ಸಾಹಿತ್ಯದ ಅನೇಕ ಪ್ರಕಾರಗಳಿಗೆ ಕಾಣಿಕೆ ಸಲ್ಲಿಸಿ ಆ ತೆರನಾದ ಸಾರಸ್ವತ ಸೇವೆಯನ್ನು ಸಲ್ಲಿಸಿರುವುದು ಒಂದು; ಪ್ರಾಧ್ಯಾಪಕ ಸ್ಥಾನದಲ್ಲಿ ನಿಂತು ತಮ್ಮ ಬಳಿಗೆ ಜ್ಞಾನಪಿಪಾಸುಗಳಾಗಿ ಬಂದ ಶಿಷ್ಯರಿಗೆ ವಿವಿಧ ಭಾಷಾ ಸಾಹಿತ್ಯಗಳ ರಸಾಮೃತವನ್ನು ಧಾರೆಯೆರೆದುದು ಇನ್ನೊಂದು; ಈಗ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ಕನ್ನಡ ಮಾಧ್ಯಮ, ವಿಜ್ಞಾನ ಸಂಬಂಧವಾದ ಪುಸ್ತಕಗಳ ಪ್ರಕಾಶನ, ಸಾಹಿತ್ಯ—ವಿಜ್ಞಾನಗಳನ್ನು ಕುರಿತ ವಿಶೇಷ ಪ್ರಚಾರೋಪನ್ಯಾಸಗಳು, ಪ್ರಬುದ್ಧ ಕರ್ಣಾಟಕದ ವಿಜ್ಞಾನ ವಿಶೇಷಾಂಕಗಳ ಪ್ರಕಟಣೆ ಈ ಎಲ್ಲಕ್ಕೂ ಪ್ರೇರಕ ಶಕ್ತಿಯೂ ಚಾಲಕಶಕ್ತಿಯೂ ಆಗಿ ಕನ್ನಡದ ಸರ್ವತೋಮುಖವಾದ ಬೆಳವಣಿಗೆಗೆ ಕಾರಣಕರ್ತರಾಗಿರುವುದು ಮತ್ತೊಂದು. ಈ ಒಂದೊಂದನ್ನೂ ಕುರಿತು ಚಿಂತಿಸಿದಾಗ ಇಂತಹ ಪ್ರಶಸ್ತಿ ಕುವೆಂಪುರವನ್ನು ವರಿಸಿ ಬಂದುದರಲ್ಲಿ ಆಶ್ಚರ್ಯವಿಲ್ಲ!

ಅವರೇ ಹೇಳುತ್ತಾರೆ, ಈ ಪ್ರಶಸ್ತಿ ತಮಗೆ ದೊರೆತದ್ದು ಮುಗ್ಧಶಿಶುವಿನ ಕೈಯಲ್ಲಿ ಬೆಲೆಬಾಳುವ ಆಭರಣ ಕೊಟ್ಟಂತೆ! ಅದರಿಂದ ಏನು ಉಪಯೋಗ ಪಡೆಯಬಹುದೋ ತಿಳಿಯದೆ ಅವರು ಕೇವಲ ವಿಸ್ಮಯಸ್ಥಿತಿಯಲ್ಲಿದ್ದಾರೆ; ಕನ್ನಡದ ಸೇವೆಗೆ ಇದು ಸಮರ್ಪಿತ ಎನ್ನುತ್ತಾರೆ. ಅವರ ಈ ಮನಸ್ಥಿತಿ, ಅವರಿಗೆ ಪ್ರಶಸ್ತಿ ದೊರೆತಷ್ಟೇ ಸಂತೋಷವನ್ನು ತಂದಿದೆ ಕನ್ನಡಿಗರಿಗೆ. ಕನ್ನಡನಾಡಿನ ಅನೇಕ ಸಂಘ ಸಂಸ್ಥೆಗಳೂ,

ಸಹಸ್ರಾರು ಜನ ಸಹೃದಯರೂ ಅವರಿಗೆ ಪ್ರಶಸ್ತಿ ದೊರೆತುದಕ್ಕಾಗಿ ಆನಂದಗೊಂಡಿದ್ದಾರೆ. ಅವರ ಆನಂದದಿಂದ ಕವಿಗೂ ಆನಂದ!

ಜಗನ್ಮಾತೆ ಅವರಿಗೆ ಆಯುರಾರೋಗ್ಯಾದಿ ಸಮಸ್ತ ಸನ್ಮಂಗಳಗಳನ್ನೂ ಕರುಣಿಸಲಿ, ಅವರಿಂದ ನಾಡಿಗೆ ಇನ್ನೂ ಅನರ್ಘ್ಯವಾದ ಕೃತಿರತ್ನಗಳು ಲಭಿಸಲಿ ಎಂದು ನಾವು ಹಾರೈಸುತ್ತೇವೆ.

***

ನಲವತ್ತನೆಯ ಕನ್ನಡ ಸಾಹಿತ್ಯ ಸಮ್ಮೇಳನ

ಈಸಲದ ಸಮ್ಮೇಳನ ಜನವರಿ ಮೂರನೇ ವಾರದಲ್ಲಿ ಬಳ್ಳಾರಿಯಲ್ಲಿ ವೈಭವದಿಂದ ಜರುಗಿತು. ಧಾರವಾಡದ ಕರ್ಣಾಟಕ ಕಾಲೇಜಿನ ಪ್ರಿನ್ಸಿಪಾಲರೂ, ಸುಪ್ರಸಿದ್ಧ ಸಾಹಿತಿಗಳೂ ವಾಗ್ಮಿಗಳೂ ಆದ ಶ್ರೀ ವಿನಾಯಕ ಕೃಷ್ಣ ಗೋಕಾಕ, ಎಂ.ಎ., ಅವರು ಸಮ್ಮೇಳನದ ಅಧ್ಯಕ್ಷತೆ ವಹಿಸಿ ವಿಚಾರಪೂರ್ಣವಾದ ಭಾಷಣ ಮಾಡಿದರು.

ಈ ಸಮ್ಮೇಳನದ ಅಂಗವಾಗಿ ಶ್ರೀ ಪು. ತಿ. ನರಸಿಂಹಾಚಾರ್ಯರ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿಯೂ, ಡಾ|| ಎಸ್. ಶ್ರೀಕಂಠಶಾಸ್ತ್ರೀ ಅವರ ಅಧ್ಯಕ್ಷತೆಯಲ್ಲಿ ಕರ್ಣಾಟಕ ಕಲಾ ಗೋಷ್ಠಿಯೂ, ಶ್ರೀಮತಿ ಸರೋಜಿನಿ ಮಹಿಷಿ ಅವರ ಅಧ್ಯಕ್ಷತೆಯಲ್ಲಿ ಕತೆಗಾರ ಗೋಷ್ಠಿಯೂ, ಶ್ರೀ ಟಿ. ಎಚ್. ಎಂ. ಸದಾಶಿವಯ್ಯ ಅವರ ಅಧ್ಯಕ್ಷತೆಯಲ್ಲಿ ಸಾಹಿತ್ಯ ಬಾಂಧವ್ಯ ಗೋಷ್ಠಿಯೂ, ಶ್ರೀ ದ. ರಾ. ಬೇಂದ್ರೆಯವರ ಅಧ್ಯಕ್ಷತೆಯಲ್ಲಿ ಭಾಷಾಬಾಂಧವ್ಯ ಗೋಷ್ಠಿಯೂ ಯಶಸ್ವಿಯಾಗಿ ನಡೆದುವು. ಈ ವೈವಿಧ್ಯ ಈ ಸಮ್ಮೇಳನದ ವೈಶಿಷ್ಟ್ಯ.

ಈ ಸಂದರ್ಭದಲ್ಲಿ ಬಳ್ಳಾರಿಯ ಸ್ವಾಗತ ಸಮಿತಿಯನ್ನು ಸಮ್ಮೇಳನದ ಯಶಸ್ಸಿಗಾಗಿ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ.

ಸ್ಥಳಾಭಾವದಿಂದ ಸಮ್ಮೇಳನದ ಎಲ್ಲ ವಿವರಗಳನ್ನೂ, ಎಲ್ಲ ಭಾಷಣಗಳನ್ನೂ ಇಲ್ಲಿ ಕೊಡುವುದು ಸಾಧ್ಯವಾಗಿಲ್ಲ. ಅಧ್ಯಕ್ಷ ಭಾಷಣದ ಕೆಲವು ಭಾಗಗಳನ್ನು ವಸ್ತುಕೋಶದಲ್ಲಿ ಕೊಟ್ಟಿದ್ದೇವೆ. ಶ್ರೀ ಪು. ತಿ. ನ. ಅವರ ಭಾಷಣ ಲೇಖನರೂಪದಲ್ಲಿ ಈ ಸಂಚಿಕೆಯಲ್ಲಿ ಪ್ರಕಟವಾಗಿದೆ.

***

ಕಂಬನಿ

ಕೇಂದ್ರ ಸಚಿವ ಸಂಪುಟದಲ್ಲಿ ಶಿಕ್ಷಣ ಸಚಿವರಾಗಿದ್ದ ಮೌಲಾನಾ ಅಬುಲ್ ಕಲಾಂ ಆಜಾದ್ ಅವರು ಕಳೆದ ಫೆಬ್ರವರಿ ೨೨ ರಂದು ದೈವಾಧೀನರಾದುದು ಒಂದು ವಿಷಾದದ ಸಂಗತಿ.

ನವಭಾರತದ ನಿರ್ಮಾಪಕರಲ್ಲಿ ಒಬ್ಬರೆಂದೂ, ಜಗತ್ತಿನ ಅತಿಶ್ರೇಷ್ಠ ಧರ್ಮವೇತ್ತರಲ್ಲಿ ಒಬ್ಬರೆಂದೂ, ಸಾಹಿತ್ಯ, ನಾಟಕ, ತರ್ಕಾದಿಗಳಲ್ಲಿ ಅಸಾಧಾರಣ ಪ್ರತಿಭೆಯಿಂದ ಅತ್ಯದ್ಭುತವಾದ ಪಾಂಡಿತ್ಯವನ್ನು ಗಳಿಸಿದ ಮಹಾ ಮೇಧಾವಿಗಳಲ್ಲಿ ಒಬ್ಬರೆಂದೂ ಆಜಾದರು ಪ್ರಸಿದ್ಧರಾಗಿದ್ದಾರೆ. ಪಾಂಡಿತ್ಯ ಪ್ರತಿಭೆಗಳ ಸಂಗಮವಾಗಿದ್ದ ಆಜಾದರು ನಮ್ಮ ರಾಷ್ಟ್ರದ ಶಿಕ್ಷಣ ಸಚಿವರಾಗಿದ್ದು ನಮ್ಮ ಎಲ್ಲ ಭಾಷೆಗಳ ಎಲ್ಲ ಏಳಿಗೆಗೂ ನಾನಾ ರೀತಿಯಲ್ಲಿ ದುಡಿದಿದ್ದಾರೆ. ಸಂಗೀತ, ಸಾಹಿತ್ಯ, ವಿಜ್ಞಾನಗಳ ಆಕಾಡೆಮಿಗಳ ಸ್ಥಾಪನೆಯಲ್ಲಿಯೂ ಅವು ಯಶಸ್ವಿಯಾಗಿ ಕೆಲಸ ಮಾಡುವುದರಲ್ಲಿಯೂ ಆಜಾದರು ವಹಿಸಿದ ಪಾತ್ರ ಚಿರಸ್ಮರಣೀಯವಾಗಿದೆ.

ಅವರು ನಮ್ಮನ್ನು ಅಗಲಿದರೂ ಅಮರರಾಗಿದ್ದಾರೆ. ಅವರ ಆತ್ಮಕ್ಕೆ ಚಿರಶಾಂತಿಯಿರಲಿ.

ಸಾದರ ಸ್ವೀಕಾರ

೧. ಆ ಮನಿ—ಲೇ. ಕೀರ್ತಿನಾಥ ಕುರ್ತಕೋಟಿ; ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ; ಪು. ೬೩ ; ಬೆಲೆ, ರೂ. ೧.೦೦.

೨. ಸ್ವಪ್ನದರ್ಶಿ ಮತ್ತು ಇತರ ಗೀತನಾಟಕಗಳು—ಲೇ. ಕೀರ್ತಿನಾಥ ಕುರ್ತಕೋಟಿ ; ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ ; ಪು. ೧೩೪ ; ಬೆಲೆ, ರೂ. ೧.೭೫.

೩. ಸಂದರ್ಶನ—ಲೇ. ಯಶವಂತ ಚಿತ್ತಾಲ; ಜನತಾ ಪ್ರಕಾಶನ, ಅಂಕೋಲಾ; ಪು. ೯೯ ; ಬೆಲೆ, ರೂ. ೧.೫೦.

೪. ಜೀವಫಲ—ಲೇ. ಜಡಭರತ ಕೀರ್ತಿನಾಥ ; ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ ; ಪು. ೪೬ ; ಬೆಲೆ, ರೂ. ೧.೦೦.

೫. ಶ್ರೀ ವಿನಾಯಕರ ಸಾಹಿತ್ಯ ಸಮೀಕ್ಷೆ—ಸಂ. ಜಿ. ಬಿ. ಜೋಷಿ ಮತ್ತು ಕೆ. ಡಿ. ಕುರ್ತಕೋಟಿ ; ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ; ಪು. ೮೧ ; ಬೆಲೆ, ರೂ. ೧.೦೦.

೬. ದೀಪ ಹತ್ತಿತು—ಲೇ. ಕೊಟ್ಟಲಗಿ ರಾಮಚಂದ್ರ ; ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ ; ಪು. ೨೯೪ ; ಬೆಲೆ, ರೂ. ೩.೨೫.

೭. ನಾನಿಯ ಕಾದಂಬರಿ—ಲೇ. ಬಾಲಕೃಷ್ಣ ; ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ ; ಪು. ೨೪೫ ; ಬೆಲೆ, ರೂ. ೨.೨೫.

೮. ಗಂಗವ್ವ ಮತ್ತು ಗಂಗಾಮಾಯಿ—ಲೇ. ಶಂ. ರಾ. ಮೊಕಾಶ (ಪುಣೇಕರ) ; ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ ; ಪು. ೩೦೦ ; ಬೆಲೆ, ರೂ. ೩.೨೫.

೯. ಸಾಮಾನ್ಯ ರೋಗಗಳು—ಲೇ. ಡಾ|| ಕೆ. ಎಲ್. ಐತಾಳ, ಎಂ.ಬಿ., ಬಿ.ಎಸ್. ; ಕರ್ನಾಟಕ ಸಂಘ, ಉಡುಪಿ ; ಪು. ೭೮ ; ಬೆಲೆ, ೧.೦೦.

೧೦. ಚಂದ್ರಲೋಕಕ್ಕೆ ಪ್ರಯಾಣ—ಲೇ. ಯು. ರಾಘವೇಂದ್ರಾಚಾರ್ಯ, ಎಂ.ಎ., ಕರ್ನಾಟಕ ಸಂಘ, ಉಡುಪಿ ; ಪು. ೭೭ ; ಬೆಲೆ, ರೂ. ೧.೦೦.

೧೧. ಭೌತಿಕ ದರ್ಶನ—ಲೇ. ಬಡಕ್ಕಿಲ ಕೃಷ್ಣಭಟ್ಟ, ಎಲ್ಎಲ್.ಬಿ., ಕರ್ನಾಟಕ ಸಂಘ, ಉಡುಪಿ ; ಪು. ೯೩ ; ಬೆಲೆ, ರೂ. ೧.೦೦.

೧೨. ಜಾನಪದ ಪ್ರೇಮಗೀತೆಗಳು—ಸಂ. ಕ. ರಾ. ಕೃ. ಕಾವ್ಯೋದಯ ಪ್ರಕಾಶನ, ವಿದ್ಯಾಶ್ರಮ, ಸರಸ್ವತಿಪುರಂ, ಮೈಸೂರು ; ಪು. ೬೪ ; ಬೆಲೆ, ೭೫ ನಯಾ ಪೈಸೆ.

೧೩. **ಜೇನ ಹನಿಗಳು** (ಜನಪದ ಪ್ರೇಮಗೀತೆಗಳು)—ಸಂ. ಕೆ. ರಾ. ಕೃ. ಕಾವ್ಯೋದಯ ಪ್ರಕಾಶನ, ವಿದ್ಯಾಶ್ರಮ, ಸರಸ್ವತಿಪುರಂ, ಮೈಸೂರು ; ಪು. ೩೦ ; ಬೆಲೆ, ೫೦ ನಯಾ ಪೈಸೆ.

೧೪. **ಅಂಬಿಗರ ಗಂಗ** (ಜಾನಪದ ಕಥನ ಗೀತೆಗಳು)—ಸಂ. ಕ. ರಾ. ಕೃ. ಕಾವ್ಯೋದಯ ಪ್ರಕಾಶನ, ವಿದ್ಯಾಶ್ರಮ, ಸರಸ್ವತಿಪುರಂ, ಮೈಸೂರು ; ಪು. ೧೦೨ ; ಬೆಲೆ, ರೂ. ೧.೦೦.

೧೫. **ಶರಾವತಿ** (ಕಥನ ಕವನ)—ಲೇ. ಕೆ. ವಿ. ಲಿಂಗಪ್ಪ ; ಕಾವ್ಯೋದಯ ಪ್ರಕಾಶನ, ವಿದ್ಯಾಶ್ರಮ, ಸರಸ್ವತಿಪುರಂ, ಮೈಸೂರು ; ಪು. ೩೨ ; ಬೆಲೆ, ೫೦ ನಯಾ ಪೈಸೆ.

೧೬. **ಡಾಕ್ಟರ ಕಬ್ಬೂರ ನಾರಾಯಣರಾಯರು**—ಕಬ್ಬೂರ ಸತ್ಕಾರ ಸಮಿತಿ, ಧಾರವಾಡ ; ಪು. ೭೯ ; ಬೆಲೆ,

ಪ್ರಬುದ್ಧ ಕರ್ಣಾಟಕ

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪತ್ರಿಕೆ

'ಪ್ರಬುದ್ಧ ಕರ್ಣಾಟಕ'ವು ಚೈತ್ರ, ಆಷಾಢ, ಆಶ್ವಯುಜ, ಪುಷ್ಯಮಾಸಗಳಲ್ಲಿ ಆಯಾ ತಿಂಗಳ ಹುಣ್ಣಿಮೆಯ ಹೊತ್ತಿಗೆ ವರ್ಷಕ್ಕೆ ನಾಲ್ಕು ಸಲ ಹೊರಡುತ್ತದೆ.

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ):

ಸಾಮಾನ್ಯ ಚಂದಾದಾರರಿಗೆ	ರೂ.	೩	೮	೦
ವಾಚನಾಲಯ ಮುಂತಾದ ಸಂಸ್ಥೆಗಳಿಗೆ	ರೂ.	೪	೮	೦
ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಮಾತ್ರ	ರೂ.	೨	೮	೦

ಸಂಚಿಕೆಗಳನ್ನು ರಿಜಿಸ್ಟರ್ ಮೂಲಕ ತರಿಸಿಕೊಳ್ಳಬೇಕೆನ್ನುವವರು ಚಂದಾ ಹಣದ ಜೊತೆಗೆ ರೂ. ೨-೦-೦ ಕಳುಹಿಸಬೇಕು.

ಚಂದಾಹಣವನ್ನೂ ಅದರ ವಿಚಾರವಾಗಿ ಪತ್ರಗಳನ್ನೂ ಕಾರ್ಯದರ್ಶಿ, ಪ್ರಚಾರ ಮತ್ತು ಪ್ರಕಾಶನ ಕಾರ್ಯ, ಯೂನಿವರ್ಸಿಟಿ ಆಫೀಸು, ಮೈಸೂರು, ಎಂಬ ವಿಳಾಸಕ್ಕೆ ಕಳುಹಿಸಬೇಕು. ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರವರಿಗಾಗಲಿ, ಪ್ರಬುದ್ಧ ಕರ್ಣಾಟಕದ ಸಂಪಾದಕರಿಗಾಗಲಿ ಕಳುಹಿಸಬಾರದು. ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಚಂದಾಹಣವನ್ನು ತಮ್ಮ ತಮ್ಮ ಕಾಲೇಜಿನ ಅಕೌಂಟ್ಸ್ ಅಧಿಕಾರಿಗಳಿಗೆ ಮುಂಗಡವಾಗಿ ಸಲ್ಲಿಸಿ, ಪಡೆದ ರಸೀತಿಯನ್ನು ತಮ್ಮ ವಿಳಾಸದೊಂದಿಗೆ ಕಳುಹಿಸಿಕೊಡಬೇಕು. ಕಾಲೇಜುಗಳ ಅಧ್ಯಾಪಕವರ್ಗದವರೂ ಇದೇ ರೀತಿ ಮಾಡಬಹುದು. ವಿದ್ಯಾರ್ಥಿಗಳು ತಾವು ವಿದ್ಯಾರ್ಥಿಗಳೆಂಬ ಬಗ್ಗೆ ತಮ್ಮ ಪಾಠಶಾಲೆಯ ಮುಖ್ಯೋಪಾಧ್ಯಾಯರಿಂದ ಒಂದು ಪ್ರಮಾಣಪತ್ರವನ್ನು ಪಡೆದು ಅದನ್ನು ಚಂದಾಹಣದೊಡನೆ ಕಳುಹಿಸಬೇಕು. ಚಂದಾದಾರರು ತಮ್ಮ ಚಂದಾಹಣವನ್ನು ಸರ್ಕಾರಿ ಖಜಾನೆಯಲ್ಲಿ 'ಯೂನಿವರ್ಸಿಟಿ ಫಂಡ್'ಗೆ ಕಟ್ಟಿ ಖಜಾನೆ ರಸೀತಿಯನ್ನು ತಮ್ಮ ವಿಳಾಸದೊಡನೆ ಪ್ರಬುದ್ಧ ಕರ್ಣಾಟಕದ ಆಫೀಸಿಗೆ ಕಳುಹಿಸಬಹುದು.

ಪ್ರಬುದ್ಧ ಕರ್ಣಾಟಕದ ೩೨, ೩೩, ೩೪, ೩೫, ೩೬, ೩೭ ನೆಯ ಸಂಪುಟಗಳು ನಮ್ಮಲ್ಲಿ ಸಿಕ್ಕುತ್ತವೆ. ಇವುಗಳ ಪೈಕಿ ೩೨ ನೆಯ ಸಂಪುಟವನ್ನು ಮಾತ್ರ ಒಂದು ರೂಪಾಯಿಯಂತೆ ರಿಯಾಯಿತಿ ದರದಲ್ಲಿ ಪಡೆಯಬಹುದು. ೩೩, ೩೪, ೩೫, ೩೬, ೩೭ ನೆಯ ಸಂಪುಟಗಳನ್ನು ತುಂಬು ಬೆಲೆಗೆ ಮಾರಲಾಗುವುದು. ಅಂಚೆಯ ಮೂಲಕ ತರಿಸಿಕೊಳ್ಳುವವರು ಸಂಪುಟ ಒಂದಕ್ಕೆ ಹದಿಮೂರು ಆಣೆ, ಸಾಮಾನ್ಯ ಸಂಚಿಕೆ ಒಂದಕ್ಕೆ ಏಳು ಆಣೆ, ಎರಡು ಸಂಚಿಕೆಗಳನ್ನು ಒಳಗೊಂಡ ಸಂಚಿಕೆಗೆ ಒಂಬತ್ತು ಆಣೆಯಂತೆ ಅಂಚೆ ವೆಚ್ಚವನ್ನು ಕಳುಹಿಸಬೇಕು.

'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟನೆಗೆ ಲೇಖನಗಳನ್ನೂ ವಿಮರ್ಶೆಗೆ ಗ್ರಂಥಗಳನ್ನೂ ವಿನಿಮಯಕ್ಕೆ ಪತ್ರಿಕೆಗಳನ್ನೂ ಪ್ರಬುದ್ಧ ಕರ್ಣಾಟಕದ ಸಂಪಾದಕ (ಮಹಾರಾಜರವರ ಕಾಲೇಜು, ಮೈಸೂರು) ರಿಗೆ ಕಳುಹಿಸಬೇಕು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆ

೧. ಖಗೋಳಶಾಸ್ತ್ರಪ್ರವೇಶ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೨. ಸಮಾಜದ ರೋಗರುಜಿನಗಳು—ಜಿ. ಹನುಮಂತರಾವ್, ಎಂ.ಎ.
೩. ತೆರಿಗೆ—ಬಿ. ಆರ್. ಸುಬ್ಬರಾವ್, ಎಂ.ಎ.
೪. ನವರತ್ನಗಳು—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೫. ನಮ್ಮ ಹಳ್ಳಿಗಳು—ಜಿ. ಎನ್. ಕೃಷ್ಣಮೂರ್ತಿ, ಎಂ.ಎ.
೬. ಕುಮಾರವ್ಯಾಸ—ಎಸ್. ವಿ. ರಂಗಣ್ಣ, ಎಂ.ಎ.
೭. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್, ಎಂ.ಎ.
೮. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ, ಎಂ.ಎ.
೯. ವಿದ್ಯುಚ್ಛಕ್ತಿಯ ವೈಭವ—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೧೦. ಪಂಪ—ಟಿ. ಎನ್. ಶ್ರೀಕಂಠಯ್ಯ, ಎಂ.ಎ.
೧೧. ಪ್ರಾಣಿಜೀವನ—ಎ. ನಾರಾಯಣರಾವ್, ಎಂ.ಎಸ್‌ಸಿ.
೧೨. ಕನಸುಗಳು—ಡಾ|| ಎನ್. ಎಸ್. ನಾರಾಯಣಶಾಸ್ತ್ರೀ, ಎಂ.ಎ., ಡಿ.ಲಿಟ್.
೧೩. ಮದುವೆ—ಎನ್. ಕಸ್ತೂರಿ, ಎಂ.ಎ., ಬಿ.ಎಲ್.
೧೪. ನಮ್ಮ ಆರ್ಥಿಕದೃಷ್ಟಿ—ಎಸ್. ಗೋಪಾಲಸ್ವಾಮಿ, ಎಂ.ಎ.
೧೫. ವಾಯುಗುಣ—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೧೬. ಬೆಳಕು—ಟಿ. ಎಸ್. ಸುಬ್ಬರಾಯ, ಎಂ.ಎಸ್‌ಸಿ.
೧೭. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ, ಎಂ.ಎ.
೧೮. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್, ಎಂ.ಎ.
೧೯. ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ—ಪಿ. ಜಿ. ಸತ್ಯಗಿರಿನಾಥನ್, ಎಂ.ಎ.
೨೦. ಕಣ್ಣು ಮತ್ತು ಅದರ ರಕ್ಷಣೆ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೨೧. ಸಾರ್ವಜನಿಕ ವೆಚ್ಚ—ಡಾ|| ಎಂ. ಎಚ್. ಗೋಪಾಲ್, ಎಂ.ಎ., ಪಿಎಚ್.ಡಿ.
೨೨. ಶಿಶುವಿಹಾರಗಳು—ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.
೨೩. ಸಂಖ್ಯೋದ್ಯಾನ—ಬಿ. ಸೀತಾರಾಮಶಾಸ್ತ್ರೀ, ಎಂ.ಎ.
೨೪. ವಿಡಂಬನ—ಎಸ್. ವಿ. ರಂಗಣ್ಣ, ಎಂ.ಎ.
೨೫. ಎಲ್ಲೋರ ಮತ್ತು ಅಜಂತಾ—ಡಾ|| ಎಂ. ಎಚ್. ಕೃಷ್ಣ, ಎಂ.ಎ., ಡಿ.ಲಿಟ್.
೨೬. ಸಾರಜನಕದ ಮಹತ್ವ—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೨೭. ಭಾಸ—ಡಾ|| ಎಚ್. ಎಲ್. ಹರಿಯಪ್ಪ, ಎಂ.ಎ., ಪಿಎಚ್.ಡಿ.
೨೮. ಪಾಶ್ಚಾತ್ಯ ರಾಜಕೀಯ ತತ್ವಗಳು—ಎಂ. ಯಾಮುನಾಚಾರ್ಯ, ಎಂ.ಎ.
೨೯. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.
೩೦. ರಕ್ತ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.

೩೧. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜುನಾಥ್, ಎಂ.ಎ.
೩೨. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.
೩೩. ಗಣಿತಶಾಸ್ತ್ರದ ಸ್ವರೂಪ—ಡಾ|| ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೩೪. ಋಗ್ವೇದ—ಎಂ. ಎ. ಕೃಷ್ಣಸ್ವಾಮಿ, ಎಂ.ಎ.
೩೫. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ, ಎಂ.ಎ.
೩೬. ಆಳ್ವಾರುಗಳು—ಎಂ. ಯಾಮುನಾಚಾರ್ಯ, ಎಂ.ಎ.
೩೭. ಹಿಂದು ಮುಸ್ಲಿಂ ಮೈತ್ರಿಯನ್ನು ಬೆಳಸಿದ ರಾಜರು—ವಿ. ರಾಘವೇಂದ್ರರಾವ್, ಎಂ.ಎ., ಬಿ.ಟಿ.
೩೮. ಸುಭಾಷಿತ ಸಂಗ್ರಹಗಳು—ಎಂ. ಪಿ. ಲಕ್ಷ್ಮೀನರಸಿಂಹಶಾಸ್ತ್ರೀ, ಎಂ.ಎ.
೩೯. ಮಕ್ಕಳ ಭಾವಜೀವನ—ಡಾ|| ಬಿ. ಕುಪ್ಪುಸ್ವಾಮಿನಾಯಿಡು, ಎಂ.ಎ., ಡಿ.ಲಿಟ್.
೪೦. ಸಹಕಾರ—ಎಸ್. ಗೋಪಾಲಸ್ವಾಮಿ, ಎಂ.ಎ.
೪೧. ನಯಸೇನ—ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ.
೪೨. ಕೌಟಿಲ್ಯ—ಡಾ|| ಎಂ. ವಿ. ಕೃಷ್ಣರಾವ್, ಎಂ.ಎ., ಬಿ.ಟಿ., ಡಿ.ಲಿಟ್.
೪೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ, ಎಂ.ಎ.
೪೪. ಮುನಿಸಿಪಾಲಿಟಿಗಳು—ಎಚ್. ಕೃಷ್ಣರಾವ್, ಎಂ.ಎ.
೪೫. ಲಕ್ಷ್ಮೀಶ—ಎನ್. ಅನಂತರಂಗಾಚಾರ್, ಎಂ.ಎ., ಬಿ.ಟಿ.
೪೬. ರುಚಿ—ಎಸ್. ವಿ. ರಂಗಣ್ಣ, ಎಂ.ಎ.
೪೭. ಕೀಟಗಳು—ಡಿ. ಎಸ್. ವೀರಯ್ಯ, ಎಂ.ಎಸ್‌ಸಿ.
೪೮. ಅಲೆಗಳು—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೪೯. ಮುದ್ದಣ—ಟಿ. ಎಸ್. ಶಾಮರಾವ್, ಎಂ.ಎ.
೫೦. ಐವರು ಭೌತವೈಜ್ಞಾನಿಕರು—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೫೧. ಕೃತಕ ರೇಷ್ಮೆ—ಎಂ. ಷಡಕ್ಷರಸ್ವಾಮಿ, ಎಂ.ಎಸ್‌ಸಿ.
೫೨. ಚೀನರ ಇತಿಹಾಸ ಮತ್ತು ನಾಗರಿಕತೆ—ಎಸ್. ವೆಂಕಟದೇಶಿಕಾಚಾರ್, ಎಂ.ಎ.
೫೩. ಯುದ್ಧಕಾಲದ ಆರ್ಥಿಕ ಸಮಸ್ಯೆಗಳು—ಎಸ್. ಲಕ್ಷ್ಮೀನರಸಿಂಹನ್, ಎಂ.ಎ.
೫೪. ಆಹಾರ—ಜೆ. ಆರ್. ಲಕ್ಷ್ಮಣರಾವ್, ಎಂ.ಎಸ್‌ಸಿ.
೫೫. ಇಬ್ಸನ್ನಿನ ಕೆಲವು ನಾಟಕಗಳು—ಎಸ್. ಮಂಜುನಾಥ್, ಎಂ.ಎ.
೫೬. ಶಬ್ದಪ್ರಪಂಚ—ಆರ್. ಎಲ್. ನರಸಿಂಹಯ್ಯ, ಎಂ.ಎಸ್‌ಸಿ.
೫೭. ಪ್ರಜಾಭಿಪ್ರಾಯ—ಟಿ. ಎಸ್. ರಾಜಗೋಪಾಲ ಅಯ್ಯಂಗಾರ್, ಎಂ.ಎ., ಎಲ್‌ಎಲ್.ಬಿ.

೫೮. ಕಲ್ಲಿದ್ದಲು—ಕೆ. ಎಸ್. ಲಕ್ಷ್ಮಣರಾವ್, ಎಂ.ಎಸ್‌ಸಿ.

೫೯. ಜನಪದಮುಕ್ತಕಗಳು—ಎಚ್. ಎಂ. ಶಂಕರನಾರಾಯಣರಾವ್, ಎಂ.ಎ.

೬೦. ಹಾಲು—ಕೆ. ಎಸ್. ಲಕ್ಷ್ಮಣರಾವ್, ಎಂ.ಎಸ್‌ಸಿ.

೬೧. ಭಾವಗೀತೆ—ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.

೬೨. ಭಾರತದಲ್ಲಿ ಪ್ರಜಾಪ್ರಭುತ್ವ—ಟಿ. ಎಸ್. ರಾಜಗೋಪಾಲ ಅಯ್ಯಂಗಾರ್, ಎಂ.ಎ., ಎಲ್‌ಎಲ್.ಬಿ.

೬೩. ಆರೋಗ್ಯಸಾಧನೆ—ಮೋಟಗಾನಹಳ್ಳಿ ಮಹದೇವಶಾಸ್ತ್ರೀ, ಎಲ್.ಎ. ಎಂ.ಎಸ್.

೬೪-೬೫. ಆಧುನಿಕ ಭಾರತದಲ್ಲಿ ನೃತ್ಯಕಲೆ—ಯು. ಎಸ್. ಕೃಷ್ಣರಾವ್, ಎಂ.ಎಸ್‌ಸಿ. ಮತ್ತು ಚಂದ್ರಭಾಗಾದೇವಿ; ಬೆಲೆ, ಸಾದಾ ೩೭ ನಯೆ ಪೈಸೆ ಉತ್ತಮ ೫೦ ನಯೆ ಪೈಸೆ.

೬೬. ಚುನಾವಣೆಗಳು—ಗ. ಸ. ಹಾಲಪ್ಪ, ಎಂ.ಎ. (ಕೊಲಂಬಿಯ)

೬೭. ಮೀನಿನಿಂದ ಮಾನವನೆಡೆಗೆ—ಎಚ್. ಬಿ. ದೇವರಾಜ ಸರ್ಕಾರ್, ಬಿ.ಎಸ್‌ಸಿ. (ಆನರ್ಸ್)

೬೮. ಕ್ಷಯ—ಡಾ|| ಎಸ್. ಟಿ. ಪುಟ್ಟಣ್ಣ, ಬಿ.ಎಸ್‌ಸಿ., ಎಂ.ಬಿ., ಬಿ. ಎಸ್., ಡಿ. ಓ. ಎಂ. ಎಸ್. (ಲಂಡನ್)

೬೯. ಶಿಲ್ಪಿಯ ಪಾತ್ರ—ಬಿ. ಎಲ್. ಸಿ. ರಾಜನ್, ಬಿ.ಇ. (ಸಿವಿಲ್), ಎಂ.ಇ.ಪಿ.ಹೆಚ್.

ಬರಲಿದೆ

೭೦. ಪರತಂತ್ರಜೀವಿಗಳು ಮತ್ತು ಪರತಂತ್ರಜೀವನ—ಹೆಚ್. ಬಿ. ದೇವರಾಜ ಸರ್ಕಾರ್, ಬಿ.ಎಸ್‌ಸಿ. (ಆನರ್ಸ್).

೭೧. ಬಟ್ಟೆಗಳ ವೈಜ್ಞಾನಿಕ ಪರೀಕ್ಷೆ—ನಾಗಭೂಷಣ್, ಬಿ.ಎಸ್‌ಸಿ., ಎಫ್.ಟಿ.ಐ.

ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸದ ಪುಸ್ತಕಗಳನ್ನು ಕೊಳ್ಳುವ ಮಾರಾಟಗಾರರಿಗೆ ಈ ಕೆಳಗೆ ಕಂಡಂತೆ ಕಮೀಷನ್ ಕೊಡಲಾಗುವುದು. ಅಂಚೆ ಮತ್ತು ಪುಸ್ತಕವನ್ನು ಕಳುಹಿಸುವ ಖರ್ಚು ಪ್ರತ್ಯೇಕ.

ಶೇಕಡ ೧೦ ರಂತೆ	೫೦ ಪುಸ್ತಕಗಳನ್ನು ಕೊಳ್ಳುವವರಿಗೆ
ಶೇಕಡ ೧೫ ರಂತೆ	೨೦೦ ಪುಸ್ತಕಗಳನ್ನು ಕೊಳ್ಳುವವರಿಗೆ
ಶೇಕಡ ೨೦ ರಂತೆ	೫೦೦ ಪುಸ್ತಕಗಳನ್ನು ಕೊಳ್ಳುವವರಿಗೆ
ಶೇಕಡ ೨೫ ರಂತೆ	೨೦೦೦ ಪುಸ್ತಕಗಳನ್ನು ಒಂದು ವರ್ಷದಲ್ಲಿ ಕೊಳ್ಳುವವರಿಗೆ

ಸಾಧಾರಣ ಪ್ರತಿ ೧೯ ನಯೆ ಪೈಸೆ. ಉತ್ತಮ ಪ್ರತಿ ೨೫ ನಯೆ ಪೈಸೆ.

---

* ಈ ಪುಸ್ತಕಗಳು ಮುಗಿದುಹೋಗಿವೆ.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆ

ಪ್ರಧಾನ ಸಂಪಾದಕರು:
- **ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್., ೧೯೪೨ ರ ವರೆಗೆ**
- **ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ., ೧೯೪೨ ರಿಂದ ೧೯೪೭ ರ ವರೆಗೆ**
- **ಡಾ|| ಕೆ. ವಿ. ಪುಟ್ಟಪ್ಪ, ಎಂ.ಎ., ಡಿ.ಲಿಟ್., ೧೯೪೭ ರಿಂದ**

೧. **ಹರಿಶ್ಚಂದ್ರ ಕಾವ್ಯಸಂಗ್ರಹ** (ಆರನೆಯ ಮುದ್ರಣ)—ಸಂಪಾದಕರು: ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ಮತ್ತು ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.; ಬೆಲೆ, ಸಾದಾ ರೂ. ೧-೮-೦; ಉತ್ತಮ ರೂ. ೨-೦-೦.

೨. **ಕರ್ಣಾಟಕ ಕಾದಂಬರೀ ಸಂಗ್ರಹ** (ಮೂರನೆಯ ಮುದ್ರಣ)—ಸಂಪಾದಕರು: ಟಿ. ಎಸ್. ವೆಂಕಣ್ಣಯ್ಯ, ಎಂ.ಎ.; ಬೆಲೆ, ಸಾದಾ ರೂ. ೧-೧೨-೦.

೩. **ಪ್ರಭುಲಿಂಗಲೀಲೆಯ ಸಂಗ್ರಹ** (ಸಚಿತ್ರ)—ಸಂಪಾದಕರು: ಎಂ. ಎಸ್. ಬಸವಲಿಂಗಯ್ಯ, ಎಂ.ಎ., ಬಿ.ಎಲ್. ಮತ್ತು ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ. ಬೆಲೆ, ಸಾದಾ ರೂ. ೨-೦-೦; ಉತ್ತಮ ರೂ. ೩-೦-೦.

೪. **ಸಾಕ್ರೆಟೀಸನ ಕೊನೆಯ ದಿನಗಳು** (ಸಚಿತ್ರ)—ಅನುವಾದಕರು: ಎ. ಎನ್. ಮೂರ್ತಿರಾವ್, ಎಂ.ಎ.

೫.* **ಶ್ರೀರಾಮಕೃಷ್ಣ ಪರಮಹಂಸ**—ಲೇಖಕರು: ಕೆ. ವಿ. ಪುಟ್ಟಪ್ಪ, ಎಂ.ಎ.

೬.* **ರವೀಂದ್ರನಾಥ ಠಾಕೂರರು** (ಸಚಿತ್ರ)—ಲೇಖಕರು: ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಎ.

೭.* **ಆರೋಗ್ಯ, ಅದರ ಜ್ಞಾನ ಮತ್ತು ಸಾಧನ** (ಸಚಿತ್ರ)—ಲೇಖಕರು: ಜೆ. ಎ. ಈಶ್ವರ ಮೂರ್ತಿ, ಬಿ.ಎ., ಎಲ್.ಎಂ.ಎಸ್., ಬಿ.ಎಸ್‌ಸಿ.

೮. **ಪಂಪರಾಮಾಯಣ ಸಂಗ್ರಹ**—ಸಂಪಾದಕರು: ಆಸ್ಥಾನ ಮಹಾವಿದ್ವಾನ್ ತಿರುವಳ್ಳೂರ್ ಶ್ರೀನಿವಾಸರಾಘವಾಚಾರ್ ಮತ್ತು ಡಿ. ಎಲ್. ನರಸಿಂಹಾಚಾರ್, ಎಂ.ಎ.; ಬೆಲೆ, ಸಾದಾ ರೂ. ೧-೦-೦.

೯. **ಹಣಪ್ರಪಂಚ**—ಲೇಖಕರು: ವಿ. ಸೀತಾರಾಮಯ್ಯ, ಎಂ.ಎ.

೧೦. **ಸಂಸ್ಕೃತ ನಾಟಕ**—ಲೇಖಕರು: ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.; ಬೆಲೆ, ಸಾದಾ ರೂ. ೨-೨-೦; ಉತ್ತಮ ರೂ. ೨-೧೦-೦.

೧೧.* **ಜೀವವಿಜ್ಞಾನ**—ಲೇಖಕರು: ಬಿ. ವೆಂಕಟನಾರಾಯಣಪ್ಪ, ಎಂ.ಎ.

೧೨.* **ಹಿಂದೂದರ್ಶನಸಾರ**—ಲೇಖಕರು: ಮಹಾಮಹೋಪಾಧ್ಯಾಯ ಪಂಡಿತರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯ.

೧೩. **ರಾಜ್ಯಶಾಸ್ತ್ರ**—ಲೇಖಕರು: ಎಚ್. ಕೃಷ್ಣರಾವ್, ಎಂ.ಎ. ಬೆಲೆ, ಸಾದಾ ರೂ. ೧-೮-೦; ಉತ್ತಮ ರೂ. ೨-೮-೦.

೧೪. **ಹದಿಬದೆಯ ಧರ್ಮ**—ಸಂಪಾದಕಿಯರು : ಡಿ. ಚಂಪಾಬಾಯಿ, ಎಂ.ಎ.

೧೫. ***ಪುರಾಣನಾಮಚೂಡಾಮಣಿ**—ಲೇಖಕರು : ಬೆನಗಲ್ ರಾಮರಾವ್, ಎಂ.ಎ., ಎಲ್‌ಎಲ್.ಬಿ. ಮತ್ತು ಪಾಸ್ಯಂ ಸುಂದರಶಾಸ್ತ್ರೀ.

೧೬. ***ಯಶೋಧರ ಚರಿತೆಯ ಸಂಗ್ರಹ**— ಸಂಪಾದಕರು: ಕೆ. ವಿ. ರಾಘವಾಚಾರ್, ಎಂ.ಎ., ಬಿ.ಟಿ.

೧೭. ***ಗ್ರೀಕರ ತತ್ವಶಾಸ್ತ್ರಸಾರಸಂಗ್ರಹ**—ಲೇಖಕರು : ಕೆ. ಆರ್. ಶ್ರೀನಿವಾಸ ಅಯ್ಯಂಗಾರ್, ಎಂ.ಎ.

೧೮. **ಹಿಂದೂ ದೇಶದ ಭೂಚರಿತ್ರೆ**—ಲೇಖಕರು: ವೈ. ನಾಗಪ್ಪ, ಎಂ.ಎಸ್‌ಸಿ.; ಬೆಲೆ, ಸಾದಾ ರೂ. ೦-೧೨-೦.

೧೯. **ವಚನಧರ್ಮಸಾರ**—ಲೇಖಕರು: ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.; ಬೆಲೆ, ಸಾದಾ ರೂ. ೨-೦-೦ ; ಕ್ಯಾಲಿಕೊ ರೂ. ೩-೦-೦.

೨೦. **ಪ್ರಾಣಿಶಾಸ್ತ್ರ**—ಡಾ|| ಎ. ಸುಬ್ಬರಾವ್, ಬಿ.ಎ., ಡಿ.ಎಸ್‌ಸಿ. ಮತ್ತು ಎ. ನಾರಾಯಣರಾವ್, ಎಂ.ಎಸ್‌ಸಿ. ; ಬೆಲೆ, ಸಾದಾ ರೂ. ೧-೮-೦ ; ಕ್ಯಾಲಿಕೊ ರೂ. ೧-೧೨-೦.

೨೧. **ಆಧುನಿಕ ತತ್ವಶಾಸ್ತ್ರಸಮಸ್ಯೆಗಳು**—ಜಿ. ಹನುಮಂತರಾವ್, ಎಂ.ಎ. ; ಬೆಲೆ, ಸಾದಾ ರೂ. ೧-೧೨-೦ ; ಕ್ಯಾಲಿಕೊ ರೂ. ೨-೧೨-೦.

೨೨. **ಕನ್ನಡ ಕೈಪಿಡಿ** (ಭಾಗ ೫, ಸಾಹಿತ್ಯಚರಿತ್ರೆ)—ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ, ಸಾದಾ ರೂ. ೧-೪-೦; ಕ್ಯಾಲಿಕೊ ರೂ. ೨-೪-೦.

೨೩. **ಇಸ್ಲಾಂ ಸಂಸ್ಕೃತಿ**—ಮೂಲಲೇಖಕರು : ಪ್ರೊ|| ಮಹಮದ್ ಅಬ್ಬಾಸ್ ಷೂಸ್ತ್ರಿ ; ಅನುವಾದಕರು: ರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ, ರೂ. ೨-೦-೦.

೨೪. **ತಮಿಳು ಪಾಠಗಳು**—ಲೇಖಕರು : ಎಸ್. ರುದ್ರಪತಿ, ಎಂ.ಎ. ; ಬೆಲೆ, ರೂ. ೩-೪-೦.

೨೫. **ಅಶೋಕ**—ಲೇಖಕರು : ಎನ್. ಕಸ್ತೂರಿ, ಎಂ.ಎ., ಬಿ.ಎಲ್.; ಬೆಲೆ, ರೂ. ೧-೨-೦.

೨೬. **ಭಾರತೀಯ ಕಾವ್ಯಮೀಮಾಂಸೆ**—ಲೇಖಕರು : ಪ್ರೊ|| ತೀ. ನಂ. ಶ್ರೀಕಂಠಯ್ಯ, ಎಂ.ಎ. ; ಬೆಲೆ, ಸಾದಾ ರೂ. ೩-೮-೦.

೨೭. **ಭಾರತೀಯ ಸಂಸ್ಕೃತಿ**—ಲೇಖಕರು : ಡಾ|| ಎಸ್. ಶ್ರೀಕಂಠಶಾಸ್ತ್ರೀ, ಎಂ.ಎ., ಡಿ.ಲಿಟ್.; ಬೆಲೆ, ಸಾದಾ ರೂ. ೩-೦-೦; ಉತ್ತಮ ರೂ. ೪-೦-೦.

೨೮. **ಸಾರ್ವಜನಿಕ ಹಣಕಾಸು**—ಲೇಖಕರು : ವಿ. ಎಲ್. ಡಿ'ಸೋಜ, ಬಿ.ಎ., ಬಿ.ಕಾಂ. (ಲಂಡನ್) ಮತ್ತು ಬಿ. ಆರ್. ಸುಬ್ಬರಾವ್, ಎಂ.ಎ., ಡಿಪ್-ಇನ್-ಕಾಂ. ; ಬೆಲೆ, ಸಾದಾ ರೂ. ೨-೮-೦ ; ಉತ್ತಮ ರೂ. ೩-೮-೦.

೨೯. **ಆದಿಪುರಾಣ ಸಂಗ್ರಹ**—ಸಂಪಾದಕರು: ಎಲ್. ಗುಂಡಪ್ಪ, ಎಂ.ಎ.; ಬೆಲೆ, ಸಾದಾ ರೂ. ೨-೦-೦; ಉತ್ತಮ ರೂ. ೩-೦-೦.

೩೦. **ಪಂಪ ಭಾರತ**—(೯-೧೪ ಆಶ್ವಾಸಗಳು) ಬೆಲೆ, ಸಾದಾ ರೂ. ೧-೧೨-೦; ಉತ್ತಮ ರೂ. ೨-೪-೦.

೩೧. **ಕಾಳಿದಾಸ**—ಲೇಖಕರು: ಎಂ. ಲಕ್ಷ್ಮೀನರಸಿಂಹಯ್ಯ, ಎಂ.ಎ.; ಬೆಲೆ, ಸಾದಾ ರೂ. ೨-೦-೦; ಉತ್ತಮ ರೂ. ೨-೮-೦.

೩೨. **ಭರತೇಶ ವೈಭವ ಸಂಗ್ರಹ**—ಸಂಪಾದಕರು: ತ. ಸು. ಶಾಮರಾವ್, ಎಂ.ಎ.; ಬೆಲೆ, ಸಾದಾ ರೂ. ೨-೮-೦; ಉತ್ತಮ ರೂ. ೩-೦-೦.

೩೩. **ಶ್ರೀಕೃಷ್ಣಚರಿತೆ**—ಸಂಪಾದಕರು: ಕೆ. ವೆಂಕಟರಾಮಪ್ಪ, ಎಂ.ಎ.; ಬೆಲೆ, ಸಾದಾ ರೂ. ೧-೪-೦; ಉತ್ತಮ ರೂ. ೧-೧೨-೦.

೩೪. **ಕನ್ನಡ ಕೈಪಿಡಿ**—(ಭಾಗ ೧, ೨, ೩, ೪.) ಬೆಲೆ, ಸಾದಾ ರೂ. ೨-೮-೦; ಉತ್ತಮ ರೂ. ೩-೦-೦.

೩೫. **ಪ್ರಜಾಸರ್ಕಾರ**—ಡಾ|| ಎಂ. ವಿ. ಕೃಷ್ಣರಾವ್, ಎಂ.ಎ., ಬಿ.ಟಿ., ಡಿ.ಲಿಟ್.; ಬೆಲೆ, ಸಾದಾ ರೂ. ೧-೧೨-೦; ಉತ್ತಮ ರೂ. ೨-೪-೦.

೩೬.***ಭಾರತೀಯ ತತ್ತ್ವಶಾಸ್ತ್ರ ಸಂಗ್ರಹ**—ವಿದ್ವಾನ್ ಹೆಚ್. ಎನ್. ರಾಘವೇಂದ್ರಾಚಾರ್ಯ, ಎಂ.ಎ.

೩೭. **ಭೌತವಿಜ್ಞಾನ**—ಡಾ|| ಟಿ. ಎಸ್. ಸುಬ್ಬರಾಯ, ಡಿ.ಎಸ್‌ಸಿ.

೩೮. **ಬೀಜರೇಖಾಗಣಿತ**—ಕೆ. ಮಂಜುನಾಥಯ್ಯ, ಎಂ.ಎಸ್‌ಸಿ., ಬಿ.ಎಲ್.; ಬೆಲೆ, ರೂ. ೨-೪-೦.

೩೯. **ಇಂಟರ್‌ಮೀಡಿಯಟ್ ಭೌತಶಾಸ್ತ್ರ**—ಬಿ. ವಿ. ನಾರಾಯಣರಾವ್, ಎಂ.ಎಸ್‌ಸಿ. ಬೆಲೆ, ಸಾದಾ ರೂ. ೧-೧೨-೦; ಉತ್ತಮ ರೂ. ೨-೧೨-೦.

೪೦. **ವಿಜ್ಞಾನ ಸಂಶೋಧನೆ**—ಎಸ್. ವರದರಾಜನ್, ಎಂ.ಎಸ್‌ಸಿ.

೪೧. **ಕಮ್ಯುನಿಸಂ**—ಎಲ್. ಶ್ರೀಕಂಠಯ್ಯ, ಎಂ.ಎ., ಎಂ.ಎಸ್‌ಸಿ. (ಲಂಡನ್), ಬಾರ್-ಅಟ್-ಲಾ.

೪೨. **ಕಲನಶಾಸ್ತ್ರ**—ಎಂ. ಎಸ್. ಸೂರ್ಯನಾರಾಯಣಶಾಸ್ತ್ರೀ, ಎಂ.ಎಸ್‌ಸಿ.

೪೩. **ಇಂಟರ್‌ಮೀಡಿಯಟ್ ಪ್ರಾಣಿಶಾಸ್ತ್ರ**—ಎ. ನಾರಾಯಣರಾವ್, ಎಂ.ಎಸ್‌ಸಿ.

೪೪. **ಇಂಟರ್‌ಮೀಡಿಯಟ್ ಜಾಮಿಟ್ರಿ**—ಜಂಬುನಾಥನ್, ಎಂ.ಎಸ್‌ಸಿ.

೪೫. **ಗ್ರೇಟ್ ಬ್ರಿಟನ್ನಿನ ಚರಿತ್ರೆ**—ಡಾ|| ಎಂ. ಶೇಷಾದ್ರಿ.

೪೬. **ಭೂಗೋಳಶಾಸ್ತ್ರ**—ಕುಮಾರಸ್ವಾಮಿ, ಎಂ.ಎ.

೪೭. **ರಸಾಯನಶಾಸ್ತ್ರ**—ಕೆ. ಸುಬ್ಬಾಭಟ್ಟ, ಎಂ.ಎಸ್‌ಸಿ.

೪೮. **ಅರ್ಥಶಾಸ್ತ್ರ**—ಡಾ|| ಜಿ. ಟಿ. ಹುಚ್ಚಪ್ಪ, ಎಂ.ಎ., ಪಿಎಚ್.ಡಿ.

೪೯. **ಗ್ರೀಸ್ ದೇಶದ ಚರಿತ್ರೆ**—ಡಾ|| ಬಿ. ಎ. ಕೃಷ್ಣಸ್ವಾಮಿ ಅಯ್ಯಂಗಾರ್, ಎಂ.ಎ.,ಡಿ.ಲಿಟ್.

೫೦. **ರೋಮ್ ದೇಶದ ಚರಿತ್ರೆ**—ಡಾ|| ಬಿ. ಎ. ಕೃಷ್ಣಸ್ವಾಮಿ ಅಯ್ಯಂಗಾರ್, ಎಂ.ಎ., ಡಿ.ಲಿಟ್.

ಅಚ್ಚಿನಲ್ಲಿವೆ

೫೧. **ಗಣಿತಶಾಸ್ತ್ರದ ಚರಿತ್ರೆ**—ಡಾ|| ಸಿ. ಎನ್. ಶ್ರೀನಿವಾಸ ಐಯಂಗಾರ್, ಡಿ.ಎಸ್‌ಸಿ.

೫೨. **ರಸಾಯನಶಾಸ್ತ್ರ**—ಸುಬ್ಬಾಭಟ್ಟ, ಎಂ.ಎಸ್‌ಸಿ.

೫೩. **ಪಂಚಾಂಗಗಳು ಮತ್ತು ಖಗೋಳ ಶಾಸ್ತ್ರ**—ಆರ್. ಎಲ್. ನರಸಿಂಹಯ್ಯ, ಎಂ.ಎಸ್‌ಸಿ.

೫೪. **ಬೀಜಗಣಿತ**—ಪಿ. ಆರ್. ಪ್ರಾಣೇಶರಾವ್, ಎಂ.ಎಸ್‌ಸಿ.

೫೫. **ಭೂ ವಿಜ್ಞಾನ**—ಎಂ. ಎನ್. ವಿಶ್ವನಾಥಯ್ಯ ಎಂ.ಎಸ್‌ಸಿ.

ಪ್ರಿ. ಯೂನಿವರ್ಸಿಟಿ ತರಗತಿಯ ಪಠ್ಯಪುಸ್ತಕಗಳು

೫೬. **ಚರಿತ್ರೆ**—ಡಾ|| ಎಸ್. ಶ್ರೀಕಂಠಶಾಸ್ತ್ರಿ, ಎಂ.ಎ., ಡಿ.ಲಿಟ್.

೫೭. **ಗಣಿತಶಾಸ್ತ್ರ**—ಪಿ. ಆರ್. ಪ್ರಾಣೇಶರಾವ್, ಎಂ.ಎಸ್‌ಸಿ.

೫೮. **ಭೌತಶಾಸ್ತ್ರ**—ಡಾ|| ಎಲ್. ಸೀಬಯ್ಯ, ಡಿ.ಎಸ್‌ಸಿ.

೫೯. **ಭೂಗರ್ಭಶಾಸ್ತ್ರ**—ಎಸ್. ವರದರಾಜನ್, ಎಂ.ಎಸ್‌ಸಿ.

೬೦. **ಪ್ರಾಣಿಶಾಸ್ತ್ರ**—ಎ. ನಾರಾಯಣರಾವ್, ಎಂ.ಎಸ್‌ಸಿ.

೬೧. **ಸಸ್ಯಶಾಸ್ತ್ರ**—ಎಚ್. ಎನ್. ಚಾಮಯ್ಯ, ಎಂ.ಎಸ್‌ಸಿ.

೬೨. **ಜೀವಶಾಸ್ತ್ರ**—ಎ. ನಾರಾಯಣರಾವ್, ಎಂ.ಎಸ್‌ಸಿ. ಮತ್ತು ಎಚ್. ಎನ್. ಚಾಮಯ್ಯ, ಎಂ.ಎಸ್‌ಸಿ.

೬೩. **ತರ್ಕಶಾಸ್ತ್ರ**—ಎಂ. ಯಾಮುನಾಚಾರ್ಯ, ಎಂ.ಎ.

೬೪. **ಭೂಗೋಳಶಾಸ್ತ್ರ**—ಡಾ|| ಫೋರಿ, ಎಂ.ಎ., ಪಿಎಚ್.ಡಿ.

Other Publications

1. **Minimum Wages in India**: by V. R. PILLAI, M.A., M.SC.
   ಬೆಲೆ, ರೂ. ೧-೧೪-೦.

2. **Aspects of Bhakti**: by K. C. VARADACHARI.
   ಬೆಲೆ, ಸಾದಾ ರೂ. ೧-೦-೦ ; ಉತ್ತಮ ರೂ. ೧-೮-೦.

3. ಹರಿಹರನ ರಗಳೆಯಲ್ಲಿ ಜೀವನದರ್ಶನ—ಸ. ಸ. ಮಾಳವಾಡ, ಎಂ.ಎ. ಬೆಲೆ, ಸಾದಾ ರೂ. ೧-೪-೦ ; ಉತ್ತಮ ರೂ. ೨-೪-೦.

4. ಕನ್ನಡ ಸಾಹಿತ್ಯದಲ್ಲಿ ಸರಸ್ವತಿಯ ದರ್ಶನ—ಡಾ॥ ರಂ. ಶ್ರೀ. ಮುಗಳಿ, ಎಂ.ಎ., ಡಿ.ಲಿಟ್. ಬೆಲೆ, ಸಾದಾ ರೂ. ೧-೦-೦ ; ಉತ್ತಮ ರೂ. ೩-೦-೦.

In the Press

5. **The Philosophy of Mahathma Gandhi and other Essays** by Prof. A. R. Wadia.

6. ರಸೋಲ್ಲಾಸ—ಡಾ॥ ಕೆ. ಕೃಷ್ಣಮೂರ್ತಿ, ಎಂ.ಎ., ಬಿ.ಟಿ., ಪಿಎಚ್.ಡಿ.

Navinam Ramanujacharya Sanskrit Prize Essay

1. ಅಲಂಕಾರಶಾಸ್ತ್ರೇ ಕಾವ್ಯವೈವಿಧ್ಯವಾದವಿಮರ್ಶಃ—ಡಾ॥ ಕೆ. ಕೃಷ್ಣಮೂರ್ತಿ, ಎಂ.ಎ., ಬಿ.ಟಿ., ಪಿಎಚ್.ಡಿ. ; ಬೆಲೆ, ರೂ. ೦-೮-೦.

MYSORE UNIVERSITY PUBLICATIONS
ENGLISH

1. The Mysore Tribes and Castes: by the late Mr. H. V. NANJUNDAYYA, M.A., M.L., C.I.E. and RAO BAHADUR L. K. ANANTAKRISHNA IYER ; Four Volumes : Vol. II, 1928 ; Vol. III, 1930 ; Vol. IV, 1931 ; Vol. I, 1935. Appendix : Each Volume is profusely illustrated : Vol. I, Rs. 15-0-0 ; Other Volumes each, Rs. 12-8-0.

(a) Studies in Economics and Politics

1. Labour and Housing in Bangalore City: C. NARASIMHA MOORTHY, M.A. and R. K. SRINIVASAN, M.A.; Re. 0-8-0.

2. The Munro System of British Statesmanship in India: Dr. K. N. VENKATASUBBA SASTRI, M.A., Ph.D. ; Rs. 3-0-0.

3. Theory of Interest: Sri S. LAXMINARASIMHAN, M.A. ; Rs. 2-8-0.

4. An Inquiry into Economic Theory: Sri A. N. SUBRAHMANYAM, M.A. ; Re. 1-4-0.

(b) Mysore University Historical Series

1. Sources of Karnataka History, Vol. I : S. SRIKANTA SASTRY, M.A. ; Calico Rs. 3-8-0 ; Stiff Rs. 3-0-0.

(c) Mysore University Studies in Philosophy

1. *Dvaita Philosophy and Its Place in the Vedanta: Mr. H. N. RAGHAVENDRACHAR, M.A.

2. Metaphysics of Value, Vol. I: K. R. SRINIVASA IYENGAR, M.A.; Rs. 5-0-0.

3. Man in the Making: J. B. FREEMAN; Rs. 4-0-0.

(d) Mysore University Studies in Dravidian Philology

1. A Grammar of the Oldest Kannada Inscriptions: Dr. A. N. NARASIMHIAH, M.A., L.T., Ph.D.; Rs. 2-12-0.

2. History of Kannada Literature: RAO BAHADUR R. NARASIMHACHARYA; Re. 1-0-0.

ಈ ಗ್ರಂಥಮಾಲೆಯ ಪುಸ್ತಕಗಳನ್ನು ತರಿಸಿಕೊಳ್ಳಲಿಚ್ಛಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆಯಬೇಕು.

ಕಾರ್ಯದರ್ಶಿ,

ವಿಶ್ವವಿದ್ಯಾನಿಲಯದ ಪ್ರಕಟನ ಮತ್ತು
ಪ್ರಚಾರೋಪನ್ಯಾಸ ಶಾಖೆ, ಮೈಸೂರು

ಸರ್ ಕೆ. ಪಿ. ಪುಟ್ಟಣ್ಣಚೆಟ್ಟರ ಪುದುವಟ್ಟಿನ ಪ್ರಕಟನಮಾಲೆ

೧. ಟಪಾಲ್ ಸಂಸ್ಥೆಯ ವಿವರ—ಕೆ. ಲಕ್ಷ್ಮೀನರಸಿಂಹಯ್ಯ, ಬಿ.ಎ., ಎಲ್‌ಎಲ್.ಬಿ.
೨. ವಿಶ್ವವಿಸರಣ—ಜಿ. ಎಸ್. ಪರಮಶಿವಯ್ಯ, ಎಂ.ಎಸ್‌ಸಿ.
೩. ಸರ್ಕಾರದ ಪದ್ಧತಿ ಮತ್ತು ರಚನಾಕ್ರಮ—ಎಚ್. ಕೃಷ್ಣರಾವ್, ಎಂ.ಎ.
೪. ವ್ಯವಸಾಯದ ಮಣ್ಣುಗಳು—ಕೂರಪಾಡು ಗುಂಡಪ್ಪ, ಬಿ.ಎ.
೫.*ಆಕಾಶಯಾನ—ಬಿ. ಕೆ. ಎ೯. ರಾವ್.
೬.*ವಿಶ್ವವಿದ್ಯಾನಿಲಯಗಳು—ಡಾ|| ಎಂ. ಸಿದ್ಧಲಿಂಗಯ್ಯ, ಎಂ.ಎ., ಬಿ.ಟಿ., ಪಿಎಚ್.ಡಿ., ಡಿಪ್.ಎಡ್. ಮತ್ತು ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.
೭.*ಹೆರಿಗೆ ಮತ್ತು ಶಿಶುಪೋಷಣೆ—ಡಾ|| ರತ್ನಮ್ಮ ಐಸಾಕ್, ಎಲ್.ಎಂ.ಎಸ್., ಎಂ.ಆರ್.ಸಿ.ಎಸ್., ಎಲ್.ಆರ್.ಸಿ.ಪಿ.
೮. ಮಲೇರಿಯಾ ನಿರೋಧ—ಬಿ. ಅನಂತಸ್ವಾಮಿರಾವ್, ಬಿ.ಎಸ್‌ಸಿ., ಎಂ.ಬಿ., ಬಿ.ಎಸ್., ಎಂ.ಪಿ.ಎಚ್.
೯. ಗ್ರಾಮ ನೈರ್ಮಲ್ಯ—ಎಸ್. ಡಿ. ನಾರಾಯಣಗೌಡ, ಎಂ.ಬಿ., ಬಿ.ಎಸ್., ಡಿ.ಪಿಎಚ್.
೧೦. ಪಶುಪಾಲನೆ—ಎಂ. ಕೃಷ್ಣಶಾಸ್ತ್ರೀ, ಬಿ.ಎ., ಐ.ಡಿ.ಡಿ., ಅಸೋಸಿಯೇಟ್ ಐ.ಡಿ.ಆರ್.ಐ.
೧೧. ಯೋಗಾಸನಗಳು—ವಿದ್ವಾನ್ ಟಿ. ಕೃಷ್ಣಮಾಚಾರ್ಯ. ಸಾಧಾರಣ ಪ್ರತಿ ೩೩ ನಯೆಪೈಸೆ ಉತ್ತಮ ಪ್ರತಿ ೫೦ ನಯೆಪೈಸೆ.
೧೨. ಮೈಸೂರು ದೇಶದ ರಸಾಯನಿಕ ಕೈಗಾರಿಕೆಗಳು—ಕೆ. ಅಶ್ವತ್ಥನಾರಾಯಣ ರಾವ್, ಡಿ.ಎಸ್‌ಸಿ.
೧೩. ವಿದ್ಯುಚ್ಛಕ್ತಿಯ ಉಪಯೋಗ—ಎಂ. ಬಿ. ತಿರುನಾರಾಯಣ, ಬಿ.ಎ., ಬಿ.ಎಸ್‌ಸಿ. (ಆನರ್ಸ್, ಇ.ಇ.) ಸಿ.ಪಿ., ಇ.ಟಿ. (ಐ.ಐ.ಎಸ್.)
೧೪. ಮಕ್ಕಳ ಬೆಳವಣಿಗೆ—ಡಾ|| ಬಿ. ಕುಪ್ಪುಸ್ವಾಮಿನಾಯಿಡು, ಎಂ.ಎ., ಡಿ.ಲಿಟ್.
೧೫. ರೇಡಾರ್—ಆರ್. ಎಲ್. ನರಸಿಂಹಯ್ಯ, ಎಂ.ಎಸ್‌ಸಿ.; ಸಾಧಾರಣ ಪ್ರತಿ ೩೭ ನಯೆಪೈಸೆ; ಉತ್ತಮ ಪ್ರತಿ ೫೦ ನಯೆಪೈಸೆ.
೧೬. ಗಣಿ ಕೆಲಸದ ಕೈಪಿಡಿ—ಜೆ. ಪಿ. ಡೇವಿಡ್, ಬಿ.ಎಸ್‌ಸಿ.; ಸಾಧಾರಣ ಪ್ರತಿ ೩೭ ನಯೆಪೈಸೆ; ಉತ್ತಮ ಪ್ರತಿ ೫೦ ನಯೆಪೈಸೆ.
೧೭. ಲೋಹವಿದ್ಯೆ—ಡಾ|| ಬಿ. ಪಿ. ರಾಧಾಕೃಷ್ಣ.
೧೮. ಪರಮಾಣುಶಕ್ತಿ—ಡಾ|| ಎಲ್. ಸೀಬಯ್ಯ, ಡಿ.ಎಸ್‌ಸಿ.
೧೯. ಭಾರತ ಸಂವಿಧಾನ—ಗ. ಸ. ಹಾಲಪ್ಪ, ಎಂ.ಎ. (ಕೊಲಂಬಿಯ).

ಬರಲಿವೆ

೨೦. ಅಂತರ ರಾಷ್ಟ್ರೀಯ ಸಂಬಂಧಗಳು—ಟಿ. ಎಸ್. ನಾರಾಯಣರಾವ್ ಎಂ.ಎ.

೨೧. ವಿಕಿರಣಕ್ರಿಯಾಶಕ್ತಿ—ಕೆ. ಶೇಷಾದ್ರಿ ಐಯ್ಯಂಗಾರ್, ಎಂ.ಎಸ್ಸಿ., ಎಲ್ಎಲ್.ಬಿ.

೨೨. ಉಷ್ಣ ಯಂತ್ರಗಳ ಪರಿಚಯ—ಕೆ. ವಿ. ಸುಬ್ಬರಾಯ.

ಸಾಧಾರಣ ಪ್ರತಿ ೧೯ ನಯೆಪೈಸೆ; ಉತ್ತಮ ಪ್ರತಿ ೨೫ ನಯೆಪೈಸೆ.

ಕಾರ್ಯದರ್ಶಿ,

ಪ್ರಕಟನ ಮತ್ತು ಪ್ರಚಾರೋಪನ್ಯಾಸ ಶಾಖೆ, ಯೂನಿವರ್ಸಿಟಿ ಆಫೀಸ್, ಮೈಸೂರು

ಪ್ರಬುದ್ಧ ಕರ್ಣಾಟಕಕ್ಕೆ ವಿನಿಮಯವಾಗಿ ಬರುವ ಪತ್ರಿಕೆಗಳು

ಇಂಗ್ಲಿಷ್ ಪತ್ರಿಕೆಗಳು

Annals of the Oriental Research Institute, University, Madras; *Bramhavidya*, Adyar, Madras; *Bulletin of the School of Oriental Studies*, London; *Journal of the Andhra Historical Research Society*, Rajahmundry; *Journal of the Karnataka Historical Research Society*, Dharwar; *Quarterly Journal of the Mythic Society*, Bangalore; *The Indian P.E.N.* Bombay; *Annals of the Venkateswara Oriental Institute*, Tirupati; *The Jaina Siddhanta Bhaskara and the Jaina Gazette*, Arrah; *Bulletin of the Deccan College Research Institute*, Poona; *Publication of the Kannada Research Office*, Dharwar; *The Journal of the Literary Committee of the L.E. Association*, Dharwar; *Annals of Bhandarkar Oriental Research Institute*, Poona.

ವಾರಪತ್ರಿಕೆಗಳು

'ಕಂಠೀರವ', ಮಂಗಳೂರು; 'ಚೇತನಾ', ಬೆಂಗಳೂರು; 'ಪ್ರಭಾತ', ಮಂಗಳೂರು. 'ಪ್ರಪಂಚ', ಹುಬ್ಬಳ್ಳಿ.

ಮಾಸಪತ್ರಿಕೆಗಳು

'ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ' (ತೆಲುಗು) ಕಾಕಿನಾಡ; 'ಕತೆಗಾರ', ಬೆಂಗಳೂರು; 'ಕನ್ನಡ ಸಹಕಾರಿ', ಮಂಗಳೂರು; 'ಜಯಕರ್ನಾಟಕ', ಧಾರವಾಡ; 'ಜಯಂತಿ', ಧಾರವಾಡ; 'ಮಕ್ಕಳ ಪುಸ್ತಕ', ಬೆಂಗಳೂರು; 'ಮೈಸೂರು ಸಹಕಾರ ಪತ್ರಿಕೆ', ಬೆಂಗಳೂರು; 'ವಿದ್ಯಾದಾಯಿನಿ', ಮೈಸೂರು; 'ವಿವೇಕಾಭ್ಯುದಯ', ಮೈಸೂರು; 'ಶರಣಸಾಹಿತ್ಯ', ಬೆಂಗಳೂರು; 'ಶಿವಾನುಭವ', ಬಿಜಾಪುರ; 'ಸರಸ್ವತಿ', ಬೆಂಗಳೂರು; 'ಸುಬೋಧ', ಬೆಂಗಳೂರು; 'ಜೀವನ', ಬೆಂಗಳೂರು; 'ಕಥಾವಳಿ', ಬೆಂಗಳೂರು; 'ಪುಸ್ತಕ ಪ್ರಪಂಚ', ಮೈಸೂರು; 'ಕನ್ನಡ ನುಡಿ', ಬೆಂಗಳೂರು.

ತ್ರೈಮಾಸಿಕಪತ್ರಿಕೆಗಳು

'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ' ಬೆಂಗಳೂರು.

ಗ್ರಂಥಮಾಲೆ

'ಮನೋಹರ ಗ್ರಂಥಮಾಲೆ', ಧಾರವಾಡ; 'ಮಿಂಚಿನಬಳ್ಳಿ', ಧಾರ...

...ಎಸ್ ಸಿ.

...ಎ. (ಕೊಲಂಬಿಯ).

ಮೈಸೂರು ಮಹಾರಾಜರವರ ಕಾಲೇಜಿನ
ಕರ್ಣಾಟಕ ಸಂಘದ ಪ್ರಕಟನೆಗಳು

೧. ನಾಗಾನಂದ ನಾಟಕ—ಅನಂತನಾರಾಯಣ ಶಾಸ್ತ್ರಿ ; ಬೆಲೆ, ೧ ರೂ.
೨. ಕರ್ಣಾಟಕ ಮೃಚ್ಛಕಟಿಕಪ್ರಕರಣಂ—ಆಸ್ಥಾನ ಕವಿ ನಂಜನಗೂಡು ಸುಬ್ಬಾಶಾಸ್ತ್ರಿಗಳವರಿಂದ ; ರೂ. ೧-೧೨-೦.

ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಪ್ರಕಟಣೆಗಳು

೧. ಶ್ರೀ ಕೈಲಾಸಂ ಅವರ ಸ್ಮರಣೆ—ಕೆ. ವಿ. ಅಯ್ಯರ್; ರೂ. ೨-೪-೦.
೨. ಕರ್ಣಾಟಕ ಮಾಲವಿಕಾಗ್ನಿಮಿತ್ರ ನಾಟಕಂ—ಮೋಟಗಾನಹಳ್ಳಿ ಶಂ. ಸುಬ್ರಹ್ಮಣ್ಯಶಾಸ್ತ್ರೀ ; ರೂ. ೧-೧೨-೦.
೩. ಮೊನ್ನ ವನ್ನ (ಮಾರಿಸ್ ಮ್ಯಾಟರ್‌ಲಿಂಕನ ಮೂರಂಕದ ನಾಟಕ)—ಎಸ್. ಜಿ. ಶಾಸ್ತ್ರಿ ; ರೂ. ೨-೦-೦.
೪. ನಾಗನ ಪದಗಳು—ಜಿ. ಪಿ. ರಾಜರತ್ನಂ ; ರೂ. ೧-೪-೦.
೫. ಶಕ್ತಿ (ಸಚಿತ್ರ)—ಆರ್. ಎಲ್. ನರಸಿಂಹಯ್ಯ ; ರೂ. ೩-೦-೦.
೬. ಸುಪ್ರಭಾತವ್—(ದೈವಭಕ್ತಿಯನ್ನು ಕುರಿತ ಪ್ರಬಂಧಗಳು) ರೂ. ೩-೦-೦.
೭. ಸೋಕ್ರಟೀಸನ ಮರಣ—ಎಸ್. ಜಿ. ಶಾಸ್ತ್ರಿ ; ರೂ. ೧-೪-೦.
೮. ಬಾಹುಬಲಿ ವಿಜಯಂ—(ಎರಡು ನಾಟಕಗಳು) ; ರೂ. ೧-೮-೦.
೯. ಕಾರ್ಕಳದ ಗೊಮ್ಮಟಸ್ವಾಮಿ—(ಲೇಖನ, ಕವನ) ; ರೂ. ೧-೦-೦.
೧೦. ನಮ್ಮ ನಮ್ಮವರು—(೬೬ ಬೇರೆ ಬೇರೆ ಕೃತಿಗಳು) ; ರೂ. ೨-೮-೦.
೧೧. ಬಾಲಸರಸ್ವತಿ—(೩೬ ಬೇರೆ ಬೇರೆ ಕೃತಿಗಳು) ; ರೂ. ೨-೮-೦.
೧೨. ಚಿನ್ನದ ದೋಸೆ ಮತ್ತು ಇತರ ಕಥೆಗಳು—ರೂ. ೦-೧೨-೦.
೧೩. ಮಕ್ಕಳ ಮಾತು—(ಎಸ್ಸೆಗಳು) ; ರೂ. ೧-೦-೦.
೧೪. ಪಚ್ಚೆಯ ತೆನೆ—(ಎಸ್ಸೆಗಳು) ; ರೂ. ೧-೦-೦.
೧೫. ಗಂಧದ ಹುಡಿ—(ಎಸ್ಸೆಗಳು) ; ರೂ. ೧-೦-೦.
೧೬. ದುರಾಸೆಯ ದಂಡ—(ಐದು ಏಕಾಂಕ ನಾಟಕಗಳು) ; ರೂ. ೧-೪-೦.
ಜನಪ್ರಿಯ ವಿಜ್ಞಾನ—(ವಿಜ್ಞಾನ ಪ್ರಬಂಧಗಳು) ; ರೂ. ೧-೦-೦.

...i S. V. Parameswara Bhatta, M.A. and Sri Prabhushankara, M.A.
...ublished ... The University of Mysore, Mysore.
...sley Press and Publishing House, Mysore City.